ಪ್ರಜಾವಾಣಿ ಶನಿವಾರ • ಡಿಸೆಂಬರ್ 7, 2024

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331

ಇಮಚೇನಹಳ್ಳಿಯಲ್ಲಿ ಚಿರತೆ ಪತ್ತೆ

ಪ್ರಜಾವಾಣಿ ವಾರ್ತೆ

ದಾಬಸ್ ಪೇಟೆ: ನರಸೀಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಇಮಚೇನಹಳ್ಳಿ ಸಮೀಪ ಶುಕ್ರವಾರ ಮಧ್ಯಾಹ್ನ ಚಿರತೆಯೊಂದು ಕಾಣಿಸಿಕೊಂಡಿದೆ.

ಮಧುಗಿರಿ ಮುಖ್ಯರಸ್ತೆಯಿಂದ ಇಮಚೇನಹಳ್ಳಿ, ಕರಿಮಣ್ಣೆ, ತಟ್ಟೇಕೆರೆ ಸಂಪರ್ಕಿಸುವ ರಸ್ತೆಯಲ್ಲಿ ಚಿರತೆ ಕಾಣಿಸಿದೆ.

'ನಾವು ನಾಲ್ಕು ಮಂದಿ ಎರಡು ದ್ವಿಚಕ್ರ ವಾಹನದಲ್ಲಿ ಕರಿಮಣ್ಣೆ ಕಡೆಯಿಂದ ಇಮಚೇನಹಳ್ಳಿ ಕಡೆಗೆ ಹೋಗುತ್ತಿದ್ದ ಸಮಯದಲ್ಲಿ ಷಡಕ್ಷರಿ ತೋಟದ ಹತ್ತಿರ ರಸ್ತೆಯಲ್ಲಿ ಚಿರತೆ ಸಾಗುತ್ತಿತ್ತು. ದ್ವಿಚಕ್ರ ವಾಹನದ ಶಬ್ದಕ್ಕೆ ಪಕ್ಕದ ನೀಲಗಿರಿ ತೋಪಿಗೆ ಓಡಿತು' ಎಂದು ಪ್ರತ್ಯಕ್ಷದರ್ಶಿ ಯಶವಂತ್ ತಿಳಿಸಿದರು.

'ದಿನವೂ ಈ ರಸ್ತೆಯಲ್ಲಿ ಶಾಲಾ ಮಕ್ಕಳು, ಹಾಲು ಹಾಕುವವರು ಓಡಾಡುತ್ತಾರೆ. ಚಿರತೆ ಕಂಡುಬಂದ ಸ್ವಲ್ಪ ದೂರದಲ್ಲೇ ಪ್ರಾಥಮಿಕ ಶಾಲೆ ಇದೆ. ರಾತ್ರಿ ವೇಳೆ ಕಾರ್ಮಿಕರು ಇದೇ ರಸ್ತೆಯಲ್ಲಿ ದ್ವಿಚಕ್ರ ವಾಹನದಲ್ಲಿ ಸಂಚರಿಸುತ್ತಾರೆ. ಅಕ್ಕಪಕ್ಕ ಹೊಲಗಳಿದ್ದು, ದನಕರು, ಮೇಕೆ ಮೇಯಿಸಲು ಪಕ್ಕದ ಕೆರೆ ಅಂಗಳ, ಗುಂಡು ತೋಪಿಗೆ ಜನರು ಹೋಗುತ್ತಾರೆ. ಚಿರತೆ ಕಾಣಿಸಿಕೊಂಡಿರುವುದರಿಂದ ಆತಂಕದಲ್ಲಿದ್ದೇವೆ' ಎಂದು ಸ್ಥಳೀಯರು ಹೇಳಿದರು.

'ಊರುಗಳ ಹತ್ತಿರವೇ ಚಿರತೆಗಳು ಹಗಲಿನ ವೇಳೆಯೇ ಕಾಣಿಸಿಕೊಳ್ಳುತ್ತಿವೆ ಎಂದರೆ ಭಯವಾಗುತ್ತದೆ. ಅರಣ್ಯ ಇಲಾಖೆ ಅಧಿಕಾರಿಗಳು ಈ ಬಗ್ಗೆ ಗಮನ ಹರಿಸಲಿ' ಎಂದು ಮಂಜುನಾಥ್ ಆಗ್ರಹಿಸಿದರು.

ಸೋಂಪುರ ಹೋಬಳಿಯಲ್ಲಿ ಚಿರತೆ ಹಾವಳಿ ಹೆಚ್ಚಿದ್ದು, ಈಗಾಗಲೇ ಮೂರು ಚಿರತೆ ಸೆರೆ ಹಿಡಿದಿದ್ದಾರೆ. ಕೆರೆಪಾಳ್ಯ ಗ್ರಾಮದಲ್ಲಿ ಚಿರತೆ ಹಿಡಿಯಲು ಅರಣ್ಯ ಅಧಿಕಾರಿಗಳು ಗುರುವಾರ ಬೋನು ಇಟ್ಟಿದ್ದಾರೆ.

ಹುಬ್ಬಳ್ಳಿ–ಧಾರವಾಡ ಪಾಲಿಕೆ ವಿಭಜನೆಗೆ ಸಚಿವರ ಸಮ್ಮತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹುಬ್ಬಳ್ಳಿ– ಧಾರವಾಡ ಮಹಾನಗರ ಪಾಲಿಕೆಯನ್ನು ವಿಭಜಿಸಿ, ಎರಡು ಪ್ರತ್ಯೇಕ ಮಹಾನಗರ ಪಾಲಿಕೆಗಳನ್ನಾಗಿ ರೂಪಿಸಲು ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಸಮ್ಮತಿಸಿದ್ದಾರೆ.

ಹು–ಧಾ ಮಹಾನಗರ ಪಾಲಿಕೆಯ ಸದಸ್ಯರ ನಿಯೋಗ ಧಾರವಾಡ ಕ್ಷೇತ್ರದ ಶಾಸಕ ವಿನಯ್ ಕುಲಕರ್ಣಿ ನೇತೃತ್ವದಲ್ಲಿ ಸಚಿವರನ್ನು ಶುಕ್ರವಾರ ಭೇಟಿ ಮಾಡಿ ಮನವಿ ಸಲ್ಲಿಸಿತು. ಸಚಿವ ಸಂಪುಟ ಸಭೆಯಲ್ಲಿ ಮಂಡಿಸಲು ಕಡತ ಸಿದ್ಧಪಡಿಸುವಂತೆ ಬೈರತಿ ಸುರೇಶ್, ಅಧಿಕಾರಿಗಳಿಗೆ ಸೂಚಿಸಿದರು.

ಸಿ.ಎಂ ಸಿದ್ದರಾಮಯ್ಯ ಅವರು ಈಗಾಗಲೇ ಹುಬ್ಬಳ್ಳಿ ಮತ್ತು ಧಾರವಾಡಕ್ಕೆ ಪ್ರತ್ಯೇಕ ಮಹಾನಗರ ಪಾಲಿಕೆ ರೂಪಿಸಲು ಮೌಖಿಕ ಸೂಚನೆ ನೀಡಿದ್ದು, ಇದಕ್ಕೆ ಮುಂದಿನ ಕ್ರಮ ಕೈಗೊಳ್ಳಲಿದೆ ಎಂದು ಸಚಿವರು ನಿಯೋಗಕ್ಕೆ ಭರವಸೆ ನೀಡಿದರು.

ನಾಳೆ ಸತ್ಸಂಗ ವಿಹಾರ ವಾರ್ಷಿಕೋತ್ಸವ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಮೇಡಹಳ್ಳಿಯ ಸತ್ಸಂಗ ವಿಹಾರದ ಹತ್ತನೇ ವಾರ್ಷಿಕೋತ್ಸವ ಹಾಗೂ ಸತ್ಸಂಗ ಚಳವಳಿಯ ಚಿಂತಕ ಶ್ರೀಠಾಕೂರ್ ಅನುಕೂಲಚಂದ್ರ ಸ್ಮರಣಾರ್ಥ ಐಟಿಐ ಬಳಿಯ ಡಾ.ಬಿ.ಆರ್. ಅಂಬೇಡ್ಕರ್ ಕ್ರೀಡಾಂಗಣದಲ್ಲಿ ಭಾನುವಾರ ಸಾಮಾಜಿಕ, ಸಾಂಸ್ಕೃತಿಕ, ಆಧ್ಯಾತ್ಮಿಕ ಪ್ರವಚನ ಕಾರ್ಯಕ್ರಮಗಳು ನಡೆಯಲಿವೆ.

ವಾರ್ಷಿಕೋತ್ಸವದ ಕಾರ್ಯಕ್ರಮದಲ್ಲಿ ತಜ್ಞರಿಂದ ವೃತ್ತಿ ತರಬೇತಿ, ವ್ಯಾಪಾರ ಮಾರ್ಗದರ್ಶನ, ಆರೋಗ್ಯ ಶಿಬಿರ, ಜೀವನ ತರಬೇತಿ, ಕಾನೂನು ಸಲಹೆ, ಆಪ್ತ ಸಮಾಲೋಚನೆ ಮತ್ತು ಚಿತ್ರ ಪ್ರದರ್ಶನ, ಭಕ್ತಿ ಗೀತೆ, ನೃತ್ಯ ಪ್ರದರ್ಶನ ನಡೆಯಲಿದೆ.

'ಸತ್ಸಂಗ ವಿಹಾರದ ಹತ್ತನೇ ವಾರ್ಷಿಕೋತ್ಸವದಲ್ಲಿ ಹಲವು ರಾಜ್ಯಗಳಿಂದ 20 ಸಾವಿರಕ್ಕೂ ಹೆಚ್ಚು ಜನರು ಪಾಲ್ಗೊಳ್ಳಲಿದ್ದಾರೆ. ಸತ್ಸಂಗ ವಿಹಾರದ ಸಂಸ್ಥಾಪಕ ಶ್ರೀಠಾಕೂರ್ ಅನುಕೂಲಚಂದ್ರ ಅವರ 137ನೇ ಜನ್ಮ ದಿನಾಚರಣೆಯೂ ನಡೆಯಲಿದೆ' ಎಂದು ಮೇಡಹಳ್ಳಿ ಸತ್ಸಂಗ ವಿಹಾರದ ಸಂಯೋಜಕ ಪ್ರಶಾಂತ್ ಕುಮಾರ್ ಪಟ್ನಾಯಕ್ ತಿಳಿಸಿದ್ದಾರೆ.

ರಾಷ್ಟ್ರೀಯ ಹೆದ್ದಾರಿಗಳು ಮತ್ತು ಮೂಲಸೌಕರ್ಯ ಅಭಿವೃದ್ಧಿ ನಿಗಮ ಮಂಡಳಿ
(ಭಾರತ ಸರ್ಕಾರದ ಅಧೀನ ಸಂಸ್ಥೆ)
ಕಾರ್ಪೊರೇಟ್ ಕಚೇರಿ: ಮೊದಲ ಮಹಡಿ, ಟವರ್–ಎ, ವರ್ಲ್ಡ್ ಟ್ರೇಡ್ ಸೆಂಟರ್, ನೌರೋಜಿನಗರ, ನವದೆಹಲಿ–110029

ಎಫ್.ನಂ. ಎನ್‌ಎಚ್‌ಐಡಿಸಿಎಲ್/2(24)/ರಿಕ್ಯೂ.ಸಿಎಸ್/2024/ಎಚ್‌ಆರ್ ದಿನಾಂಕ: 07.12.2024

ರಾಷ್ಟ್ರೀಯ ಹೆದ್ದಾರಿಗಳು ಮತ್ತು ಮೂಲಸೌಕರ್ಯ ಅಭಿವೃದ್ಧಿ ನಿಗಮ ಮಂಡಳಿ (ಇಲ್ಲಿ ಇನ್ನುಮುಂದೆ 'ಎನ್‌ಎಚ್‌ಐಡಿಸಿಎಲ್' ಎಂದು ಕರೆಯಲಾಗುವ) ಎಂಬ ಸಂಸ್ಥೆಯನ್ನು, ಭಾರತ ಸರ್ಕಾರವು ತನ್ನ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯದ ಅಡಿಯಲ್ಲಿ ಸ್ಥಾಪಿಸಿದ್ದು, ಈಶಾನ್ಯ ಪ್ರದೇಶದಲ್ಲಿ ಮತ್ತು ನೆರೆಹೊರೆ ದೇಶಗಳ ಅಂತರರಾಷ್ಟ್ರೀಯ ಸರಹದ್ದುಗಳನ್ನು ಹಂಚಿಕೊಂಡಿರುವ ಪ್ರದೇಶಗಳಲ್ಲಿ ರಾಷ್ಟ್ರೀಯ ಹೆದ್ದಾರಿಗಳ ನಿರ್ಮಾಣ /ಮೇಲ್ದರ್ಜೀಕರಣ/ಅಗಲೀಕರಣ ಮುಂತಾದ ಕಾಮಗಾರಿಗಳಿಗೆ ಚುರುಕು ಮತ್ತು ವೇಗ ನೀಡುವುದೆ, ಈ ಸಂಸ್ಥೆಯ ಗುರಿಯಾಗಿರುತ್ತದೆ. ಇದೀಗ ಈ ಸಂಸ್ಥೆಯು ತನ್ನಲ್ಲಿರುವ ಕೆಳಕಂಡ ಹುದ್ದೆಗೆ ಸಮಾಲೋಚಕ ಎಂಬುದಾಗಿ ಗುತ್ತಿಗೆ ಆಧಾರದಲ್ಲಿ ತೊಡಗಿಸಿಕೊಳ್ಳಲು ಕೇಂದ್ರ/ರಾಜ್ಯ ಸಾರ್ವಜನಿಕ ಕ್ಷೇತ್ರ ಉದ್ದಿಮೆಗಳಲ್ಲಿ ನಿವೃತ್ತರಾಗಿರುವ ಅಥವಾ ಖಾಸಗಿ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅರ್ಹ, ಅನುಭವಿ ಮತ್ತು ಸಮರ್ಥ ಅಧಿಕಾರಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕ್ರ.ಸಂ.	ಹುದ್ದೆಯ ಹೆಸರು	ಖಾಲಿಹುದ್ದೆ ಸಂಖ್ಯೆ	ಕ್ರೋಢೀಕೃತ ವೇತನ*
1.	ಕಂಪನಿ ಕಾರ್ಯದರ್ಶಿ	01	ರೂ. 1,50,000/–

* ವಿವರವಾದ ಜಾಹೀರಾತನ್ನು ಎನ್‌ಎಚ್‌ಐಡಿಸಿಎಲ್'ರವರ www.nhidcl.com ವೆಬ್‌ಸೈಟ್‌ನಲ್ಲಿ ಪರಿಶೀಲಿಸಬಹುದು.

CBC 37112/12/0016/2425
ಕರ್ನಲ್ ವಿವೇಕ್ ಜೈನ್ (ನಿವೃತ್ತ)
ಡೆ. ಜನರಲ್ ಮ್ಯಾನೇಜರ್ (ಎಚ್‌ಆರ್)

ಮೂಲಸೌಕರ್ಯ ನಿರ್ಮಾಣ, ದೇಶ ನಿರ್ಮಾಣ

ಕಾಂಡಕೋಶ ವಿಜ್ಞಾನ ಮತ್ತು ಪುನರುಜ್ಜೀವಿಕ ಔಷಧ ಸಂಸ್ಥೆ (ಐಬ್ರಿಕ್–ಇನ್‌ಸ್ಟೆಮ್)
(ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯದ, ಜೈವಿಕ ತಂತ್ರಜ್ಞಾನ ಇಲಾಖೆಯ ಜೈವಿಕ ತಂತ್ರಜ್ಞಾನ ಮತ್ತು ಆವಿಷ್ಕಾರ ಪರಿಷತ್ ಅಡಿಯಲ್ಲಿನ ಒಂದು ಎಐ)
ಜಿಕೆವಿಕೆ ಅಂಚೆ, ಬಳ್ಳಾರಿ ರಸ್ತೆ, ಬೆಂಗಳೂರು–560065.
ಫೋನ್: 080–61948217 (www.instem.res.in)

ಜಾಹೀರಾತು ಸಂ. ಇನ್‌ಸ್ಟೆಮ್/04/2024

ಕಾಂಡಕೋಶ ವಿಜ್ಞಾನ ಮತ್ತು ಪುನರುಜ್ಜೀವಿಕ ಔಷಧ ಸಂಸ್ಥೆಯ (ಐಬ್ರಿಕ್–ಇನ್‌ಸ್ಟೆಮ್) ಕೆಳಕಂಡ ವೈಜ್ಞಾನಿಕ ವೃಂದದ ಹುದ್ದೆಗಳಿಗಾಗಿ, ನೇರ ನೇಮಕಾತಿ ಆಧಾರದಲ್ಲಿ ಅಥವಾ ಸಾಧ್ಯವಾಗದಿದ್ದಲ್ಲಿ ಡೆಪ್ಯೂಟೇಶನ್/ಅಬ್ಸಾರ್ಪ್ಷನ್ ಆಧಾರದ ಮೇರೆಗೆ, ಬೆಂಗಳೂರು ನಗರದಲ್ಲಿ ನಿಯೋಜಿಸಲಾಗುವ ಎಲ್ಲಾ ಕೇಂದ್ರಿಯ ಸ್ವಾಯುತ್ತ ಸಂಸ್ಥೆಗಳ ಉದ್ಯೋಗಿಗಳಿಗೆ ಅನ್ವಯಿಕ ಎಲ್ಲಾ ಭತ್ಯೆಗಳ ಸಮೇತ ನೇಮಕಾತಿ ಮಾಡಿಕೊಳ್ಳಲೆಂದು ಸೂಕ್ತ ಅಭ್ಯರ್ಥಿಗಳಿಂದ ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ಹುದ್ದೆ ಸಂಕೇತ	ಹುದ್ದೆಯ ಹೆಸರು	ಪೇ ಮ್ಯಾಟ್ರಿಕ್ಸ್ ಲೆವೆಲ್ (7ನೇ ಸಿಪಿಸಿ ಪ್ರಕಾರ)	ಪ್ರವರ್ಗ	ಖಾಲಿಹುದ್ದೆಗಳ ಸಂಖ್ಯೆ
1	07/24	ಅಸೋಸಿಯೇಟ್ ಪ್ರೊಫೆಸರ್/ಅಸೋಸಿಯೇಟ್ ಇನ್ವೆಸ್ಟಿಗೇಟರ್ (ಸೈಂಟಿಸ್ಟ್ –ಎಫ್)	ಪಿಎಲ್–13ಎ	ಮೀಸಲುರಹಿತ (ಯುಆರ್)	01 (ಒಂದು)
2	08/24	ರೀಡರ್/ಅಸಿಸ್ಟೆಂಟ್ ಪ್ರೊಫೆಸರ್/ಅಸಿಸ್ಟೆಂಟ್ ಇನ್ವೆಸ್ಟಿಗೇಟರ್ (ಸೈಂಟಿಸ್ಟ್ –ಇ)	ಪಿಎಲ್–13	ಮೀಸಲುರಹಿತ (ಯುಆರ್)	01 (ಒಂದು)
				ಒಟ್ಟು	02 (ಎರಡು)

ಸಂಪೂರ್ಣ ಜಾಹೀರಾತಿಗಾಗಿ, ಅರ್ಜಿ ಸಲ್ಲಿಸುವ ವಿಧಾನಕ್ಕಾಗಿ, ಇನ್ನಿತರೆ ಷರತ್ತು ಮತ್ತು ನಿಬಂಧನೆಗಳ ವಿವರಗಳಿಗಾಗಿ ಹಾಗೂ ಭವಿಷ್ಯದಲ್ಲಿ ಪರಿಷ್ಕೃತ ಜಾಹೀರಾತು/ತಿದ್ದುಪಡಿಗಳಿಗಾಗಿ ದಯವಿಟ್ಟು ಭೇಟಿ ಕೊಡಿ https://www.instem.res.in/facultypositions/ **ಆನ್‌ಲೈನ್ ಅರ್ಜಿಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ 26.12.2024.**

CBC 36304/11/0005/2425
ನಿರ್ದೇಶಕರು, ಐಬ್ರಿಕ್–ಇನ್‌ಸ್ಟೆಮ್

ಭಾರತ ಸರ್ಕಾರ
ಆಯುಷ್ ಸಚಿವಾಲಯ
ಆಯುಷ್ ಭವನ, 'ಬಿ' ಬ್ಲಾಕ್, ಜಿಪಿಒ ಕಾಂಪ್ಲೆಕ್ಸ್, ಐಎನ್‌ಎ, ನವದೆಹಲಿ–110023
ವೆಬ್‌ಸೈಟ್: www.ayush.gov.in
ಎಫ್.ನಂ. ಆರ್.21011/12/2020–ಇಪಿ(III)

ಅಧಿಸೂಚನೆ

ಹೋಮಿಯೋಪಥಿ ನೈತಿಕತೆ ಮತ್ತು ನೋಂದಣಿ ಮಂಡಳಿ ಸದಸ್ಯ (ಗುಣಮಟ್ಟ ಭರವಸೆ/ಸಾರ್ವಜನಿಕ ಆರೋಗ್ಯ / ಕಾನೂನು / ರೋಗಿ ಪರ ವಕೀಲಿಕೆ) ಎಂಬ 01 ಹುದ್ದೆ, ರಾಷ್ಟ್ರೀಯ ಹೋಮಿಯೋಪಥಿ ಆಯೋಗದ (ಎನ್‌ಸಿಎಚ್) ಹೋಮಿಯೋಪಥಿ ವೈದ್ಯಕೀಯ ಮೌಲ್ಯಾಂಕನ ಮತ್ತು ಕ್ರಮಾಂಕ ಮಂಡಳಿಯ ಸದಸ್ಯ (ಮಾನ್ಯತೆ ಪ್ರದಾನ ತಜ್ಞ) ಎಂಬ 01 ಹುದ್ದೆ, ರಾಷ್ಟ್ರೀಯ ಹೋಮಿಯೋಪಥಿ ಆಯೋಗದ (ಎನ್‌ಸಿಎಚ್) ಹೋಮಿಯೋಪಥಿ ಶಿಕ್ಷಣ ಮಂಡಳಿ ಸದಸ್ಯರು ಎಂಬ 03 ಹುದ್ದೆಗಳು ಮತ್ತು ರಾಷ್ಟ್ರೀಯ ಹೋಮಿಯೋಪಥಿ ಆಯೋಗದ (ಎನ್‌ಸಿಎಚ್) ಅರೆಕಾಲಿಕ ಸದಸ್ಯ ಎಂಬ 01 ಹುದ್ದೆಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

1) ಅರ್ಜಿಗಳನ್ನು ಸ್ವೀಕರಿಸುವ ಕೊನೆಯ ದಿನಾಂಕಕ್ಕೆ ಅರ್ಜಿದಾರರ ಪ್ರಾಯ ಕಡ್ಡಾಯವಾಗಿ 65 ವರ್ಷಕ್ಕಿಂತ ಕಡಿಮೆ ಆಗಿರಬೇಕು.
2) ಎಂಪ್ಲಾಯ್‌ಮೆಂಟ್ ನ್ಯೂಸ್ ಪತ್ರಿಕೆಯಲ್ಲಿ ಜಾಹೀರಾತು ಪ್ರಕಟಗೊಂಡ ದಿನಾಂಕದಿಂದ 30 ದಿನಗಳ ಅವಧಿಯು ಅರ್ಜಿ ಸ್ವೀಕರಿಸುವ ಕೊನೆಯ ದಿನಾಂಕವಾಗಿರುತ್ತದೆ.
3) ವಿವರವಾದ ಜಾಹೀರಾತು ಅರ್ಜಿ ನಮೂನೆಯನ್ನು ಆಯುಷ್ ಸಚಿವಾಲಯದ www.ayush.gov.in ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುತ್ತದೆ ಮತ್ತು ಇದನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ.
4) ಅಭ್ಯರ್ಥಿಯು ಒಂದಕ್ಕಿಂತ ಹೆಚ್ಚಿನ ಹುದ್ದೆಗಳಿಗೆ ಅರ್ಜಿ ಸಲ್ಲಿಸುವುದಾದಲ್ಲಿ, ಪ್ರತಿ ಹುದ್ದೆಗೆ ಪ್ರತ್ಯೇಕ ಅರ್ಜಿ ಸಲ್ಲಿಸತಕ್ಕದ್ದು.
5) ಸಂಪೂರ್ಣ ಭರ್ತಿ ಮಾಡಿರುವ ನಿರ್ದಿಷ್ಟ ನಮೂನೆಯ ಅರ್ಜಿಯನ್ನು, ಕಡ್ಡಾಯವಾಗಿ ಎಲ್ಲಾ ಸಂಬಂಧಿತ ದೃಢೀಕೃತ ಅಥವಾ ಸ್ವಯಂ ದೃಢೀಕೃತ ಪ್ರಮಾಣಪತ್ರಗಳ ಪ್ರತಿಗಳೊಂದಿಗೆ ಸದರಿ ವಿಳಾಸಕ್ಕೆ ರವಾನಿಸುವುದು: ಕಾರ್ಯದರ್ಶಿ, ಆಯುಷ್ ಸಚಿವಾಲಯ, ಆಯುಷ್ ಭವನ, ಬಿ–ಬ್ಲಾಕ್, ಜಿಪಿಒ ಕಾಂಪ್ಲೆಕ್ಸ್, ಐಎನ್‌ಎ, ನವದೆಹಲಿ, 110023. ಅರ್ಜಿ ಮೊಹರು ಹಾಕಿರುವ ಲಕೋಟೆಯ ಮೇಲೆ ದಪ್ಪ ಅಕ್ಷರಗಳಲ್ಲಿ "ರಾಷ್ಟ್ರೀಯ ಹೋಮಿಯೋಪಥಿ ಆಯೋಗದಲ್ಲಿನ .... ಹುದ್ದೆಗಾಗಿ ಅರ್ಜಿ" ಎಂದು ನಮೂದಿಸತಕ್ಕದ್ದು.

CBC 17201/11/0016/2425

ಭಾರತ ಸರ್ಕಾರ
ವೈದ್ಯಕೀಯ ಅಧೀಕ್ಷಕರ ಕಾರ್ಯಾಲಯ
ವಿಎಂಎಂ ಕಾಲೇಜು ಮತ್ತು ಸಫ್ದರಜಂಗ್ ಆಸ್ಪತ್ರೆ
ನವದೆಹಲಿ–110029

ರೆಕ್ಟ್–1/2/2023–ನೇಮಕಾತಿ ಕೋಶ–ಭಾಗ–(1) ದಿನಾಂಕ: 04.09.2024

ಖಾಲಿ ಹುದ್ದೆ ನೇಮಕಾತಿ ಪ್ರಕಟಣೆ

ವಿಷಯ: ಸಫ್ದರಜಂಗ್ ಆಸ್ಪತ್ರೆಯಲ್ಲಿ ಡೆಪ್ಯುಟೇಶನ್ ಆಧಾರದಲ್ಲಿ ಹುದ್ದೆಗಳ ಭರ್ತಿ ಕುರಿತಂತೆ.

ವಿಎಂಎಂ ಕಾಲೇಜು ಮತ್ತು ಸಫ್ದರಜಂಗ್ ಆಸ್ಪತ್ರೆ, ನವದೆಹಲಿ ಇಲ್ಲಿನ ಅಸಿಸ್ಟೆಂಟ್ ಡೈರೆಕ್ಟರ್ (ಒಎಲ್) ಹುದ್ದೆಯನ್ನು ಡೆಪ್ಯುಟೇಶನ್ ಆಧಾರದಲ್ಲಿ ಭರ್ತಿ ಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

2. ಖಾಲಿಹುದ್ದೆ/ವೇತನ ಹಂತ ಇತ್ಯಾದಿಗಳ ವಿವರ ಕೆಳಗಿನಂತಿರುತ್ತದೆ:

ಕ್ರ. ಸಂ.	ಹುದ್ದೆ ಮತ್ತು ವೇತನ ಶ್ರೇಣಿ	ಒಟ್ಟು ಖಾಲಿ ಹುದ್ದೆ	ನೇಮಕಾತಿ ವಿಧಾನ
01.	ಅಸಿಸ್ಟೆಂಟ್ ಡೈರೆಕ್ಟರ್ (ಒಎಲ್) ವೇತನ ಶ್ರೇಣಿಯಲ್ಲಿನ ಹಂತ 10 (ರೂ. 56100–ರೂ.177500)	01	**ಸಂಯುಕ್ತ ವಿಧಾನ: ಡೆಪ್ಯುಟೇಶನ್ (ಅಲ್ಪಾವಧಿ ಗುತ್ತಿಗೆ ಸೇರಿದಂತೆ) + ಪ್ರಮೋಶನ್**

3. ವಿವರವಾದ ಜಾಹೀರಾತು, ಸೂಚನೆಗಳು, ಅರ್ಹತಾ ಮಾನದಂಡಗಳು, ವಯೋಮಿತಿ, ಅರ್ಜಿ ನಮೂನೆ, ಅನುಬಂಧ ಇತ್ಯಾದಿಗಳಿಗಾಗಿ ದಯವಿಟ್ಟು ಸಫ್ದರಜಂಗ್ ಆಸ್ಪತ್ರೆಯ (www.vmmc-sjh.nic.in)/ಡಿಜಿಎಚ್‌ಎಸ್'ರವರ (https://dghs.gov.in) ವೆಬ್‌ಸೈಟ್‌ಗೆ ಭೇಟಿ ಕೊಡಿ.

4. ಸಫ್ದರಜಂಗ್ ಆಸ್ಪತ್ರೆಯ ವೆಬ್‌ಸೈಟ್‌ನಲ್ಲಿ ಲಭ್ಯವಿರುವ ಜಾಹೀರಾತು ಪ್ರಕಟಣೆಯಲ್ಲಿ ವಿವರಿಸಲಾಗಿರುವ ಎಲ್ಲಾ ಅಗತ್ಯ ದಾಖಲಾತಿಗಳ ಸಮೇತ ನಿರ್ದಿಷ್ಟ ನಮೂನೆಯಲ್ಲಿ ಅರ್ಜಿಗಳನ್ನು ಸಲ್ಲಿಸುವುದು. **ಎಂಪ್ಲಾಯ್‌ಮೆಂಟ್ ನ್ಯೂಸ್‌ನಲ್ಲಿ ಜಾಹೀರಾತು ಹೊರಡಿಸಿದ ದಿನಾಂಕದಿಂದ 30 ದಿನಗಳೊಳಗೆ, ಸೋಮವಾರ ದಿಂದ ಶುಕ್ರವಾರದ ವರೆಗೆ, ಯಾವುದೇ ಕೆಲಸದ ದಿನದಂದು ಬೆಳಗ್ಗೆ 9.00 ಗಂಟೆಯಿಂದ ಸಂಜೆ 4.00 ಗಂಟೆಯವರೆಗೆ ಮತ್ತು ಶನಿವಾರದಂದು ಬೆಳಗ್ಗೆ 9.00 ಗಂಟೆಯಿಂದ ಮಧ್ಯಾಹ್ನ 1.00 ಗಂಟೆಯವರೆಗೆ – ಡೈರಿ ಸೆಕ್ಷನ್, ವಿಎಂಎಂ ಕಾಲೇಜು ಮತ್ತು ಸಫ್ದರಜಂಗ್ ಆಸ್ಪತ್ರೆಯ ಗೇಟ್ ನಂ. 2ರ ಸಮೀಪ, ನವದೆಹಲಿ** ವಿಳಾಸದಲ್ಲಿ ಅರ್ಜಿಗಳನ್ನು ಸ್ವೀಕರಿಸಲಾಗುತ್ತದೆ. (ಅದಾಗ್ಯೂ, ಒಂದು ವೇಳೆ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕದಂದು ಭಾರತೀಯ ಸರ್ಕಾರದಿಂದ ರಾಷ್ಟ್ರೀಯ ರಜಾದಿನ ಎಂದು ಘೋಷಿಸಲ್ಪಟ್ಟರೆ, ಭಾನುವಾರ ಅಥವಾ ಇನ್ಯಾವುದೇ ಸಹಜ ರಜಾದಿನ ಎದುರಾದಲ್ಲಿ, ಮಾರನೆಯ ಕೆಲಸದ ದಿನವನ್ನು ಕೊನೆಯ ದಿನಾಂಕವೆಂದು ಪರಿಗಣಿಸಲಾಗುತ್ತದೆ).

CBC 17145/11/0018/2425

ಭಾರತ ಸರ್ಕಾರ
ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ
ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ
ಜಾಹೀರಾತು ಸಂ. ಡಿಎಸ್‌ಟಿ/02/2024–ಇ-III.

ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಲ್ಲಿನ, ಮಿಷನ್ ಡೈರೆಕ್ಟರ್, ನ್ಯಾಷನಲ್ ಮಿಷನ್–ಇಂಟರ್‌ಡಿಸಿಪ್ಲಿನರಿ ಸೈಬರ್ ಫಿಜಿಕಲ್ ಸಿಸ್ಟಮ್ಸ್, ಎಂಬ ಒಂದು ಹುದ್ದೆಯನ್ನು ಡೆಪ್ಯುಟೇಶನ್ (ಅಲ್ಪಾವಧಿ ಗುತ್ತಿಗೆ ಸೇರಿದಂತೆ) ಆಧಾರದಲ್ಲಿ ಭರ್ತಿ ಮಾಡಿಕೊಳ್ಳಲು ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಸದರಿ ಹುದ್ದೆಯು ಗ್ರೂಪ್ 'ಎ' ಗೆಜೆಟೆಡ್ ನಾನ್–ಮಿನಿಸ್ಟೀರಿಯಲ್ [ಹಂತ–14 (ರೂ. 1,44,200–ರೂ.2,18,200)ರ ವೇತನ ಶ್ರೇಣಿ] ಹುದ್ದೆಯಾಗಿರುತ್ತದೆ. ಅರ್ಹ ಅಭ್ಯರ್ಥಿಗಳು ತಮ್ಮ ಅಧಿಕೃತ ಇಮೇಲ್ ಐಡಿ ಬಳಸಿಕೊಂಡು ಆನ್‌ಲೈನ್ ಪೋರ್ಟಲ್ https://recruitment.dst.gov.in/ ಮುಖಾಂತರ ಆನ್‌ಲೈನ್ ಅರ್ಜಿ ಭರ್ತಿ ಮಾಡಬಹುದು. ಎಂಪ್ಲಾಯ್‌ಮೆಂಟ್ ನ್ಯೂಸ್ / ರೋಜಗಾರ್ ಸಮಾಚಾರ್ ಪತ್ರಿಕೆಯಲ್ಲಿ ಸದರಿ ಜಾಹೀರಾತು ಪ್ರಕಟಗೊಂಡ ದಿನಾಂಕದಿಂದ 45 ದಿನಗಳ ಅವಧಿಯವರೆಗೆ, ಸದರಿ ಆನ್‌ಲೈನ್ ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಬಹುದಾಗಿರುತ್ತದೆ. ಸದರಿ ಅರ್ಜಿಯ ಮೇಲೆ ಅಭ್ಯರ್ಥಿಯು ತನ್ನ ಸಹಿ ಹಾಕಿ, ಕಳೆದ ಐದು ವರ್ಷಗಳ ಎಸಿಆರ್/ಎಪಿಎಆರ್ ದಾಖಲಾತಿಗಳ ದೃಢೀಕೃತ ಪ್ರತಿಗಳ ಸಮೇತ ಸಹಿ ಹಾಕಿದ ಅರ್ಜಿಯನ್ನು ಸೂಕ್ತ ವಿಧಾನದ ಮುಖಾಂತರ, ಆನ್‌ಲೈನ್ ಪೋರ್ಟಲ್ ಕ್ಲೋಸರ್ ದಿನಾಂಕದಿಂದ 30 ದಿನಗಳೊಳಗೆ (ರಿಮೋಟ್ ಏರಿಯಾಗಳಿಗೆ 45 ದಿನಗಳು), ಸದರಿ ಇಲಾಖೆಗೆ ತಲುಪುವಂತೆ ನೋಂದಾಯಿತ ಅಂಚೆ ಅಥವಾ ತ್ವರಿತ ಅಂಚೆಯ ಮೂಲಕ ರವಾನಿಸತಕ್ಕದ್ದು. ಅರ್ಜಿ ಪ್ರಕ್ರಿಯೆ ಮತ್ತು ವಿದ್ಯಾರ್ಹತೆ, ಅನುಭವ, ವಯೋಮಿತಿ, ಅರ್ಜಿಯ ಕೊನೆಯ ಹಾಗೂ ಇನ್ನಿತರ ಅಗತ್ಯತೆಯ ವಿವರ ಮುಂತಾದವುಗಳಿಗಾಗಿ ನಮ್ಮ www.dst.gov.in ವೆಬ್‌ಸೈಟ್‌ಗೆ ಭೇಟಿ ಕೊಡಿ.

ಸಹಿ/– (ವಿನೋದ್ ಕುಮಾರ್ ಶರ್ಮಾ)
ಭಾರತ ಸರ್ಕಾರದ ಅಧೀನ ಕಾರ್ಯದರ್ಶಿ
CBC 36101/11/0001/2425

ಇನಸ್ಪೆಕ್ಟರ್ ಜನರಲ್ ರವರ ಕಚೇರಿ:
ಎಸ್‌ಟಿಸಿ ಬಿಎಸ್‌ಎಫ್ ಬೆಂಗಳೂರು–63
ನಂ. ಬಿಐಟಿ/ಆಕ್ಷನ್ಸ್/ಎಸ್‌ಟಿಸಿ–ಬಿಎಲ್‌ಆರ್/2024/16313
ದಿನಾಂಕ: 29–11–2024

ತಿದ್ದುಪಡಿ

ಎಸ್‌ಟಿಸಿ ಬಿಎಸ್‌ಎಫ್ ಬೆಂಗಳೂರು ರವರ ಬಿಎಸ್‌ಎಫ್ ತಂತ್ರಜ್ಞಾನ ಸಂಸ್ಥೆಯ ಹಾನಿಗೊಂಡಿರುವ / ದುರಸ್ತಿ ಮಾಡಲಾಗದಿರುವ ಪದಾರ್ಥಗಳ, 30 ಡಿಸೆಂಬರ್ 2024 ರಂದು 1100 ಗಂಟೆಗೆ ಕೈಗೊಳ್ಳಲಾಗುವ ಸಾರ್ವಜನಿಕ ಹರಾಜಿಗೆ ಸಂಬಂಧಿಸಿದಂತೆ, ಈ ಕಚೇರಿಯ 26 ನವಂಬರ್, 2024ರ ಹರಾಜು ಪ್ರಕಟಣೆ ನಂ. 16198ಕ್ಕೆ ಭಾಗಶಃ ಮಾರ್ಪಾಡು ಕೈಗೊಳ್ಳಲಾಗಿದ್ದು, ಕೆಳಕಂಡ ಹೆಚ್ಚುವರಿ ಕ್ಲಾಜ್‌ಗಳನ್ನು ಸೇರ್ಪಡೆ ಮಾಡಲಾಗಿರುತ್ತದೆ ಮತ್ತು ಈ ಮಾಹಿತಿಯನ್ನು ಎಲ್ಲಾ ಬಿಡ್‌ದಾರರು ಗಮನಿಸುವುದು:–

(ಎ) ಬಿಡ್‌ದಾರರು, ಪರಿಸರ ಮತ್ತು ಅರಣ್ಯ ಸಚಿವಾಲಯ, ಸೆಂಟ್ರಲ್/ಡಿಪಿಸಿಸಿ ಹಾಗೂ ಕರ್ನಾಟಕ ಸರ್ಕಾರದ ಅಡಿಯಲ್ಲಿನ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಲ್ಲಿ ಇ–ತ್ಯಾಜ್ಯ ನಿಯಮಗಳ ಪ್ರಕಾರ ನೋಂದಣಿ ಮಾಡಿಕೊಂಡಿರಬೇಕು. ನೋಂದಣಿ ಮತ್ತು ಅಧಿಕೃತತೆಯ ಊರ್ಜಿತತ್ವಕ್ಕೆ ಸಂಬಂಧಿತ ದಾಖಲಾತಿಗಳನ್ನು ಬಿಡ್ ಸಂಸ್ಥೆಗಳಿಗೆ ಹಾಜರುಪಡಿಸಬೇಕು. ಅಗತ್ಯ ನೋಂದಣಿ ಮತ್ತು ಅಧಿಕೃತತೆ ಇಲ್ಲದೆಯೆ ಬಿಡ್‌ನಲ್ಲಿ ಪಾಲ್ಗೊಳ್ಳಲು ಅವಕಾಶವಿರುವುದಿಲ್ಲ.
(ಬಿ) ಸಂಸ್ಥೆಯು, ವಿಶೇಷವಾಗಿ ಇ–ತ್ಯಾಜ್ಯ ವಿಲೇವಾರಿಗೆ ಸಂಬಂಧಿತ ಸರ್ಕಾರಿ ಕಾಮಗಾರಿ ಆದೇಶವನ್ನು ಕೈಗೊಂಡಿರುವುದಕ್ಕೆ ಸಂಬಂಧಿತ ಸಾಕಷ್ಟು ದಾಖಲಾತಿಗಳನ್ನು ಸಲ್ಲಿಸಬೇಕು.
(ಸಿ) ಎಲ್ಲಾ ಬಿಡ್‌ದಾರರು ತಮ್ಮ ಟೆಂಡರ್ ದಸ್ತಾವೇಜುಗಳ ಜೊತೆಗೆ, ಕಡ್ಡಾಯವಾಗಿ ಜಿಎಸ್‌ಟಿಐಎನ್ ನೋಂದಣಿ/ಸೇವಾ ತೆರಿಗೆ ನೋಂದಣಿ ಪ್ರಮಾಣಪತ್ರಗಳನ್ನು ಲಗತ್ತಿಸತಕ್ಕದ್ದು.

ಸೂಚನೆ: ಸದರಿ ಹರಾಜು ಪ್ರಕಟಣೆಯ ಇನ್ನಿತರ ಎಲ್ಲಾ ಷರತ್ತು ಮತ್ತು ನಿಬಂಧನೆಗಳಲ್ಲಿ ಯಾವುದೇ ಬದಲಾವಣೆ/ಮಾರ್ಪಾಡು ಇರುವುದಿಲ್ಲ.

ಸಹಿ/– 2ಐಸಿ
ಎಡಿಎಂ. ಆಫೀಸರ್
ಇನ್‌ಸ್ಪೆಕ್ಟರ್ ಜನರಲ್ ರವರ ಪರವಾಗಿ
ಎಸ್‌ಟಿಸಿ ಬಿಎಸ್‌ಎಫ್ ಬೆಂಗಳೂರು
CBC 19110/11/0078/2425

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ (ಕ್ಯೂಎ/ಕ್ಯೂಸಿ) ವಿಭಾಗ,
ಯಲಹಂಕ ವಲಯ, ರೂಂ ನಂ. 101, ಅನೆಕ್ಸ್–3 ಕಟ್ಟಡ, ಬಿಬಿಎಂಪಿ,
ಎನ್.ಆರ್. ಚೌಕ, ಬೆಂಗಳೂರು – 560002.

ಸಂಖ್ಯೆ: ಕಾಅ(ಕ್ಯೂಎ/ಕ್ಯೂಸಿ)/ಯಲಹಂಕ/ಟೆಂಡರ್/60/2024–25 ದಿನಾಂಕ: 06–12–2024

ಅಲ್ಪಾವಧಿ ಟೆಂಡರ್ ಪ್ರಕಟಣೆ
(ದ್ವಿ–ಲಕೋಟೆ ಪದ್ಧತಿ) (ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಗುಣಮಟ್ಟ ಭರವಸೆ / ಗುಣಮಟ್ಟ ನಿಯಂತ್ರಣ ವಿಭಾಗ (ಯಲಹಂಕ ವಲಯ), ಬಿಬಿಎಂಪಿ, ಇವರು ಈ ಕೆಳಕಂಡ ಕಾಮಗಾರಿಗೆ ಮೇಲ್ವಿಚಾರಣೆ, ಗುಣಮಟ್ಟ ನಿಯಂತ್ರಣ (ಪಿಎಂಸಿ) ಸೇರಿದಂತೆ ಯೋಜನಾ ನಿರ್ವಹಣೆಗೆ ಸಮಾಲೋಚನಾ ಸೇವೆಗಳಿಗಾಗಿ ಇದೇ ವಿಧದ ಕಾಮಗಾರಿಗಳನ್ನು ನಿರ್ವಹಿಸಿರುವ ಆಸಕ್ತ ವ್ಯಕ್ತಿಗಳು / ಸಂಸ್ಥೆಗಳಿಂದ ಪ್ರಸ್ತಾವನೆಗಾಗಿ ಮನವಿ ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು
1	ಥಣಿಸಂದ್ರ ಮುಖ್ಯರಸ್ತೆಯಲ್ಲಿರುವ ಹಜ್ ಭವನದಲ್ಲಿ ಪೈಪ್‌ಲೈನ್ ನಿರ್ಮಾಣ ಕಾಮಗಾರಿಗಳಿಗೆ ಮೇಲ್ವಿಚಾರಣೆ, ಗುಣಮಟ್ಟ ನಿಯಂತ್ರಣ ಸೇರಿದಂತೆ ಪಿಎಂಸಿ ಸೇವೆಗಳನ್ನು ಒದಗಿಸುವುದು. **ಕಾಮಗಾರಿಯ ಮೊತ್ತ (ರೂ. ಲಕ್ಷಗಳಲ್ಲಿ: 199.58, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 5,000/–**

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ನ್ನು ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ನಿಂದ ದಿನಾಂಕ: **09–12–2024** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಬಿಡ್ ಪೂರ್ವಭಾವಿ ಸಭೆ ದಿನಾಂಕ: **12–12–2024 ರಂದು ಬೆಳಿಗ್ಗೆ 11.00 ಗಂಟೆಗೆ ಕಾರ್ಯಪಾಲಕ ಅಭಿಯಂತರರು (ಕ್ಯೂಎ/ಕ್ಯೂಸಿ) ಕಛೇರಿ, ರೂಂ. ನಂ.101, ಅನೆಕ್ಸ್–3 ಕಟ್ಟಡ, ಬಿಬಿಎಂಪಿ, ಎನ್.ಆರ್. ಚೌಕ, ಬೆಂಗಳೂರು – 560002** ಇಲ್ಲಿ ನಡೆಯುವುದು. 3) ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ: **20–12–2024 ರಂದು ಸಂಜೆ 4.00 ಗಂಟೆವರೆಗೆ.** 4) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **21–12–2024 ರಂದು ಸಂಜೆ 4.30 ಗಂಟೆಗೆ.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು (ಕ್ಯೂಎ/ಕ್ಯೂಸಿ) ವಿಭಾಗ,
ಯಲಹಂಕ ವಲಯ, ಬಿಬಿಎಂಪಿ.

ನಿವೃತ್ತ ನ್ಯಾಯಮೂರ್ತಿ
ಆರ್. ಎಂ. ಲೋಧಾ ಸಮಿತಿ
(ಪಿಎಸಿಎಲ್ ಲಿಮಿಟೆಡ್ ವಿಷಯದಲ್ಲಿ)

ಸಾರ್ವಜನಿಕ ಪ್ರಕಟಣೆ

1. ಸುಬ್ರತಾ ಭಟ್ಟಾಚಾರ್ಯ ವಿರುದ್ಧ ಸೆಬಿ ಮತ್ತು ಇನ್ನಿತರರ ಜೊತೆಗೆ ಇತರೆ ಸಂಬಂಧಿತ ವಿಷಯಗಳಲ್ಲಿನ ಸಿವಿಲ್ ಅಪೀಲ್ ನಂ. 13301/2015ಕ್ಕೆ ಸಂಬಂಧಿಸಿದಂತೆ, ಮಾನ್ಯ ಸರ್ವೋಚ್ಚ ನ್ಯಾಯಾಲಯವು ಹೊರಡಿಸಿರುವ ದಿನಾಂಕ 08.08.2024ರ ಆದೇಶವನ್ನು ದೃಷ್ಟಿಯಲ್ಲಿರಿಸಿಕೊಂಡು, ಸಾಮಾನ್ಯ ಸಾರ್ವಜನಿಕರ ಮಾಹಿತಿಗಾಗಿ ಈ ಸಾರ್ವಜನಿಕ ಪ್ರಕಟಣೆಯನ್ನು ಹೊರಡಿಸಲಾಗುತ್ತಿದೆ.
2. ಮಾನ್ಯ ಸರ್ವೋಚ್ಚ ನ್ಯಾಯಾಲಯದ ಈ ಮೇಲ್ಕಂಡ ಆದೇಶದ ಅನುಸರಣೆಯ ಮೇರೆಗೆ, ಪಿಎಸಿಎಲ್ ಲಿಮಿಟೆಡ್‌ನ ಸ್ವತ್ತುಗಳಿಗೆ ಸಂಬಂಧಿತ ಎಲ್ಲಾ ಆಕ್ಷೇಪಣೆಗಳನ್ನು ಈಗ, ನ್ಯಾಯಮೂರ್ತಿ (ನಿವೃತ್ತ) ಆರ್. ಎಂ. ಲೋಧಾ ಸಮಿತಿಯ (ಪಿಎಸಿಎಲ್ ಲಿಮಿಟೆಡ್ ವಿಷಯದಲ್ಲಿ) ವಸೂಲಾತಿ ಅಧಿಕಾರಿಯಿಂದ ವಿಚಾರಣೆ ಮಾಡಲಾಗುತ್ತದೆ.
3. ಈ ಕುರಿತಂತೆ, ಸಾಮಾನ್ಯ ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದು ಏನೆಂದರೆ, ಸೆಬಿ ಸಂಸ್ಥೆಯ **www.sebi.gov.in** ವೆಬ್‌ಸೈಟ್‌ನಲ್ಲಿ ಲಭ್ಯವಿರುವ ಅವಶ್ಯಕತೆಗಳಿಗೆ ಅನುಗುಣವಾಗಿ, ಪಿಎಸಿಎಲ್ ಲಿಮಿಟೆಡ್‌ಗೆ ಸಂಬಂಧಿತ ತಮ್ಮ ಆಕ್ಷೇಪಣೆಗಳನ್ನು ದಾಖಲಿಸಬಹುದು. ಹೋಮ್ ಪೇಜ್ – ಪಿಎಸಿಎಲ್ ಮ್ಯಾಟರ್ಸ್ – ಪಬ್ಲಿಕ್ ನೋಟಿಸಸ್. ಸದರಿ ಅವಶ್ಯಕತೆಗಳಿಗೆ ಅನುಗುಣವಾಗಿ ಇಲ್ಲದಿರುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.
4. ಮುಂದುವರಿದಂತೆ, ಮೇಲ್ಕಂಡ ವಸೂಲಾತಿ ಅಧಿಕಾರಿಯು, ಈ ಹಿಂದೆ ಶ್ರೀ ಆರ್.ಎಸ್. ವಿರ್ಕ್, ಜಿಲ್ಲಾ ನ್ಯಾಯಾಧೀಶರು (ನಿವೃತ್ತ) ಇವರ ಸಮ್ಮುಖದಲ್ಲಿ ಪಕ್ಷಗಾರರು ದಾಖಲಿಸಿದ್ದ ಮತ್ತು ವಿಲೇವಾರಿಗೆ ಬಾಕಿ ಉಳಿದಿರುವ ಆಕ್ಷೇಪಣೆಗಳ ವಿಚಾರಣೆ ಕೂಡ ಕೈಗೆತ್ತಿಕೊಳ್ಳುತ್ತಾರೆ. ಸಂಬಂಧಿತ ವಸೂಲಾತಿ ಅಧಿಕಾರಿಯು ಇಂತಹ ಆಕ್ಷೇಪಣೆಗಳ ವಿಚಾರಣಾ ದಿನಾಂಕವನ್ನು ಆಯಾ ಪಕ್ಷಗಾರರಿಗೆ ಪ್ರತ್ಯೇಕವಾಗಿ ತಿಳಿಸುತ್ತಾರೆ.
5. ಒಂದು ವೇಳೆ ಆಕ್ಷೇಪಣೆಗಳು ತಿರಸ್ಕೃತಗೊಂಡಿರುವ, ನೊಂದ ಪಕ್ಷಗಾರ/ಪಕ್ಷಗಾರರು, ಇಲ್ಲಿ ಮೇಲೆ ತಿಳಿಸಿರುವ ಸಿವಿಲ್ ಅಪೀಲ್ ನಂ. 13301/2015 ರಲ್ಲಿನ ಸೂಕ್ತ ನಮೂನೆಯ ಮೂಲಕ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮೊರೆ ಹೋಗಬಹುದು.

ಮುಂಬೈ
ನವಂಬರ್ 25, 2024
CBC 15204/11/0184/2425
ನೊಡಲ್ ಆಫೀಸರ್–ಕಂ–ಸೆಕ್ರೆಟರಿ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು – 560 020.

ಸಂ: ಬೆಂಅಪ್ರಾ/ಕಾಅ(ಡಿಎಸ್‌ಕೆಎಲ್)/ಟೆಂ/273/2024–2025 ದಿನಾಂಕ : 06.12.2024

ಟೆಂಡರ್ ಆಹ್ವಾನ (ಐಎಫ್‌ಟಿ)

(ಜಿಓಕೆ ಇ-ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ https://kppp.karnataka.gov.in ಮೂಲಕ)

ಆಯುಕ್ತರು, ಬಿಡಿಎ, ಬೆಂಗಳೂರು, ಇವರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಡಾ. ಕೆ.ಶಿವರಾಮ ಕಾರಂತ ಬಡಾವಣೆ ವಿಭಾಗ, ಬಿಡಿಎ, ಬೆಂಗಳೂರು, ಇವರು **ಪ್ಲಾಟಿನಮ್ ಸಿಟಿ, ಕೈಗಾರಿಕಾ ಪ್ರದೇಶ, ಹಂತ 1, ಪೀಣ್ಯ, ಬೆಂಗಳೂರು–560022, ಇಲ್ಲಿ 16 ಮಹಡಿಗಳ 262 ಯೂನಿಟ್‌ಗಳನ್ನು ಒಳಗೊಂಡ "ಎ" ಬ್ಲಾಕ್‌ನ ಅಸ್ತಿತ್ವದಲ್ಲಿರುವ ಕಟ್ಟಡವನ್ನು ನೆಲಸಮಗೊಳಿಸಲು** ಅರ್ಹ ಸಂಸ್ಥೆಗಳು/ಏಜೆನ್ಸಿಗಳಿಂದ ಟೆಂಡರ್‌ನ್ನು ಆಹ್ವಾನಿಸಿದ್ದಾರೆ. ಯೂನಿಟ್‌ಗಳ ಸಂ.: **262.** ಇಎಂಡಿ: **ರೂ.10.00 ಲಕ್ಷಗಳು.** ಪೂರ್ಣಗೊಳಿಸಲು ಕಾಲಾವಧಿ: **ಮಳೆಗಾಲವೂ ಸೇರಿದಂತೆ 6 ತಿಂಗಳು.** ಹೆಚ್ಚಿನ ವಿವರಗಳಿಗೆ **https://kppp.karnataka.gov.in** ಗೆ ಭೇಟಿನೀಡಿ ಅಥವಾ ಇದೇ ಕಚೇರಿಗೆ ಭೇಟಿನೀಡಿ. ಕೆ.ಪಿ.ಪಿ.ಪಿ ಸಹಾಯವಾಣಿ: **080–25501216/25501217**

ಸಹಿ/– ಕಾರ್ಯಪಾಲಕ ಅಭಿಯಂತರರು,
ಡಾ. ಕೆ.ಶಿವರಾಮ ಕಾರಂತ ಬಡಾವಣೆ ವಿಭಾಗ, ಬಿಡಿಎ, ಬೆಂಗಳೂರು.

ಭಾರತ ಸರ್ಕಾರ
ಯುವಜನ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯ
ಕ್ರೀಡಾ ಇಲಾಖೆ
ರಾಷ್ಟ್ರೀಯ ಕ್ರೀಡಾ ವಿಶ್ವವಿದ್ಯಾಲಯ, ಮಣಿಪುರ ಇಲ್ಲಿಗೆ ವೈಸ್–ಚಾನ್ಸಲರ್ ನೇಮಕಾತಿಗಾಗಿ
(ಕೇಂದ್ರಿಯ ವಿಶ್ವವಿದ್ಯಾಲಯ)

ರಾಷ್ಟ್ರೀಯ ಕ್ರೀಡಾ ವಿಶ್ವವಿದ್ಯಾಲಯ, ಇಂಫಾಲ, ಮಣಿಪುರ ಇಲ್ಲಿನ ವೈಸ್ ಚಾನ್ಸಲರ್ ಹುದ್ದೆಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಹುದ್ದೆಗೆ ಸಂಬಂಧಿತ ಅಗತ್ಯ ವಿದ್ಯಾರ್ಹತೆ, ಸಾಮಾನ್ಯ ಸೂಚನೆಗಳು, ಮಾಹಿತಿ, ಅರ್ಜಿ ನಮೂನೆ ಮತ್ತು ಇನ್ನಿತರ ವಿವರಗಳಿಗಾಗಿ, ಯುವಜನ ವ್ಯವಹಾರಗಳು ಮತ್ತು ಕ್ರೀಡಾ ಸಚಿವಾಲಯದ www.yas.nic.in ವೆಬ್‌ಸೈಟ್‌ಗೆ ಭೇಟಿ ಕೊಡಿ.

ನಿರ್ದಿಷ್ಟ ನಮೂನೆಯಲ್ಲಿ ಸಂಪೂರ್ಣವಾಗಿ ಭರ್ತಿ ಮಾಡಿರುವ ಅರ್ಜಿಗಳನ್ನು, ಈ ಜಾಹೀರಾತು ಪ್ರಕಟಗೊಂಡ ದಿನಾಂಕದಿಂದ 30 ದಿನಗಳೊಳಗೆ, **ಶ್ರೀ. ಸಂದೀಪ ಕುಮಾರ ಸಿನ್ಹಾ, ಸಹಾಯಕ ಕಾರ್ಯದರ್ಶಿ, ಹಾಲ್ ನಂ. 101, ಜೆಎಲ್‌ಎನ್ ಸ್ಟೇಡಿಯಂ, ಲೋಧಿ ರಸ್ತೆ, ನವದೆಹಲಿ 110003** ಇವರಿಗೆ, ನೋಂದಾಯಿತ / ತ್ವರಿತ ಅಂಚೆ ಮುಖಾಂತರ ರವಾನಿಸತಕ್ಕದ್ದು. ನಿಗದಿತ ಅವಧಿಯ ನಂತರ ಸಲ್ಲಿಕೆಯಾಗುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

ಆಫ್‌ಲೈನ್ ಅರ್ಜಿಗಳನ್ನು ಮಾತ್ರ ಸ್ವೀಕರಿಸಲಾಗುತ್ತದೆ. (ಆನ್‌ಲೈನ್ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ).

CBC-47116/12/0006/2425

AUCTION ON RIGHTS FOR PLUCKING AND REMOVAL OF USUFRUCTS, FOR THE PERIOD OF ONE YEAR (01 JAN 25 TO 31 DEC 25) AT AIR FORCE STATION JALAHALLI

ON BEHALF OF PRESIDENT OF INDIA, AIR OFFICER COMMANDING, AIR FORCE STATION JALAHALLI WILL HOLD AN OPEN AUCTION AT 1000 H 12 DEC 24 FOR PLUCKING AND REMOVAL OF USUFRUCTS FROM DOMESTIC AND TECHNICAL AREA OF AIR FORCE STATION JALAHALLI FOR THE YEAR 01 JAN 25 TO 31 DEC 25. TERMS AND CONDITIONS AND RELEVANT ASPECTS WILL BE EXPLAINED BEFORE COMMENCEMENT OF AUCTION. ALL INTRESTED PARTIES/ BIDDERS ARE ADVISED TO FAMILIARISE WITH THE TERMS AND CONDITIONS BEFORE AUCTION. PARTIES/ BIDDERS INTERESTED IN PARTICIPATING IN THE OPEN AUCITON ARE REQUIRED TO THEIR NAMES BY SUBMITTING EXPERIENCE AND INCOME TAX CLEARANCE CERTIFICATE ALONG WITH A COPY OF PAN CARD AND AADHAR CARD WITH STATION ORGANISATION SECTION AT STATION HEADQUARTERS OF AIR FORCE STATION JALAHALLI BY 1200 HRS ON 10 DEC 24 PARTIES/ BIDDERS WHO ARE NO INCOME TAX PAYEES ARE TO SUBMIT AN AFFIDAVIT OF **RS. 10.00** THAT THEY HAD NO TAXABLE INCOME DURING LAST FIVE YEARS. IN ORDER TO QUALIFY FOR BIDDING, THE BIDDERS ARE REQUIRED TO SUBMIT EARNEST MONEY OF **RS 1000.00 (RUPEES ONE THOUSAND ONLY)** WITH SENIOR ACCOUNTS OFFICER, AIR FORCE STATION JALAHALLI BEFORE 1200 HRS ON 10 DEC 24. **EARNEST MONEY SHALL NOT BE TAKEN IN CASH**. EMD MUST BE PAID IN THE FORM OF DEMAND DRAFT AGAINST PUBLIC FUND, AIR FORCE STATION JALAHALLI. SUCCESSFUL BIDDER (HIGEST BIDDER) WOULD BE REQUIRED TO DEPOSIT **25%** OF THE BID AMOUNT AS SECURITY DEPOSIT ON THE FALL OF HAMMER. FULL BID AMOUNT IS REQUIRED TO BE DEPOSITED WITHIN ONE WEEK OF ACCEPTANCE OF BID. BIDDER ARE TO NOTE THAT NO FIRE WOOD OF ANY KIND OR TREES WOULD BE ALLOWED TO BE CUT OR REMOVED. FOR ANY FURTHER QUERIES, BIDDER MAY CONTACT STATION ORGANISATION SECTION, AIR FORCE STATION JALAHALLI AT **TELE: 080-23411081/ EXTN: 4118-7286/7229/7226.**

ಭಾರತ ಸರ್ಕಾರ
ಗೃಹ ವ್ಯವಹಾರಗಳ ಸಚಿವಾಲಯ
ಮಹಾನಿರ್ದೇಶನಾಲಯ, ಐಟಿಬಿ ಪೊಲೀಸ್ ಪಡೆ
(ನೇಮಕಾತಿ ಶಾಖೆ)
ಐಟಿಬಿಪಿಎಫ್ ಇವರಲ್ಲಿನ ಗ್ರೂಪ್–"ಸಿ", ಹೆಡ್ ಕಾನ್ಸ್‌ಟೇಬಲ್ (ಮೋಟರ್ ಮೆಕ್ಯಾನಿಕ್) ಮತ್ತು ಕಾನ್ಸ್‌ಟೇಬಲ್ (ಮೋಟರ್ ಮೆಕ್ಯಾನಿಕ್) ಹುದ್ದೆಗಳಿಗೆ ನೇಮಕಾತಿ–2024 ಕುರಿತಾದ ಸಂಕ್ಷಿಪ್ತ ಜಾಹೀರಾತು

ಭಾರತ ಸರ್ಕಾರದ ಗೃಹ ವ್ಯವಹಾರಗಳ ಸಚಿವಾಲಯದ ಐಟಿಬಿಪಿಎಫ್ ಇವರಲ್ಲಿನ, ಸನ್ 2024ರ ಸಾಲಿನ ಖಾಲಿಹುದ್ದೆಗಳಲ್ಲಿನ, ಕೆಳಕಂಡ ಗ್ರೂಪ್ 'ಸಿ' ನಾನ್–ಗೆಜೆಟೆಡ್ (ನಾನ್–ಮಿನಿಸ್ಟೀರಿಯಲ್) ಹೆಡ್ ಕಾನ್ಸ್‌ಟೇಬಲ್ (ಮೋಟರ್ ಮೆಕ್ಯಾನಿಕ್) ಮತ್ತು ಕಾನ್ಸ್‌ಟೇಬಲ್ (ಮೋಟರ್ ಮೆಕ್ಯಾನಿಕ್) ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು, ಆನ್‌ಲೈನ್ ವಿಧಾನದಲ್ಲಿ ಮಾತ್ರ ಅರ್ಹ ಮತ್ತು ಆಸಕ್ತಿಯುಳ್ಳ ಪುರುಷ ಭಾರತೀಯ ನಾಗರಿಕರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ:

ಹುದ್ದೆ	ವಿವರ	ಖಾಲಿ ಹುದ್ದೆಗಳು						ಮಾಜಿ ಯೋಧರ ಕೋಟಾ						ವೇತನ ಮತ್ತು ಶ್ರೇಣಿ ಹಂತ
		UR	SC	ST	OBC	EWS	ಒಟ್ಟು	UR	SC	ST	OBC	EWS	ಒಟ್ಟು	
ಹೆಡ್ ಕಾನ್ಸ್‌ಟೇಬಲ್ (ಮೋಟರ್ ಮೆಕ್ಯಾನಿಕ್)	ಪುರುಷ	2	0	3	1	1	7	0	0	0	0	0	0	ವೇತನ ಶ್ರೇಣಿಯಲ್ಲಿನ ಹಂತ–4, ರೂ. 25,500 – 81,100 (7ನೇ ಸಿಪಿಸಿ ಪ್ರಕಾರ)
ಕಾನ್ಸ್‌ಟೇಬಲ್ (ಮೋಟರ್ ಮೆಕ್ಯಾನಿಕ್)	ಪುರುಷ	17	7	7	7	6	44	2	1	1	1	1	6	ವೇತನ ಶ್ರೇಣಿಯಲ್ಲಿನ ಹಂತ–3, ರೂ. 21,700 – 69,100 (7ನೇ ಸಿಪಿಸಿ ಪ್ರಕಾರ)

ಸೂಚನೆ–1: ಆನ್‌ಲೈನ್ ವಿಧಾನದಲ್ಲಿ ಮಾತ್ರ ಅರ್ಜಿಗಳನ್ನು ಸ್ವೀಕರಿಸಲಾಗುತ್ತದೆ.
ಸೂಚನೆ–2: ವಿವರವಾದ ಜಾಹೀರಾತು ಪ್ರಕಟಗೊಂಡ ದಿನಾಂಕದಿಂದ 30 ದಿನಗಳು, ಅರ್ಜಿ ಸ್ವೀಕರಿಸುವ ಕೊನೆಯ ದಿನಾಂಕವಾಗಿರುತ್ತದೆ.
ಸೂಚನೆ–3: ಖಾಲಿಹುದ್ದೆಗಳ ಸಂಖ್ಯೆ ಬದಲಾವಣೆಯ ನಿಬಂಧನೆಗೆ ಒಳಪಟ್ಟಿರುತ್ತದೆ (ಹೆಚ್ಚು ಅಥವಾ ಕಡಿಮೆ ಆಗಬಹುದು). ಐಟಿಬಿಪಿಎಫ್ ಇವರು ಯಾವುದೇ ಕಾರಣ ನೀಡದೆಯೇ ಸದರಿ ನೇಮಕಾತಿಯನ್ನು ಬದಲಾವಣೆ / ರದ್ದು / ಮುಂದೂಡಿಕೆ ಮಾಡಬಹುದಾದ ಹಕ್ಕು ಕಾಯ್ದಿರಿಸಿಕೊಂಡಿರುತ್ತಾರೆ.
ಸೂಚನೆ–4: 10% ಖಾಲಿಹುದ್ದೆಗಳು ಮಾಜಿ ಯೋಧರಿಗೆ ಮೀಸಲಾಗಿರುತ್ತವೆ. ಅದಾಗ್ಯೂ, ಒಂದು ವೇಳೆ ಅರ್ಹ ಮಾಜಿ ಯೋಧ ಅಭ್ಯರ್ಥಿಗಳು ಲಭ್ಯವಾಗದಿದ್ದಲ್ಲಿ, ಅವರಿಗೆ ಮೀಸಲಾಗಿರುವ ಖಾಲಿಹುದ್ದೆಗಳನ್ನು ಅನುಕ್ರಮ ಪ್ರವರ್ಗದ ಅಭ್ಯರ್ಥಿಗಳಿಂದ ಭರ್ತಿ ಮಾಡಿಕೊಳ್ಳಲಾಗುತ್ತದೆ.

ಎಂಪ್ಲಾಯ್‌ಮೆಂಟ್ ನ್ಯೂಸ್ / ರೋಜಗಾರ್ ಸಮಾಚಾರ್ ಪತ್ರಿಕೆಯಲ್ಲಿ ಜಾಹೀರಾತು ಪ್ರಕಟಗೊಂಡ ಬಳಿಕ, ಐಟಿಬಿಪಿಎಫ್ ವೆಬ್‌ಸೈಟ್‌ನಲ್ಲಿ ಲಭ್ಯವಾಗುವ ಆನ್‌ಲೈನ್ ಅರ್ಜಿ ನಮೂನೆಗಳ ಸಲ್ಲಿಕೆಗಾಗಿ ಮತ್ತು ವಿವರವಾದ ಜಾಹೀರಾತನ್ನು ಪರಿಶೀಲಿಸಲು https://recruitment.itbpolice.nic.in ವೆಬ್‌ಸೈಟ್‌ಗೆ ಭೇಟಿ ನೀಡಬೇಕೆಂದು ಅಭ್ಯರ್ಥಿಗಳಿಗೆ ಸೂಚಿಸಲಾಗಿದೆ.

ಈ ಕುರಿತಂತೆ ಹೆಚ್ಚಿನ ಮಾಹಿತಿ/ಅಧಿಸೂಚನೆಯು ಐಟಿಬಿಪಿಎಫ್ ವೆಬ್‌ಸೈಟ್‌ನಲ್ಲಿ ಮಾತ್ರ ಲಭ್ಯವಿರುತ್ತದೆ. ಆದ್ದರಿಂದ, ಅಭ್ಯರ್ಥಿಗಳು ಕಾಲ ಕಾಲಕ್ಕೆ ಐಟಿಬಿಪಿಎಫ್ ವೆಬ್‌ಸೈಟ್‌ಗೆ ಭೇಟಿ ನೀಡುತ್ತಿರಬೇಕು ಎಂದು ಸೂಚಿಸಲಾಗಿದೆ.

CBC 19143/11/0052/2425
ಡಿಐಜಿ (ನೇಮಕಾತಿ)

‘ವೈಟ್ ಟಾಪಿಂಗ್: ಶೀಘ್ರ ಪೂರ್ಣಗೊಳಿಸಿ’

ಪಶ್ಚಿಮ ವಲಯ: ಕಾಮಗಾರಿಗಳನ್ನು ಪರಿಶೀಲಿಸಿದ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿವಿಕೆ ಅಯ್ಯಂಗಾರ್ ರಸ್ತೆ, ಮೆಜೆಸ್ಟಿಕ್‌ನಲ್ಲಿ 350 ಮೀಟರ್ ರಸ್ತೆ, ಬಿನ್ನಿ ಮಿಲ್ ರಸ್ತೆಯಲ್ಲಿ 220 ಮೀಟರ್ ಉದ್ದದ ರಸ್ತೆಯಲ್ಲಿ ನಡೆಸುತ್ತಿರುವ ವೈಟ್ ಟಾಪಿಂಗ್ ಕಾಮಗಾರಿಯನ್ನು ಶೀಘ್ರ ಮುಗಿಸಲು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸೂಚಿಸಿದರು.

ಪಶ್ಚಿಮ ವಲಯ ವ್ಯಾಪ್ತಿಯಲ್ಲಿ ವಿವಿಧ ಸ್ಥಳಗಳಿಗೆ ಶುಕ್ರವಾರ ಭೇಟಿ ನೀಡಿ, ಕಾಮಗಾರಿಗಳ ಪರಿಶೀಲನೆ ನಡೆಸಿ, ಅಧಿಕಾರಿಗಳೊಂದಿಗೆ ಮಾತನಾಡಿದರು.

ಬಿವಿಕೆ ಅಯ್ಯಂಗಾರ್ ರಸ್ತೆ, ಚಿಕ್ಕಪೇಟೆ ಜಂಕ್ಷನ್‌ನಿಂದ ಸುಲ್ತಾನ್ ಪೇಟೆ ಜಂಕ್ಷನ್ ವರೆಗಿನ 190 ಮೀಟರ್ ಉದ್ದದ ರಸ್ತೆ ವೈಟ್ ಟಾಪಿಂಗ್ ಕಾಮಗಾರಿ ಒಂದು ಬದಿಯಲ್ಲಿ ಪೂರ್ಣವಾಗಿದ್ದು, ಇನ್ನೊಂದು ಬದಿಯ ಕಾಮಗಾರಿ ಪೂರ್ಣಗೊಳಿಸಿ ಡಿಸೆಂಬರ್ 15ರೊಳಗಾಗಿ ವಾಹನ ಸಂಚಾರಕ್ಕೆ ಅನುವು ಮಾಡಿಕೊಡಲು ಸೂಚಿಸಿದರು. ಗೂಡ್ಸ್ ಶೆಡ್ ರಸ್ತೆಯಲ್ಲಿ ನಿರ್ಗತಿಕರ ರಾತ್ರಿ ವಸತಿ ರಹಿತ ತಂಗುದಾಣದಲ್ಲಿ 30 ನಿರಾಶ್ರಿತರಿಗೆ ತಂಗಲು ವ್ಯವಸ್ಥೆ ಇದ್ದು, ನಿರಾಶ್ರಿತರನ್ನು ಹುಡುಕಿ ತಂದು ಇಲ್ಲಿ ಆಶ್ರಯ ನೀಡಬೇಕು ಎಂದು ಅಧಿಕಾರಿಗಳಿಗೆ ಹೇಳಿದರು.

ಮಲ್ಲೇಶ್ವರ ವ್ಯಾಪ್ತಿಯಲ್ಲಿ ವ್ಯಾಪಾರ ವಲಯಗಳಲ್ಲದ ಪ್ರದೇಶಗಳಲ್ಲಿ ಬೀದಿ ಬದಿ ವ್ಯಾಪಾರಕ್ಕೆ ಅವಕಾಶವಿಲ್ಲ. ಬೀದಿ ಬದಿ ವ್ಯಾಪಾರಿಗಳ ಸಮೀಕ್ಷೆ ನಡೆಸಲಾಗುತ್ತಿದ್ದು, ವ್ಯಾಪಾರ ವಲಯ (ವೆಂಡಿಂಗ್ ಜೋನ್) ಗುರುತಿಸಲಾಗುತ್ತದೆ ಎಂದು ವ್ಯಾಪಾರಿಗಳಿಗೆ ಭರವಸೆ ನೀಡಿದರು.

ನಾಗರಿಕರಿಂದ ಸುಮಾರು 67 ದೂರುಗಳು ಬಂದಿದ್ದು, ಕಾಲಮಿತಿಯೊಳಗೆ ಪರಿಹಾರ ಕಲ್ಪಿಸಬೇಕು ಎಂದು ತುಷಾರ್ ಗಿರಿನಾಥ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ವಲಯ ಜಂಟಿ ಆಯುಕ್ತ ಸಂಗಪ್ಪ, ಮುಖ್ಯ ಎಂಜಿನಿಯರ್‌ಗಳಾದ ಶಶಿ ಕುಮಾರ್, ಲೋಕೇಶ್, ಉಪ ಆಯುಕ್ತ ಶ್ರೀನಿವಾಸ್ ಉಪಸ್ಥಿತರಿದ್ದರು.

ಜಕ್ಕರಾಯನ ಕೆರೆ ಆಟದ ಮೈದಾನದಲ್ಲಿ ಎಸ್‌ಟಿಎಸ್

ಸುಭಾಷ್ ನಗರದ ಜಕ್ಕರಾಯನ ಕೆರೆ ಆಟದ ಮೈದಾನದಲ್ಲಿ ಎರಡು 'ದ್ವಿತೀಯ ಹಂತದ ಘನತ್ಯಾಜ್ಯ ವರ್ಗಾವಣೆ ಘಟಕಗಳನ್ನು' (ಎಸ್‌ಟಿಎಸ್) ನಿರ್ಮಾಣ ಮಾಡಲು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅಧಿಕಾರಿಗಳಿಗೆ ಸೂಚಿಸಿದರು.

‘ಜಕ್ಕರಾಯನ ಕೆರೆ ಆಟದ ಮೈದಾನ ಸುಮಾರು ಐದು ಎಕರೆ ವಿಸ್ತೀರ್ಣದಲ್ಲಿದ್ದು, ಪೊಲೀಸ್ ಇಲಾಖೆಯಿಂದ 6,000ಕ್ಕೂ ಹೆಚ್ಚು ‘ಅನಾಥ ವಾಹನಗಳನ್ನು’ ನಿಲ್ಲಿಸಲಾಗಿದೆ. ಇಲ್ಲಿ ಸ್ವಚ್ಛತೆ ಕಾಪಾಡದ ಕಾರಣ ಅಕ್ಕ-ಪಕ್ಕದ ಮನೆಗಳಿಗೆ ಸಾಕಷ್ಟು ಸಮಸ್ಯೆಯಾಗುತ್ತಿದೆ’ ಎಂದು ನಾಗರಿಕರು ದೂರಿದರು.



ತುಷಾರ್ ಗಿರಿನಾಥ್

‘ವಲಯ ಆಯುಕ್ತರು ಹಾಗೂ ಜಂಟಿ ಆಯುಕ್ತರು ಪೊಲೀಸ್ ಇಲಾಖೆ ಅಧಿಕಾರಿಗಳ ಜೊತೆ ಮಾತನಾಡಿ, ಮೈದಾನದಲ್ಲಿ ನಿಲ್ಲಿಸಿರುವ ಎಲ್ಲಾ ವಾಹನಗಳನ್ನು ತೆರವುಗೊಳಿಸಬೇಕು. ಆ ಸ್ಥಳದಲ್ಲಿ ಗಾಂಧಿನಗರ ಹಾಗೂ ಮಲ್ಲೇಶ್ವರ ವಿಧಾನಸಭಾ ಕ್ಷೇತ್ರಗಳಿಗೆ ಪ್ರತ್ಯೇಕವಾಗಿ ಎಸ್‌ಟಿಎಸ್ ನಿರ್ಮಾಣ ಮಾಡಬೇಕು. ಜೊತೆಗೆ ಉದ್ಯಾನವನ್ನೂ ನಿರ್ಮಿಸಬೇಕು. ಈ ಬಗ್ಗೆ ಕೂಡಲೆ ಪ್ರಸ್ತಾವ ಸಲ್ಲಿಸಬೇಕು’ ಎಂದು ತುಷಾರ್ ಸೂಚಿಸಿದರು.

ಸಾಹಿತ್ಯ ಸಮ್ಮೇಳನದ ನಿಯೋಜಿತ ಅಧ್ಯಕ್ಷ ಗೊ.ರು.ಚ

‘ಅಧ್ಯಕ್ಷ ಸ್ಥಾನಕ್ಕಿಂತ ಜನರ ಅಭಿಮಾನ ದೊಡ್ಡದು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಂಡ್ಯದಲ್ಲಿ ನಡೆಯಲಿರುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನಕ್ಕಿಂತ ನಾನು ಗಳಿಸಿರುವ ನಾಡಿನ ಜನರ ಅಭಿಮಾನ ದೊಡ್ಡದು’ ಎಂದು ಸಮ್ಮೇಳನದ ನಿಯೋಜಿತ ಅಧ್ಯಕ್ಷ ಗೊ.ರು.ಚನ್ನಬಸಪ್ಪ ಹೇಳಿದರು.

ಕರ್ನಾಟಕ ನಾಟಕ ಅಕಾಡೆಮಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಮತ್ತು ಕರ್ನಾಟಕ ಜಾನಪದ ಅಕಾಡೆಮಿ ಸಹಯೋಗದಲ್ಲಿ ಶುಕ್ರವಾರ ಏರ್ಪಡಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದರು.

‘ಕನ್ನಡ ನೆಲದಲ್ಲಿ ಹುಟ್ಟಿದ ಮೇಲೆ ಒಂದಿಷ್ಟು ಕೆಲಸ ಮಾಡಬೇಕು. ಕನ್ನಡಕ್ಕಾಗಿ ಕೆಲಸ ಮಾಡುವ ಸಹಸ್ರಾರು ಜನರು ಇದ್ದಾರೆ. ಅದರಲ್ಲಿ ನಾನೂ ಒಬ್ಬ. ಸಾಮಾನ್ಯ ಪರಿಚಾರಕನಾಗಿ ಕನ್ನಡ ಉಳಿಸಿ, ಬೆಳೆಸುವ ಕಾರ್ಯವನ್ನು ಮಾಡಿದ್ದೇನೆ’ ಎಂದರು.

‘ಸಮಾರಂಭದಲ್ಲಿ ಮಾತನಾಡಿದ ಗಣ್ಯರು ನನ್ನನ್ನು ಹೊಗಳಿ ಮಾತನಾಡಿರಬೇಕು ಎನಿಸುತ್ತದೆ. ಆದರೆ, ಏನು ಮಾಡುವುದು ನನ್ನ ಕಿವಿ ಕೇಳಿಸುವಾಗ ಹೊಗಳಿದ್ದರೆ ಚೆನ್ನಾಗಿತ್ತು’ ಎಂದು ಹಾಸ್ಯ ಚಟಾಕಿ ಹಾರಿಸಿದರು.



ನಗರದಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ನಿಯೋಜಿತ ಅಧ್ಯಕ್ಷ ಗೊ.ರು.ಚನ್ನಬಸಪ್ಪ ಅವರನ್ನು ಗೌರವಿಸಲಾಯಿತು. ಬಸವ ಅಂತರರಾಷ್ಟ್ರೀಯ ಪ್ರತಿಷ್ಠಾನದ ಅಧ್ಯಕ್ಷ ಎಸ್.ಮಹದೇವಯ್ಯ, ನಿರ್ಮಲಾ ಮಠಪತಿ, ಪ್ರೊ.ಎಸ್.ಜಿ.ಸಿದ್ಧರಾಮಯ್ಯ, ಕೆ.ವಿ.ನಾಗರಾಜಮೂರ್ತಿ, ಗೊಲ್ಲಹಳ್ಳಿ ಶಿವಪ್ರಸಾದ್, ಎಲ್.ಎನ್.ಮುಕುಂದರಾಜ್, ರಿಜಿಸ್ಟ್ರಾರ್ ಕರಿಯಪ್ಪ ಉಪಸ್ಥಿತರಿದ್ದರು
ಪ್ರಜಾವಾಣಿ ಚಿತ್ರ

ಬಸವ ಅಂತರರಾಷ್ಟ್ರೀಯ ಪ್ರತಿಷ್ಠಾನದ ಅಧ್ಯಕ್ಷ ಎಸ್. ಮಹದೇವಯ್ಯ ಅವರು ನೀಡಿದ ₹50 ಸಾವಿರ ಗೌರವಧನವನ್ನು ಗ್ರಾಮ ವಿಕಾಸ ಪ್ರತಿಷ್ಠಾನದ ಚಟುವಟಿಕೆಗಳಿಗೆ ಬಳಸಿಕೊಳ್ಳಲಾಗುವುದು ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಸಾಹಿತಿ ಎಸ್.ಜಿ.ಸಿದ್ದರಾಮಯ್ಯ, ‘ವ್ಯಕ್ತಿ ಸರ್ವಾಧಿಕಾರಿಯಾದರೆ ಜನರೇ ಬುದ್ದಿ ಕಲಿಸುತ್ತಾರೆ. ರಾಜ್ಯ, ದೇಶ ಅಥವಾ ಸಂಸ್ಥೆಯಾಗಲಿ, ಯಾವುದೇ ಕ್ಷೇತ್ರವಾಗಿರಲಿ ಸರ್ವಾಧಿಕಾರಕ್ಕೆ ಅವಕಾಶ ಇರುವುದಿಲ್ಲ. ಕನ್ನಡ ಸಾಹಿತ್ಯ ಪರಿಷತ್ ಹಾದಿ ತಪ್ಪಿ ಹೋಗುತ್ತಿದ್ದ ಹೊತ್ತಿನಲ್ಲಿ ಗೊ.ರು.ಚನ್ನಬಸಪ್ಪ ಅವರನ್ನು ಆಯ್ಕೆ ಮಾಡಿರುವುದು ಸಮಾಧಾನ ತಂದಿದೆ’ ಎಂದರು.

‘ಹಾವೇರಿಯಲ್ಲಿ ಜಾನಪದ ವಿಶ್ವವಿದ್ಯಾಲಯ ಸ್ಥಾಪನೆ ಗೊ.ರು.ಚ. ಅವರ ಕನಸಾಗಿತ್ತು. ಜಾನಪದ ವಿಶ್ವವಿದ್ಯಾಲಯ ಮತ್ತು ಹಂಪಿ ಕನ್ನಡ ವಿಶ್ವವಿದ್ಯಾಲಯಗಳಿಗೆ ಹೊಸ ಚೈತನ್ಯ ನೀಡಬೇಕಾಗಿದೆ’ ಎಂದು ಅಭಿಪ್ರಾಯಪಟ್ಟರು.

‘ಕರ್ನಾಟಕಕ್ಕೆ ತ್ರಿಭಾಷಾ ಸೂತ್ರ ಬೇಡ. ಇದರಿಂದ ಕನ್ನಡ ದುರ್ಬಲಗೊಳ್ಳಲಿದೆ. ದ್ವಿಭಾಷಾ ಸೂತ್ರ ಬೇಕು. ಪ್ರಾಥಮಿಕ ಕ್ಷೇತ್ರದಲ್ಲಿ ಕನ್ನಡ ಕಳೆದುಕೊಂಡರೆ, ಆಡಳಿತದಲ್ಲಿ ಕನ್ನಡ ಉಳಿಯುವುದಿಲ್ಲ. ಇದೇ ಕಾರಣಕ್ಕಾಗಿ ತಮಿಳುನಾಡು ದ್ವಿಭಾಷಾ ಸೂತ್ರ ಒಪ್ಪಿಕೊಂಡಿತು’ ಎಂದರು.

ಇದೇ ವೇಳೆ ನಾಟಕ, ಸಾಹಿತ್ಯ, ಜಾನಪದ ಅಕಾಡೆಮಿಯಿಂದ ಗೊ.ರು.ಚ. ಅವರನ್ನು ಸನ್ಮಾನಿಸಲಾಯಿತು. ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಕೆ.ವಿ.ನಾಗರಾಜ ಮೂರ್ತಿ, ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್. ಮುಕುಂದರಾಜ್, ಜಾನಪದ ಅಕಾಡೆಮಿ ಅಧ್ಯಕ್ಷ ಗೊಲ್ಲಹಳ್ಳಿ ಶಿವಪ್ರಸಾದ್, ರಿಜಿಸ್ಟ್ರಾರ್‌ಗಳಾದ ನಿರ್ಮಲಾ ಮಠಪತಿ, ಕರಿಯಪ್ಪ, ನಮ್ರತಾ ಪಾಲ್ಗೊಂಡಿದ್ದರು.

ಕ್ಷಯರೋಗ ನಿರ್ಮೂಲನಾ ಆಂದೋಲನ ಇಂದಿನಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರೋಗ್ಯ ಇಲಾಖೆ ಮತ್ತು ಬಿಬಿಎಂಪಿ ಸಹಯೋಗದಲ್ಲಿ ಡಿ.7ರಿಂದ ಕ್ಷಯರೋಗ ತಿಳಿವಳಿಕೆ ಮತ್ತು ನಿರ್ಮೂಲನಾ ಆಂದೋಲನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ರಾಷ್ಟ್ರೀಯ ಕ್ಷಯ ರೋಗ ನಿಯಂತ್ರಣ ಕಾರ್ಯಕ್ರಮದಡಿ ರೋಗ ಪತ್ತೆ, ತ್ವರಿತ ಚಿಕಿತ್ಸೆಯಿಂದ ಕ್ಷಯರೋಗ ನಿರ್ಮೂಲನೆ ಮಾಡಲು 100 ದಿನ ನಿರಂತರ ಆಂದೋಲನ ಆರಂಭಿಸಲಾಗುತ್ತಿದೆ.

ಸೈ-ಟಿಬಿ ಐ.ಜಿ.ಆರ್ (ಇಂಟರ್‌ಫೆರಾನ್- ಗಾಮಾ ಬಿಡುಗಡೆ ವಿಶ್ಲೇಷಣೆ) ವಿಧಾನಗಳನ್ನು ಬಳಸಿಕೊಂಡು ಸುಪ್ತ ಕ್ಷಯರೋಗ ಸೋಂಕನ್ನು ಪರೀಕ್ಷಿಸಲಾಗುತ್ತದೆ. ಸೋಂಕು ಹೊಂದಿರುವ ವ್ಯಕ್ತಿಗಳಿಗೆ ಸಕ್ರಿಯ ಕಾಯಿಲೆಯ ಬೆಳವಣಿಗೆಯನ್ನು ತಡೆಗಟ್ಟಲು ‘ಟಿಬಿ ಪ್ರಿವೆಂಟಿವ್ ಥೆರಪಿ’ಯೊಂದಿಗೆ ಚಿಕಿತ್ಸೆ ನೀಡಲಾಗುತ್ತದೆ.

ಕ್ಷಯ ರೋಗಿಗಳು ಚೇತರಿಸಿಕೊಳ್ಳಲು ಮತ್ತು ಅವರ ಆರೋಗ್ಯ ಸುಧಾರಿಸಲು ಅಗತ್ಯವಾದ ಸಂಪನ್ಮೂಲಗಳನ್ನು ಪಡೆಯುವುದನ್ನು ಖಚಿತಪಡಿಸಿಕೊಳ್ಳಲು, ಪೀಡಿತ ಕುಟುಂಬಗಳಿಗೆ ಪೌಷ್ಟಿಕಾಂಶದ ಬೆಂಬಲವನ್ನು ಸಹ ಒದಗಿಸಲಾಗುತ್ತದೆ. 100 ದಿನಗಳ ಕ್ಷಯರೋಗ ತಿಳಿವಳಿಕೆ ಮತ್ತು ನಿರ್ಮೂಲನಾ ಆಂದೋಲನ ಕಾರ್ಯಕ್ರಮಕ್ಕೆ ಜಯನಗರ ಜನರಲ್ ಆಸ್ಪತ್ರೆಯಲ್ಲಿ ಶನಿವಾರ ಮಧ್ಯಾಹ್ನ 12 ಗಂಟೆಗೆ ಚಾಲನೆ ನೀಡಲಾಗುತ್ತದೆ ಎಂದು ಬಿಬಿಎಂಪಿ ಪ್ರಕಟಣೆ ತಿಳಿಸಿದೆ.

‘ಮೇದರಹಳ್ಳಿ: 6 ತಿಂಗಳಲ್ಲಿ ಅಂಡರ್‌ಪಾಸ್ ಪೂರ್ಣ’

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ಮೇದರಹಳ್ಳಿ ರೈಲ್ವೆ ಗೇಟ್ ಪಕ್ಕದಲ್ಲಿ ಅಂಡರ್‌ಪಾಸ್ ನಿರ್ಮಾಣ ಕಾಮಗಾರಿ ಆರು ತಿಂಗಳಲ್ಲಿ ಪೂರ್ಣಗೊಳ್ಳಲಿದೆ ಎಂದು ಶಾಸಕ ಎಸ್. ಮುನಿರಾಜು ತಿಳಿಸಿದರು.

ಸಾರ್ವಜನಿಕರ ದೂರಿನ ಮೇರೆಗೆ ಮುನಿರಾಜು ಅವರು ರೈಲ್ವೆ ಸಚಿವರ ಗಮನಕ್ಕೆ ತಂದು ಅಧಿಕಾರಿಗಳೊಂದಿಗೆ ಅಂಡರ್ ಪಾಸ್ ಮತ್ತು ಅಲ್ಲಿನ ಸ್ಥಳವನ್ನು ಶುಕ್ರವಾರ ಪರಿಶೀಲನೆ ಮಾಡಿದರು.

‘ಹಲವು ವರ್ಷಗಳ ಹಿಂದೆಯೇ ಕಾಮಗಾರಿ ಮುಗಿಯಬೇಕಿತ್ತು. ಆದರೆ ಸುರಂಗಮಾರ್ಗಕ್ಕೆ ಎರಡು ರಸ್ತೆ ನಿರ್ಮಾಣಕ್ಕೆ ಜಮೀನು ವಶಪಡಿಸಿಕೊಂಡು ಪರಿಹಾರ ನೀಡಲು ತಡವಾದ್ದರಿಂದ ಕಾಮಗಾರಿ ಅರ್ಧಕ್ಕೆ ನಿಂತಿದೆ. ಎಲ್ಲಾ ಸಮಸ್ಯೆ ಬಗೆಹರಿಸಿ ಆರು ತಿಂಗಳೊಳಗೆ ಕಾಮಗಾರಿ ಪೂರ್ಣಗೊಳಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ’ ಎಂದರು. ಸಂಜೆಯಾದರೆ ಪ್ರತಿ 20 ನಿಮಿಷಕ್ಕೆ ಒಂದರಂತೆ ರೈಲುಗಳು ಸಂಚರಿಸುವುದರಿಂದ ಹಳಿ ದಾಟಲು ಗಂಟೆಗಟ್ಟಲೆ ಕಾಯುವ ಪರಿಸ್ಥಿತಿ ಎದುರಾಗುತ್ತದೆ ಎಂದು ಸ್ಥಳೀಯರು ದೂರಿದ್ದರು.



ಮೇದರಹಳ್ಳಿ ರೈಲ್ವೆ ಗೇಟ್ ಪಕ್ಕದಲ್ಲಿ ಸ್ಥಗಿತಗೊಂಡಿರುವ ಅಂಡರ್‌ಪಾಸ್ ನಿರ್ಮಾಣ ಕಾಮಗಾರಿ ಸ್ಥಳವನ್ನು ಶಾಸಕ ಎಸ್.ಮುನಿರಾಜು ಪರಿಶೀಲಿಸಿದರು

ರೈಲ್ವೆ ಮೂಲಸೌಕರ್ಯ ಅಭಿವೃದ್ಧಿ ಕಂಪನಿಯ ರಾಜೇಶ್ ಕುಮಾರ್ ಸಿಂಗ್, ಪ್ರಧಾನ ವ್ಯವಸ್ಥಾಪಕ ವಿಜಯಕುಮಾರ್, ಸ್ಥಳೀಯ ಮುಖಂಡರಾದ ಬಿ. ಸುರೇಶ್, ಪಾಂಡುರಂಗ ರೆಡ್ಡಿ, ಸೋಮಶೇಖರ್ ಉಪಸ್ಥಿತರಿದ್ದರು.

‘ರೈತರ ಹೆಸರಿನಲ್ಲಿ ರಾಜಕೀಯ’

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿ ನಗರ: ‘ಹೈನುಗಾರಿಕೆಯಲ್ಲಿ ತೊಡಗಿರುವ ಹೆಣ್ಣು ಮಕ್ಕಳಿಗಾಗಿ ಪ್ರತ್ಯೇಕ ನಂದಿನಿ ಸಹಕಾರ ಬ್ಯಾಂಕ್ ಸ್ಥಾಪನೆಗೆ ಹಲವು ಬಾರಿ ಪ್ರಸ್ತಾವ ಸಲ್ಲಿಸಿದರೂ ಕೇಂದ್ರ ಹಣಕಾಸು ಸಚಿವೆ ನಿರ್ಮಲ ಸೀತಾರಾಮನ್ ಅನುಮತಿ ನೀಡಲಿಲ್ಲ’ ಶಾಸಕ ಎಸ್.ಟಿ. ಸೋಮಶೇಖರ್ ಆರೋಪಿಸಿದರು.

ಚುಂಚನಗುಪ್ಪೆಯಲ್ಲಿ ಹಮ್ಮಿಕೊಂಡಿದ್ದ ಬೆಂಗಳೂರು ದಕ್ಷಿಣ ತಾಲ್ಲೂಕು ಹಾಲು ಉತ್ಪಾದಕರ ಸಹಕಾರ ಸಂಘಗಳ ಕ್ಷೇಮಾಭಿವೃದ್ಧಿ ಸಂಘ ಮತ್ತು ಸದಸ್ಯರ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು.

‘ನಾನು ಸಹಕಾರ ಸಚಿವನಾಗಿದ್ದಾಗ, ಮಂಡ್ಯ ಹಾಲು ಒಕ್ಕೂಟದಲ್ಲಿ ಟ್ಯಾಂಕರ್‌ಗಳ ಮೂಲಕ ಹಾಲಿನ ಜೊತೆಗೆ ನೀರನ್ನು ಬೆರೆಸಿ ಸರಬರಾಜು ಮಾಡುತ್ತಿರುವುದನ್ನು ಅಂದಿನ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಗಮನಕ್ಕೆ ಬಂದಿತ್ತು. ತನಿಖೆ ನಡೆಸುವಂತೆ ಅವರು ನನಗೆ ಆದೇಶಿಸಿದಾಗ, ಎಚ್.ಡಿ. ದೇವೇಗೌಡ, ಎಚ್.ಡಿ. ಕುಮಾರಸ್ವಾಮಿ ಅವರು ತನಿಖೆ ನಡೆಸದಂತೆ ಒತ್ತಡ ತಂದರು’ ಎಂದು ಹೇಳಿದರು.

ಬಿಡಿಸಿಸಿ ಬ್ಯಾಂಕ್ ಮಾಜಿ ಅಧ್ಯಕ್ಷ ಡಿ. ಹನುಮಂತಯ್ಯ, ಬಮುಲ್ ನಿರ್ದೇಶಕ ಎಚ್.ಎಸ್.ಹರೀಶ್ ಕುಮಾರ್, ನರಸಿಂಹಮೂರ್ತಿ, ಹಾಪ್ ಕಾಮ್ಸ್ ನಿರ್ದೇಶಕ ಎಂ.ಜೈ ಕುಮಾರ್, ವಿವಿಧ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರುಗಳಾದ ವಿ. ವೇಣುಗೋಪಾಲ್, ಗಿರೀಶ್, ದೊಣ್ಣೆನಹಳ್ಳಿ ಮಂಜುನಾಥ್, ಚಂದ್ರಶೇಖರ ಮೂರ್ತಿ, ಡಿ.ಪ್ರಕಾಶ್, ಕ್ಷೇಮಾಭಿವೃದ್ಧಿ ನೌಕರರ ಸಹಕಾರ ಸಂಘದ ಅಧ್ಯಕ್ಷ ಹೆಚ್.ಈರಯ್ಯ, ಪ್ರಧಾನ ಕಾರ್ಯದರ್ಶಿ ಎ.ಕೇಶವ, ಸೂಲಿವಾರ ಸೋಮಶೇಖರ್, , ರೈತ ಸೇವಾ ಸಹಕಾರ ಸಂಘದ ಅಧ್ಯಕ್ಷರುಗಳಾದ ಟಿ.ಎನ್. ಕೆಂಪೇಗೌಡ, ರೇವಣ್ಣ ಸಿದ್ದಯ್ಯ ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಬಿ.ಎಚ್. ಪ್ರಭು, ಮುನಿ ಮಾರೇಗೌಡ, ಡಿ.ಆನಂದ ಸ್ವಾಮಿ ಉಪಸ್ಥಿತರಿದ್ದರು.


ರಾಜ್ಯ ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತ ಕೆ.ಎಂ. ಕೃಷ್ಣಯ್ಯ ಅವರನ್ನು ಅಭಿನಂದಿಸಲಾಯಿತು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

National Public School

Sarjapur Road(East)

Affiliated to CBSE - 831421



Dr. K.P.Gopalkrishna,
Chairman, NPS Group
of Institutions



Sarjapur Road Campus

NPS, Sarjapur Road, Opp to New Wipro (SEZ), Carmel Ram Post, Bangalore 560035


+91-95136 36366
+91-95136 36369

info@npssjpr.com
www.npssjpr.com

Where Minds Sparkle, Hearts Shine & Dreams Take Flight!

Registrations open for 2025-26

Montessori | Kindergarten | Grades 1 - 11



Ms. Sumitra Das
Academic advisor & mentor, Former principal; NPS Rajajinagar



Ms. Vijayalakshmi Natarajan
Academic advisor & mentor, Former coordinator, NPS Rajajinagar & Singapore International School, Jakarta



Ms. Vidhya Nagaraj
Principal, NPS Vidyaranyapura




Ms. Vanita Chougala
Principal, NPS Sarjapur Road



Ms. H Mamatha
Academic advisor, Former faculty NPS Koramangala

National Public School

Vidyaranyapura



Vidyaranyapura Campus

NPS, Vidyaranyapura Sy No. 14, Bharathnagar, Hesarghatta main Road, Vidyaranyapura post, Bengaluru, 560097

+91 95135 53333
+91 95139 93333

info@npsvrp.com
www.npsvrp.com

ಸಚಿವ ಮಹದೇವಪ್ಪ ನಿವಾಸದ ಮುಂದೆ ಪರಿಶಿಷ್ಟ ಗುತ್ತಿಗೆದಾರರ ಪ್ರತಿಭಟನೆ

‘ಗುತ್ತಿಗೆ: ಮೀಸಲಾತಿ ಮಿತಿ ಹೆಚ್ಚಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರದ ವಿವಿಧ ಇಲಾಖೆಗಳ ಕಾಮಗಾರಿಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಗುತ್ತಿಗೆದಾರರಿಗೆ ನೀಡುತ್ತಿರುವ ಮೀಸಲಾತಿ ಮಿತಿಯನ್ನು ₹2 ಕೋಟಿವರೆಗೆ ಹೆಚ್ಚಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆಗೆ ತಿದ್ದುಪಡಿ ತರಲು ವಿಧಾನ ಮಂಡಲದ ಬೆಳಗಾವಿ ಅಧಿವೇಶನದಲ್ಲಿ ಮಸೂದೆ ಮಂಡಿಸಬೇಕು ಎಂದು ಆಗ್ರಹಿಸಿ ರಾಜ್ಯ ಎಸ್‌ಸಿ, ಎಸ್‌ಟಿ ಗುತ್ತಿಗೆದಾರರ ಸಂಘದ ಸದಸ್ಯರು ಸಮಾಜ ಕಲ್ಯಾಣ ಸಚಿವ ಎಚ್‌.ಸಿ.ಮಹದೇವಪ್ಪ ಅವರ ನಿವಾಸದ ಎದುರು ಶುಕ್ರವಾರ ಪ್ರತಿಭಟನೆ ನಡೆಸಿದರು.

ಪರಿಶಿಷ್ಟ ಜಾತಿ ಮತ್ತು ಪಂಗಡ, ಪ್ರವರ್ಗ–1, ಪ್ರವರ್ಗ–2ಎ, ಪ್ರವರ್ಗ–2ಬಿಗೆ ಸೇರಿದ ಜಾತಿಗಳಿಗೆ ಎಲ್ಲಾ ರೀತಿಯ ಗುತ್ತಿಗೆಯಲ್ಲೂ ಮೀಸಲಾತಿ ನೀಡುವುದಾಗಿ ಬಜೆಟ್‌ನಲ್ಲಿ ಘೋಷಿಸಿ ಆದೇಶ ಹೊರಡಿಸಬೇಕು ಎಂದು ಒತ್ತಾಯಿಸಿದರು.

2013ರ ಬಜೆಟ್‌ನಲ್ಲಿ ಸರಕು ಮತ್ತು ಸೇವೆಗಳ ಸರ್ಕಾರದ ಗುತ್ತಿಗೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಗುತ್ತಿಗೆದಾರರಿಗೆ ಮೀಸಲಾತಿ ನೀಡುವುದಾಗಿ ಘೋಷಣೆ ಮಾಡಲಾಗಿತ್ತು. ಆದರೆ ಇದುವರೆಗೂ ಅನುಷ್ಠಾನಗೊಂಡಿಲ್ಲ ಎಂದು ಸಂಘದ ಅಧ್ಯಕ್ಷ ಎನ್‌.ಮಹದೇವಸ್ವಾಮಿ ಆರೋಪಿಸಿದರು.



ರಾಜ್ಯ ಎಸ್‌ಸಿ, ಎಸ್‌ಟಿ ಗುತ್ತಿಗೆದಾರರ ಸಂಘದ ವತಿಯಿಂದ ಸಮಾಜ ಕಲ್ಯಾಣ ಸಚಿವ ಎಚ್‌.ಸಿ.ಮಹದೇವಪ್ಪ ಅವರ ನಿವಾಸದ ಎದುರು ಶುಕ್ರವಾರ ಪ್ರತಿಭಟನೆ ನಡೆಸಲಾಯಿತು

> **ಎಸ್‌ಸಿ, ಎಸ್‌ಟಿ ಸಮುದಾಯದವರನ್ನು ಆರ್ಥಿಕವಾಗಿ ಸಬಲೀಕರಣ ಮಾಡಿದರೆ ಜಾತೀಯತೆ ಇರುವುದಿಲ್ಲ ಎಂಬ ಮಾತು ಭಾಷಣಕ್ಕೆ ಸೀಮಿತವಾಗಿದೆ**
> **ಎನ್‌.ಮಹದೇವಸ್ವಾಮಿ,** ರಾಜ್ಯ ಎಸ್‌ಸಿ, ಎಸ್‌ಟಿ ಗುತ್ತಿಗೆದಾರರ ಸಂಘದ ಅಧ್ಯಕ್ಷ

ಈ ವಿಷಯವಾಗಿ ಲೋಕೋಪಯೋಗಿ ಇಲಾಖೆಯ ಮೀಸಲಾತಿ ಮಿತಿಯನ್ನು ಮುಂದಿನ ಅಧಿವೇಶನದಲ್ಲಿಯೇ ಎರಡು ಕೋಟಿ ರೂಪಾಯಿಗೆ ಹೆಚ್ಚಿಸಬೇಕು ಎಂದು ಸಮಾಜ ಕಲ್ಯಾಣ ಇಲಾಖೆಯ ಸಹಕಾರದೊಂದಿಗೆ ಶಿಫಾರಸು ಮಾಡಿ ಕಡತವನ್ನು ಆರ್ಥಿಕ ಇಲಾಖೆಯ ಮೂಲಕ ಮುಖ್ಯಮಂತ್ರಿಗೆ ಕಳುಹಿಸಲಾಗಿತ್ತು. ಮುಖ್ಯಮಂತ್ರಿ ಶಿಫಾರಸು ತಿರಸ್ಕರಿಸಿ, ಕಡತ ವಾಪಸ್ ಕಳುಹಿಸಿ ಬಜೆಟ್ ವೇಳೆ ಚರ್ಚಿಸ ಲಾಗುವುದು ಎಂದು ತಿಳಿಸಿದ್ದಾರೆ ಎಂದು ಮಹದೇವಸ್ವಾಮಿ ಅವರು ಬೇಸರ ವ್ಯಕ್ತಪಡಿಸಿದರು.

ಮನವಿ ಸ್ವೀಕರಿಸಿದ ಸಚಿವ ಎಚ್‌.ಸಿ.ಮಹದೇವಪ್ಪ, ಈ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಜತೆ ಚರ್ಚಿಸಿ, ಬೆಳಗಾವಿ ಅಧಿವೇಶನದಲ್ಲಿಯೇ ಮೀಸಲಾತಿ ಮಿತಿ ಹೆಚ್ಚಿಸುವಂತೆ ಒತ್ತಡ ಹೇರಲಾಗುವುದು ಎಂದು ಭರವಸೆ ನೀಡಿದರು.

ಡಿಡಿಯುಟಿಟಿಎಲ್‌ನಲ್ಲಿ ನಡೆದಿದ್ದ ₹47.10 ಕೋಟಿ ಅಕ್ರಮ ಪ್ರಕರಣ

ಶಂಕರಪ್ಪ ವಿರುದ್ಧ ವಿಚಾರಣೆಗೆ ಸರ್ಕಾರ ಅನುಮತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಿ.ದೇವರಾಜ ಅರಸು ಟ್ರಕ್ ಟರ್ಮಿನಲ್ ನಿಯಮಿತದಲ್ಲಿ(ಡಿಡಿಯುಟಿಟಿಎಲ್) ನಡೆದಿದ್ದ ₹47.10 ಕೋಟಿ ಅಕ್ರಮ ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿರುವ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಉಪ ನಿರ್ದೇಶಕರಾಗಿ ಹಾಗೂ ಡಿಡಿಯುಟಿಟಿಎಲ್‌ನಲ್ಲಿ ವ್ಯವಸ್ಥಾಪಕ ನಿರ್ದೇಶಕರಾಗಿ ಈ ಹಿಂದೆ ಕಾರ್ಯ ನಿರ್ವಹಿಸಿದ್ದ ಎಸ್‌.ಶಂಕರಪ್ಪ ಅವರನ್ನು ನ್ಯಾಯಾಲಯದಲ್ಲಿ ವಿಚಾರಣೆಗೆ ಒಳಪಡಿಸಲು ಸರ್ಕಾರ ಅನುಮತಿ ನೀಡಿದೆ.

2021ರ ನವೆಂಬರ್ 15ರಿಂದ 2022ರ ಜುಲೈ 11ರವರೆಗೆ ಶಂಕರಪ್ಪ ಅವರು ನಿಯೋಜನೆ ಮೇರೆಗೆ ಡಿಡಿಯುಟಿಟಿಎಲ್ ವ್ಯವಸ್ಥಾಪಕ ನಿರ್ದೇಶಕರಾಗಿ ಕೆಲಸ ಮಾಡಿದ್ದರು. ಶಂಕರಪ್ಪ ಅವರನ್ನು ಮೇ 27ರಂದು ಸಿಐಡಿ ಬಂಧಿಸಿತ್ತು.

‘ಡಿಡಿಯುಟಿಟಿಎಲ್ ಅಕ್ರಮ ಪ್ರಕರಣದ ತನಿಖೆಯನ್ನು ಸಿಐಡಿ ನಡೆಸಿತ್ತು. ಶಂಕರಪ್ಪ ಅವರ ವಿರುದ್ಧದ ಆರೋಪಗಳು ಮೇಲ್ನೋಟಕ್ಕೆ ಸಾಬೀತಾಗಿವೆ ಎಂದು ದೋಷಾರೋಪ ಪಟ್ಟಿಯಲ್ಲಿ ಸಿಐಡಿ ಉಲ್ಲೇಖಿಸಿದ್ದು, ಭ್ರಷ್ಟಾಚಾರ ನಿಗ್ರಹ ಕಾಯ್ದೆ 1988ರ ಸೆಕ್ಷನ್ 19(ಬಿ) ಮತ್ತು ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ(ಸಿಆರ್‌ಪಿಸಿ) 1973ರ ಸೆಕ್ಷನ್ 197(1)(ಬಿ) ಪ್ರಕಾರ ಸಕ್ಷಮ ನ್ಯಾಯಾಲಯದಲ್ಲಿ ವಿಚಾರಣೆಗೆ ಒಳಪಡಿಸಲು ಅನುಮತಿ ನೀಡಲಾಗಿದೆ’ ಎಂದು ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ ಗುರುವಾರ ಹೊರಡಿಸಿರುವ ಆದೇಶದಲ್ಲಿ ತಿಳಿಸಲಾಗಿದೆ.



ಶಂಕರಪ್ಪ

‘ಶಂಕರಪ್ಪ ಅವರು ಡಿಡಿಯುಟಿಟಿಎಲ್‌ನಲ್ಲಿ ಕೆಲಸ ಮಾಡಿದ್ದ ಅವಧಿಯಲ್ಲಿ ಪ್ರಕರಣದ ಎರಡನೇ ಆರೋಪಿಯೊಂದಿಗೆ ಶಾಮೀಲಾಗಿ ಅಪರಾಧಿಕ ಒಳಸಂಚು ರೂಪಿಸಿದ್ದರು. ಕರಡು ನಡವಳಿಗಳಲ್ಲಿ ‘ಅಧ್ಯಕ್ಷರು ಸೂಚಿಸುವ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ವ್ಯವಸ್ಥಾಪಕ ನಿರ್ದೇಶಕರಿಗೆ ಅಧಿಕಾರ ನೀಡಿ ನಿರ್ಣಯಿಸಲಾಯಿತು’ ಎಂಬ ಹೆಚ್ಚುವರಿ ವಾಕ್ಯ ಸೇರಿಸಿ ಅಕ್ರಮ ಕಾಮಗಾರಿ ನಡೆಸಲು ವ್ಯವಸ್ಥಿತ ಸಂಚು ರೂಪಿಸಿದ್ದರು’ ಎಂದು ದೋಷಾರೋಪ ಪಟ್ಟಿಯಲ್ಲಿ ಸಿಐಡಿ ಉಲ್ಲೇಖಿಸಿತ್ತು.

‘ಅಕ್ರಮ ನಡಾವಳಿಯನ್ನು ಆಕ್ಷೇಪಿಸದೇ ಕಂಪನಿಯ ಹಣವನ್ನು ದುರುಪಯೋಗ ಮಾಡುವ ಉದ್ದೇಶದಿಂದ ಒಂದೇ ಕಾಮಗಾರಿಯನ್ನು ₹5 ಲಕ್ಷ ಮೌಲ್ಯದಂತೆ ಹಲವು ಭಾಗಗಳಾಗಿ ವಿಂಗಡಿಸಿ ಕಚೇರಿ ಹಂತದಲ್ಲಿ ತುಂಡು ಗುತ್ತಿಗೆಗಳಿಗೆ ದರಪಟ್ಟಿ ಆಹ್ವಾನಿಸಿ ತೋರ್ಪಡಿಕೆಗೆ ಪಟ್ಟಿ ತಯಾರಿಸಿದ್ದರು. ಅಕ್ರಮ ಗಳಿಕೆಯ ಉದ್ದೇಶದಿಂದ ಕಂಪನಿಯಲ್ಲಿನ 668 ಕಾಮಗಾರಿಗಳನ್ನು ಎಸ್‌.ಎಸ್‌.ಎಂಟರ್‌ಪ್ರೈಸಸ್, ವೆನಿಷಾ ಎಂಟರ್‌ಪ್ರೈಸಸ್, ಮಯೂರ್ ಅಡ್ವರ್‌ಟೈಸಿಂಗ್, ಆರ್‌ಜಿಸಿ ಕನ್‌ಸ್ಟ್ರಕ್ಷನ್, ಆ್ಯಡ್ ಪ್ರಿಂಟ್ಸ್, ಇನ್ನೋವೇಟಿವ್ ಅಕಾಡೆಮಿಗೆ ಕಂಪನಿಯ 668 ಕಾಮಗಾರಿ ವಹಿಸಲಾಗಿತ್ತು. ಅರ್ಹತೆ ಹಾಗೂ ಅನುಭವವಿಲ್ಲದ ಮೂರು ಗುತ್ತಿಗೆದಾರರಿಗೆ ₹39.25 ಕೋಟಿ ಮೌಲ್ಯದ 665 ಕಾಮಗಾರಿಗಳನ್ನು ಅಕ್ರಮವಾಗಿ ವಹಿಸಲಾಗಿತ್ತು’ ಎಂದು ವಿವರಿಸಲಾಗಿತ್ತು.

‘ಶಂಕರಪ್ಪ ಅವರು ಕಾಮಗಾರಿಗಳಿಗೆ ಸಂಬಂಧಿಸಿದಂತೆ ನೆಪ ಮಾತ್ರಕ್ಕೆ ಅನೇಕ ಕಡತಗಳನ್ನು ರಚಿಸಿದ್ದರು. ವಿಷಯ ಮರೆಮಾಚಲು ವಿಜಯನಗರ ಬಡಾವಣೆಯಲ್ಲಿ ಖಾಸಗಿ ಕಚೇರಿಯಲ್ಲಿ ಕಡತಗಳ ಟಿಪ್ಪಣಿ ಹಾಗೂ ಹಣ ಪಾವತಿ ಆದೇಶ ತಯಾರು ಮಾಡಿದ್ದರು’ ಎಂದು ಉಲ್ಲೇಖಿಸಲಾಗಿತ್ತು.

ಕೃಷಿ ಸಾಲ ಸಂಪೂರ್ಣ ಮನ್ನಾಕ್ಕೆ ಆಗ್ರಹ

ಸ್ವಾತಂತ್ರ್ಯ ಉದ್ಯಾನದಲ್ಲಿ ರೈತ ಸಂಘಟನೆಗಳಿಂದ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ ಖಾತರಿ ಕಾನೂನು ಜಾರಿಗೆ ತರಬೇಕು, ಡಾ. ಸ್ವಾಮಿನಾಥನ್ ವರದಿಯಂತೆ ಬೆಂಬಲ ಬೆಲೆ ನಿಗದಿಯಾಗಬೇಕು ಎಂಬುದು ಸೇರಿದಂತೆ ಹಲವು ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ರಾಜ್ಯ ರೈತ ಸಂಘಟನೆಗಳ ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಾಯಿತು.

ರೈತ ನಾಯಕ ಜಗಜಿತ್ ಸಿಂಗ್ ದಲ್ಲೆವಾಲ ಅವರ ನೇತೃತ್ವದಲ್ಲಿ ದೆಹಲಿಯಲ್ಲಿ ನಡೆಯುತ್ತಿರುವ ಉಪವಾಸ ಬೆಂಬಲಿಸಿ ರಾಜ್ಯದಲ್ಲೂ ರೈತ ಸಂಘಟನೆಗಳು ಸರದಿ ಉಪವಾಸ ಸತ್ಯಾಗ್ರಹ ಆರಂಭಿಸಿವೆ.

‘ಕೇಂದ್ರ ಸರ್ಕಾರ ಚಳವಳಿ ನಿರತ ಮುಖಂಡರ ಜೊತೆ ಕೂಡಲೇ ಮಾತುಕತೆ ನಡೆಸಿ ಸಮಸ್ಯೆ ಬಗೆಹರಿಸಬೇಕು. 60 ವರ್ಷ ತುಂಬಿದ ರೈತರಿಗೆ ಪಿಂಚಣಿ ಯೋಜನೆ ಜಾರಿಗೊಳಿಸಬೇಕು' ಎಂದು ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಕುರುಬೂರು ಶಾಂತಕುಮಾರ್ ಆಗ್ರಹಿಸಿದರು.

‘ರೈತರ ಕೃಷಿ ಸಾಲವನ್ನು ಸಂಪೂರ್ಣ ಮನ್ನಾ ಮಾಡಬೇಕು. ರೈತರ ಸಾಲವನ್ನು ಶೇ 16ಕ್ಕೆ ಏರಿಕೆ ಮಾಡಲಾಗಿದೆ ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಬಜೆಟ್‌ನಲ್ಲಿ ಘೋಷಣೆ ಮಾಡಿದ್ದರು. ಆದರೆ ಈಗ ನಬಾರ್ಡ್ ನೆರವಿನಲ್ಲಿ ಸಹಕಾರ ಸಂಘಗಳ ಮೂಲಕ ರೈತರಿಗೆ ಕೊಡುತ್ತಿದ್ದ ಬಡ್ಡಿ ರಹಿತ ಸಾಲಕ್ಕೆ ಕಡಿವಾಣ ಹಾಕಲು ಶೇಕಡ 50ರಷ್ಟು ಅನುದಾನ ಕಡಿತ ಮಾಡಿದ್ದಾರೆ. ಇದು ರೈತರಿಗೆ ಸಹಕಾರ ಸಂಘಗಳಲ್ಲಿ ನೀಡುತ್ತಿದ್ದ ಬಡ್ಡಿ ರಹಿತ ಕೃಷಿ ಸಾಲ ತಪ್ಪಿಸುವ ಹುನ್ನಾರ. ಕೇಂದ್ರ ಸರ್ಕಾರ ಕಡಿತ ಮಾಡಿರುವ ಶೇ 50ರಷ್ಟು ಅನುದಾನವನ್ನು ರಾಜ್ಯದ ಸಂಸದರು ಒತ್ತಡ ಹೇರಿ ಬಿಡುಗಡೆ ಮಾಡಿಸಬೇಕು’ ಎಂದು ಒತ್ತಾಯಿಸಿದರು.



ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ರಾಜ್ಯ ರೈತ ಸಂಘಟನೆಗಳ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು

ಉಪವಾಸ ಸತ್ಯಾಗ್ರಹದಲ್ಲಿ ರೈತ ಮುಖಂಡರಾದ ಬಸವರಾಜ್ ಪಾಟೀಲ್, ತುಮಕೂರು ಶಿವಕುಮಾರ್, ಅತ್ತಿಹಳ್ಳಿ ದೇವರಾಜ್, ಬರಡನಪುರ ನಾಗರಾಜ್, ರಮೇಶ್ ಹೂಗಾರ್, ರಾಜು ಗುಂದಗಿ, ರೇವಣ್ಣ, ಮಾರ್ಬಳ್ಳಿ ನೀಲಕಂಠಪ್ಪ, ವರಕೋಡು ನಾಗೇಶ್, ಸೂರಿ, ಹೆಗ್ಗೂರು ರಂಗರಾಜು, ಶೇಖರಪ್ಪ, ಗಿರೀಶ, ಕಮಲಮ್ಮ, ಅಂಬಳೆ ಮಂಜುನಾಥ್, ಸತೀಶ್, ಪ್ರಕಾಶ್ ಪಾಲ್ಗೊಂಡಿದ್ದರು.

ಎಎಪಿ ರಾಜ್ಯ ಘಟಕದ ಅಧ್ಯಕ್ಷ ‘ಮುಖ್ಯಮಂತ್ರಿ’ ಚಂದ್ರು ನೇತೃತ್ವದಲ್ಲಿ ಪಕ್ಷದ ಪದಾಧಿಕಾರಿಗಳು ಪಾಲ್ಗೊಂಡು ಪ್ರತಿಭಟನೆಗೆ ಬೆಂಬಲ ಸೂಚಿಸಿದರು.

‘ಕನ್ನಡ ಪುಸ್ತಕ ಮಳಿಗೆ: ಕನಿಷ್ಠ ಬೆಲೆ ನಿಗದಿಪಡಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಂಡ್ಯದಲ್ಲಿ ನಡೆಯಲಿರುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಕನ್ನಡ ಪುಸ್ತಕ ಮಳಿಗೆಗಳಿಗೆ ಕನಿಷ್ಠ ಬೆಲೆ ನಿಗದಿ ಮಾಡುವಂತೆ ಕರ್ನಾಟಕ ಕನ್ನಡ ಬರಹಗಾರರ ಮತ್ತು ಪ್ರಕಾಶಕರ ಸಂಘವು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಅವರಿಗೆ ಮನವಿ ಮಾಡಿದೆ.

‘ಕನ್ನಡ ಪುಸ್ತಕಗಳಿಗೆ ಓದುಗರನ್ನು ಸೃಷ್ಟಿ ಮಾಡಿ, ಕನ್ನಡ ಭಾಷೆಯನ್ನು ಮತ್ತಷ್ಟು ಶ್ರೀಮಂತಗೊಳಿಸಲು ಎಲ್ಲರ ಸಹಕಾರ ಅಗತ್ಯ. ಸಾಹಿತ್ಯ ಸಮ್ಮೇಳನದಲ್ಲಿ ಪುಸ್ತಕ ಪ್ರದರ್ಶನ ಮತ್ತು ಮಾರಾಟ ವ್ಯವಸ್ಥೆ ಮಾಡುವಾಗ ಕನ್ನಡ ಪುಸ್ತಕ ಮಳಿಗೆಗಳಿಗೆ ಬಾಡಿಗೆ ದರ ಕಡಿತ ಮಾಡಬೇಕು’ ಎಂದು ಸಂಘದ ಅಧ್ಯಕ್ಷ ನಿಡಸಾಲೆ ಪುಟ್ಟಸ್ವಾಮಯ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈಗ ಒಂದು ಮಳಿಗೆಗೆ ₹4 ಸಾವಿರ ನಿಗದಿ ಮಾಡಲಾಗಿದ್ದು, ಇದನ್ನು ₹3 ಸಾವಿರದಿಂದ ₹2 ಸಾವಿರಕ್ಕೆ ಇಳಿಸಬೇಕು. ಇದರಿಂದ ಲೇಖಕರು, ಪ್ರಕಾಶಕರು ಹಾಗೂ ಸಂಘ–ಸಂಸ್ಥೆಗಳಿಗೆ ಅನುಕೂಲವಾಗಲಿದೆ’ ಎಂದು ತಿಳಿಸಿದ್ದಾರೆ.

ವಕೀಲೆ ಜೀವಾ ಆತ್ಮಹತ್ಯೆ ಪ್ರಕರಣ: ಎಸ್‌ಐಟಿಗೆ ವರ್ಮಾ ಮುಖ್ಯಸ್ಥ

ವಿವರಣೆ ನೀಡಲು ಸಿಬಿಐಗೆ ನಿರ್ದೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಭೋವಿ ಅಭಿವೃದ್ಧಿ ನಿಗಮದಲ್ಲಿ ನಡೆದಿದೆ ಎನ್ನಲಾದ ಬಹುಕೋಟಿ ರೂಪಾಯಿಗಳ ಅವ್ಯವಹಾರ ಪ್ರಕರಣದ ಆರೋಪಿಯಾಗಿದ್ದ ವಕೀಲೆ ಜೀವಾ ಆತ್ಮಹತ್ಯೆಗೆ ಕುಮ್ಮಕ್ಕು ನೀಡಿದ ಬಗ್ಗೆ ತನಿಖೆ ನಡೆಸಲು ಬೆಂಗಳೂರು ವಲಯದ ಸಿಬಿಐ ಅಧಿಕಾರಿ ವಿನಾಯಕ ವರ್ಮಾ ಅವರನ್ನು ಎಸ್‌ಐಟಿ ಮುಖ್ಯಸ್ಥರನ್ನಾಗಿ ನೇಮಕ ಮಾಡಿರುವ ಬಗ್ಗೆ ಸಿಬಿಐ ವಿವರಣೆ ಒದಗಿಸಬೇಕು’ ಎಂದು ರಾಜ್ಯ ಪ್ರಾಸಿಕ್ಯೂಷನ್ ಹೈಕೋರ್ಟ್‌ಗೆ ಮನವಿ ಮಾಡಿದೆ.

‘ಎಸ್‌ಐಟಿ ನೇತೃತ್ವ ವಹಿಸಲು ವಿನಾಯಕ ವರ್ಮಾ ಅವರಿಗೆ ಸಿಬಿಐ ಅನುಮತಿಸುವುದೇ ಅಥವಾ ಇಲ್ಲವೇ ಎಂಬುದರ ಬಗ್ಗೆ ಸ್ಪಷ್ಟನೆ ನೀಡಬೇಕು’ ಎಂದು ರಾಜ್ಯ ಹೆಚ್ಚುವರಿ ಪ್ರಾಸಿಕ್ಯೂಟರ್ ಬಿ.ಎನ್‌.ಜಗದೀಶ್ ಮಾಡಿದ ಮನವಿಯನ್ನು ಪರಿಗಣಿಸಿರುವ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ, ‘ಈ ಕುರಿತಂತೆ ವಿವರಣೆ ನೀಡಿ’ ಎಂದು ಸಿಬಿಐ ಪರ ವಕೀಲ ಪಿ.ಪ್ರಸನ್ನ ಕುಮಾರ್ ಅವರಿಗೆ ಮೌಖಿಕವಾಗಿ ನಿರ್ದೇಶಿಸಿದೆ.

ಪ್ರಕರಣವನ್ನು ಸಿಬಿಐಗೆ ಒಪ್ಪಿಸುವಂತೆ ಕೋರಿ, ‘ಬೆಂಗಳೂರು ವಕೀಲರ ಸಂಘ’ ಸಲ್ಲಿಸಿದ್ದ ಮಧ್ಯಂತರ ಅರ್ಜಿ ಪರಿಗಣಿಸಿದ್ದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠವು, ‘ಪ್ರಕರಣದ ತನಿಖೆಯನ್ನು ಎಸ್‌ಪಿ ವಿನಾಯಕ ವರ್ಮಾ ನೇತೃತ್ವದ ಮೂವರು ಅಧಿಕಾರಿಗಳ ಎಸ್‌ಐಟಿ (ವಿಶೇಷ ತನಿಖಾ ತಂಡ) ನಡೆಸಬೇಕು’ ಎಂದು ಇತ್ತೀಚೆಗಷ್ಟೇ ಆದೇಶಿಸಿತ್ತು.

‘ಈ ಎಸ್‌ಐಟಿಯಲ್ಲಿ ಕರ್ನಾಟಕ ಗೃಹ ರಕ್ಷಕ ದಳದ ಎಸ್‌ಪಿ ಹಕಾಯ ಅಕ್ಷಯ್ ಮಛ್ಛಿಂದ್ರ, ಆಂತರಿಕ ಭದ್ರತಾ ವಿಭಾಗದ ಎಸ್‌ಪಿ ನಿಶಾ ಜೇಮ್ಸ್ ಸದಸ್ಯರಾಗಿ ಇರಲಿದ್ದಾರೆ. ಅಂತೆಯೇ, ತಂಡವು ಮೂರು ತಿಂಗಳಲ್ಲಿ ವರದಿ ಸಲ್ಲಿಸಬೇಕು’ ಎಂದು ನಿರ್ದೇಶಿಸಿತ್ತು.

ಈ ಪ್ರಕರಣದಲ್ಲಿ ಹಿರಿಯ ವಕೀಲರೂ ಆದ ಸಂಘದ ಅಧ್ಯಕ್ಷ ವಿವೇಕ ಸುಬ್ಬಾರೆಡ್ಡಿ ವಾದ ಮಂಡಿಸಿದ್ದರು.

ಶೋಧ ಪ್ರಶ್ನಿಸಿ ನಟೇಶ್ ಅರ್ಜಿ: ಇ.ಡಿಗೆ ಹೈಕೋರ್ಟ್ ನೋಟಿಸ್

ಬೆಂಗಳೂರು: ‘ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ನಿವೇಶನ ಹಂಚಿಕೆ ಅಕ್ರಮ ಆರೋಪ ಪ್ರಕರಣದಲ್ಲಿ, ಜಾರಿ ನಿರ್ದೇಶನಾಲಯ (ಇ.ಡಿ) ನನ್ನ ಮನೆಯಲ್ಲಿ ನಡೆಸಿರುವ ಶೋಧ ಹಾಗೂ ಇದಕ್ಕೆ ಸಂಬಂಧಿಸಿದಂತೆ ದಾಖಲು ಮಾಡಿಕೊಂಡಿರುವ ನನ್ನ ಹೇಳಿಕೆ ಕಾನೂನುಬಾಹಿರ’ ಎಂದು ಮುಡಾ ಮಾಜಿ ಆಯುಕ್ತ ಡಿ.ಬಿ. ನಟೇಶ್ ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿದಂತೆ; ಇ.ಡಿಗೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಕುರಿತಂತೆ ಡಿ.ಬಿ.ನಟೇಶ್ ಸಲ್ಲಿಸಿರುವ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಹೇಮಂತ ಚಂದನಗೌಡರ್ ಅವರಿದ್ದ ಏಕಸದಸ್ಯ ನ್ಯಾಯಪೀಠ, ಪ್ರತಿವಾದಿಯಾದ ಬೆಂಗಳೂರಿನ ಇ.ಡಿ ಪ್ರಾದೇಶಿಕ ಅಧಿಕಾರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದೆ.



ವಿಚಾರಣೆಯನ್ನು ಇದೇ 9ಕ್ಕೆ ಮುಂದೂಡಲಾಗಿದೆ. ನಟೇಶ್ ಪರ ಹಿರಿಯ ವಕೀಲ ಸಂದೇಶ್ ಜೆ.ಚೌಟ ಮತ್ತು ಇ.ಡಿ ಪರ ಪಿ.ಪ್ರಸನ್ನ ಕುಮಾರ್ ಹಾಜರಿದ್ದರು.

ಅರ್ಜಿಯಲ್ಲಿ ಏನಿದೆ?: ‘ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ಇ.ಡಿ. ನನ್ನ ಮನೆಯಲ್ಲಿ 2024ರ ಅಕ್ಟೋಬರ್ 28 ಮತ್ತು 29ರಂದು ಶೋಧ ನಡೆಸಿ ಕೆಲವು ದಾಖಲೆಗಳನ್ನು ವಶಕ್ಕೆ ಪಡೆದಿದೆ. ಇದಕ್ಕೆ ಸಂಬಂಧಿಸಿದಂತೆ ನನಗೆ ನೋಟಿಸ್ ಕೂಡಾ ಜಾರಿಗೊಳಿಸಿದೆ. ಇದು ಕಾನೂನುಬಾಹಿರ’ ಎಂದು ಅರ್ಜಿದಾರರು ಆಕ್ಷೇಪಿಸಿದ್ದಾರೆ.

‘ಒಂದು ವೇಳೆ ನ್ಯಾಯಪೀಠವು ನನ್ನ ಈ ಅರ್ಜಿಯನ್ನು ಪರಿಗಣಿಸಿ ಸಂದರ್ಭೋಚಿತವಾಗಿ ನನಗೆ ಕಾನೂನಾತ್ಮಕವಾದ ಯಾವುದೇ ರಕ್ಷಣೆ ನೀಡದೇ ಹೋದಲ್ಲಿ ಇ.ಡಿ ನನ್ನ ವಿರುದ್ಧ ಬಲವಂತದ ಕ್ರಮಕ್ಕೆ ಮುಂದಾಗಬಹುದು. ಅಷ್ಟೇಕೆ, ಬಂಧಿಸಲೂಬಹುದು’ ಎಂದು ನಟೇಶ್ ಅರ್ಜಿಯಲ್ಲಿ ಆತಂಕ ವ್ಯಕ್ತಪಡಿಸಿದ್ದಾರೆ.

‘ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ–2002ರ (ಪಿಎಂಎಲ್‌ಎ) ಕಲಂ 17ರ ಅನುಸಾರ ದಾಖಲಿಸಿಕೊಂಡಿರುವ ನನ್ನ ಹೇಳಿಕೆಯನ್ನು ಕಾನೂನುಬಾಹಿರ ಎಂದು ಘೋಷಿಸಬೇಕು. ಈ ನಿಟ್ಟಿನಲ್ಲಿ ಇ.ಡಿ 2024ರ ನವೆಂಬರ್ 6ರಂದು ನನಗೆ ನೀಡಿರುವ ನೋಟಿಸ್‌ಗೆ ತಡೆ ನೀಡಬೇಕು’ ಎಂದು ಮಧ್ಯಂತರ ಮನವಿ ಮಾಡಿದ್ದಾರೆ.

ಸಿಸಿಬಿ, ಕೊಡಿಗೇಹಳ್ಳಿ ಠಾಣೆ ಪೊಲೀಸರ ಕಾರ್ಯಾಚರಣೆ

₹80 ಲಕ್ಷ ಮೌಲ್ಯದ ಡ್ರಗ್ಸ್ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಅಪರಾಧ ವಿಭಾಗದ(ಸಿಸಿಬಿ) ಮಾದಕ ದ್ರವ್ಯ ನಿಗ್ರಹ ದಳ ಹಾಗೂ ಕೊಡಿಗೇಹಳ್ಳಿ ಠಾಣೆ ಪೊಲೀಸರು ಕಾರ್ಯಾಚರಣೆ ನಡೆಸಿ, ಡ್ರಗ್ಸ್ ಮಾರಾಟ ಮಾಡುತ್ತಿದ್ದ ಆರು ಮಂದಿಯನ್ನು ಬಂಧಿಸಿ ₹80 ಲಕ್ಷ ಮೌಲ್ಯದ ಮಾದಕವಸ್ತುಗಳನ್ನು ಜಪ್ತಿ ಮಾಡಿಕೊಂಡಿದ್ದಾರೆ.

ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿರುವ ಕೈದಿಯ ಸೂಚನೆ ಮೇರೆಗೆ ಡ್ರಗ್ಸ್ ಪೆಡ್ಲಿಂಗ್ ನಡೆಸುತ್ತಿದ್ದ ಕೇರಳದ ಫಯಾಜ್ ಹಾಗೂ ಗೌತಮ್ ಎಂಬುವವರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

‘ಬಂಧಿತರಿಂದ ಎಂಡಿಎಂಎ ಕ್ರಿಸ್ಟಲ್ 15 ಗ್ರಾಂ, ಹೈಡ್ರೊ ಗಾಂಜಾ 520 ಗ್ರಾಂ, ಎರಡು ಕೆ.ಜಿ 223 ಗ್ರಾಂ ಗಾಂಜಾ, ಒಂದು ತೂಕದ ಯಂತ್ರ, ಒಂದು ಮೊಬೈಲ್ ಫೋನ್ ಜಪ್ತಿ ಮಾಡಲಾಗಿದೆ. ಇವುಗಳ ಮೌಲ್ಯ ₹71 ಲಕ್ಷವೆಂದು ಅಂದಾಜಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಹಳೇ ಡ್ರಗ್ಸ್ ಪೆಡ್ಲರ್‌ಗಳ ವಿಚಾರಣೆ’

‘ಹೊಸ ವರ್ಷ ಸಂಭ್ರಮಾಚರಣೆ ಹಿನ್ನೆಲೆಯಲ್ಲಿ ನಗರದಲ್ಲಿ ಅಹಿತಕರ ಘಟನೆ ನಡೆಯದಂತೆ ಕಟ್ಟೆಚ್ಚರ ವಹಿಸಲಾಗಿದೆ. ಹೊಸ ವರ್ಷಾಚರಣೆಯ ಪಾರ್ಟಿಗಳಿಗೆ ಡ್ರಗ್ಸ್ ಪೂರೈಕೆ ಮಾಡಲು ಪೆಡ್ಲರ್‌ಗಳು ಮಾದಕ ವಸ್ತುಗಳನ್ನು ಸಂಗ್ರಹಿಸುತ್ತಿದ್ದಾರೆ ಎಂಬ ಮಾಹಿತಿ ಬಂದಿದೆ. ಸಿಸಿಬಿ ಸೇರಿದಂತೆ ಎಲ್ಲಾ ವಿಭಾಗದ ಪೊಲೀಸರು ಡ್ರಗ್ಸ್ ವಿರುದ್ಧ ಕಾರ್ಯಾಚರಣೆ ನಡೆಸುತ್ತಿದ್ದಾರೆ. ಹಳೇ ಡ್ರಗ್ಸ್ ಪೆಡ್ಲರ್‌ಗಳು ಹಾಗೂ ರೌಡಿ ಹಿನ್ನೆಲೆಯುಳ್ಳವರ ವಿಚಾರಣೆ ನಡೆಸಲಾಗುತ್ತಿದೆ’ ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ತಿಳಿಸಿದರು.

ಹೊಸ ವರ್ಷದ ಅಂಗವಾಗಿ ಪಾರ್ಟಿ ಆಯೋಜಕರನ್ನು ಕರೆಸಿ ಸೂಚನೆ ನೀಡಲಾಗುತ್ತಿದೆ ಎಂದು ಹೇಳಿದರು.

ಅಪರಾಧ ಸುದ್ದಿ

‘ಕೇರಳದಿಂದ ಕಡಿಮೆ ಬೆಲೆಗೆ ಮಾದಕ ವಸ್ತುಗಳನ್ನು ಖರೀದಿಸುತ್ತಿದ್ದ ಆರೋಪಿಗಳು, ಕುಮಾರಸ್ವಾಮಿ ಲೇಔಟ್‌ನ ಚಂದ್ರಾನಗರದ ಬಾಡಿಗೆ ಮನೆಯೊಂದರಲ್ಲಿ ಸಂಗ್ರಹಿಸಿ ಇಡುತ್ತಿದ್ದರು. ಅಲ್ಲಿಂದ ವಿದ್ಯಾರ್ಥಿಗಳು, ಪಿ.ಜಿಯಲ್ಲಿ ವಾಸ್ತವ್ಯ ಮಾಡಿದ ಯುವಕರು ಹಾಗೂ ಟೆಕಿಗಳಿಗೆ ಪೂರೈಸುತ್ತಿದ್ದರು’ ಎಂದು ಪೊಲೀಸರು ಹೇಳಿದರು.

‘ಗಾಂಜಾ ಪ್ರಕರಣ ವೊಂದರಲ್ಲಿ ಬಂಧಿತನಾಗಿ ಪರಪ್ಪನ ಅಗ್ರಹಾರ ಜೈಲಿನಲ್ಲಿ ಇರುವ ವಿಚಾರಣಾಧೀನ ಕೈದಿಯ ಸೂಚನೆ ಮೇರೆಗೆ ಬಂಧಿತರು ಮಾದಕ ವಸ್ತು ಮಾರಾಟ ಮಾಡುತ್ತಿದ್ದರು. ಆತ ಜೈಲಿನಿಂದಲೇ ಫೋನ್ ಮೂಲಕ ಬಂಧಿತ ಆರೋಪಿಗಳಿಗೆ ಮಾಹಿತಿ ನೀಡುತ್ತಿದ್ದ ಎಂಬುದು ತನಿಖೆಯಿಂದ ಗೊತ್ತಾಗಿದೆ’ ಎಂದು ಮೂಲಗಳು ತಿಳಿಸಿವೆ.

ಕೊಡಿಗೇಹಳ್ಳಿ ಪೊಲೀಸರು ಕಾರ್ಯಾಚರಣೆ ನಡೆಸಿ, ಡ್ರಗ್ಸ್ ಮಾರಾಟ ಮಾಡುತ್ತಿದ್ದ ಯಲಹಂಕದ ಅಜಿತ್, ಕಾರ್ತಿಕ್, ಕಾರ್ತಿಕ್ ಮತ್ತು ರಾಕೇಶ್ ಎಂಬವರನ್ನು ಬಂಧಿಸಿದ್ದಾರೆ.

ಬಂಧಿತರಿಂದ 8 ಕೆ.ಜಿ. 600 ಗ್ರಾಂ ಗಾಂಜಾ, ಕೃತ್ಯಕ್ಕೆ ಬಳಸಿದ ಆಟೊ ಜಪ್ತಿ ಮಾಡಲಾಗಿದೆ. ಇವುಗಳ ಮೌಲ್ಯ ₹8.6 ಲಕ್ಷವೆಂದು ಅಂದಾಜಿಸಲಾಗಿದೆ ಎಂದು ಪೊಲೀಸರು ಹೇಳಿದರು.

‘ಠಾಣಾ ವ್ಯಾಪ್ತಿಯ ಟಾಟಾ ನಗರದ ಎನ್‌ಟಿಐ ಮೈದಾನದಲ್ಲಿ ಆರೋಪಿಗಳು ಡ್ರಗ್ಸ್ ಮಾರಾಟ ಮಾಡುತ್ತಿದ್ದ ಖಚಿತ ಮಾಹಿತಿ ಬಂದಿತ್ತು. ಮಾಹಿತಿ ಆಧರಿಸಿ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಯಿತು’ ಎಂದು ಮೂಲಗಳು ಹೇಳಿವೆ.

‘ಆರಂಭದಲ್ಲಿ ನಾಲ್ವರು ಆರೋಪಿಗಳು ಕಳ್ಳತನ ನಡೆಸುತ್ತಿದ್ದರು. ಮನೆಗಳ್ಳತನ ಪ್ರಕರಣಗಳಲ್ಲಿ ಪೊಲೀಸರಿಗೆ ಸಿಕ್ಕಿಬೀಳುವ ಭಯದಿಂದ ಗಾಂಜಾ ಮಾರಾಟಕ್ಕೆ ಇಳಿದಿದ್ದರು ಎಂಬುದು ತನಿಖೆಯಿಂದ ಗೊತ್ತಾಗಿದೆ’ ಎಂದು ಪೊಲೀಸರು ಹೇಳಿದರು.

ಬಾಲಕ ಸೇರಿ ಎಂಟು ಮಂದಿ ಬಂಧನ

₹3,500ಕ್ಕಾಗಿ ಯುವಕನ ಕೊಲೆ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ಹಣಕ್ಕಾಗಿ ಯುವಕನನ್ನು ಅಪಹರಿಸಿ ಕೊಲೆ ಮಾಡಿದ್ದ ಪ್ರಕರಣದ ಸಂಬಂಧ ಬಾಲಕ ಸೇರಿ ಎಂಟು ಮಂದಿಯನ್ನು ಮಾದನಾಯಕನಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.



ಅಖಿಲೇಶ್ ಯಾದವ್

ಅಖಿಲೇಶ್ ಯಾದವ್ ಎಂಬ ಯುವಕನನ್ನು ಕೊಲೆ ಮಾಡಿದ ಆರೋಪದಡಿ ಮಾಚೋಹಳ್ಳಿಯ ಮಹ್ಮದ್ ಏಸನ್ (23), ತಿಗಳರಪಾಳ್ಯದ ರೋಷನ್ ಜಮೀರ್(23), ಗಣೇಶ್(24), ನಂದಕುಮಾರ್ (20), ಹೆಸರಘಟ್ಟದ ವಿಶ್ವ(24), ಯಲಹಂಕದ ನಾಗೇಶ್(30), ಮನುಕುಮಾರ್(26) ಹಾಗೂ 17 ವರ್ಷದ ಬಾಲಕನನ್ನು ಬಂಧಿಸಲಾಗಿದೆ. ಪ್ರಕರಣ ನಡೆದು 40 ದಿನಗಳ ಬಳಿಕ ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಅಕ್ಟೋಬರ್ 19ರಂದು ಸಂಜೆ ಕಾಚೋಹಳ್ಳಿಯ ಬಳಿ ಅಖಿಲೇಶ್ ಅವರನ್ನು ಕಾರಿನಲ್ಲಿ ಬಂದು, ಆರೋಪಿಗಳು ಅಪಹರಣ ಮಾಡಿದ್ದರು.

ಬಿಹಾರದ ಅಖಿಲೇಶ್ ಯಾದವ್ (24) ಅವರು ನೆಲಮಂಗಲದ ಖಾಸಗಿ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ಮಾಚೋಹಳ್ಳಿಯ ಮಹ್ಮದ್ ಏಸನ್ ಬಳಿ ಅಖಿಲೇಶ್ ಯಾದವ್ ಅವರು ₹3,500 ಸಾಲ ಪಡೆದಿದ್ದರು. ಸಾಲ ವಾಪಸ್ ಮಾಡುವ ವಿಚಾರಕ್ಕೆ ಗಲಾಟೆ ನಡೆದಿತ್ತು. ಸಾಲ ಮರುಪಾವತಿ ವಿಳಂಬವಾದ ಕಾರಣಕ್ಕೆ ಎಂಟು ಮಂದಿ ಸೇರಿಕೊಂಡು ಅಪಹರಣ ಮಾಡಿದ್ದರು. ನಂತರ ರಾಮಗೊಂಡಹಳ್ಳಿಯ ಆರೋಪಿ ಮನೆಗೆ ಕರೆತಂದು ಕೊಲೆ ಮಾಡಿದ್ದರು. ಸುಳಿವು ಸಿಗಬಾರದೆಂದು ವಿಜಯನಗರ ಜಿಲ್ಲೆಯ ಕೂಡ್ಲಿಗಿ ಬಳಿಯ ಬನವಿಕಲ್ ಅರಣ್ಯಪ್ರದೇಶದಲ್ಲಿ ಶವ ಎಸೆದು ನಗರಕ್ಕೆ ಬಂದಿದ್ದರು. ಪ್ರಕರಣ ಯಾರಿಗೂ ತಿಳಿದಿಲ್ಲ ಎಂದು ಭಾವಿಸಿ ಕೆಲಸಕ್ಕೆ ತೆರಳುತ್ತಿದ್ದರು’ ಎಂದು ಗೊತ್ತಾಗಿದೆ.

ಅಕ್ಟೋಬರ್ 23ರಂದು ಕುರಿಗಾಹಿಗಳು ಅರಣ್ಯ ಪ್ರದೇಶದಲ್ಲಿ ಕೊಳೆತ ಸ್ಥಿತಿಯಲ್ಲಿದ್ದ ಮೃತದೇಹ ನೋಡಿ ಕೂಡಲೇ ವಿಜಯನಗರದ ಹೊಸಹಳ್ಳಿ ಪೊಲೀಸರಿಗೆ ಮಾಹಿತಿ ನೀಡಿದ್ದರು. ಮೃತನ ಬಗ್ಗೆ ಯಾವುದೇ ಮಾಹಿತಿ ಸಿಗದ ಕಾರಣ ಅಕ್ಟೋಬರ್ 26ರಂದು ಪೊಲೀಸರೇ ಅಂತ್ಯಕ್ರಿಯೆ ನಡೆಸಿದ್ದರು. ಇತ್ತ ಅಕ್ಟೋಬರ್ 21ರಂದು ಅಖಿಲೇಶ್ ಪೋಷಕರು ತಮ್ಮ ಮಗ ನಾಪತ್ತೆ ಆಗಿರುವುದಾಗಿ ಮಾದನಾಯಕನಹಳ್ಳಿ ಠಾಣೆ ಪೊಲೀಸರಿಗೆ ದೂರು ನೀಡಿದ್ದರು. ಪ್ರಕರಣದ ಬೆನ್ನತ್ತಿದ ಮಾದನಾಯಕನಹಳ್ಳಿ ಠಾಣೆ ಪೊಲೀಸರು ಆರೋಪಿಗಳನ್ನು ಬಂಧಿಸಿದ್ದಾರೆ.

ಕೊಳೆತ ಸ್ಥಿತಿಯಲ್ಲಿ ಸಿಕ್ಕಿದ ಮೃತದೇಹದ ಬಲಗೈನಲ್ಲಿದ್ದ ಟ್ಯಾಟೂ ನೋಡಿ ಕುಟುಂಬಸ್ಥರು ಅಖಿಲೇಶ್ ಅವರನ್ನು ಗುರುತಿಸಿದ್ದಾರೆ.

40 ಗ್ಯಾಸ್ ಸಿಲಿಂಡರ್, 28 ಬ್ಯಾಟರಿ ಜಪ್ತಿ

ಬೆಂಗಳೂರು: ಬೈಕ್, ಗ್ಯಾಸ್ ಸಿಲಿಂಡರ್ ಹಾಗೂ ಬ್ಯಾಟರಿ ಕಳ್ಳತನ ಮಾಡುತ್ತಿದ್ದ ಆರೋಪಿಗಳನ್ನು ತಿಲಕನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಜೆ.ಪಿ.ನಗರದ ಫಯಾಜ್ ಖಾನ್(27) ಹಾಗೂ ಇಲಿಯಾಸ್ ನಗರದ ನಿವಾಸಿ ಮಹ್ಮದ್ ಉಮರ್ ಷರೀಫ್(26) ಬಂಧಿತರು. ಬಂಧಿತರಿಂದ 11 ದ್ವಿಚಕ್ರ ವಾಹನ ಗಳು, 40 ಗ್ಯಾಸ್ ಸಿಲಿಂಡರ್ ಹಾಗೂ 28 ಬ್ಯಾಟರಿಗಳನ್ನು ಜಪ್ತಿ ಮಾಡಲಾಗಿದೆ. ಇವುಗಳ ಮೌಲ್ಯ ₹15 ಲಕ್ಷ ಎಂಬುದಾಗಿ ಅಂದಾಜಿಸಲಾಗಿದೆ ಎಂದು ಪೊಲೀಸರು ಹೇಳಿದರು.

ತಿಲಕನಗರದ ಹೊರವರ್ತುಲ ರಸ್ತೆಯ ಬಟ್ಟೆ ಅಂಗಡಿಯ ಮಾಲೀಕರೊಬ್ಬರು ನೀಡಿದ ದೂರು ಆಧರಿಸಿ ಆರೋಪಿಗಳನ್ನು ಬಂಧಿಸಲಾಗಿದೆ.

‘ಸಿಲಿಂಡರ್ ಹಾಗೂ ಬ್ಯಾಟರಿಗಳನ್ನು ಕಳ್ಳತನ ಮಾಡಿರುವುದಾಗಿ ಆರೋಪಿಗಳು ತಪ್ಪೊಪ್ಪಿಕೊಂಡಿದ್ದಾರೆ. ಬ್ಯಾಟರಿ ಹಾಗೂ 12 ಗ್ಯಾಸ್ ಸಿಲಿಂಡರ್ ಖರೀದಿಸಿದ್ದ ಗೊಟ್ಟಿಗೆರೆ ರಸ್ತೆಯ ನಿವಾಸಿಯೊಬ್ಬರಿಗೆ ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ಜಾರಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

₹2.57 ಕೋಟಿ ಸುಲಿಗೆ ಮಾಡಿದ್ದ ಆರೋಪಿ ಬಂಧನ

ಖಾಸಗಿ ವಿಡಿಯೊ: ಯುವತಿಯಿಂದ ಹಣ ಸುಲಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖಾಸಗಿ ಕ್ಷಣದ ಫೋಟೊ ಹಾಗೂ ವಿಡಿಯೊಗಳನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹರಿಯಬಿಡುವುದಾಗಿ ಯುವತಿಗೆ ಬೆದರಿಸಿ ಅವರ ಕುಟುಂಬಸ್ಥರಿಂದ ₹2.57 ಕೋಟಿ ಸುಲಿಗೆ ಮಾಡಿದ್ದ ಆರೋಪಿಯನ್ನು ಕೇಂದ್ರ ಅಪರಾಧ ವಿಭಾಗ(ಸಿಸಿಬಿ) ಪೊಲೀಸರು ಬಂಧಿಸಿದ್ದಾರೆ.

19 ವರ್ಷದ ಯುವತಿ ನೀಡಿದ ದೂರಿನ ಮೇರೆಗೆ ಆರೋಪಿ ಮೋಹನ್ ಕುಮಾರ್ ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

‘ಪ್ರಕರಣದ ತನಿಖೆ ನಡೆಯುತ್ತಿದೆ. ಆರೋಪಿಯಿಂದ ಸದ್ಯಕ್ಕೆ ₹80 ಲಕ್ಷ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಆರೋಪಿ ಚಾಮರಾಜಪೇಟೆ ಸಮೀಪದ ಯುವತಿಗೆ ಬ್ಲ್ಯಾಕ್‌ಮೇಲ್ ಮಾಡಿ 2019ರಿಂದ ಇದುವರೆಗೂ ಹಣ ಸುಲಿಗೆ ಮಾಡಿದ್ದ ಎಂಬುದು ತನಿಖೆಯಿಂದ ಗೊತ್ತಾಗಿದೆ’ ಎಂದು ಸಿಸಿಬಿ ಮೂಲಗಳು ತಿಳಿಸಿವೆ.

‘ದೇವನಹಳ್ಳಿ ಭಾಗದ ಖಾಸಗಿ ಶಾಲೆಯೊಂದರಲ್ಲಿ ಯುವತಿ ಓದುತ್ತಿದ್ದರು. ಆಗ ಆರೋಪಿಯ ಪರಿಚಯವಾಗಿತ್ತು. ಬಳಿಕ ಇಬ್ಬರ ಮಧ್ಯೆ ಪ್ರೇಮಾಂಕುರವಾಗಿತ್ತು. ಅಲ್ಲದೆ, ಸಂತ್ರಸ್ತೆಯನ್ನು ಪುಸಲಾಯಿಸಿದ್ದ ಆರೋಪಿ ಪ್ರವಾಸಿ ತಾಣಗಳು, ಪಾರ್ಟಿಗಳಿಗೆ ಕರೆದೊಯ್ಯುತ್ತಿದ್ದ. ಮದುವೆ ಆಗುವುದಾಗಿಯೂ ನಂಬಿಸಿ ಆಕೆಯ ಜತೆಗೆ ಲೈಂಗಿಕ ಸಂಪರ್ಕ ಬೆಳೆಸಿದ್ದ. ಈ ವೇಳೆ ಯುವತಿಯ ಖಾಸಗಿ ದೃಶ್ಯಗಳನ್ನು ಚಿತ್ರೀಕರಿಸಿಕೊಂಡಿದ್ದ. ಕೆಲವು ದಿನಗಳ ಬಳಿಕ ಆ ವಿಡಿಯೊ ಇಟ್ಟುಕೊಂಡು ಬ್ಲ್ಯಾಕ್‌ಮೇಲ್ ಮಾಡಲು ಆರಂಭಿಸಿದ್ದ’ ಎಂದು ಪೊಲೀಸರು ಹೇಳಿದರು.

‘ತನಗೆ ಹಣದ ಅವಶ್ಯಕತೆ ಇದೆ ಎಂದು ಆರೋಪಿ ಯುವತಿಯನ್ನು ಪದೇ ಪದೇ ಪೀಡಿಸುತ್ತಿದ್ದ. ಹಣ ಕೊಡಲು ಯುವತಿ ನಿರಾಕರಿಸಿದ್ದರು. ಹಣ ಕೊಡದಿದ್ದರೆ ಖಾಸಗಿ ಫೋಟೊ ಹಾಗೂ ವಿಡಿಯೊಗಳನ್ನು ಸಾಮಾಜಿಕ ಮಾಧ್ಯಮದಲ್ಲಿ ಹರಿಯಬಿಡುವುದಾಗಿ ಬೆದರಿಸಿದ್ದ. ಯುವತಿ ಹಣ ಹೊಂದಿಸಿ ಕೊಡಲು ಸಾಧ್ಯ ಆಗದಿದ್ದ ವೇಳೆ ಅವರ ಮನೆಯವರಿಗೆ ಫೋಟೊ, ವಿಡಿಯೊ ಕಳುಹಿಸಿ ಬೆದರಿಸಿದ್ದ. ಅವರಿಂದ ₹2.57 ಕೋಟಿ ಸುಲಿಗೆ ಮಾಡಿದ್ದ. ಹಣದ ಜತೆಗೆ ಸಂತ್ರಸ್ತೆಯಿಂದ ಚಿನ್ನಾಭರಣ, ದುಬಾರಿ ಮೌಲ್ಯದ ವಾಚ್, ಬೈಕ್‌ಗಳನ್ನು ಪಡೆದುಕೊಂಡಿದ್ದ. ಆರೋಪಿಯ ಕಿರುಕುಳ ಹೆಚ್ಚಾದ ಬಳಿಕ ಸಂತ್ರಸ್ತೆ ಪೊಲೀಸರಿಗೆ ದೂರು ನೀಡಿದ್ದರು’ ಎಂದು ಮೂಲಗಳು ತಿಳಿಸಿವೆ.

ಗೋಡೆ ಧ್ವಂಸ: ಪರಸ್ಪರ ದೂರು ದಾಖಲು

ಬೆಂಗಳೂರು: ವೈಟ್‌ಫೀಲ್ಡ್ ಪೊಲೀಸ್ ಠಾಣಾ ವ್ಯಾಪ್ತಿಯ ಬೋರ್‌ವೆಲ್ ರೋಡ್‌ನಲ್ಲಿ ಜಾಗದ ವಿಚಾರಕ್ಕೆ ಎರಡು ಗುಂಪುಗಳ ಮಧ್ಯೆ ಗಲಾಟೆ ನಡೆದಿದ್ದು, ಪರಸ್ಪರ ದೂರು–ಪ್ರತಿದೂರು ದಾಖಲಾಗಿದೆ.

‘ನನಗೆ ಸೇರಿದ ಜಾಗಕ್ಕೆ 50ಕ್ಕೂ ಹೆಚ್ಚು ಮಂದಿ ಜೆಸಿಬಿ ಯಂತ್ರದ ಸಮೇತ ಬಂದು ಮನೆಯ ಗೋಡೆ ಧ್ವಂಸ ಮಾಡಿದ್ದಾರೆ’ ಎಂದು ಆರೋಪಿಸಿ ವಿಶಾಲ್ ಬಾಳಿಗ ಎಂಬುವವರು ದೂರು ನೀಡಿದ್ದಾರೆ.

‘ಗೋಪಾಲ್ ಜವಹಾರ್ ಕಡೆಯವರು ಗಲಾಟೆ ನಡೆಸಿದ್ದಾರೆ’ ಎಂದು ದೂರಿನಲ್ಲಿ ತಿಳಿಸಿದ್ದಾರೆ. ‘ಈ ಜಾಗವು ಗೋಪಾಲ್ ಜವಹಾರ್ ಎಂಬುವರಿಗೆ ಸೇರಿದ್ದು, ತೆರವು ಮಾಡಲು ಬಂದಿದ್ದೆವು’ ಎಂದು ಮತ್ತೊಂದು ಗುಂಪಿನ ಸದಸ್ಯರು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಸ್ಥಳೀಯರು ದೃಶ್ಯವನ್ನು ಮೊಬೈಲ್‌ಗಳಲ್ಲಿ ಸೆರೆ ಹಿಡಿದಿದ್ದಾರೆ. ‘ಎರಡೂ ಕಡೆಯವರಿಂದ ಮಾಹಿತಿ ಪಡೆಯಲಾಗಿದೆ’ ಎಂದು ಪೊಲೀಸರು ಹೇಳಿದರು.

20 ಇನ್‌ಸ್ಪೆಕ್ಟರ್, ಐವರು ಡಿವೈಎಸ್‌ಪಿಗಳ ವರ್ಗಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ತವ್ಯದ ಸ್ಥಳ ನಿರೀಕ್ಷೆಯಲ್ಲಿದ್ದ 20 ಪೊಲೀಸ್ ಇನ್‌ಸ್ಪೆಕ್ಟರ್ (ಸಿವಿಲ್) ಹಾಗೂ ಐವರು ಡಿವೈಎಸ್‌ಪಿಗಳನ್ನು ಶುಕ್ರವಾರ ವರ್ಗಾವಣೆಗೊಳಿಸಿ ಪೊಲೀಸ್ ಇಲಾಖೆ ಆದೇಶಿಸಿದೆ.

ಬೆಂಗಳೂರು ಸೇರಿದಂತೆ ರಾಜ್ಯದ ವಿವಿಧ ವಿಭಾಗ ಹಾಗೂ ಠಾಣೆಗಳಿಗೆ ಇನ್‌ಸ್ಪೆಕ್ಟರ್‌ಗಳನ್ನು ವರ್ಗಾವಣೆ ಮಾಡಲಾಗಿದೆ. ಐವರು ಡಿವೈಎಸ್‌ಪಿಗಳನ್ನು ರಾಜ್ಯ ಗುಪ್ತವಾರ್ತೆ, ಲೋಕಾಯುಕ್ತ, ವಿಧಾನಸೌಧ ಭದ್ರತಾ ವಿಭಾಗಕ್ಕೆ ವರ್ಗಾವಣೆ ಮಾಡಲಾಗಿದೆ. ಮೀಸಲು ಪಡೆಯ ನಾಲ್ವರು ಪೊಲೀಸ್ ಇನ್‌ಸ್ಪೆಕ್ಟರ್‌ಗಳನ್ನೂ ವರ್ಗಾವಣೆ ಮಾಡಿ ಇಲಾಖೆ ಆದೇಶಿಸಿದೆ.

ಕುಲವನಹಳ್ಳಿ ಪಿಡಿಒ ಮೇಲೆ ಹಲ್ಲೆ

ಪ್ರಜಾವಾಣಿ ವಾರ್ತೆ

ದಾಬಸ್‌ಪೇಟೆ: ತ್ಯಾಮಗೊಂಡ್ಲು ಹೋಬಳಿಯ ಕುಲವನಹಳ್ಳಿ ಗ್ರಾಮ ಪಂಚಾಯಿತಿಯ ಪಂಚಾಯತ್ ಅಭಿವೃದ್ಧಿ ಅಧಿಕಾರಿ (ಪಿಡಿಒ) ಮೋಹನ್ ಕುಮಾರ್ ಅವರ ಮೇಲೆ ಹಲ್ಲೆ ನಡೆಸಲಾಗಿದ್ದು, ಆರೋಪಿಗಳ ವಿರುದ್ಧ ನೆಲಮಂಗಲ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಹಾಲಕ್ಷ್ಮಿ ಹಾಗೂ ಅವರ ಕುಟುಂಬದವರು ಹಲ್ಲೆ ನಡೆಸಿದ್ದಾರೆ ಎಂಬ ಆರೋಪವಿದೆ.

ಮಹಾಲಕ್ಷ್ಮಿ ಅವರು ಪಂಚಾಯಿತಿಯಲ್ಲಿ ಕಂಪ್ಯೂಟರ್ ಆಪರೇಟರ್ ಆಗಿ ಕೆಲಸ ಮಾಡುತ್ತಿದ್ದರು. ಕರ್ತವ್ಯ ಲೋಪದ ಆರೋಪದ ಮೇಲೆ ಅವರನ್ನು ಪಂಚಾಯಿತಿ ಆಡಳಿತ ಅಮಾನತು ಮಾಡಿತ್ತು. ಮಹಾಲಕ್ಷ್ಮಿ ನ್ಯಾಯಾಲಯದ ಮೊರೆ ಹೋಗಿದ್ದಾರೆ.

ಡಿ.6ರಂದು ಪಿಡಿಒ ಅವರಿಗೆ ಅರ್ಜಿಯೊಂದನ್ನು ಕೊಡಲು ಹೋಗಿದ್ದರು. ಆಗ ಮಹಾಲಕ್ಷ್ಮಿ ಅವರ ಸಹೋದರ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ ಎನ್ನಲಾಗಿದೆ. ಇದನ್ನು ಪಿಡಿಒ ಪ್ರಶ್ನೆ ಮಾಡಿದಾಗ ಅವರ ಮೇಲೆ ಮಹಾಲಕ್ಷ್ಮಿ, ಅವರ ತಮ್ಮ, ತಾಯಿ ಹಾಗೂ ಮಾವ ಹಲ್ಲೆ ಮಾಡಿದ್ದಾರೆ ಎಂದು ದೂರು ನೀಡಲಾಗಿದೆ.

ಗಾಯಗೊಂಡಿರುವ ಮೋಹನ್ ಕುಮಾರ್ ನೆಲಮಂಗಲದ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಮದ್ಯ ಸೇವಿಸಿ ಶಾಲಾ ವಾಹನ ಚಾಲನೆ

16 ಚಾಲಕರ ವಿರುದ್ಧ ಎಫ್‌ಐಆರ್ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಶ್ಚಿಮ ವಿಭಾಗದ ಸಂಚಾರ ಪೊಲೀಸರು ಶಾಲಾ ವಾಹನ ಚಾಲಕರ ವಿರುದ್ಧ ವಿಶೇಷ ಕಾರ್ಯಾಚರಣೆ ನಡೆಸಿ, ಮದ್ಯಪಾನ ಮಾಡಿ ಶಾಲಾ ವಾಹನ ಚಲಾಯಿಸುತ್ತಿದ್ದ 16 ಮಂದಿಯ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡಿದ್ದಾರೆ.

ಶುಕ್ರವಾರ ಬೆಳಿಗ್ಗೆ 7ರಿಂದ 9.30ರ ವರೆಗೆ ನಡೆಸಿದ ಕಾರ್ಯಾಚರಣೆಯಲ್ಲಿ 1,303 ವಾಹನಗಳನ್ನು ತಪಾಸಣೆ ನಡೆಸಲಾಯಿತು. ನಿಯಮ ಉಲ್ಲಂಘಿಸಿದ ಚಾಲಕರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಸಂಚಾರ ಪೊಲೀಸರು ಹೇಳಿದರು.



ಶಾಲಾ ವಾಹನಗಳನ್ನು ತಪಾಸಣೆಗೆ ಒಳಪಡಿಸಿದ ಸಂಚಾರ ಪೊಲೀಸರು

‘ವಿದ್ಯಾರ್ಥಿಗಳನ್ನು ಶಾಲೆಗೆ ಕರೆದೊಯ್ಯುವ ಹಾಗೂ ಮನೆಗೆ ವಾಪಸ್ ಕರೆತರುವ ವೇಳೆ ಶಾಲಾ ವಾಹನ ಚಾಲಕರು ಮದ್ಯಪಾನ ಮಾಡಿ, ಚಾಲನೆ ಮಾಡುತ್ತಿರುವುದು ಕಂಡುಬರುತ್ತಿದೆ. ಇದಕ್ಕೆ ಕಡಿವಾಣ ಹಾಕುವ ಉದ್ದೇಶದಿಂದ ಮುಂದಿನ ದಿನಗಳಲ್ಲಿಯೂ ಇದೇ ರೀತಿಯ ಕಾರ್ಯಾಚರಣೆ ನಡೆಸಲಾಗುವುದು’ ಎಂದು ಸಂಚಾರ ಪೊಲೀಸರು ಹೇಳಿದರು.

ವ್ಹೀಲಿ ವಿರುದ್ಧ ಕಾರ್ಯಾಚರಣೆ: ವ್ಹೀಲಿ ನಡೆಸುವ ಪುಂಡರ ವಿರುದ್ಧ ವಿಶೇಷ ಕಾರ್ಯಾಚರಣೆ ಮುಂದುವರಿಸಿರುವ ನಗರ ಸಂಚಾರ ವಿಭಾಗದ ಪೊಲೀಸರು ಶುಕ್ರವಾರ ಮತ್ತೆ 12 ಮಂದಿಯನ್ನು ಬಂಧಿಸಿದ್ದಾರೆ.

ಮೇಲ್ಸೇತುವೆ ಹಾಗೂ ವಿವಿಧ ಬಡಾವಣೆಗಳಲ್ಲಿ ವ್ಹೀಲಿ ನಡೆಸುತ್ತಿದ್ದವರನ್ನು ಬಂಧಿಸಲಾಗಿದೆ. ಒಟ್ಟು 18 ಪ್ರಕರಣ ದಾಖಲಿಸಿಕೊಳ್ಳಲಾಗಿದೆ. 19 ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸಂವಿಧಾನಶಿಲ್ಪಿಯ 68ನೇ ಮಹಾ ಪರಿನಿರ್ವಾಣ ದಿನ ಕಾರ್ಯಕ್ರಮದಲ್ಲಿ ಸಿ.ಎಂ ಸಿದ್ದರಾಮಯ್ಯ ಬಣ್ಣನೆ ● ನಗರದ ವಿವಿಧೆಡೆ ಅಂಬೇಡ್ಕರ್ ಸ್ಮರಣೆ

‘ಬಸವಣ್ಣ, ಬುದ್ಧನಂತೆಯೇ ಅಂಬೇಡ್ಕರ್ ಶ್ರೇಷ್ಠ’



ಬಿ.ಆರ್. ಅಂಬೇಡ್ಕರ್ ಅವರ 68ನೇ ಮಹಾ ಪರಿನಿರ್ವಾಣ ದಿನದ ಅಂಗವಾಗಿ ವಿಧಾನಸೌಧದ ಆವರಣದಲ್ಲಿರುವ ಅಂಬೇಡ್ಕರ್ ಪ್ರತಿಮೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪುಷ್ಪನಮನ ಸಲ್ಲಿಸಿದರು. ಸಮಾಜ ಕಲ್ಯಾಣ ಸಚಿವ ಎಚ್‌.ಸಿ. ಮಹದೇವಪ್ಪ, ಇಂಧನ ಸಚಿವ ಕೆ.ಜೆ.ಜಾರ್ಜ್ ಉಪಸ್ಥಿತರಿದ್ದರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಸವಣ್ಣ, ಬುದ್ಧನ ನಂತರ ಸಮಾನತೆಗಾಗಿ ಹೋರಾಡಿದ ಮಹಾಚೇತನ ಬಿ.ಆರ್. ಅಂಬೇಡ್ಕರ್ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಬಣ್ಣಿಸಿದರು.

ಸಂವಿಧಾನಶಿಲ್ಪಿ ಅಂಬೇಡ್ಕರ್ ಅವರ 68ನೇ ಮಹಾ ಪರಿನಿರ್ವಾಣ ದಿನದ ಅಂಗವಾಗಿ ವಿಧಾನಸೌಧದ ಆವರಣದಲ್ಲಿರುವ ಅವರ ಪ್ರತಿಮೆಗೆ ಮಾಲಾ ರ್ಪಣೆ ಮಾಡಿದ ನಂತರ ಮಾತನಾಡಿದರು.

‘ಅಂಬೇಡ್ಕರ್ ಜಗತ್ತಿನಲ್ಲಿಯೇ ಶ್ರೇಷ್ಠ ಲಿಖಿತ ಸಂವಿಧಾನವನ್ನು ದೇಶಕ್ಕೆ ನೀಡಿದ್ದಾರೆ. ಸಮಾಜ ಪರಿವರ್ತನೆಗಾಗಿ ತಮ್ಮ ಜೀವನವನ್ನು ಮುಡುಪಾಗಿಟ್ಟಿದ್ದರು. ಸಂವಿಧಾನದ ಶ್ರೇಷ್ಠತೆ ಉಳಿಯಲು ಒಳ್ಳೆಯವರ ಕೈಯಲ್ಲಿ ಆಡಳಿತ ಇರಬೇಕು. ಕೆಟ್ಟವರ ಕೈಗೆ ಹೋದರೆ ಕೆಟ್ಟದಾಗುತ್ತದೆ ಎಂದು ಅಂದೇ ದೇಶದ ಜನರಿಗೆ ಎಚ್ಚರಿಕೆ ಕೊಟ್ಟಿದ್ದರು’ ಎಂದರು.

‘ಅಂಬೇಡ್ಕರ್ ಅವರು ಕೇವಲ ದಲಿತರಿಗಷ್ಟೇ ಅಲ್ಲ, ಸಮಾಜದ ಎಲ್ಲ ಶೋಷಿತ ವರ್ಗಗಳಿಗೂ ಸಾಮಾಜಿಕ ಅವಕಾಶ ದೊರಕಿಸಲು ಶ್ರಮಿಸಿದರು. ಅವಕಾಶ ವಂಚಿತರು, ಶೋಷಿತರು, ಅನ್ಯಾಯ, ಅವಮಾನ, ದೌರ್ಜನ್ಯಕ್ಕೆ ಒಳಪಟ್ಟ ಎಲ್ಲಾ ಜನರ ಪರವಾಗಿ ಕೆಲಸ ಮಾಡಿದರು’ ಎಂದು ಸ್ಮರಿಸಿದರು.

‘ಹಲವರು ಸಂವಿಧಾನವನ್ನು ವಿರೋಧಿಸುತ್ತಾರೆ. ಭಾರತ ಬಹು ಸಂಸ್ಕೃತಿಯ, ಬಹುತ್ವದ ದೇಶ. ಹಲವು ಜಾತಿ, ಧರ್ಮ, ಭಾಷೆಗಳಿವೆ. ಅದಕ್ಕೆ ಪೂರಕವಾಗಿ ಸಂವಿಧಾನ ರಚಿಸಲಾಗಿದೆ. ಅವರು ರೂಪಿಸಿದ ಸಂವಿಧಾನದ ಹಾಗೂ ಹೋರಾಟದ ದಾರಿಯಲ್ಲಿ ನಡೆಯುವುದೇ ಅಂಬೇಡ್ಕರ್ ಅವರಿಗೆ ದೇಶದ ಜನರು ನೀಡುವ ನಿಜವಾದ ಗೌರವ’ ಎಂದರು.

‘ಮಹಿಳಾ ಪ್ರಾತಿನಿಧ್ಯದ ಕೊರತೆ’

ಬೆಂಗಳೂರು: ಮಹಿಳೆಯರ ಬಗೆಗಿನ ಕಾಳಜಿ ಮಾತುಗಳಿಗೆ ಸೀಮಿತವಾಗಿದೆ. ವೈಭವೀಕರಣದ ಮಾತುಗಳನ್ನು ಬದಿಗಿಟ್ಟು ನೋಡಿದರೆ ಸಮಾನತೆ ಇನ್ನೂ ಬಂದಿಲ್ಲ ಎಂಬುದು ತಿಳಿಯುತ್ತದೆ ಎಂದು ಬೆಂಗಳೂರು ನಗರ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿ ಕೆ.ಎಸ್. ಲತಾಕುಮಾರಿ ತಿಳಿಸಿದರು.

ನಗರದಲ್ಲಿ ಶನಿವಾರ ನಡೆದ ಬಿ.ಆರ್. ಅಂಬೇಡ್ಕರ್ ಅವರ ಪರಿನಿರ್ವಾಣ ದಿನ ಹಾಗೂ ಕರ್ನಾಟಕ ರಾಜ್ಯ ಸರ್ಕಾರಿ ಎಸ್‌.ಸಿ., ಎಸ್‌.ಟಿ. ನೌಕರರ ಸಮನ್ವಯ ಸಮಿತಿಯ ಸಂಸ್ಥಾಪನ ದಿನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಮಹಿಳೆಯರಿಗೆ ಸಮಾನ ಅವಕಾಶಗಳು ದೊರೆಯಬೇಕು ಎಂದು ಮಹಿಳಾ ಸಬಲೀಕರಣದ ಬಗ್ಗೆ ಮೊದಲು ಚಿಂತನೆ ನಡೆಸಿದವರು ಬಿ.ಆರ್. ಅಂಬೇಡ್ಕರ್. ಆದರೆ, ಇಂದಿಗೂ ಲೋಕಸಭೆ, ವಿಧಾನಸಭೆಗಳಲ್ಲೂ ಸಮಾನ ಪ್ರಾತಿನಿಧ್ಯ ಸಿಕ್ಕಿಲ್ಲ. ರಾಜಕೀಯ ವಲಯ ಸೇರಿದಂತೆ ಬಹುತೇಕ ಕ್ಷೇತ್ರಗಳಲ್ಲಿ ಪ್ರಾತಿನಿಧ್ಯದ ಕೊರತೆ ಇದೆ ಎಂದು ವಿಶ್ಲೇಷಿಸಿದರು.

ಸಿಎಂ ಅವರ ವಿಶೇಷ ಕರ್ತವ್ಯ ಅಧಿಕಾರಿ ಕೆ.ಚಿರಂಜೀವಿ, ಬೆಂಗಳೂರು ವಿಶ್ವವಿದ್ಯಾಲಯದ ಕುಲಸಚಿವ ಶೇಖ್ ಲತೀಫ್, ಉಪನ್ಯಾಸಕ ಚಂದ್ರಪ್ಪ, ತಾಂತ್ರಿಕ ಶಿಕ್ಷಣ ಇಲಾಖೆ ಜಂಟಿ ನಿರ್ದೇಶಕ ಕೆ.ಎಂ. ಸುರೇಶ್ ಕುಮಾರ್, ನಿವೃತ್ತ ಎಂಜಿನಿಯರ್ ಗೋವಿಂದರಾಜು ವಿ., ಸರ್ಕಾರಿ ಎಸ್‌.ಸಿ., ಎಸ್‌.ಟಿ. ನೌಕರರ ಸಮನ್ವಯ ಸಮಿತಿಯ ಅಧ್ಯಕ್ಷ ಡಿ. ಶಿವಶಂಕರ್ ಉಪಸ್ಥಿತರಿದ್ದರು.

ಪರಿನಿರ್ವಾಣ ದಿನ: ಸಂಘ, ಸಂಸ್ಥೆಗಳಿಂದ ಗೌರವಾರ್ಪಣೆ

ಬೆಂಗಳೂರು: ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಪರಿನಿರ್ವಾಣಗೊಂಡ ದಿನದ ಸ್ಮರಣೆಯನ್ನು ನಗರದ ವಿವಿಧೆಡೆ ವಿವಿಧ ಸಂಘಟನೆಗಳು, ಸಂಸ್ಥೆಗಳು, ಪಕ್ಷಗಳು ಮಾಡಿದವು.

ಚರ್ಚ್ ಸ್ಟ್ರೀಟ್‌ನಲ್ಲಿ ಮೇಣದ ಬತ್ತಿ ಹಚ್ಚಿ ಮೆರವಣಿಗೆ ನಡೆಸಿ ಗೌರವ ಅರ್ಪಿಸಲಾಯಿತು.

ಬಿಬಿಎಂಪಿ: ಬಿಬಿಎಂಪಿ ಪಾಲಿಕೆ ಕೇಂದ್ರ ಕಚೇರಿಯ ಆವರಣದಲ್ಲಿರುವ ಡಾ. ಬಿ.ಆರ್. ಅಂಬೇಡ್ಕರ್ ಅವರ ಪ್ರತಿಮೆಗೆ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಮಾಲಾರ್ಪಣೆ ಮಾಡಿ ಪುಷ್ಪನಮನ ಅರ್ಪಿಸಿದರು.

ಬಿಬಿಎಂಪಿ ವಿಶೇಷ ಆಯುಕ್ತರಾದ ಮುನೀಶ್ ಮೌದ್ಗಿಲ್, ಕೆ ಹರೀಶ್ ಕುಮಾರ್, ಉಪ ಆಯುಕ್ತ ಮಂಜುನಾಥ ಸ್ವಾಮಿ, ಜಂಟಿ ಆಯುಕ್ತೆ ಲಕ್ಷ್ಮಿದೇವಿ, ವಿವಿಧ ಅಧಿಕಾರಿಗಳು ಉಪಸ್ಥಿತರಿದ್ದರು.

ಎಬಿಎಸ್‌ಪಿ: ಆಲ್ ಇಂಡಿಯಾ ಬಹುಜನ ಸಮಾಜ ಪಾರ್ಟಿ(ಎಬಿಎಸ್‌ಪಿ) ವತಿಯಿಂದ ಅಂಬೇಡ್ಕರ್ ಅವರ 68ನೇ ಪರಿನಿರ್ವಾಣ ಕಾರ್ಯಕ್ರಮವನ್ನು ಕಾನ್ಶಿರಾಮ್ ನಗರದಲ್ಲಿ ಹಮ್ಮಿಕೊಳ್ಳಲಾಯಿತು.

ಎಬಿಎಸ್‌ಪಿ ರಾಷ್ಟ್ರೀಯ ಸಂಯೋಜಕ ಎಂ. ಗೋಪಿನಾಥ್, ರಾಜ್ಯ ಸಂಯೋಜಕ ಆರ್. ಮುನಿಯಪ್ಪ, ರಾಜ್ಯ ಘಟಕದ ಅಧ್ಯಕ್ಷ ಮಾರಸಂದ್ರ ಮುನಿಯಪ್ಪ, ಉಪಾಧ್ಯಕ್ಷರಾದ ಲೋಕೇಶ್‌ಚಂದ್ರ, ಚಂದ್ರಶೇಖರ್, ಪ್ರಧಾನ ಕಾರ್ಯದರ್ಶಿಗಳಾದ ಸತೀಶ್, ಚಿಕಣ್ಣ ಪೂಜಾರಿ, ಉದಯ ಕುಮಾರ್, ಮಣ್ಣೂರು ನಾಗರಾಜ್, ಕಾರ್ಯದರ್ಶಿಗಳಾದ ರಮೇಶ್ ಕತ್ರಿಗುಪ್ಪೆ, ಬೈಲಪ್ಪ ಭಾಗವಹಿಸಿದ್ದರು.

ತಾಂತ್ರಿಕ ಮಹಾವಿದ್ಯಾಲಯ: ಡಾ.ಅಂಬೇಡ್ಕರ್ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಅಂಬೇಡ್ಕರ್ ಅಧ್ಯಯನ ಕೇಂದ್ರವು ‘ದೀಪದೊಂದಿಗೆ ನಮನ’ ಕಾರ್ಯಕ್ರಮ ಹಮ್ಮಿಕೊಳ್ಳುವ ಮೂಲಕ ಅಂಬೇಡ್ಕರ್ ಪರಿನಿರ್ವಾಣ ದಿನದ ಅಂಗವಾಗಿ ಸಂವಿಧಾನ ಶಿಲ್ಪಿಯನ್ನು ಸ್ಮರಿಸಲಾಯಿತು.



ಅಂಬೇಡ್ಕರ್ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಅಂಬೇಡ್ಕರ್ ಅಧ್ಯಯನ ಕೇಂದ್ರವು ‘ದೀಪದೊಂದಿಗೆ ನಮನ’ ಕಾರ್ಯಕ್ರಮ ನಡೆಸಿತು



ಕಾನ್ಶಿರಾಮ್ ನಗರದಲ್ಲಿ ಎಬಿಎಸ್‌ಪಿಯಿಂದ ಅಂಬೇಡ್ಕರ್ ಅವರ 68ನೇ ಪರಿನಿರ್ವಾಣ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು

ವಿದ್ಯಾರ್ಥಿಗಳಿಗೆ ನೋಟ್ ಪುಸ್ತಕ ವಿತರಣೆ

ಯಲಹಂಕ: ಬ್ಯಾಟರಾಯನಪುರ ಕ್ಷೇತ್ರದ ಜಕ್ಕೂರಿನ ಅಂಬೇಡ್ಕರ್ ಸಮುದಾಯ ಭವನ ಟ್ರಸ್ಟ್ ವತಿಯಿಂದ ಬಿ.ಆರ್. ಅಂಬೇಡ್ಕರ್ ಅವರ 68ನೇ ಪರಿನಿರ್ವಾಣ ದಿನ ಆಚರಿಸಲಾಯಿತು.

ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿದ ಟ್ರಸ್ಟ್‌ನ ಪದಾಧಿಕಾರಿಗಳು, ಅಂಬೇಡ್ಕರ್ ಮತ್ತು ಬಿ. ಬಸವಲಿಂಗಪ್ಪ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದರು. ಸರ್ಕಾರಿ ಪಿ.ಯು ಕಾಲೇಜಿನ 200 ವಿದ್ಯಾರ್ಥಿಗಳಿಗೆ ನೋಟ್‌ಪುಸ್ತಕ ವಿತರಿಸಲಾಯಿತು.

ಟ್ರಸ್ಟ್ ಅಧ್ಯಕ್ಷ ರವಿಕುಮಾರ್ ಮಾತನಾಡಿ, ‘ಅಂಬೇಡ್ಕರ್ ಅವರ ತತ್ವ, ಸಿದ್ಧಾಂತ ಹಾಗೂ ವಿಚಾರಧಾರೆಗಳನ್ನು ವಿದ್ಯಾರ್ಥಿಗಳು ತಮ್ಮ ನಿತ್ಯಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಎಂಜಿನಿಯರಿಂಗ್, ವೈದ್ಯಕೀಯ ಶಿಕ್ಷಣ ಪಡೆಯುವುದಕ್ಕಷ್ಟೇ ಸೀಮಿತರಾಗದೆ ಐಎಎಸ್, ಐಪಿಎಸ್‌ನಂತಹ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ, ಉನ್ನತ ಹುದ್ದೆಗಳನ್ನು ಅಲಂಕರಿಸುವ ಗುರಿಯನ್ನು ಇಟ್ಟುಕೊಂಡು ಅದಕ್ಕೆ ಪೂರಕವಾಗಿ ಸಿದ್ಧರಾಗಬೇಕು’ ಎಂದರು.

ಸರ್ಕಾರದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಬ್ಯಾಟರಾಯನಪುರ ಕ್ಷೇತ್ರದ ಅಧ್ಯಕ್ಷ ಎಚ್‌.ಎ.ಶಿವಕುಮಾರ್, ಜಕ್ಕೂರು ಸರ್ಕಾರಿ ಪಿ.ಯು ಕಾಲೇಜಿನ ಪ್ರಾಂಶುಪಾಲ ಆನಂದಮೂರ್ತಿ, ಟ್ರಸ್ಟ್ ಪದಾಧಿಕಾರಿಗಳಾದ ನಾಗರಾಜಪ್ಪ, ವಿನೋದ್ ಕುಮಾರ್, ಯಶೋದಾ ಸುಮಿತ್ರಮ್ಮ, ನಿರ್ಮಲ, ಜಕ್ಕೂರು ಕೃಷ್ಣಪ್ಪ, ಆಂಜಿನಪ್ಪ, ಇ.ಕೃಷ್ಣಪ್ಪ, ವೆಂಕಟೇಶ್ ಉಪಸ್ಥಿತರಿದ್ದರು.



ಬ್ಯಾಟರಾಯನಪುರ ಸರ್ಕಾರಿ ಪಿ.ಯು ಕಾಲೇಜಿನ ವಿದ್ಯಾರ್ಥಿಗಳಿಗೆ ನೋಟ್‌ಪುಸ್ತಕ ವಿತರಿಸಲಾಯಿತು

ಬಿಜೆಪಿ ಕಾರ್ಯಾಲಯದಲ್ಲಿ ಅಂಬೇಡ್ಕರ್‌ಗೆ ನಮನ

‘ಸಂವಿಧಾನ ಶಿಲ್ಪಿ, ಸಮ ಸಮಾಜದ ನಿರ್ಮಾಣದ ಕನಸು ಕಂಡಿದ್ದ ಅಂಬೇಡ್ಕರ್ ಅವರ ಚಿಂತನೆಗಳನ್ನು ನನಸು ಮಾಡುವ ಏಕೈಕ ನಾಯಕ ಪ್ರಧಾನಿ ನರೇಂದ್ರ ಮೋದಿ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ತಿಳಿಸಿದರು.

ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಶುಕ್ರವಾರ ಬಾಬಾಸಾಹೇಬರ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿ ಅವರು ಮಾತನಾಡಿದರು.

‘ಅಂಬೇಡ್ಕರ್ ಅವರ ಆಶಯಗಳನ್ನು ಜನರ ಮಧ್ಯೆ ತೆಗೆದುಕೊಂಡು ಹೋಗುವ ಪ್ರಾಮಾಣಿಕ ಕಳಕಳಿ ಇರುವುದು ಬಿಜೆಪಿಗೆ ಮಾತ್ರ. ಅಂಬೇಡ್ಕರರ ಆಶಯಕ್ಕೆ ಮಸಿ ಬಳಿದವರು ಕಾಂಗ್ರೆಸ್ಸಿಗರು’ ಎಂದು ಆರೋಪಿಸಿದರು.

ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಮಾತನಾಡಿ, ‘ಅಂಬೇಡ್ಕರ್ ಇರುವಾಗ ಸಹಿಸದ ಕಾಂಗ್ರೆಸ್, ಇವತ್ತು ಅವರ ಫೋಟೊ ಇಟ್ಟು ಭಾಷಣ ಮಾಡುತ್ತಿದೆ. ತಾವೇ ಸಂವಿಧಾನ ರಕ್ಷಕರೆಂದು ಅದರ ನಾಯಕರು ಹೇಳುತ್ತಿದ್ದಾರೆ’ ಎಂದರು.



ಅಂಬೇಡ್ಕರ್ ಮಹಾನಿರ್ವಾಣ ದಿನದ ಅಂಗವಾಗಿ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ನಲ್ಲೂರಹಳ್ಳಿ ನಾಗೇಶ್ ಅವರು ಶಾಲಾ ಮಕ್ಕಳಿಗೆ ಅನ್ನ ಸಂತರ್ಪಣೆ ಮಾಡಿದರು

ಶಾಲಾ ಮಕ್ಕಳಿಗೆ ಅನ್ನ ಸಂತರ್ಪಣೆ

ಕೆ.ಆರ್.ಪುರ: ‘ಅಂಬೇಡ್ಕರ್ ಎಂದರೆ ಬರೀ ವ್ಯಕ್ತಿಯಲ್ಲ, ಅವರು ಮಹಾನ್ ಶಕ್ತಿ. ಧ್ಯೇಯ, ತತ್ವವೇ ಅಂಬೇಡ್ಕರ್’ ಎಂದು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ನಲ್ಲೂರಹಳ್ಳಿ ನಾಗೇಶ್ ಹೇಳಿದರು.

ಕೆ.ಆರ್.ಪುರ ಸಮೀಪದ ನಲ್ಲೂರಹಳ್ಳಿಯಲ್ಲಿ ಆಯೋಜಿಸಿದ್ದ ಅಂಬೇಡ್ಕರ್ ಅವರ 68ನೇ ಪರಿನಿರ್ವಾಣ ದಿನದ ಅಂಗವಾಗಿ, ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಮಾತನಾಡಿದರು.

‘ಅಂಬೇಡ್ಕರ್ ಅವರನ್ನು ಕೇವಲ ಶೋಷಿತ ವರ್ಗದ ನಾಯಕರು ಎಂದು ಭಾವಿಸುವಂತಿಲ್ಲ. ಅವರು ಸಮಾಜದ ಎಲ್ಲ ವರ್ಗಗಳ ನಾಯಕರಾಗಿದ್ದಾರೆ. ಅಂಬೇಡ್ಕರ್ ಅವರು ಸಂಘರ್ಷದ ಹಾದಿ ತುಳಿಯದೆ ಸಾಮರಸ್ಯದ ಮೂಲಕ ಸಮಾಜವು ಒಗ್ಗೂಡುವಂತೆ ಮಾಡಿದ್ದಾರೆ’ ಎಂದರು.

ಸ್ಥಳೀಯ ಮುಖಂಡರಾದ ಚಂದ್ರಶೇಖರ್ ರೆಡ್ಡಿ, ಗೋವಿಂದರಾಜ್, ಎಲ್. ಹರಿಶ್ ರೆಡ್ಡಿ, ಕೆ. ನಾಗರಾಜ್, ಸಿ.ಎಮ್.ಚಂದ್ರಶೇಖರ, ಡಿ.ನಾಗರಾಜ್, ಪಿ. ಶ್ರೀನಿವಾಸ್ ಸಂದಿಪ್, ಎಮ್. ಪಿ. ಶ್ರೀನಿವಾಸ್, ನಂದಿಶ್, ಪ್ರಸನ್ನ ಹಾಜರಿದ್ದರು.

ಕಾವೇರಿ ಸಂಪರ್ಕ ಅಭಿಯಾನದ ಪ್ರಗತಿ ಪರಿಶೀಲನೆ

ಅವಲಹಳ್ಳಿ, ಹೊಸಹಳ್ಳಿ ಗ್ರಾಮಕ್ಕೆ ಭೇಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 110 ಹಳ್ಳಿಗಳ ವ್ಯಾಪ್ತಿಯಲ್ಲಿ ಕಾವೇರಿ ಕುಡಿಯುವ ನೀರಿನ ಹೊಸ ಸಂಪರ್ಕ ಪಡೆಯಲು ಅರ್ಜಿ ಸಲ್ಲಿಸಿದ ಗ್ರಾಹಕರಿಗೆ ಸ್ಥಳದಲ್ಲೇ ಅರ್ಜಿಯನ್ನು ವಿಲೇವಾರಿ ಮಾಡಿ ಸಂಪರ್ಕ ಮಂಜೂರು ಮಾಡುವಂತೆ ಜಲಮಂಡಳಿ ಅಧ್ಯಕ್ಷ ರಾಮ್ ಪ್ರಸಾತ್ ಮನೋ ಹರ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಅವಲಹಳ್ಳಿ, ಟಿಪ್ಪು ವೃತ್ತ ಹಾಗೂ ಹೊಸಹಳ್ಳಿ ಗ್ರಾಮಕ್ಕೆ ಭೇಟಿ ನೀಡಿ ಕಾವೇರಿ ಸಂಪರ್ಕ ಅಭಿಯಾನದ ಪ್ರಗತಿ ಪರಿಶೀಲಿಸಿದರು. ಮನೆ ಮನೆಗೂ ಕಾವೇರಿ ಕುಡಿಯುವ ನೀರು ಸಂಪರ್ಕ ಅಭಿಯಾನದ ಮೂಲಕ ಈಗಾಗಲೇ ಸುಮಾರು 5 ಸಾವಿರದಷ್ಟು ಹೊಸ ಸಂಪರ್ಕಕ್ಕೆ ಅರ್ಜಿಗಳನ್ನು ಸಲ್ಲಿಸಲಾಗಿದೆ. ಅರ್ಜಿ ಸಲ್ಲಿಸುವ ಅರ್ಹ ಗ್ರಾಹಕರಿಂದ ನಿಗದಿತ ಶುಲ್ಕವನ್ನು ಪಾವತಿಸಿಕೊಂಡು ಸ್ಥಳದಲ್ಲೇ ಸಂಪರ್ಕ ಮಂಜೂರು ಮಾಡಬೇಕು. ಹಾಗೆಯೇ, ನೀರು ಸರಬರಾಜು ಪ್ರಾರಂಭಿಸಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸಂಪರ್ಕ ಪಡೆಯುವ ನಿಟ್ಟಿನಲ್ಲಿ ಗ್ರಾಹಕರ ಮನಸ್ಸಿನಲ್ಲಿ ಇರಬಹುದಾದ ಸಂಶಯಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಸಿಬ್ಬಂದಿ ಮುಂದಾಗಬೇಕು. ಅರ್ಜಿ ಸಲ್ಲಿಸಿದವರಿಗೆ ಯಾವುದೇ ಸಮಸ್ಯೆಗಳು ಎದುರಾದರೂ ಅವುಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕು. ಕಾವೇರಿ 5ನೇ ಹಂತದ ನೀರು ಸರಬರಾಜಿಗೆ ಚಾಲನೆ ನೀಡಿರುವುದರಿಂದ 110 ಹಳ್ಳಿಗಳಿಗೆ ಅಗತ್ಯವಿರುವಷ್ಟು ನೀರು ಲಭ್ಯವಿದೆ. ಇದನ್ನ ಸರಬರಾಜು ಮಾಡಲು ಜಲಮಂಡಳಿ ಸಿದ್ಧವಿದೆ ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಹೇಳಿದರು.



ಅವಲಹಳ್ಳಿ, ಟಿಪ್ಪು ವೃತ್ತ ಹಾಗೂ ಹೊಸಹಳ್ಳಿ ಗ್ರಾಮಕ್ಕೆ ಜಲಮಂಡಳಿ ಅಧ್ಯಕ್ಷ ರಾಮ್ ಪ್ರಸಾತ್ ಮನೋಹರ್ ಹಾಗೂ ಅಧಿಕಾರಿಗಳು ಭೇಟಿ ನೀಡಿ, ಕಾವೇರಿ ಸಂಪರ್ಕ ಅಭಿಯಾನದ ಪ್ರಗತಿ ಪರಿಶೀಲಿಸಿದರು.

ವಿದ್ಯುತ್ ವ್ಯತ್ಯಯ

ಬೆಂಗಳೂರು: ಎನ್‌ಜಿಇಎಫ್ ಸ್ಟೇಷನ್‌ನಲ್ಲಿ ತುರ್ತು ನಿರ್ವಹಣಾ ಕಾಮಗಾರಿ ಇರುವು ದರಿಂದ ಶನಿವಾರ ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ಈ ವ್ಯಾಪ್ತಿಯಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ಸ್ಥಳಗಳು: ಎಸ್‌ಎಂವಿಬಿ ರೈಲು ನಿಲ್ದಾಣ, ಇಂದಿರಾನಗರ 1ನೇ ಹಂತ, 2ನೇ ಹಂತ, ಎಚ್‌ಎಎಲ್ 2ನೇ ಹಂತ, ಹಲಸೂರು, ಹಳೆ ಮದ್ರಾಸ್ ರಸ್ತೆ, ಬೆನ್ನಿಗಾನಹಳ್ಳಿ, ‘ಎ’ ನಾರಾಯಣಪುರ, ‘ಬಿ’ ನಾರಾಯಣಪುರ, ಕಗ್ಗದಾಸಪುರ, ಆಕಾಶನಗರ, ಪೈ ಲೇಔಟ್, ಬೈರಸಂದ್ರ, ಸಿ.ವಿ. ರಾಮನ್ ನಗರ, ಎನ್‌ಜಿಇಎಫ್ ಲೇಔಟ್, ಸದಾನಂದನಗರ, ಕಸ್ತೂರಿ ನಗರ, ಭುವನೇಶ್ವರಿ ನಗರ, ಹೊಯ್ಸಳ ನಗರ, ಮುನೇಶ್ವರನಗರ, ಬಿಡಿಎ ಲೇಔಟ್, ಮುನಿನಂಜಪ್ಪ ಲೇಔಟ್, ದಯಾನಂದ ಲೇಔಟ್, ಅಬ್ಬಯ್ಯ ರೆಡ್ಡಿ ಲೇಔಟ್, ನಾಗಪ್ಪ ರೆಡ್ಡಿ ಲೇಔಟ್, ನಾಗವಾರಪಾಳ್ಯ, ಕೆ.ಆರ್. ರಸ್ತೆ. ಕೇಂಬ್ರಿಡ್ಜ್ ಲೇಔಟ್, ಕಾರ್ ಸ್ಟ್ರೀಟ್, ಬಜಾರ್ ಸ್ಟ್ರೀಟ್, ಸಿ.ಎಂ.ಎಚ್ ರಸ್ತೆ, ಕೃಷ್ಣ ದೇವಸ್ಥಾನ ರಸ್ತೆ, ಡಿಫೆನ್ಸ್ ಕಾಲೊನಿ, ನ್ಯೂ ಬೈಯಪ್ಪನಹಳ್ಳಿ, ಮೈಚಪಾಳ್ಯ, ಕದಿರೆ ರಸ್ತೆ ಬಿಡಿಎ ಕಾಂಪ್ಲೆಕ್ಸ್, ಇಂದಿರಾನಗರ ಕ್ಲಬ್, ದೂಪನಹಳ್ಳಿ, 100 ಅಡಿ ರಸ್ತೆ, ಇಎಸ್‌ಐ ಮತ್ತು ಸುತ್ತಮುತ್ತಲಿನ ಪ್ರದೇಶ.

ಸರ್ಜಾಪುರ– ಹೆಬ್ಬಾಳ: ಮೆಟ್ರೊ ಹಂತ–3 ಕ್ಕೆ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಮೆಟ್ರೊ ರೈಲು ಯೋಜನೆಯ ಹಂತ–3 ರ ಸರ್ಜಾಪುರ– ಹೆಬ್ಬಾಳದವರೆಗೆ 36.59 ಕಿ.ಮೀ ಉದ್ದದ ಮಾರ್ಗದ ಕಾಮಗಾರಿಗೆ ಶುಕ್ರವಾರ ನಡೆದ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಕಾನೂನು ಸಚಿವ ಎಚ್‌.ಕೆ.ಪಾಟೀಲ ಅವರು ಸಂಪುಟ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು. ಈ ಮಾರ್ಗದಲ್ಲಿ 17 ಮೆಟ್ರೊ ನಿಲ್ದಾಣಗಳು, 22.14 ಕಿ.ಮೀಗಳ ಎತ್ತರಿಸಿದ ಮಾರ್ಗ ಮತ್ತು 11 ನಿಲ್ದಾಣಗಳನ್ನೊಳಗೊಂಡ 14.45 ಕಿ.ಮೀ ಸುರಂಗ ಮಾರ್ಗಗಳನ್ನು ಒಳಗೊಂಡಿದೆ. ₹28,405 ಕೋಟಿ ಅಂದಾಜು ವೆಚ್ಚದಲ್ಲಿ ಯೋಜನೆ ಅನುಷ್ಠಾನಗೊಳಿಸಲಾಗುವುದು ಎಂದರು.

ಕೇಂದ್ರ ಸರ್ಕಾರದ ಸಾಲ, ದ್ವಿಪಕ್ಷೀಯ ಮತ್ತು ಬಹುಪಕ್ಷೀಯ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆಯಲು ಕೇಂದ್ರ ಸರ್ಕಾರದಿಂದ ಅನುಮೋದನೆ ಪಡೆದ ನಂತರ ಸಿವಿಲ್ ಕಾಮಗಾರಿ ಆರಂಭಿಸಲು ಒಪ್ಪಿಗೆ ನೀಡಲಾಯಿತು ಎಂದು ಹೇಳಿದರು.

ವಸತಿ ಸಮುಚ್ಚಯಕ್ಕೆ ಅನುಮೋದನೆ: ಬೆಂಗಳೂರು ನಗರ ಜಿಲ್ಲೆ, ಬಿದರಹಳ್ಳಿ ಹೋಬಳಿ, ಹುಸ್ಕೂರು ಗ್ರಾಮದಲ್ಲಿ ಕರ್ನಾಟಕ ಗೃಹ ಮಂಡಳಿ ಬಡಾವಣೆ ಪ್ಲಾಟ್ ಸಂಖ್ಯೆ 1 ರ 2.06 ಎಕರೆ ವಿಸ್ತೀರ್ಣದಲ್ಲಿ ₹64.78 ಕೋಟಿ ವೆಚ್ಚದಲ್ಲಿ ಖಾಸಗಿ ಸಹಭಾಗಿತ್ವದಲ್ಲಿ ಬಹುಮಹಡಿ ವಸತಿ ಸಮುಚ್ಚಯ ಯೋಜನೆಯನ್ನು ಕೈಗೊಳ್ಳಲು ಸಂಪುಟ ಒಪ್ಪಿಗೆ ನೀಡಿದೆ.

ಬಿಬಿಎಂಪಿ ರಸ್ತೆಗಳ ಸುಧಾರಣೆಗೆ ಅಸ್ತು: ಬಿಬಿಎಂಪಿ ವ್ಯಾಪ್ತಿಯಲ್ಲಿರುವ 1611.49 ಕಿ.ಮೀ ಉದ್ದದ ಮುಖ್ಯ ಮತ್ತು ಉಪಮುಖ್ಯ ರಸ್ತೆಗಳ ದುರಸ್ಥಿಗೆ ₹649 ಕೋಟಿಯ ಕ್ರಿಯಾ ಯೋಜನೆಗೆ ಘಟನೋತ್ತರ ಅನುಮೋದನೆ ನೀಡಲಾಗಿದೆ.

ಠೇವಣಿದಾರರ ಹಿತಾಸಕ್ತಿ ಮಸೂದೆಗೆ ತಿದ್ದುಪಡಿ: ಸಾರ್ವಜನಿಕರನ್ನು ವಂಚಿಸುವ ಹಣಕಾಸು ಸಂಸ್ಥೆಗಳ ಆಸ್ತಿಗಳನ್ನು ಮುಟ್ಟಗೋಲು ಹಾಕಿ ಹರಾಜು ಮೂಲಕ ಅವುಗಳನ್ನು ಮಾರಾಟ ಮಾಡಿ, ಅದರಿಂದ ಬಂದ ಹಣವನ್ನು ಭಾದಿತ ಠೇವಣಿದಾರರಿಗೆ ಹಂಚಿಕೆ ಮಾಡುವ ಕಾಯ್ದೆಗೆ ಇನ್ನಷ್ಟು ತಿದ್ದುಪಡಿಗಳನ್ನು ಮಾಡಲು ಸಂಪುಟ ಒಪ್ಪಿಗೆ ನೀಡಿದೆ.

ಬ್ಯಾಸ್ಕೆಟ್‌ಬಾಲ್: ಫೈನಲ್‌ಗೆ ಕೆಎಸ್‌ಪಿ, ಎಂಇಜಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಎಸ್‌ಪಿ ಮತ್ತು ಎಂಇಜಿ ಅಂಡ್ ಸೆಂಟರ್ ತಂಡಗಳು ರಾಜ್ಯ ಅಸೋಸಿಯೇಷನ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನ ಪುರುಷರ ವಿಭಾಗದಲ್ಲಿ ಫೈನಲ್ ಪ್ರವೇಶಿಸಿದವು.

ಕಂಠೀರವ ಕ್ರೀಡಾಂಗಣದ ಬ್ಯಾಸ್ಕೆಟ್‌ಬಾಲ್ ಅಂಗಣದಲ್ಲಿ ಶುಕ್ರವಾರ ನಡೆದ ಸೆಮಿಫೈನಲ್ ಲೀಗ್‌ನ ಪಂದ್ಯದಲ್ಲಿ ಎಂಇಜಿ ಅಂಡ್ ಸೆಂಟರ್ ತಂಡವು 73–60ರಿಂದ ದಕ್ಷಿಣ ಕನ್ನಡ ಜಿಲ್ಲಾ ತಂಡವನ್ನು ಮಣಿಸಿತು. ಮತ್ತೊಂದು ಪಂದ್ಯದಲ್ಲಿ ಕೆಎಸ್‌ಪಿ ತಂಡವು 73–57ರಿಂದ ಜೆಎಸ್‌ಸಿ ತಂಡವನ್ನು ಸೋಲಿಸಿತು.

ಮಹಿಳೆಯರ ವಿಭಾಗದಲ್ಲಿ ಮೈಸೂರು ಜಿಲ್ಲಾ ತಂಡ 82–70ರಿಂದ ಬೀಗಲ್ಸ್ ಬಿ.ಸಿ ತಂಡವನ್ನು; ಎಸ್. ಡಬ್ಲ್ಯು.ರೈಲ್ವೆ ತಂಡವು 69–32ರಿಂದ ಯಂಗ್ ಓರಿಯನ್ಸ್ ತಂಡವನ್ನು ಸೋಲಿಸಿ ಫೈನಲ್‌ಗೆ ತಲುಪಿದವು.

ನಗರದಲ್ಲಿ ಇಂದು

‘ನಿಸರ್ಗ ವೈಭವ ಮತ್ತು ವಿಸ್ಮಯ’ ವನ್ಯಜೀವಿ ಛಾಯಾಚಿತ್ರ ಪ್ರದರ್ಶನ: ಅತಿಥಿಗಳು: ಬಿ.ಪಿ. ರವಿ, ಸಿ.ಆರ್. ಸತ್ಯನಾರಾಯಣ, ದಿನೇಶ್ ಕುಂಬ್ಳೆ, ಸನ್ಮಾನ: ತಿಪ್ಪೆಸ್ವಾಮಿ, ಸಿ. ಆರ್. ಸತ್ಯನಾರಾಯಣ, ಜಿ.ಎಸ್. ಕೃಷ್ಣಮೂರ್ತಿ, ಅಲ್ಲಮಪ್ರಭು, ರಾಜಾರಾಮ್, ಸೂರ್ಯಪ್ರಕಾಶ್, ಶ್ರೀನಿವಾಸ್, ಎಚ್. ಸತೀಶ್, ಕೆ.ಎಸ್. ಶ್ರೀನಿವಾಸ್, ಎಂ.ಎನ್ ಜಯಕುಮಾರ್, ಸ್ಥಳ: ದೇವರಾಜ್ ಅರಸ್ ಗ್ಯಾಲರಿ, ಚಿತ್ರಕಲಾ ಪರಿಷತ್, ಕುಮಾರಕೃಪ ರಸ್ತೆ, ಶಿವಾನಂದ ವೃತ್ತದ ಬಳಿ, ಬೆಳಿಗ್ಗೆ 11

ಬೆಂಗಳೂರು ಪಾರ್ಥಸಾರಥಿ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಮೆಂಟ್: ಉದ್ಘಾಟನೆ: ಆರ್. ವಿ.ದೇಶಪಾಂಡೆ, ಆಯೋಜನೆ: ಜಿಎಸ್‌ಬಿ ಸ್ಪೋರ್ಟ್ಸ್ ಅಸೋಸಿಯೇಷನ್, ಸ್ಥಳ: ಪಶುವೈದ್ಯಕೀಯ ಕಾಲೇಜು ಮೈದಾನ, ಹೆಬ್ಬಾಳ, ಬೆಳಗ್ಗೆ 8.15

ಮೆಗಾ ಆರೋಗ್ಯ ಶಿಬಿರ: ಅತಿಥಿಗಳು: ಎಂ.ಕೃಷ್ಣಪ್ಪ, ರಮ್ಯಾ, ಆಯೋಜನೆ: ರೋಟರಿ ಬೆಂಗಳೂರು, ರಾಮಯ್ಯ ಆಸ್ಪತ್ರೆ, ಸ್ಥಳ: ನಮ್ಮ ಕ್ಲಿನಿಕ್, ಕೋಣನಕುಂಟೆ ವಾರ್ಡ್ 221, ಅಂಜನಾಪುರ, ವೈಷ್ಣವಿ ಓಯಸಿಸ್ ಅಪಾರ್ಟ್‌ಮೆಂಟ್ ಹತ್ತಿರ, ಬೆಳಿಗ್ಗೆ 9

ಸಾಹಿತ್ಯ ಉತ್ಸವ: ಅತಿಥಿ: ಎಸ್. ಸಂದೀಪ್ ಪೈ, ಆಯೋಜನೆ ಮತ್ತು ಸ್ಥಳ:ಜೈನ್ ಪಬ್ಲಿಕ್ ಸ್ಕೂಲ್, ಬೆಳಿಗ್ಗೆ 9

‘ಗ್ರೀನ್ ಲಿಟ್‌ರೇಚರ್ ಫೆಸ್ಟಿವಲ್’: ಅತಿಥಿ: ಸುರೇಶ್ ಹೆಬ್ಳೀಕರ್, ಆಯೋಜನೆ: ಗ್ರೀನ್‌ಲಿಟ್‌ಫೆಸ್ಟ್, ಸ್ಥಳ: ಸೆಂಚುರಿ ಕ್ಲಬ್, ಕಬ್ಬನ್ ಉದ್ಯಾನ, ಬೆಳಿಗ್ಗೆ 9.30

ಜರ್ನಲಿಸಂ @ ಡಿಜಿಟಲ್ ಕ್ರಾಸ್‌ರೋಡ್ಸ್: ಕಾನೂನು, ತಾಂತ್ರಿಕತೆ ಮತ್ತು ನೈತಿಕ ಸವಾಲುಗಳ ಕುರಿತ ಕಾರ್ಯಕ್ರಮ: ಅತಿಥಿಗಳು: ಕೃಷ್ಣ ಬೈರೇಗೌಡ, ರಾಜ್ ಚೆಂಗಪ್ಪ, ಸುಧೀರ್ ಕೃಷ್ಣಸ್ವಾಮಿ, ಆಯೋಜನೆ: ಎಡಿಟರ್ಸ್ ಗಿಲ್ಡ್ ಆಫ್ ಇಂಡಿಯಾ, ಸ್ಕೂಲ್ ಆಫ್ ಕಮ್ಯುನಿಕೇಷನ್ ಮತ್ತು ಮೀಡಿಯಾ ಸ್ಟಡೀಸ್, ಸೇಂಟ್ ಜೋಸೆಫ್ ವಿಶ್ವವಿದ್ಯಾಲಯ, ಸ್ಥಳ: ಸೇಂಟ್ ಜೋಸೆಫ್ ವಿಶ್ವವಿದ್ಯಾಲಯ, 36 ಲಾಲ್‌ಬಾಗ್ ರಸ್ತೆ, ಬೆಳಗ್ಗೆ 10

‘ಮೈ ಫಾರೆಸ್ಟ್’ ನಿಯತಕಾಲಿಕೆಯ ವಜ್ರ ಮಹೋತ್ಸವ ವಿಶೇಷ ಸಂಚಿಕೆ ಬಿಡುಗಡೆ ಮತ್ತು ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಗಳಿಗೆ ಸನ್ಮಾನ: ಈಶ್ವರ ಖಂಡ್ರೆ, ಅಂಜುಂ ಪರ್ವೇಜ್, ಅಧ್ಯಕ್ಷತೆ: ಬಿ.ಕೆ. ದೀಕ್ಷಿತ್, ಆಯೋಜನೆ: ಅರಣ್ಯ ಇಲಾಖೆ, ಸ್ಥಳ: ಅರಣ್ಯ ಭವನ, ಮಲ್ಲೇಶ್ವರ, ಬೆಳಿಗ್ಗೆ 10.30

ಜಾನಪದ ಮತ್ತು ಬುಡಕಟ್ಟು ಕಲಾವಿದರೊಂದಿಗೆ ಸಾಂಸ್ಕೃತಿಕ ಉತ್ಸವ ಕುರಿತ ವಿಚಾರ ಗೋಷ್ಠಿ: ಉದ್ಘಾಟನೆ: ಎಚ್‌.ಸಿ. ಬೋರಲಿಂಗಯ್ಯ, ಅತಿಥಿಗಳು: ಕ್ಯಾಪ್ಟನ್ ಶಾಂತಿ, ಗೊಲ್ಲಹಳ್ಳಿ ಶಿವಪ್ರಸಾದ್, ಆಯೋಜನೆ: ಭಾರತೀಯ ವಿದ್ಯಾಭವನ, ಇನ್ಫೊಸಿಸ್ ಪ್ರತಿಷ್ಠಾನ, ಸ್ಥಳ: ಕೆ.ಆರ್.ಜಿ. ಸಭಾಂಗಣ, ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಬೆಳಿಗ್ಗೆ 10.30

200ನೇ ವ್ಯಂಗ್ಯಚಿತ್ರ ಪ್ರದರ್ಶನ ಹಾಗೂ ನಿಯತಕಾಲಿಕೆ ಬಿಡುಗಡೆ: ಮುಖ್ಯ ಅತಿಥಿಗಳು: ಮೃಣಾಲ್ ಚಟರ್ಜಿ, ಅಮರನಾಥ್ ಕಾಮತ್, ಸುನಿತ ಮುನಗಪತಿ, ಆಯೋಜನೆ: ಭಾರತೀಯ ವ್ಯಂಗ್ಯಚಿತ್ರಕಾರರ ಸಂಸ್ಥೆ, ಸ್ಥಳ: ಭಾರತೀಯ ವ್ಯಂಗ್ಯಚಿತ್ರ ಗ್ಯಾಲರಿ, ಎಂ.ಜಿ. ರಸ್ತೆ, ಬೆಳಿಗ್ಗೆ 11

9ನೇ ಘಟಿಕೋತ್ಸವ: ಅತಿಥಿಗಳು: ರಶ್ಮಿಕಾಂತ್ ಜೋಶಿ, ಪ್ರೊ. ಡಿ.ಜವಹರ್, ಡಾ.ಜೆ.ಸೂರ್ಯಪ್ರಸಾದ್, ಅಧ್ಯಕ್ಷತೆ: ಎಂ.ಆರ್.ದೊರೆಸ್ವಾಮಿ, ಆಯೋಜನೆ:ಪಿಇಎಸ್ ವಿಶ್ವವಿದ್ಯಾಲಯ, ಸ್ಥಳ: ಒಪೆರಾ ಹೌಸ್, ಜಿಜೆಬಿಸಿ, ಸುವರ್ಣ ಮಹೋತ್ಸವ ಕಟ್ಟಡ, ಪಿಇಎಸ್ ವಿಶ್ವವಿದ್ಯಾಲಯ, ಸಂಜೆ 4

ಯುವ ಸಂಭ್ರಮ, ಸಂಗೀತ ಮತ್ತು ಸನ್ಮಾನ: ಶಾಸ್ತ್ರೀಯ ಸಂಗೀತ: ಸಂಜಯ್ ನಾಗ್ ಮತ್ತು ಸಂಗಡಿಗರು, ಅನನ್ಯ-ನಾದಜ್ಯೋತಿ ಕಲಾ ಪ್ರತಿಭಾ ಪುರಸ್ಕಾರ: ಅದಿತಿ ಪ್ರಹ್ಲಾದ್, ಸಂಜಯ್ ನಾಗ್, ಮುಖ್ಯ ಅತಿಥಿಗಳು: ಎಸ್. ಮುರಳೀಧರನ್ ಆಯೋಜನೆ: ನಾದ ಜ್ಯೋತಿ ಸಂಗೀತ ಸಭಾ ಟ್ರಸ್ಟ್, ಸ್ಥಳ: ಅನನ್ಯ ಸಭಾಂಗಣ, ಮಲ್ಲೇಶ್ವರ, ಸಂಜೆ 5

‘ನೃತ್ಯಾರಾಧನಾ’ – ಕುಮಾರಿ ದಿವ್ಯಾ ಶಂಕರ್ ಅವರಿಂದ ಭರತನಾಟ್ಯ ರಂಗಪ್ರವೇಶ: ಅತಿಥಿಗಳು: ರುಕ್ಮಾಂಗದ ಬಾಬು, ಶಿಂಗಾರ್ ಮಣಿ ದೇಬಾಸಿಸ್ ಪಟ್ನಾಯಕ್, ಟಿ.ಜಿ. ನರಸಿಂಹ ಮೂರ್ತಿ, ಜೆ.ಭುವನೇಶ್ವರಿ, ದೀಪ್ತಿ ಅಭಿಲಾಶ, ಸ್ಥಳ: ಜೆಎಸ್‌ಎಸ್ ಸಭಾಂಗಣ, ಸಂಜೆ 5

ಊಂಜಲ್ ಸಂಗೀತೋತ್ಸವ: ಗಾಯನ: ವಾಣಿಶ್ರೀ ರಾಮಕೃಷ್ಣ, ಪಿಟೀಲು: ಎಸ್. ಶಶಿಧರ್, ಮೃದಂಗ: ಶ್ರೀನಿವಾಸ್ ಅನಂತರಾಮಯ್ಯ, ಆಯೋಜನೆ: ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂ ಧರ್ಮ ಪ್ರಚಾರ ಪರಿಷತ್, ಸ್ಥಳ: ವೆಂಕಟೇಶ್ವರ ಸ್ವಾಮಿ ದೇವಸ್ಥಾನ (ಟಿಟಿಡಿ), 16ನೇ ಅಡ್ಡರಸ್ತೆ, ವೈಯಾಲಿಕಾವಲ್, ಸಂಜೆ 6

ವಿಶ್ವ ಮಣ್ಣು ದಿನ–2024: ಅತಿಥಿಗಳು: ಲೆಬೋಹಾಂಗ್ ವ್ಯಾಲೆಂಟೈನ್ ಮೊಚಬಾ, ಆಯೋಜನೆ: ಭಾರತ ಆಫ್ರಿಕಾ ಟ್ರೇಡ್ ಕೌನ್ಸಿಲ್, ಸ್ಥಳ: ಡರ್ಬಿ ಹಾಲ್, ಹೋಟೆಲ್ ರೆನೈಸೆನ್ಸ್, ರೇಸ್ ಕೋರ್ಸ್ ರಸ್ತೆ, ಸಂಜೆ 6.30

‘ಕ್ರಾಂತಿ ಬಂತು #ಕ್ರಾಂತಿ’ ನಾಟಕ ಪ್ರದರ್ಶನ: ನಾಟಕಕಾರ: ಪಿ. ಲಂಕೇಶ್, ನಿರ್ದೇಶನ: ಅಭಿಷೇಕ ಚಕ್ರಣ್ಣವರ, ಆಯೋಜನೆ: ಕಲಾವಿಲಾಸಿ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7.30

ಕುಡೇರಿ ಕೃಷ್ಣ ಕನ್ನಂತರ ಸವಿನೆನಪಲ್ಲಿ ತಿತ್ತಿತ್ತೈ: ‘ಮೀನಾಕ್ಷಿ ಕಲ್ಯಾಣ’ ಯಕ್ಷಗಾನ ಪ್ರದರ್ಶನ, ಬೆಂಗಳೂರು ಯಕ್ಷ ತಂಡಗಳ ಸ್ನೇಹ ಕೂಟ, ಯಕ್ಷ ಗುರುಗಳ ಸಮ್ಮಿಲನ, ಆಯೋಜನೆ: ಕಲಾ ಕದಂಬ, ಯಕ್ಷೇಶ್ವರಿ ಯಕ್ಷಗಾನ, ಕರಬ ಪ್ರತಿಷ್ಠಾನ, ಯಕ್ಷ ಫೌಂಡೇಷನ್, ಯಕ್ಷಶ್ರೀ ಕಲಾವೃಂದ, ನಿರ್ಮಾಣ ಯಕ್ಷ ಬಳಗ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ರಾತ್ರಿ 8.55

ವಿಪ್ರೋತ್ಸವ: ಉದ್ಘಾಟನೆ: ಆರ್. ವಿ. ದೇಶಪಾಂಡೆ, ದಿನೇಶ್ ಗುಂಡೂರಾವ್, ಅಧ್ಯಕ್ಷತೆ: ಗೋವಿಂದ ಕುಲಕರ್ಣಿ, ಮುಖ್ಯ ಅತಿಥಿಗಳು: ರವಿ ಸುಬ್ರಮಣ್ಯ, ಉದಯ್ ಗರುಡಾಚಾರ್, ಸಿ.ಕೆ. ರಾಮಮೂರ್ತಿ, ಅಸಗೋಡು ಜಯಸಿಂಹ, ‘ಭಾರ್ಗವ ಭೂಷಣ’ ಪ್ರಶಸ್ತಿ ಪುರಸ್ಕೃತರು: ಶ್ರೀಧರ, ಬಾಬು ಕೃಷ್ಣಮೂರ್ತಿ, ರವಿ ಹೆಗಡೆ, ಬಿ.ಎಸ್. ಶ್ರೀನಾಥ್, ಸುಧೀರ್ ಹೆಗಡೆ, ಸತ್ಯಧಾನ ಆಚಾರ್ಯ ಕಟ್ಟಿ, ಶೈಲೇಂದ್ರ ಶರ್ಮಾ, ಆಯೋಜನೆ: ಅಖಿಲ ಭಾರತೀಯ ಬ್ರಾಹ್ಮಣ ಮಹಾಸಂಘ, ಸ್ಥಳ: ಗಾಯನ ಸಮಾಜ, ಕೆ.ಆರ್. ರಸ್ತೆ, ಬಸವನಗುಡಿ, ಮಧ್ಯಾಹ್ನ 3

‘ನಶೆ ಮುಕ್ತ ಕರ್ನಾಟಕ’ ಮೊಬೈಲ್ ಆ್ಯಪ್ ಅಭಿವೃದ್ಧಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಮಾದಕ ವಸ್ತು ಬಳಕೆ ನಿಯಂತ್ರಿಸಲು ಪೊಲೀಸ್ ಇಲಾಖೆಯು ‘ನಶೆ ಮುಕ್ತ ಕರ್ನಾಟಕ’ ಮೊಬೈಲ್ ಆ್ಯಪ್ ಅಭಿವೃದ್ಧಿ ಪಡಿಸಿದೆ.

ಗಾಂಜಾ ಬೆಳೆಯುತ್ತಿರುವವರು, ಅದನ್ನು ಮಾರಾಟ ಮಾಡುತ್ತಿರುವವರು, ಗ್ರಾಹಕರು, ಸಿಂಥೆಟಿಕ್ ಡ್ರಗ್ಸ್ ತಯಾರಿಸುತ್ತಿರುವ ಪ್ರಯೋಗಾಲಯ ಗಳು, ಸಂಗ್ರಹಣೆ ಮಾಡುತ್ತಿರುವ ಸಂಗ್ರಹಕಾರರು, ಸಾಗಾಣಿಕೆ ಮಾಡುತ್ತಿರುವ ಸಾರಿಗೆ ವ್ಯವಸ್ಥೆ ಬಗ್ಗೆ ಸಾರ್ವಜನಿಕ ರಲ್ಲಿ ಮಾಹಿತಿ ಇದ್ದರೆ ಅದನ್ನು ಪೊಲೀಸರಿಗೆ ಗೋಪ್ಯವಾಗಿ ಹಂಚಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.

ಗೂಗಲ್ ಪ್ಲೇ ಸ್ಟೋರ್‌ನಿಂದ ಆ್ಯಪ್ ಡೌನ್‌ಲೋಡ್ ಮಾಡಿಕೊಂಡು ಅದರಲ್ಲಿ ಮಾದಕ ವಸ್ತುವಿನ ಕುರಿತಾಗಿ ಇಂಗ್ಲಿಷ್ ಅಥವಾ ಕನ್ನಡದಲ್ಲಿ ವರದಿ ಮಾಡಬಹುದಾಗಿದೆ. ಸಾರ್ವಜನಿಕರು ಹಂಚಿಕೊಂಡ ಮಾಹಿತಿ ಲೊಕೇಷನ್ ಅನ್ನು ಸ್ಥಳೀಯ ಪೊಲೀಸರು, ಡಿಸಿಪಿ, ಎಸ್‌ಪಿ ಹಾಗೂ ಉಸ್ತುವಾರಿ ಮೇಲಾಧಿಕಾರಿಗಳಿಗೆ ಹಂಚಿಕೊಳ್ಳುತ್ತಾರೆ. ಮಾಹಿತಿ ಪಡೆದ ಅಧಿಕಾರಿಯು, ಆ ಮಾಹಿತಿಯ ನೈಜತೆ ಖಾತ್ರಿ ಪಡಿಸಿಕೊಂಡು ದಾಳಿ ಮಾಡುವ ವ್ಯವಸ್ಥೆ ಜಾರಿಗೆ ತರಲಾಗಿದೆ.

ವೈಶಿಷ್ಟ್ಯ: ಎನ್‌ಡಿಪಿಎಸ್ ಕಾಯ್ದೆ–1985ರ ಅಡಿ ಜರುಗಿಸಬಹುದಾದ ಅಪರಾಧಗಳಿಗೆ ಶಿಕ್ಷೆ ಮಾಹಿತಿ, ಸಾರ್ವಜನಿಕರು ತೆಗೆದುಕೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳು, ಮಾದಕ ವಸ್ತುವಿನ ದುಷ್ಪರಿಣಾಮಗಳು, ಸಾರ್ವಜನಿಕರು ಪೊಲೀಸರಿಗೆ ಮಾದಕ ವಸ್ತುವಿನ ಕಳ್ಳ ಸಾಗಾಣಿಕೆ, ಮಾದಕ ಬೆಳೆಯ ಕೃಷಿ, ಅವುಗಳ ಸಂಗ್ರಹಣೆ, ಮಾದಕ ವ್ಯಸನಿಗಳ ಕುರಿತಾದ ಮಾಹಿತಿ, ಮಾದಕ ವಸ್ತುವಿನ ತಯಾರಿಕಾ ಘಟಕಗಳ ಕುರಿತಾಗಿ ಗೋಪ್ಯ ಮಾಹಿತಿ ಹಂಚಿಕೊಳ್ಳಬಹುದು.

ಸಾಲ ನೀಡಲು ಸಾರ್ವಜನಿಕ ಉದ್ದಿಮೆಗಳ ಠೇವಣಿ ಬಳಕೆ • ಸಚಿವ ಸಂಪುಟ ಸಭೆ ಒಪ್ಪಿಗೆ

ಉದ್ದಿಮೆಗಳ ಲಾಭ: ನಷ್ಟದ ಕಂಪನಿಗಳಿಗೆ ಸಾಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಾಭದಲ್ಲಿರುವ ರಾಜ್ಯ ಸರ್ಕಾರಿ ಸ್ವಾಮ್ಯದ ಸಾರ್ವಜನಿಕ ಉದ್ದಿಮೆಗಳ ಠೇವಣಿಗಳನ್ನು ನಷ್ಟದಲ್ಲಿರುವ ನಿಗಮಗಳಿಗೆ ಸಾಲದ ರೂಪದಲ್ಲಿ ನೀಡಬೇಕೆಂಬ ಹಣಕಾಸು ಇಲಾಖೆಯ ಪ್ರಸ್ತಾವಕ್ಕೆ ಶುಕ್ರವಾರ ನಡೆದ ಸಚಿವ ಸಂಪುಟ ಒಪ್ಪಿಗೆ ನೀಡಿದೆ.

‘ಕಂಪನಿ ಅಧಿನಿಯಮದಲ್ಲಿ ಇದಕ್ಕೆ ಅವಕಾಶವಿದೆ. ಇದರಿಂದ ಉದ್ದಿಮೆಗಳ ಆರ್ಥಿಕ ಸ್ಥಿತಿ ಸುಧಾರಣೆ ಆಗುತ್ತದೆ’ ಎಂದು ಹಣಕಾಸು ಇಲಾಖೆ ಅಧಿಕಾರಿಗಳು ಸಂಪುಟ ಸಭೆಯಲ್ಲಿ ಪ್ರತಿಪಾದಿಸಿದರು ಎಂದು ಮೂಲಗಳು ತಿಳಿಸಿವೆ.

ನಿಗಮಗಳಲ್ಲಿರುವ ಠೇವಣಿ ಮೊತ್ತವನ್ನು ಸಾರ್ವಜನಿಕ ವಲಯದ ಉದ್ದಿಮೆಗಳಿಗೆ ಸಾಲ ನೀಡಲು ಮತ್ತು ಸಾಲ ಪಡೆಯಲು ಅವಕಾಶ ಇದೆ. ಈ ವಿಧಾನದಿಂದ ಸಾರ್ವಜನಿಕ ವಲಯದ ಉದ್ದಿಮೆಗಳು, ಮುಕ್ತ ಮಾರುಕಟ್ಟೆಯಲ್ಲಿ ವಿವಿಧ ಹಣಕಾಸು ಸಂಸ್ಥೆಗಳು, ಬ್ಯಾಂಕುಗಳು ನೀಡುವ ಸಾಲದ ಮೇಲಿನ ಬಡ್ಡಿ ದರಕ್ಕಿಂತ ಹೆಚ್ಚಿನ ಬಡ್ಡಿ ದರ ಪಡೆಯಬಹುದಾಗಿದೆ ಎಂದು ಅಧಿಕಾರಿಯು ಸಭೆಗೆ ಮನವರಿಕೆ ಮಾಡಿದರು.

ರಾಜ್ಯದಲ್ಲಿ 125 ಸರ್ಕಾರಿ ಕಂಪನಿಗಳು ಮತ್ತು ನಿಗಮಗಳಿವೆ. 2021–22ರ ಆರ್ಥಿಕ ವರ್ಷದಲ್ಲಿ 55 ಸಾರ್ವಜನಿಕ ವಲಯದ ಉದ್ದಿಮೆಗಳು ₹2,608 ಕೋಟಿ ಲಾಭಗಳಿಸಿದ್ದು, 54 ಸಾರ್ವಜನಿಕ ವಲಯದ ಉದ್ದಿಮೆಗಳು ₹37,893 ಕೋಟಿ ನಷ್ಟ ಅನುಭವಿಸಿವೆ. ಇದರಲ್ಲಿ 34 ಸಂಸ್ಥೆಗಳು ಋಣಾತ್ಮಕ ನಿವ್ವಳ ಮೌಲ್ಯವನ್ನು ಹೊಂದಿವೆ ಎಂದೂ ಅವರು ಸಭೆ ಮುಂದೆ ಮಂಡಿಸಿದರು.

ಸಾರ್ವಜನಿಕ ವಲಯದ ಉದ್ದಿಮೆಗಳು ಎದುರಿಸುತ್ತಿರುವ ನಷ್ಟದಿಂದ ಆರ್ಥಿಕ ಒತ್ತಡ ಹೆಚ್ಚಾಗಿದ್ದು, ಹೆಚ್ಚು ಪ್ರಮಾಣದ ಸಾಲಕ್ಕೆ ಮೊರೆ ಹೋಗಲೇಬೇಕಾಗಿದೆ. ನಷ್ಟದ ಕಾರಣ ಅವಶ್ಯಕ ಮೂಲಭೂತ ಸೌಕರ್ಯಗಳಲ್ಲಿ ವಿಶೇಷವಾಗಿ ರಸ್ತೆ ಸಾರಿಗೆ ನಿಗಮಗಳು, ವಿದ್ಯುಚ್ಛಕ್ತಿ ಸರಬರಾಜು ಕಂಪನಿಗಳು ಹೂಡಿಕೆ ಮಾಡುವ ಸಾಮರ್ಥ್ಯ ಕಳೆದುಕೊಂಡಿವೆ. ಇವುಗಳ ನಿರ್ವಹಣೆಗೆ ಸಂಪನ್ಮೂಲದ ಅಗತ್ಯವಿದೆ. ಆದ್ದರಿಂದ ಲಾಭದಾಯಕ ಸಾರ್ವಜನಿಕ ಉದ್ದಿಮೆಗಳಿಂದ ಸಾಲ ಪಡೆಯುವುದು ಅಗತ್ಯವಿದೆ. ಇದರಿಂದ ನಷ್ಟದಲ್ಲಿರುವ ಆರ್ಥಿಕ ಅಭಿವೃದ್ಧಿಗೆ ಅನುಕೂಲವಾಗುತ್ತದೆ ಎಂದು ಸಮಜಾಯಿಷಿ ನೀಡಿದರು.

ಸದ್ಯಕ್ಕೆ ಸಾರ್ವಜನಿಕ ಉದ್ದಿಮೆಗಳ ಆರ್ಥಿಕ ಸಾಮರ್ಥ್ಯದ ಆಧಾರದ ಮೇಲೆ 11 ಸಂಸ್ಥೆಗಳನ್ನು ಸಂಭಾವ್ಯ ಸಾಲ ನೀಡುವ ಸಂಸ್ಥೆಗಳು ಎಂದು ಗುರುತಿಸಲಾಗಿದೆ. ₹100 ಕೋಟಿಗೂ ಹೆಚ್ಚು ಮೀಸಲು ಮತ್ತು ಹೆಚ್ಚುವರಿ ನಿಧಿ ಹೊಂದಿರುವ ಸಂಸ್ಥೆಗಳು ತಮ್ಮ ಒಟ್ಟು ಮೀಸಲು ಮತ್ತು ಹೆಚ್ಚುವರಿ ನಿಧಿಯ ಶೇ 50ಕ್ಕಿಂತ ಕಡಿಮೆ ಇಲ್ಲದ ಮೊತ್ತವನ್ನು ಅಂತರ್ ನಿಗಮ ಠೇವಣಿಯಲ್ಲಿ ಹೂಡಿಕೆ ಮಾಡುವ ಅಗತ್ಯವಿದೆ. ಈ ಉಪಕ್ರಮದಿಂದ ಸಾಲ ಪಡೆಯುವ ಸಂಸ್ಥೆ ಮತ್ತು ಸಾಲ ನೀಡುವ ಸಂಸ್ಥೆಗಳಿಗೆ ವಾರ್ಷಿಕ ₹150 ಕೋಟಿಯಿಂದ ₹200 ಕೋಟಿಗಳಷ್ಟು ಅನುಕೂಲವಾಗಲಿದೆ ಎಂದು ವಿವರಿಸಿದರು.

ಪರಿಶಿಷ್ಟರಿಗೆ ಗುಣಮಟ್ಟದ ಚಿಕಿತ್ಸೆ

ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಸಮುದಾಯದವರಿಗೆ ಅಪರೂಪದ ಮತ್ತು ದುಬಾರಿ ವೆಚ್ಚದ ಕಾಯಿಲೆಗಳ ಚಿಕಿತ್ಸಾ ವೆಚ್ಚವನ್ನು ಭರಿಸಲು ₹47 ಕೋಟಿ ದತ್ತಿನಿಧಿ (ಕಾರ್ಪಸ್ ಫಂಡ್) ಸ್ಥಾಪಿಸಲು ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ ಎಂದು ಕಾನೂನು ಸಚಿವ ಎಚ್.ಕೆ.ಪಾಟೀಲ ತಿಳಿಸಿದರು.

ದತ್ತಿನಿಧಿಯ ಬಡ್ಡಿಯಿಂದ ಬರುವ ಮೊತ್ತವನ್ನು ಚಿಕಿತ್ಸಾ ವೆಚ್ಚಕ್ಕೆ ಭರಿಸಲಾಗುವುದು. ಸುವರ್ಣ ಆರೋಗ್ಯ ಟ್ರಸ್ಟ್‌ನ ಎಸ್‌ಸಿಎಸ್‌ಪಿ ಟಿಎಸ್‌ಪಿ ಅಡಿ ಲಭ್ಯ ಇರುವ ಹಣವನ್ನು ಇದಕ್ಕೆ ಬಳಸಿಕೊಳ್ಳಲಾಗುವುದು. ದುಬಾರಿ ಎನಿಸಿರುವ 17 ಚಿಕಿತ್ಸೆಗಳಿಗಾಗಿ ಈ ವರ್ಗದ ರೋಗಿಗಳಿಗೆ ನೆರವು ನೀಡಲಾಗುವುದು ಎಂದು ಹೇಳಿದರು.

ಕಾಲೇಜುಗಳ ಅಭಿವೃದ್ಧಿಗೆ ₹1,750 ಕೋಟಿ ಸಾಲ

- ವಿಶ್ವಬ್ಯಾಂಕ್‌ನಿಂದ ₹1,750 ಕೋಟಿ ಮತ್ತು ರಾಜ್ಯ ಸರ್ಕಾರದಿಂದ ₹750 ಕೋಟಿ ಸೇರಿ ಒಟ್ಟು ₹2,500 ಕೋಟಿಯನ್ನು ಸರ್ಕಾರಿ ಪದವಿ ಕಾಲೇಜುಗಳು, ಸರ್ಕಾರಿ ಎಂಜಿನಿಯರಿಂಗ್ ಕಾಲೇಜುಗಳು, ಪಾಲಿಟೆಕ್ನಿಕ್ ಮತ್ತು ವಿಶ್ವವಿದ್ಯಾಲಯಗಳ ಅಧೀನದ ಕಾಲೇಜುಗಳ ಮೂಲಸೌಕರ್ಯ ಮತ್ತು ಕಲಿಕಾ ವಾತಾವರಣ ಹೆಚ್ಚಿಸಲು ಬಳಸಲಾಗುವುದು
- ಧಾರ್ಮಿಕ ಅಲ್ಪಸಂಖ್ಯಾತರ ಶಿಕ್ಷಣ ಸಂಸ್ಥೆಗಳ (ಕಾಲೇಜು) ಪ್ರವೇಶದಲ್ಲಿ ಅಲ್ಪಸಂಖ್ಯಾತರ ಸಮುದಾಯದ ವಿದ್ಯಾರ್ಥಿಗಳು ಶೇ 50ರಷ್ಟು ಕಡ್ಡಾಯವಾಗಿ ಇರಬೇಕು ಎಂಬ ನಿಯಮವನ್ನು ಕೈಬಿಡಲು ಕಾಯ್ದೆಗೆ ತಿದ್ದುಪಡಿ ತರಲು ಒಪ್ಪಿಗೆ
- ಜನನ ಮತ್ತು ಮರಣ ಪ್ರಮಾಣ ಪತ್ರಗಳ ಏಕರೂಪತೆ ಕಾಯ್ದುಕೊಳ್ಳಲು ಕಾಯ್ದೆಗೆ ತಿದ್ದುಪಡಿ ಮಾಡಲು ಒಪ್ಪಿಗೆ. ಮರಣ ಪ್ರಮಾಣಪತ್ರದಲ್ಲಿ ಮೃತ ವ್ಯಕ್ತಿಯ ಕಾಯಿಲೆ ಅಥವಾ ಅಸ್ವಸ್ಥತೆಯ ಇತಿಹಾಸ ದಾಖಲಿಸಲು ಅವಕಾಶ ನೀಡಲಾಗುವುದು. ಜನನ ಮತ್ತು ಮರಣ ಪತ್ರವನ್ನು ಆನ್‌ಲೈನ್ ಮೂಲಕ ವಿತರಿಸಲಾಗುವುದು
- ಬೆಂಗಳೂರು ನಗರದ ಸಂಪಂಗಿರಾಮ ನಗರದಲ್ಲಿ ಸಮಾಜ ಕಲ್ಯಾಣ ಭವನದ ನಿರ್ಮಾಣಕ್ಕೆ ಪರಿಷ್ಕೃತ ಅಂದಾಜು ₹40.50 ಕೋಟಿಗೆ ಒಪ್ಪಿಗೆ
- ಸಮಾಜ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ₹11 ಕೋಟಿ ವೆಚ್ಚದಲ್ಲಿ ಮೊಟ್ಟೆಯನ್ನು ಖರೀದಿಸಿ ವಿತರಿಸಲು ಒಪ್ಪಿಗೆ
- ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆ ಹಾಗೂ ಔಷಧ ನಿಯಂತ್ರಣ ಇಲಾಖೆಗಳನ್ನು ವಿಲೀನಗೊಳಿಸಿ, ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ (ಎಫ್‌ಡಿಎ) ಪುನರ್‌ನಾಮಕರಣ ಮಾಡಲು ಒಪ್ಪಿಗೆ

ಯಾವ ಸಂಸ್ಥೆ ಎಷ್ಟು ಹೂಡಿಕೆ ಮಾಡಬೇಕು?

ಸಾಲ ನೀಡುವ ಸಂಸ್ಥೆ	ಮೀಸಲು/ ಹೆಚ್ಚುವರಿ (₹ಕೋಟಿಗಳಲ್ಲಿ)	ಸಾಲದ ಮೊತ್ತ (₹ಕೋಟಿಗಳಲ್ಲಿ)
ಕೆಎಸ್‌ಎಂಸಿಎಲ್	4,012	2,006
ಕೆಆರ್‌ಇಡಿಎಲ್	600	300
ಕೆಎಸ್‌ಬಿಸಿಎಲ್	670	335
ಎಚ್‌ಜಿಎಂಎಲ್	850	425
ಕೆಎಸ್‌ಐಐಡಿಸಿ	350	175
ಕೆಎಸ್‌ಡಿಎಲ್	1400	700
ಕೆಆರ್‌ಐಡಿಎಲ್	2532	1266
ಕೆಎಸ್‌ಐಸಿ	233	117
ಕೆಎಸ್‌ಎಸ್‌ಐಡಿಸಿ	560	280
ಎಂಎಸ್‌ಐಎಲ್	242	121
ಕೆಯುಐಡಿಎಫ್‌ಸಿ	1,322	661
ಒಟ್ಟು	12,771	6385

ಸಾಲ ಪಡೆಯುವ ಸಂಸ್ಥೆಗಳು

- ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ (ಬೆಸ್ಕಾಂ)
- ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ (ಹೆಸ್ಕಾಂ)
- ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ (ಜೆಸ್ಕಾಂ)
- ಮಂಗಳೂರು ವಿದ್ಯುತ್ ಸರಬರಾಜು ಕಂಪನಿ (ಮೆಸ್ಕಾಂ)
- ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ಕಂಪನಿ (ಸೆಸ್ಕ್)
- ಕರ್ನಾಟಕ ವಿದ್ಯುತ್ ನಿಗಮ ನಿಯಮಿತ (ಕೆಪಿಸಿಎಲ್)
- ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ (ಕೆಎಸ್‌ಆರ್‌ಟಿಸಿ)
- ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ (ಎನ್‌ಡಬ್ಲ್ಯೂಕೆಎಸ್‌ಆರ್‌ಟಿಸಿ)
- ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ (ಬಿಎಂಟಿಸಿ)
- ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ (ಕೆಕೆಆರ್‌ಟಿಸಿ)

ಮೃತ ಮಹಿಳೆ ಕುಟುಂಬಕ್ಕೆ ₹25 ಲಕ್ಷ ನೆರವು ಘೋಷಿಸಿದ ಅಲ್ಲು ಅರ್ಜುನ್

ಹೈದರಾಬಾದ್ (ಪಿಟಿಐ): ಇಲ್ಲಿನ ಚಿತ್ರ ಮಂದಿರದಲ್ಲಿ ‘ಪುಷ್ಪಾ 2: ದಿ ರೂಲ್’ ಸಿನಿಮಾ ಪ್ರದರ್ಶನದ ವೇಳೆ ಉಸಿರುಗಟ್ಟಿ ಮೃತಪಟ್ಟ ಮಹಿಳೆಯ ಕುಟುಂಬಕ್ಕೆ ನಟ ಅಲ್ಲು ಅರ್ಜುನ್ ಶುಕ್ರವಾರ ₹25 ಲಕ್ಷ ನೆರವು ಘೋಷಿಸಿದ್ದಾರೆ.

ಈ ಕುರಿತ ವಿಡಿಯೊವನ್ನು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿರುವ ಅವರು, ‘ಈ ದುರ್ಘಟನೆ ಬಹಳ ಬೇಸರ ತರಿಸಿದೆ. ಮೃತರ ಕುಟುಂಬದವರ ದುಃಖದಲ್ಲಿ ನಾನೂ ಭಾಗಿಯಾಗಿದ್ದೇನೆ. ಅವರ ಕುಟುಂಬದ ಸದಸ್ಯರನ್ನು ವೈಯಕ್ತಿಕವಾಗಿ ಭೇಟಿಯಾಗುತ್ತೇನೆ’ ಎಂದು ಅವರು ಹೇಳಿದ್ದಾರೆ.

ಸಂಧ್ಯಾ ಚಿತ್ರಮಂದಿರದಲ್ಲಿ ಬುಧವಾರ ಪ್ರೀಮಿಯರ್ ಶೋ ವೇಳೆ ಜನ ದಟ್ಟಣೆ ಹೆಚ್ಚಿದ ಪರಿಣಾಮ ಉಸಿರುಗಟ್ಟಿ ರೇವತಿ(35) ಎಂಬು ವವರು ಮೃತ ಪಟ್ಟಿದ್ದರು. ಅವರ ಮಗ ಶ್ರೀತೇಜ್(8) ಆರೋಗ್ಯ ಸ್ಥಿತಿ ಗಂಭೀರ ವಾಗಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಬಾಲಕನ ಚಿಕಿತ್ಸೆಗೆ ತಗಲುವ ವೆಚ್ಚವನ್ನು ಭರಿಸುವುದಾಗಿ ನಟ ತಿಳಿಸಿದ್ದಾರೆ.

ಮಹಿಳೆಯ ಕುಟುಂಬದವರು ನೀಡಿದ ದೂರಿನ ಮೇರೆಗೆ ಪೊಲೀಸರು ಅಲ್ಲು ಅರ್ಜುನ್, ಅವರ ಭದ್ರತಾ ತಂಡ ಮತ್ತು ಚಿತ್ರಮಂದಿರದ ಮಾಲೀಕರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.



ವಂಡಾರು ಕಂಬಳ

ಉಡುಪಿ ಜಿಲ್ಲೆಯ ಬ್ರಹ್ಮಾವರ ತಾಲ್ಲೂಕಿನ ಇತಿಹಾಸ ಪ್ರಸಿದ್ಧ ಸಾಂಪ್ರದಾಯಿಕ ವಂಡಾರು ಕಂಬಳ ಶುಕ್ರವಾರ ನಡೆಯಿತು. ಕಂಬಳದ ಕೋಣಗಳ ವೇಗವನ್ನು ಕಣ್ತುಂಬಿಕೊಳ್ಳಲು ಸೇರಿದ್ದ ಜನ ಓಟಗಾರರನ್ನು ಪ್ರೋತ್ಸಾಹಿಸಿದ ಕ್ಷಣ ಕ್ಯಾಮೆರಾ ಕಣ್ಣಿಗೆ ಸೆರೆಯಾಯಿತು
ಪ್ರಜಾವಾಣಿ ಚಿತ್ರ: ಫಕ್ರುದ್ದೀನ್ ಎಚ್.

ಹಲವೆಡೆ ಸಾಧಾರಣ ಮಳೆ ಸಾಧ್ಯತೆ

ಬೆಂಗಳೂರು: ಬೆಳಗಾವಿ, ಧಾರವಾಡ, ಗದಗ ಮತ್ತು ಹಾವೇರಿ ಜಿಲ್ಲೆಗಳಲ್ಲಿ ಶನಿವಾರ ಗುಡುಗು ಸಹಿತ ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ದಕ್ಷಿಣ ಕನ್ನಡ, ಉತ್ತರ ಕನ್ನಡ ಮತ್ತು ಉಡುಪಿ, ಹಾಸನ, ದಾವಣಗೆರೆ, ಶಿವಮೊಗ್ಗ ಜಿಲ್ಲೆಯ ಕೆಲವು ಸ್ಥಳಗಳಲ್ಲಿ ಜಿಟಿಜಿಟಿ ಮಳೆಯಾಗುವ ಸಂಭವ ಇದೆ.

ಬೆಂಗಳೂರು ನಗರ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ಮೋಡ ಕವಿದ ವಾತಾವರಣ ಇದ್ದು, ಕೆಲವೆಡೆ ತುಂತುರು ಮಳೆಯಾಗುವ ಸಂಭವ ಇದೆ ಎಂದು ಇಲಾಖೆ ತಿಳಿಸಿದೆ.

ಶುಕ್ರವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡಂತೆ ಕಲಬುರ್ಗಿಯ ಚಿಂಚೋಳಿಯಲ್ಲಿ 5 ಸೆಂ.ಮೀ, ಉಡುಪಿ ಜಿಲ್ಲೆಯ ಸಿದ್ದಾಪುರ, ಉತ್ತರ ಕನ್ನಡ ಜಿಲ್ಲೆಯ ಕಿರವತ್ತಿ ಹಾಗೂ ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿಯಲ್ಲಿ ತಲಾ 3 ಸೆಂ.ಮೀ. ಮಳೆ ದಾಖಲಾಗಿದೆ.

ಸುದ್ದಿ 2 ನಿಮಿಷ

ಬಗರ್‌ಹುಕುಂಗೆ ಡಿಜಿಟಲ್ ಸಾಗುವಳಿ ಚೀಟಿ

ಬೆಂಗಳೂರು: ಬಗರ್‌ಹುಕುಂ ಮಂಜೂರಾತಿ ಪಡೆದ ರೈತರಿಗೆ ಡಿಜಿಟಲ್ ಸಾಗುವಳಿ ಚೀಟಿ ನೀಡುವ ಪ್ರಕ್ರಿಯೆ ಆರಂಭಿಸಲಾಗಿದೆ. ಇದರಿಂದ ದಾಖಲೆಗಳನ್ನು ಕಳೆದುಕೊಳ್ಳುವ, ಕಚೇರಿಗಳಿಗೆ ಅಲೆದಾಡುವ ತಾಪತ್ರಯ ತಪ್ಪಲಿದೆ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಶುಕ್ರವಾರ ತಿಳಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ಗುಂಡ್ಲುಪೇಟೆ ತಾಲ್ಲೂಕು ಬೊಮ್ಮನಹಳ್ಳಿಯ ರೈತ ನಂಜುಂಡಯ್ಯ ಹುಚ್ಚಯ್ಯ ಅವರಿಗೆ ಮೊದಲ ಡಿಜಿಟಲ್ ಸಾಗುವಳಿ ಚೀಟಿ ವಿತರಿಸಲಾಗಿದೆ. ಸಾಗುವಳಿ ಮಂಜೂರಾತಿ ನೀಡುವ ಎಲ್ಲ ರೈತರಿಗೂ ಡಿಜಿಟಲ್ ಸಾಗುವಳಿ ಪತ್ರ ದೊರಕಲಿದೆ ಎಂದರು.



ನಮೂನೆ 1ರಿಂದ 5 ಹಾಗೂ 6ರಿಂದ 10 ಸರಳೀಕರಣ ಗೊಳಿಸಲಾಗಿದೆ. ಕೆಲ ದಶಕಗಳಿಂದ ಸರ್ಕಾರದ ವಿವಿಧ ಯೋಜನೆಗಳಡಿ ಲಕ್ಷಾಂತರ ರೈತರಿಗೆ ಜಮೀನು ಮಂಜೂರು ಮಾಡಲಾಗಿದೆ. ಆದರೆ, ನಾನಾ ಕಾರಣಗಳಿಂದಾಗಿ ಸೂಕ್ತ ದಾಖಲೆ ನೀಡಲಾಗಿಲ್ಲ. ರೈತರು ತಮ್ಮ ಜಮೀನು ಇದ್ದರೂ ಪೋಡಿಯಾಗದೆ ಸರ್ಕಾರಿ ಕಚೇರಿಗಳಿಗೆ ಸುತ್ತುತ್ತಿದ್ದರು. ಇನ್ನು ಅಂತಹ ಸಮಸ್ಯೆ ಇರುವುದಿಲ್ಲ. ಜಮೀನಿಗೆ ಹಕ್ಕುಪತ್ರ ನೀಡುವ ಜತೆಗೆ, ತಹಶೀಲ್ದಾರ್ ಅವರೇ ನೋಂದಣಿ ಮಾಡಿಕೊಡುವಂತಹ ವ್ಯವಸ್ಥೆಯನ್ನು ರೂಪಿಸಲಾಗಿದೆ ಎಂದು ಮಾಹಿತಿ ನೀಡಿದರು.

ಬಗರ್ ಹುಕುಂ ಯೋಜನೆಯ ಅಡಿ ಸಲ್ಲಿಕೆಯಾದ ಅರ್ಜಿಗಳಲ್ಲಿ 1.26 ಲಕ್ಷ ಅರ್ಜಿಗಳನ್ನು ಮಾನ್ಯ ಮಾಡಲಾಗಿದೆ. ಮೊದಲ ಹಂತದಲ್ಲಿ ಡಿಸೆಂಬರ್‌ನಲ್ಲೇ 5 ಸಾವಿರ ಜನರಿಗೆ, ಜನವರಿ ವೇಳೆಗೆ 20ಸಾವಿರ ರೈತರಿಗೆ ಡಿಜಿಟಲ್ ಸಾಗುವಳಿ ಪತ್ರ ನೀಡಲಾಗುವುದು ಎಂದರು.

ಡಿಜಿಪಿ, ಎಸ್‌ಪಿಗೆ ನೋಟಿಸ್

ಧಾರವಾಡ: ವಿಧಾನ ಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿ ವಿರುದ್ಧ ಎಫ್‌ಐಆರ್ ದಾಖಲಿಸಲು ನಿರಾಕರಿಸಲಾಗಿದೆ ಎಂದು ಆರೋಪಿಸಿ ವ್ಯಕ್ತಿಯೊಬ್ಬರು ಸಲ್ಲಿಸಿದ ದೂರಿಗೆ ಸಂಬಂಧಿಸಿದಂತೆ ವಿಚಾರಣೆಗೆ ಖುದ್ದು ಹಾಜರಾಗಲು ರಾಷ್ಟ್ರೀಯ ಪರಿಶಿಷ್ಟ ಪಂಗಡದ ಆಯೋಗವು (ಎನ್‌ಸಿಎಸ್‌ಟಿ) ರಾಜ್ಯ ಪೊಲೀಸ್ ಮಹಾನಿರ್ದೇಶಕ ಮತ್ತು ಧಾರವಾಡ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ಶುಕ್ರವಾರ ನೋಟಿಸ್ ಜಾರಿಗೊಳಿಸಿದೆ.

ನವದೆಹಲಿಯ ಎನ್‌ಸಿಎಸ್‌ಟಿ ಕೇಂದ್ರ ಕಚೇರಿಯಲ್ಲಿ ಡಿಸೆಂಬರ್ 12ರಂದು ವಿಚಾರಣೆ ನಡೆಯಲಿದೆ. ಆಯೋಗದ ಸದಸ್ಯ ಜತೊತು ಹುಸೇನ್ ಅವರು ವಿಚಾರಣೆ ನಡೆಸುವರು. ಪ್ರಕರಣಕ್ಕೆ ಸಂಬಂಧಿಸಿದ ದಾಖಲೆಗಳೊಂದಿಗೆ ಹಾಜರಾಗಬೇಕು ಎಂದು ಡಿಜಿಪಿ ಅಲೋಕ್ ಮೋಹನ್ ಮತ್ತು ಎಸ್‌ಪಿ ಗೋಪಾಲ ಬ್ಯಾಕೋಡ ಅವರಿಗೆ ನೋಟಿಸ್‌ನಲ್ಲಿ ತಿಳಿಸಲಾಗಿದೆ.

ಹೊರಟ್ಟಿ ಅಕ್ರಮ ಎಸಗಿದ್ದು ಅವರ ವಿರುದ್ಧ ಪೊಲೀಸರು ಎಫ್‌ಐಆರ್ ದಾಖಲಿಸಿಲ್ಲ ಎಂದು ಆರೋಪಿಸಿ ಧಾರವಾಡದ ಅರುಣ್ ಎಸ್.ಹಿರೇಹಾಳ್ ಅವರು 2023 ಡಿಸೆಂಬರ್ 1ರಂದು ಆಯೋಗಕ್ಕೆ ದೂರು ನೀಡಿದ್ದರು. ಈ ಆರೋಪಕ್ಕೆ ಸಂಬಂಧಿಸಿದಂತೆ 15 ದಿನಗಳಲ್ಲಿ ವರದಿ, ಮಾಹಿತಿ ನೀಡುವಂತೆ ಜನವರಿ 1ರಂದು ನೋಟಿಸ್ ನೀಡಲಾಗಿತ್ತು ಎಂದು ಉಲ್ಲೇಖಿಸಲಾಗಿದೆ. ‘ಪರಿಶಿಷ್ಟ ಪಂಗಡದ ವಾಲ್ಮೀಕಿ ಮಠಕ್ಕೆ (ಹರಿಹರ) ಸೇರಿದ ಸರ್ವೋದಯ ಶಿಕ್ಷಣ ಟ್ರಸ್ಟ್‌ನ್ನು ಹೊರಟ್ಟಿ ಅವರು ಅಕ್ರಮವಾಗಿ ನಡೆಸುತ್ತಿದ್ದಾರೆ ಎಂದು ಪೊಲೀಸರಿಗೆ 2022 ನವೆಂಬರ್‌ನಲ್ಲಿ ದೂರು ನೀಡಿದರೂ ಎಫ್‌ಐಆರ್ ದಾಖಲಿಸಿರಲಿಲ್ಲ’ ಎಂದು ಅರುಣ್ ಎಸ್.ಹಿರೇಹಾಳ್ ತಿಳಿಸಿದರು.

ಖನಿಜ: ₹12,337 ಕೋಟಿ ಆದಾಯ

ಒಂದನೇ ಪುಟದಿಂದ...

ಅಕ್ರಮವಾಗಿ ಉಪಖನಿಜ ಸಾಗಣೆಗೆ ಸಂಬಂಧಿಸಿದಂತೆ ಡ್ರೋನ್ ಬಳಸಿ ಸರ್ವೇ ಮಾಡಲಾಗಿದೆ. ಖನಿಜ ಪರವಾನಗಿ ಪಡೆಯದೇ ಸಾಗಣಿಕೆ ಮಾಡಿದ ಪ್ರಮಾಣ ಮತ್ತು ಗುತ್ತಿಗೆ ಪ್ರದೇಶವನ್ನು ಒತ್ತುವರಿ ಮಾಡಿರುವ ಪ್ರಮಾಣವನ್ನು ಈ ಸರ್ವೇ ಮೂಲಕ ಅಂದಾಜಿಸಿ ಪ್ರತಿ ಮೆಟ್ರಿಕ್ ಟನ್‌ಗೆ ₹60 ರಾಜಧನದಂತೆ ₹1,221 ಕೋಟಿಗೆ ಐದು ಪಟ್ಟು ದಂಡವಿಧಿಸಿ, ಅಂದರೆ ಸುಮಾರು ₹6,105.98 ಕೋಟಿ ವಸೂಲಿ ಮಾಡಲಾಗುವುದು ಎಂದು ಪಾಟೀಲ ಹೇಳಿದರು.

ಖನಿಜ ಭೂಮಿಗೆ ತೆರಿಗೆ: ಖಾಸಗಿಯವರ ಭೂಮಿಯಲ್ಲಿ ಖನಿಜ ನಿಕ್ಷೇಪವಿದ್ದರೆ, ಅದನ್ನು ಗಣಿಗಾರಿಕೆಗೆ ಕೊಟ್ಟರೆ ಅಂತಹ ಭೂಮಿಯ ಮೇಲೆ ಏಕ ರೀತಿಯ ತೆರಿಗೆ ವಿಧಿಸಲು ತೀರ್ಮಾನಿಸಲಾಗಿದೆ. ಪ್ರತಿ ಟನ್ ಅದಿರಿಗೆ ₹100 ತೆರಿಗೆ ವಿಧಿಸಲಾಗುವುದು. ಭೂಮಿಗಳ ಮೇಲಿನ ತೆರಿಗೆಯಿಂದ ಪ್ರತಿ ವರ್ಷ ಸುಮಾರು ₹505.90 ಕೋಟಿ ಹೆಚ್ಚುವರಿ ಆದಾಯ ಸಿಗಲಿದೆ.

ಖನಿಜ ಹಕ್ಕು ತೆರಿಗೆ: ಹರಾಜು ಮೂಲಕ ನೀಡಲಾದ ಗಣಿಗಾರಿಕೆ ಬ್ಲಾಕ್‌ಗಳನ್ನು ಹೊರತುಪಡಿಸಿ ಉಳಿದ ಎಲ್ಲ ವರ್ಗಗಳ ಗಣಿ ಗುತ್ತಿಗೆಗಳಿಗೆ ರಾಜಧನ ಸೇರಿ ಸರಾಸರಿ ಮಾರಾಟ ದರ ಶೇ 60 ರಷ್ಟು ಸೀಲಿಂಗ್ ಮಿತಿ ನಿಗದಿಪಡಿಸಲಾಗುವುದು. ಏಕೆಂದರೆ ಹರಾಜು ಮಾಡಿದ ಗಣಿಗಳು ಶೇ 60 ಕ್ಕೂ ಹೆಚ್ಚು ಸರಾಸರಿ ಮಾರಾಟ ದರವನ್ನು ಪಾವತಿ ಮಾಡುತ್ತವೆ. ಖನಿಜ ಹಕ್ಕುಗಳ ತೆರಿಗೆ ಸರಾಸರಿ ಮಾರಾಟ ದರವನ್ನು (ಶೇ 60) ಪರಿಗಣಿಸಿದರೆ ಪ್ರತಿ ವರ್ಷ ಸುಮಾರು ₹4,207.95 ಕೋಟಿ ಹೆಚ್ಚುವರಿ ಆದಾಯ ಸಿಗುವ ನಿರೀಕ್ಷೆ ಇದೆ.

ಕೆಎಸ್‌ಡಿಎಲ್ ಟೆಂಡರ್ ಪ್ರಕರಣ

‘ಪ್ರಶಾಂತ್ ಅವರಿಗೂ, ಕೆಎಸ್‌ಡಿಎಲ್‌ಗೂ ಸಂಬಂಧ ಇರಲಿಲ್ಲ. ಆದರೆ ಅವರ ತಂದೆ ಮತ್ತು ಶಾಸಕ ವಿರೂಪಾಕ್ಷಪ್ಪ ಮಾಡಾಳ್ ನಿಗಮದ ಅಧ್ಯಕ್ಷರಾಗಿದ್ದನ್ನು ದುರ್ಬಳಕೆ ಮಾಡಿಕೊಂಡಿದ್ದಾರೆ’

ಲಂಚ: ಮಾಡಾಳ್ ಪುತ್ರನ ವಿರುದ್ಧ ದೋಷಾರೋಪ

ಬೆಂಗಳೂರು: ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಗಮಕ್ಕೆ (ಕೆಎಸ್‌ಡಿಎಲ್) ರಾಸಾಯನಿಕ ಪೂರೈಕೆ ಟೆಂಡರ್ ನೀಡಲು ಬಿಜೆಪಿ ಮಾಜಿ ಶಾಸಕ ವಿರೂಪಾಕ್ಷಪ್ಪ ಮಾಡಾಳ್ ಅವರ ಮಗ ಎಂ.ವಿ. ಪ್ರಶಾಂತ್ ಕುಮಾರ್ ಲಂಚ ಪಡೆಯಲು ಮುಂದಾಗಿದ್ದು ಸಾಬೀತಾಗಿದೆ ಎಂದು ಲೋಕಾಯುಕ್ತ ಪೊಲೀಸರು ನ್ಯಾಯಾಲಯಕ್ಕೆ ಮಾಹಿತಿ ದೋಷಾರೋಪ ಪಟ್ಟಿ ಸಲ್ಲಿಸಿದ್ದಾರೆ.

ಕೆಎಸ್‌ಡಿಎಲ್‌ಗೆ ಸಂಬಂಧಿಸಿದಂತೆ 2023ರಲ್ಲಿ ₹40 ಲಕ್ಷ ಲಂಚ ಪಡೆದ ಪ್ರಕರಣದ ತನಿಖೆ ನಡೆಸುವಾಗ, ಇನ್ನೂ ₹90 ಲಕ್ಷ ಲಂಚದ ಹಣ ಪತ್ತೆಯಾಗಿತ್ತು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಲೋಕಾಯುಕ್ತ ಪೊಲೀಸರು ಹೆಚ್ಚುವರಿ ದೋಷಾರೋಪ ಪಟ್ಟಿ ಸಲ್ಲಿಸಿದ್ದಾರೆ. ಅದರಲ್ಲಿ ಪ್ರಶಾಂತ್ ಅವರನ್ನು ಮೊದಲ ಆರೋಪಿ, ಲಂಚ ನೀಡಿದ ಕಂಪನಿಯ ನೌಕರ ಆಲ್ಬರ್ಟ್ ನಿಕೋಲಸ್ ಅವರನ್ನು ಎರಡನೇ ಆರೋಪಿಯನ್ನಾಗಿಸಲಾಗಿದೆ.

‘ಕೆಎಸ್‌ಡಿಎಲ್‌ನ ಟೆಂಡರ್ ಪ್ರಕ್ರಿಯೆಯಲ್ಲಿ ಕರ್ನಾಟಕ ಅರೋಮಾಸ್ ಕಂಪನಿಗೆ ಅನುಕೂಲ ಮಾಡಿಕೊಡಲು ₹90 ಲಕ್ಷ ಲಂಚಕ್ಕೆ ಬೇಡಿಕೆ ಇಡಲಾಗಿತ್ತು’ ಎಂದು ಉಲ್ಲೇಖಿಸಲಾಗಿದೆ.

‘ಆಲ್ಬರ್ಟ್ ನಿಕೋಲಸ್ ಅವರ ಕಂಪನಿಗೆ ಅನುಕೂಲ ಮಾಡಿಕೊಡಲೆಂದೇ ಲಂಚ ಪಡೆದುಕೊಂಡಿದ್ದಾರೆ ಎಂಬುದಕ್ಕೆ ಸಾಕ್ಷ್ಯಗಳು ಲಭ್ಯವಾಗಿವೆ. ವಾಟ್ಸ್ ಆ್ಯಪ್‌ನಲ್ಲಿ ಈ ಸಂಬಂಧ ಇಬ್ಬರೂ ಚಾಟ್ ನಡೆಸಿದ್ದು, ಅದನ್ನು ಡಿಲೀಟ್ ಮಾಡಿದ್ದರು. ಆದರೆ ಅವನ್ನು ರಿಟ್ರೀವ್ ಮಾಡಿ ಸಾಕ್ಷ್ಯ ಸಂಗ್ರಹಿಸಲಾಗಿದೆ’ ಎಂದು ತನಿಖಾಧಿಕಾರಿಗಳು ಹೇಳಿದ್ದಾರೆ.

‘ಬೇರೆ ಕಂಪನಿಗಳು ಸಲ್ಲಿಸಿರುವ ಟೆಂಡರ್‌ಗಳನ್ನು ತಿರಸ್ಕರಿಸುವ ಬಗ್ಗೆ, ಇಬ್ಬರ ನಡುವೆ ಚರ್ಚೆ ನಡೆದಿದೆ. ಲಂಚದ ಹಣದ ಬಗ್ಗೆಯೂ ಚರ್ಚೆ ನಡೆದಿದೆ. ₹45 ಲಕ್ಷ ಲಂಚವಿದ್ದ ತಲಾ ಎರಡು ಬ್ಯಾಗ್‌ಗಳನ್ನು ಕಳುಹಿಸುವ ಬಗ್ಗೆ ಮಾತುಕತೆ ನಡೆಸಿದ್ದಾರೆ. ಈ ಎಲ್ಲವೂ ದೊರೆತಿದ್ದು, ಪ್ರಶಾಂತ್ ಕುಮಾರ್ ಲಂಚ ಪಡೆಯಲು ಮುಂದಾಗಿದ್ದರು ಎಂಬುದು ಸಾಬೀತಾಗಿದೆ’ ಎಂದು ತಿಳಿಸಿದ್ದಾರೆ.

ರಾಜ್ಯಕ್ಕೆ ಮತ್ತೆ 3 ಕೇಂದ್ರೀಯ ವಿದ್ಯಾಲಯ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದಲ್ಲಿ ಮೂರು ಸೇರಿದಂತೆ ದೇಶದಾದ್ಯಂತ 85 ಕೇಂದ್ರೀಯ ವಿದ್ಯಾಲಯಗಳು ಮತ್ತು ರಾಜ್ಯದಲ್ಲಿ ಒಂದು ಸೇರಿದಂತೆ 28 ನವೋದಯ ವಿದ್ಯಾಲಯಗಳನ್ನು ತೆರೆಯಲು ಕೇಂದ್ರ ಸಚಿವ ಸಂಪುಟ ಶುಕ್ರವಾರ ಅನುಮೋದನೆ ನೀಡಿದೆ.

ಸಂಪುಟ ಸಭೆಯ ಬಳಿಕ ಸುದ್ದಿಗೋಷ್ಠಿ ಯಲ್ಲಿ ಮಾತನಾಡಿದ ಕೇಂದ್ರ ವಾರ್ತಾ ಸಚಿವ ಅಶ್ವಿನಿ ವೈಷ್ಣವ್, ‘ಶಿವಮೊಗ್ಗದ ಕೇಂದ್ರೀಯ ವಿದ್ಯಾಲಯವನ್ನು ಮೇಲ್ದರ್ಜೆ ಗೇರಿಸಲು ಒಪ್ಪಿಗೆ ನೀಡಲಾಗಿದೆ. ಎಲ್ಲ ವಿಭಾಗಗಳಲ್ಲಿ ಎರಡು ಹೆಚ್ಚುವರಿ ತರಗತಿಗಳನ್ನು ತೆರೆಯಲಾಗುತ್ತದೆ’ ಎಂದರು.

‘ಯಾದಗಿರಿ ಜಿಲ್ಲೆಯ ಮುದ್ನಾಳ್, ಚಿತ್ರದುರ್ಗ ಜಿಲ್ಲೆಯ ಕುಂಚಿಗಾನಲ್ ಗ್ರಾಮ ಹಾಗೂ ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕಿನ ಈಳಗಿ ಗ್ರಾಮದಲ್ಲಿ ಕೇಂದ್ರೀಯ ವಿದ್ಯಾಲಯಗಳು ಆರಂಭವಾಗಲಿವೆ. ಬಳ್ಳಾರಿ ಜಿಲ್ಲೆಯಲ್ಲಿ ನವೋದಯ ವಿದ್ಯಾಲಯ ತೆರೆಯಲಾಗುತ್ತದೆ’ ಎಂದು ಅವರು ಮಾಹಿತಿ ನೀಡಿದರು.

‘ಈ ಹೊಸ ಕೇಂದ್ರೀಯ ವಿದ್ಯಾಲಯಗಳ ಪ್ರಾರಂಭದಿಂದ ದೇಶದಾದ್ಯಂತ 82,000ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ಶಿಕ್ಷಣ ಪಡೆಯಲು ಅವಕಾಶ ಸಿಗಲಿದೆ. 2025-26ರಿಂದ ಎಂಟು ವರ್ಷಗಳಲ್ಲಿ ಈ ವಿದ್ಯಾಲಯಗಳನ್ನು ತೆರೆಯಲಾಗುತ್ತದೆ. ಇದಕ್ಕೆ ₹5,872.08 ಕೋಟಿ ವೆಚ್ಚವಾಗಲಿದೆ ಎಂದೂ ಅಂದಾಜಿಸಲಾಗಿದೆ’ ಎಂದರು. ಪ್ರಸ್ತುತ 1256 ಕೇಂದ್ರೀಯ ವಿದ್ಯಾಲಯ ಗಳಿದ್ದು, 13.56 ಲಕ್ಷ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ ಎಂದರು.

28 ನವೋದಯ ವಿದ್ಯಾಲಯಗಳ ಸ್ಥಾಪನೆಗೆ ₹2,359 ಕೋಟಿ ನಿಧಿಯ ಅವಶ್ಯಕತೆ ಇದೆ. ಈ ವಿದ್ಯಾಲಯಗಳನ್ನು 2028–29ರೊಳಗೆ ಆರಂಭಿಸಲಾಗುತ್ತದೆ ಎಂದು ಅವರು ವಿವರ ನೀಡಿದರು.

38 ರೈಲು ಮಾರ್ಗಗಳಿಗೆ ಸಮೀಕ್ಷೆ: ಅಶ್ವಿನಿ ವೈಷ್ಣವ್

ನವದೆಹಲಿ: ನೈರುತ್ಯ ರೈಲ್ವೆ ವ್ಯಾಪ್ತಿಯಲ್ಲಿ 38 ರೈಲು ಮಾರ್ಗಗಳ ನಿರ್ಮಾಣಕ್ಕೆ ಸಮೀಕ್ಷೆ ನಡೆಸಲು ಅನುಮೋದನೆ ನೀಡಲಾಗಿದೆ ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದರು.



ಅಶ್ವಿನಿ ವೈಷ್ಣವ್

ರಾಜ್ಯಸಭೆಯಲ್ಲಿ ಬಿಜೆಪಿ ಸದಸ್ಯ ನಾರಾಯಣ ಕೊರಗಪ್ಪ ಕೇಳಿದ ಪ್ರಶ್ನೆಗೆ ಶುಕ್ರವಾರ ಉತ್ತರ ನೀಡಿರುವ ಸಚಿವರು, ‘4,104 ಕಿ.ಮೀ. ಉದ್ದದ 16 ಹೊಸ ಮಾರ್ಗಗಳು ಹಾಗೂ 22 ಜೋಡಿ ಹಳಿಗಳ ನಿರ್ಮಾಣಕ್ಕಾಗಿ ಸಮೀಕ್ಷೆ ನಡೆಸಲಾಗುತ್ತದೆ’ ಎಂದರು.

‘ರಾಜ್ಯದಲ್ಲಿ ₹26,670 ಕೋಟಿ ವೆಚ್ಚದಲ್ಲಿ 2,101 ಕಿ.ಮೀ. ಉದ್ದದ 22 ರೈಲ್ವೆ ಯೋಜನೆಗಳ (15 ಹೊಸ ಮಾರ್ಗ ಹಾಗೂ 7 ಜೋಡಿ ಹಳಿ) ಅನುಷ್ಠಾನ ಮಾಡಲಾಗುತ್ತಿದ್ದು, 657 ಕಿ.ಮೀ. ಕಾಮಗಾರಿ ಪೂರ್ಣಗೊಂಡಿದೆ’ ಎಂದು ಅವರು ಮಾಹಿತಿ ನೀಡಿದರು.

ಮೈಸೂರು–ನವದೆಹಲಿ ಹಾಗೂ ಬೆಂಗಳೂರು–ಮುಂಬೈ ನಡುವೆ ವಂದೇ ಭಾರತ್ ರೈಲುಗಳ ಸೇವೆ ಆರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯಾ ಎಂಬ ಪ್ರಶ್ನೆಗೆ ಉತ್ತರಿಸಿದ ಸಚಿವರು, ‘ವಂದೆ ಭಾರತ್ ಸೇರಿದಂತೆ ಹೊಸ ರೈಲುಗಳ ಸೇರ್ಪಡೆ ನಿರಂತರ ಪ್ರಕ್ರಿಯೆಯಾಗಿದ್ದು, ಕಾರ್ಯಾಚರಣೆ ಸಾಧ್ಯತೆ ಹಾಗೂ ಸಂಪನ್ಮೂಲ ಲಭ್ಯತೆ ನೋಡಿಕೊಂಡು ತೀರ್ಮಾನ ತೆಗೆದುಕೊಳ್ಳಲಾಗುತ್ತದೆ’ ಎಂದು ತಿಳಿಸಿದರು.

ಆಂಧ್ರ ಪ್ರದೇಶದ ಸದಸ್ಯ ಎಂ.ರಘುನಾಥ ರೆಡ್ಡಿ ಅವರ ಪ್ರಶ್ನೆಗೆ ಉತ್ತರಿಸಿದ ಅಶ್ವಿನಿ ವೈಷ್ಣವ್, ‘ಬೆಂಗಳೂರು–ಕಡಪ ನಡುವಿನ 268 ಕಿ.ಮೀ. ಉದ್ದದ ಮಾರ್ಗಕ್ಕೆ ಈ ಹಿಂದೆ ಅನುಮೋದನೆ ನೀಡಲಾಗಿದೆ. ಈ ಯೋಜನೆಗೆ ಶೇ 50ರಷ್ಟು ಮೊತ್ತವನ್ನು ಆಂಧ್ರ ಪ್ರದೇಶ ಸರ್ಕಾರ ಭರಿಸಬೇಕಿದೆ. ಈ ಯೋಜನೆಯ ಮೊತ್ತ ₹2,706 ಕೋಟಿ. ಮಾರ್ಗ ನಿರ್ಮಾಣಕ್ಕೆ ₹359 ಕೋಟಿ ವೆಚ್ಚ ಮಾಡಲಾಗಿದ್ದು, 21 ಕಿ.ಮೀ. ಕಾಮಗಾರಿ ಪೂರ್ಣಗೊಂಡಿದೆ. ಆಂಧ್ರ ಪ್ರದೇಶ ಸರ್ಕಾರ ಈವರೆಗೆ ₹190 ಕೋಟಿ ಅಷ್ಟೇ ನೀಡಿದೆ’ ಎಂದು ತಿಳಿಸಿದರು.

ಸ್ವಾತಂತ್ರ್ಯ ಹೋರಾಟಗಾರನೆಂಬ ನಕಲಿ ದಾಖಲೆ: ದಂಡನೆಗೆ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸ್ವಾತಂತ್ರ್ಯ ಹೋರಾಟಗಾರರ ಹೆಸರಿನಲ್ಲಿ ಸರ್ಕಾರದಿಂದ ಗೌರವಧನ ಪಡೆಯಲು ಯತ್ನಿಸುವ ನಕಲಿ ವ್ಯಕ್ತಿಗಳನ್ನು ಕಠಿಣ ರೀತಿಯಲ್ಲಿ ದಂಡಿಸಿ’ ಎಂದು ಆದೇಶ ಹೊರಡಿಸಿರುವ ಹೈಕೋರ್ಟ್, ‘ನಿಜವಾದ ಸ್ವಾತಂತ್ರ್ಯ ಹೋರಾಟಗಾರರಿಗೆ ಯಾವುದೇ ತೊಂದರೆ ಆಗಬಾರದು. ಆದರೆ, ಕೆಲವರು ನಕಲಿ ದಾಖಲೆ ಒದಗಿಸಿ ಗೌರವಧನಕ್ಕೆ ಹಕ್ಕು ಮಂಡಿಸುತ್ತಾರೆ. ಅಂತಹ ಪ್ರಕರಣಗಳನ್ನು ಸರ್ಕಾರ ನಿರ್ದಾಕ್ಷಿಣ್ಯವಾಗಿ ಹತ್ತಿಕ್ಕಬೇಕು’ ಎಂದು ಆದೇಶಿಸಿದೆ.

‘ಸ್ವಾತಂತ್ರ್ಯ ಹೋರಾಟಗಾರ ಎಂದು ಹಲವು ವರ್ಷ ರಾಜ್ಯ ಸರ್ಕಾರದಿಂದ ಗೌರವಧನ ಪಡೆದ ಮುಳಬಾಗಿಲು ತಾಲ್ಲೂಕಿನ ಮಂಡಿಕಲ್ ಗ್ರಾಮದ 85 ವರ್ಷದ ಎಂ.ವಿ.ಶ್ರೀನಿವಾಸ ಗೌಡ ಅವರಿಂದ ಪುನಃ ಹಣ ವಸೂಲು ಮಾಡಬೇಕು’ ಎಂದು ಕೋಲಾರ ಜಿಲ್ಲಾಧಿಕಾರಿ ಆದೇಶ ಹೊರಡಿಸಿದ್ದರು. ಈ ಆದೇಶವನ್ನು ಪ್ರಶ್ನಿಸಿ ಶ್ರೀನಿವಾಸ ಗೌಡ ಹೈಕೋರ್ಟ್ ಮೆಟ್ಟಿಲೇರಿದ್ದರು.

ಶ್ರೀನಿವಾಸ ಗೌಡ ಅವರ ರಿಟ್ (ಡಬ್ಲ್ಯು.ಪಿ 27154/2019) ಅರ್ಜಿ ವಜಾಗೊಳಿಸಿರುವ ನ್ಯಾಯಮೂರ್ತಿ ಎಸ್.ಜಿ.ಪಂಡಿತ್ ಮತ್ತು ನ್ಯಾಯಮೂರ್ತಿ ರಾಮಚಂದ್ರ ಡಿ.ಹುದ್ದಾರ ಅವರಿದ್ದ ವಿಭಾಗೀಯ ನ್ಯಾಯಪೀಠ, ‘ಅರ್ಜಿದಾರರು ಸ್ವಾತಂತ್ರ್ಯ ಹೋರಾಟದ ವೇಳೆ ಜೈಲು ಸೇರಿದ್ದಕ್ಕೆ, ಮನೆಯಿಂದ ಹೊರಗುಳಿದಿದ್ದಕ್ಕೆ ಹಾಗೂ ಆ ಸಮಯದಲ್ಲಿ ಶಿಕ್ಷಣದಿಂದ ವಂಚಿತರಾಗಿದ್ದಕ್ಕೆ ಯಾವುದೇ ದಾಖಲೆಗಳನ್ನು ಒದಗಿಸಿಲ್ಲ. ಹಾಗಾಗಿ, ಸರ್ಕಾರದ ನಿಯಮಗಳ ಅನುಸಾರ ಅವರು ರಾಜ್ಯ ಸರ್ಕಾರದಿಂದ ಕೊಡಮಾಡುವ ಗೌರವ ಧನ ಪಡೆಯಲು ವಿಫಲವಾಗಿರುವುದು ದೃಢಪಟ್ಟಿದೆ’ ಎಂದು ಅಭಿಪ್ರಾಯಪಟ್ಟಿದೆ.

ಅರ್ಜಿಯಲ್ಲಿ ಏನಿತ್ತು?: ‘ನಾನು ಸ್ವಾತಂತ್ರ್ಯ ಹೋರಾಟಗಾರನಾಗಿದ್ದು, ರಾಜುಪೇಟೆ ಸತ್ಯಾಗ್ರಹ ಹಾಗೂ ಮೈಸೂರು ಚಲೋ ಚಳವಳಿಗಳಲ್ಲಿ ಭಾಗಿಯಾಗಿ ಸೆರೆವಾಸ ಅನುಭವಿಸಿದ್ದೇನೆ. ಸರ್ಕಾರದ ಆದೇಶದಂತೆ ದಾಖಲೆಗಳನ್ನು ಸಲ್ಲಿಸಿ 1981ರಿಂದ ಪ್ರತಿ ತಿಂಗಳೂ ರಾಜ್ಯ ಸರ್ಕಾರದ ಗೌರವ ಧನ ಪಡೆಯುತ್ತಿದ್ದೇನೆ. ಆದರೆ, ನನ್ನ ವಿರುದ್ಧ ಲೋಕಾಯುಕ್ತಕ್ಕೆ ನೀಡಲಾಗಿದ್ದ ಸುಳ್ಳು ದೂರು ಆಧರಿಸಿ ಗೌರವಧನ ವಾಪಸು ಪಡೆಯುವಂತೆ ಜಿಲ್ಲಾಧಿಕಾರಿ ಆದೇಶಿಸಿದ್ದಾರೆ. ಇದು ಕಾನೂನು ಬಾಹಿರ’ ಎಂದು ಎಂ.ವಿ.ಶ್ರೀನಿವಾಸ ಗೌಡ ಆಕ್ಷೇಪಿಸಿದ್ದರು.

ಪ್ರಕರಣವೇನು?: ‘ಎಂ.ವಿ.ಶ್ರೀನಿವಾಸ ಗೌಡ ನಕಲಿ ದಾಖಲೆಗಳನ್ನು ಸೃಷ್ಟಿಸಿ ಸ್ವಾತಂತ್ರ್ಯ ಹೋರಾಟಗಾರ ಎಂದು ಹಕ್ಕು ಮಂಡಿಸಿ ಗೌರವಧನ ಪಡೆಯುತ್ತಿದ್ದಾರೆ. ಈ ಬಗ್ಗೆ ತನಿಖೆ ನಡೆಸಬೇಕು’ ಎಂದು ಕೋರಿ ಮಂಡಿಕಲ್ ನಿವಾಸಿ ನಾಗರಾಜ್ 2015ರ ಆಗಸ್ಟ್ 1ರಂದು ಲೋಕಾಯುಕ್ತಕ್ಕೆ ದೂರು ನೀಡಿದ್ದರು.

‘ಲೋಕಾಯುಕ್ತ ತನಿಖೆ ದೃಢಪಟ್ಟಿದೆ’ ಎಂಬ ಆಧಾರದಲ್ಲಿ ಕೋಲಾರ ಜಿಲ್ಲಾಧಿಕಾರಿ 2018ರ ನವೆಂಬರ್ 14ರಂದು ಆದೇಶವೊಂದನ್ನು ಹೊರಡಿಸಿ, ‘ಎಂ.ವಿ.ಶ್ರೀನಿವಾಸ ಗೌಡ ಅವರಿಗೆ ಈತನಕ ನೀಡಲಾಗಿರುವ ಗೌರವಧನ ವಾಪಸು ಪಡೆಯುವ ಪ್ರಕ್ರಿಯೆ ಆರಂಭಿಸಿ’ ಎಂದು ಮುಳಬಾಗಿಲು ತಹಶೀಲ್ದಾರ್ ಅವರಿಗೆ ಆದೇಶಿಸಿದ್ದರು. ಇದರ ಅನುಸಾರ ತಹಶೀಲ್ದಾರ್ 2019ರ ಮೇ 20ರಂದು ಅರ್ಜಿದಾರರಿಗೆ ನೋಟಿಸ್ ನೀಡಿ 2019ರ ಮೇ 30ರೊಳಗೆ ₹9,08,661 ಗೌರವ ಧನವನ್ನು ವಾಪಸು ನೀಡಬೇಕು. ಇಲ್ಲವಾದಲ್ಲಿ ಕಾನೂನು ಕ್ರಮ ಎದುರಿಸಬೇಕಾಗುತ್ತದೆ’ ಎಂದು ಎಚ್ಚರಿಸಿದ್ದರು.

‘ದೇವೇಗೌಡರು ಯಾರನ್ನೂ ತುಳಿದಿಲ್ಲ’

ಪ್ರಜಾವಾಣಿ ವಾರ್ತೆ

ಶ್ರವಣಬೆಳಗೊಳ (ಹಾಸನ): ‘ರಾಜಕೀಯದಲ್ಲಿ ಎಚ್.ಡಿ. ದೇವೇಗೌಡರು ಯಾರನ್ನೂ ತುಳಿದಿಲ್ಲ. ಹಲವರನ್ನು ಬೆಳೆಸಿದ್ದಾರೆ. ಅವರು ಬೆಳೆಸಿದ ಅನೇಕ ನಾಯಕರು ರಾಜಕೀಯವಾಗಿ ಉನ್ನತ ಹುದ್ದೆಯಲ್ಲಿದ್ದಾರೆ’ ಎಂದು ಜೆಡಿಎಸ್ ಶಾಸಕ ಸಿ.ಎನ್. ಬಾಲಕೃಷ್ಣ ಪ್ರತಿಪಾದಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ‘ಸಮಾವೇಶದಿಂದ ಜೆಡಿಎಸ್‌ಗೆ ತೊಂದರೆ ಇಲ್ಲ. ಪಕ್ಷದ ಬುನಾದಿ ಗಟ್ಟಿಯಾಗಿದೆ. ದೇವೇಗೌಡರ ನಾಯಕತ್ವದಲ್ಲಿ ಹಾಗೂ ಎಚ್.ಡಿ. ಕುಮಾರಸ್ವಾಮಿ ಅಧಿಕಾರ ಅವಧಿಯಲ್ಲಿ ಎಚ್.ಡಿ. ರೇವಣ್ಣ ಅವರು ಮಾಡಿರುವ ಅಭಿವೃದ್ಧಿ ಕೆಲಸಗಳು ಕ್ಷೇತ್ರದ ಪ್ರತಿ ಹಳ್ಳಿಯಲ್ಲೂ ಸಾಕ್ಷಿಯಾಗಿ ನಿಂತಿವೆ’ ಎಂದರು.

‘ಉಪ ಚುನಾವಣೆಯಲ್ಲಿ ಕಾಂಗ್ರೆಸ್‌ನ ಗೆಲುವು ಮುಂದಿನ ಚುನಾವಣೆಗೆ ದಿಕ್ಸೂಚಿಯಲ್ಲ. ಉಪ ಚುನಾವಣೆಯಲ್ಲಿ ಗೆದ್ದ ಮಾತ್ರಕ್ಕೆ ಅದು ರಾಜ್ಯದ ಜನರ ತೀರ್ಪು ಎನ್ನಲು ಸಾಧ್ಯವಿಲ್ಲ’ ಎಂದರು.

ರೇಣುಕಸ್ವಾಮಿ ಕೊಲೆ ಪ್ರಕರಣ: ದರ್ಶನ್ ಚಿಕಿತ್ಸೆ ವಿಳಂಬ ಬಗ್ಗೆ ಪ್ರಾಸಿಕ್ಯೂಷನ್ ವಾದ

‘ಕೋರ್ಟ್ ದಿಕ್ಕು ತಪ್ಪಿಸಲು ಬಿ.ಪಿ ಸಬೂಬು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬೆನ್ನುಹುರಿ ಶಸ್ತ್ರಚಿಕಿತ್ಸೆಗೆ ಒಳಗಾಗದಿದ್ದರೆ ನಾಳೆಯೇ ಲಕ್ವ ಹೊಡೆದು ಬಿಡುತ್ತದೆ, ಸತ್ತೇ ಹೋಗಿ ಬಿಡುತ್ತಾರೆ... ಎಂಬೆಲ್ಲಾ ಆತಂಕಗಳನ್ನು ಧುಮುಧುಮಿಸಿ ವೈದ್ಯಕೀಯ ನೆರವಿನ ಆಧಾರದಲ್ಲಿ ಮಧ್ಯಂತರ ಜಾಮೀನು ಪಡೆದಿರುವ ನಟ ದರ್ಶನ್ ನ್ಯಾಯಾಲಯದ ದಾರಿ ತಪ್ಪಿಸಿದ್ದಾರೆ. ಅಷ್ಟೇಕೆ, ಹೈಕೋರ್ಟ್‌ನ ಸಹಾನುಭೂತಿಯನ್ನು ದುರ್ಬಳಕೆ ಮಾಡಿಕೊಳ್ಳಲಾಗಿದೆ’ ಎಂದು ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಾಸಿಕ್ಯೂಷನ್ ಬಲವಾಗಿ ಆರೋಪಿಸಿದೆ.



ದರ್ಶನ್

ಪ್ರಕರಣದ ಆರೋಪಿಗಳಾದ ಪವಿತ್ರಾ ಗೌಡ, ನಟ ದರ್ಶನ್ ತೂಗುದೀಪ ಶ್ರೀನಿವಾಸ್, ಆರ್. ನಾಗರಾಜು, ಎಂ.ಲಕ್ಷ್ಮಣ್, ಅನುಕುಮಾರ್ ಅಲಿಯಾಸ್ ಅನು, ಜಗದೀಶ್ ಅಲಿಯಾಸ್ ಜಗ್ಗ ಸಲ್ಲಿಸಿರುವ ನಿಯಮಿತ (ರೆಗ್ಯುಲರ್) ಜಾಮೀನು ಅರ್ಜಿಗಳನ್ನು ನ್ಯಾಯಮೂರ್ತಿ ಎಸ್. ವಿಶ್ವಜಿತ್ ಶೆಟ್ಟಿ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ಮುಂದುವರಿಸಿತು.

ವಿಶೇಷ ಪ್ರಾಸಿಕ್ಯೂಟರ್ ಪಿ.ಪ್ರಸನ್ನ ಕುಮಾರ್ ವಾದ ಮಂಡಿಸಿ, ‘ದರ್ಶನ್ ಚಿಕಿತ್ಸೆ ಪಡೆಯುತ್ತಿರುವ ಆಸ್ಪತ್ರೆವತಿಯಿಂದ ನವೆಂಬರ್ 6 ಮತ್ತು 21ರಂದು ಎರಡು ವೈದ್ಯಕೀಯ ವರದಿ ನೀಡಲಾಗಿದೆ. ನ.6ರ ವರದಿಯಲ್ಲಿ; ಶಸ್ತ್ರಚಿಕಿತ್ಸೆ ನಡೆಸುವ ತನಕ ಮಧ್ಯಂತರ ಚಿಕಿತ್ಸೆ ಮುಂದುವರಿಯುತ್ತದೆ. ಇದು ತಾತ್ಕಾಲಿಕವಾಗಿದ್ದು, ಶಸ್ತ್ರಚಿಕಿತ್ಸೆ ಬಾಕಿ ಇದೆ ಎಂದು ವಿವರಿಸಲಾಗಿದೆ. ಆದರೆ, ನ. 21ರಂದು ದರ್ಶನ್ ರಕ್ತದೊತ್ತಡದಲ್ಲಿ (ಬಿ.ಪಿ) ವ್ಯತ್ಯಯವಾಗುತ್ತಿದ್ದು ಶಸ್ತ್ರಚಿಕಿತ್ಸೆಗೆ ಅಣಿಗೊಳಿಸಬೇಕಿದೆ. ಶಸ್ತ್ರಚಿಕಿತ್ಸೆ ಬಳಿಕ ಎಷ್ಟು ದಿನದಲ್ಲಿ ಚೇತರಿಸಿಕೊಳ್ಳಬಹುದು ಎಂದು ಬಳಿಕ ಅಂದಾಜಿಸಲಾಗುವುದು ಎಂದು ತಿಳಿಸಲಾಗಿದೆ’ ಎಂದು ವಿವರಿಸಿದರು.

‘ಚಿಕಿತ್ಸೆಗಾಗಿ ಮಧ್ಯಂತರ ಜಾಮೀನು ಪಡೆದು ಐದು ವಾರ ಕಳೆದಿದೆ. ಈತನಕ ಯಾವುದೇ ಶಸ್ತ್ರಚಿಕಿತ್ಸೆಗೆ ಒಳಗಾಗಿಲ್ಲ. ಬಿ.ಪಿ ಏರುಪೇರು ಎಂಬುದು ಸಬೂಬಷ್ಟೇ. ಬಿ.ಪಿ ವ್ಯತ್ಯಾಸವಾಗುತ್ತಿರುವ ಕಾರಣ ಶಸ್ತ್ರಚಿಕಿತ್ಸೆ ಮಾಡಲಾಗುತ್ತಿಲ್ಲ ಎಂದು ವೈದ್ಯರ ಹೇಳಿಕೆ ಖಾತರಿಗೆ ಪ್ರಾಸಿಕ್ಯೂಷನ್ ತಜ್ಞ ವೈದ್ಯರನ್ನು ಸಂಪರ್ಕಿಸಿದಾಗ, ಶಸ್ತ್ರಚಿಕಿತ್ಸೆ ಅಗತ್ಯವಾಗಿದ್ದಾಗ ಅತಿಯಾದ ಬಿ.ಪಿ ಇರುವ ರೋಗಿಗೆ ಅಮಲಾಂಗ್–5 ಎಂ.ಜಿ ಗುಳಿಗೆ ಕೊಟ್ಟರೆ ಸರಿ ಹೋಗುತ್ತದೆ. ಬಿ.ಪಿ ಕಡಿಮೆ ಮಾಡಿ ಗಂಭೀರ ಶಸ್ತ್ರಚಿಕಿತ್ಸೆಗಳನ್ನೆಲ್ಲಾ ನಡೆಸಲಾಗುತ್ತದೆ ಎಂಬುದು ವೇದ್ಯವಾಗಿದೆ. ಆದರೆ, ದರ್ಶನ್ ಬಿ.ಪಿ ಎಂತಹುದಿರಬಹುದು’ ಎಂದು ಆಶ್ಚರ್ಯ ವ್ಯಕ್ತಪಡಿಸಿದರು. ಪ್ರಕರಣದ ಹೆಚ್ಚುವರಿ ಪ್ರಾಸಿಕ್ಯೂಟರ್ ಸಿ.ಸಚಿನ್ ಹಾಜರಿದ್ದರು.

ವೈದ್ಯರು–ದರ್ಶನ್ ನಡವಳಿಕೆ ಪ್ರಶ್ನಾರ್ಹ

‘ದರ್ಶನ್ ಅವರನ್ನು ಶಸ್ತ್ರಚಿಕಿತ್ಸೆಗೆ ಸಜ್ಜುಗೊಳಿಸಲಾಗುತ್ತಿದೆ ಎಂಬ ವೈದ್ಯರ ವಿವರಣೆ , ಸಿನಿಮಾದಲ್ಲಿ ಹೇಳುವಂತೆ; ಸೋಪ್ ಹಾಕ್ಕೊಳ್ಳಿ, ತಲೆ ತೊಳ್ಕೊಳ್ಳಿ, ತಲೆ ಬಾಚ್ಕೊಳ್ಳಿ, ಪೌಡರ್ ಹಾಕ್ಕೊಳ್ಳಿ... ಎಂಬಂತಿದೆ. ಅವರಿಗೆ ಚಿಕಿತ್ಸೆ ನೀಡಿ ವರದಿ ಸಲ್ಲಿಸುತ್ತಿರುವ ವೈದ್ಯರು, ಮತ್ತು ದರ್ಶನ್ ನಡವಳಿಕೆ ಪ್ರಶ್ನಾರ್ಹವಾಗಿದೆ. ಆದ್ದರಿಂದ, ದರ್ಶನ್ ಮಧ್ಯಂತರ ಜಾಮೀನಿನಲ್ಲೇ ಮುಂದುವರಿಯಲು ಅರ್ಹರಲ್ಲ. ಅವರು ಕೋರ್ಟ್‌ಗೆ ಶರಣಾಗಲೇಬೇಕು. ನಂತರ ನಿಯಮಿತ ಜಾಮೀನು ಅರ್ಜಿ ವಿಚಾರಣೆ ನಡೆಸಬಹುದು’ ಎಂದು ವಿಶೇಷ ಪ್ರಾಸಿಕ್ಯೂಟರ್ ಪಿ.ಪ್ರಸನ್ನ ಕುಮಾರ್ ಪ್ರತಿಪಾದಿಸಿದರು.

ಇದಕ್ಕೆ ದರ್ಶನ್ ಪರ ಹಿರಿಯ ವಕೀಲ ಸಿ.ವಿ.ನಾಗೇಶ್, ‘ಮಧ್ಯಂತರ ಜಾಮೀನು ಪ್ರಶ್ನಿಸಿ ಸರ್ಕಾರ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದೆ’ ಎಂದು ನ್ಯಾಯಪೀಠದ ಗಮನಕ್ಕೆ ತಂದರು.

ಇದಕ್ಕೆ ನ್ಯಾಯಪೀಠ, ‘ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲಾಗಿದೆ ಎಂದ ಮಾತ್ರಕ್ಕೆ ಇಲ್ಲಿ ವಾದ ಮಂಡಿಸಬಾರದು ಎಂದೇನಿಲ್ಲ’ ಎಂದು ನುಡಿಯಿತು. ಪ್ರಕರಣದ 14ನೇ ಆರೋಪಿ ಪ್ರದೋಷ್ ಪರ ಹಿರಿಯ ವಕೀಲ ಕೆ.ದಿವಾಕರ್ ಕೂಡಾ ವಾದ ಮಂಡಿಸಿದರು. ದಿನದ ಕಲಾಪ ಮುಗಿದ ಕಾರಣ ವಿಚಾರಣೆಯನ್ನು ಇದೇ 9ಕ್ಕೆ ಪೀಠ ಮುಂದೂಡಿತು.

ಶ್ರವಣಬೆಳಗೊಳದಲ್ಲಿ ನಿಷಿಧಿ ಮಂಟಪ ಲೋಕಾರ್ಪಣೆ

ಕರ್ಮಯೋಗಿ ಚಾರುಕೀರ್ತಿ ಶ್ರೀಗಳ ಸ್ಮರಣೆ

ಪ್ರಜಾವಾಣಿ ವಾರ್ತೆ

ಶ್ರವಣಬೆಳಗೊಳ (ಹಾಸನ): ಕ್ಷೇತ್ರದ ದಿಗಂಬರ ಜೈನ ಮಹಾಸಂಸ್ಥಾನ ಮಠದ ಹಿಂದಿನ ಪೀಠಾಧ್ಯಕ್ಷ ಕರ್ಮಯೋಗಿ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಸ್ಮರಣಾರ್ಥ ನಿರ್ಮಿಸಿರುವ ನಿಷಿಧಿ ಮಂಟಪವನ್ನು ಶುಕ್ರವಾರ ಲೋಕಾರ್ಪಣೆ ಮಾಡಲಾಯಿತು.

ಶಿಲಾಮಯ ನಿಷಿಧಿ ಮಂಟಪವನ್ನು ವಿವಿಧ ಮಠಾಧೀಶರ ಸಾನ್ನಿಧ್ಯ ಮತ್ತು ಗಣ್ಯರ ಸಮ್ಮುಖದಲ್ಲಿ, ನಾಂದಿ ಮಂಗಲದ ಧಾರ್ಮಿಕ ವಿಧಿ ವಿಧಾನಗಳೊಂದಿಗೆ ಅಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಮಾರ್ಗದರ್ಶನದಲ್ಲಿ ಲೋಕಾರ್ಪಣೆ ಮಾಡಲಾಯಿತು. ದೀಪ ಪ್ರಜ್ವಲನೆ ಮತ್ತು ಚಾರುಕೀರ್ತಿ ಶ್ರೀಗಳ ಪುತ್ಥಳಿಗೆ ಪುಷ್ಪಾರ್ಚನೆ ಮಾಡಲಾಯಿತು.

ಚಂದ್ರಗಿರಿ ಚಿಕ್ಕಬೆಟ್ಟಕ್ಕೆ ಹೊಂದಿಕೊಂಡಂತಿರುವ ಭಟ್ಟಾರಕರ ಸಮಾಧಿ ಗುಡ್ಡದ ಪಕ್ಕದಲ್ಲಿ ವೇದಿಕೆ ನಿರ್ಮಿಸಿ ಚಾರುಕೀರ್ತಿ ಶ್ರೀಗಳ ವಿನಯಾಂಜಲಿ ಸ್ಮೃತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಕ್ಷೇತ್ರದ ಪೀಠಾಧಿಪತಿ ಅಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಮಾತನಾಡಿ, 'ಶ್ರೀಗಳ ಬಾಲ್ಯ ಮತ್ತು ಜೀವಿತ ಕಾಲದಲ್ಲಿ ಸಲ್ಲಿಸಿದ ಸೇವೆಯನ್ನು 10 ಅಡಿ ಎತ್ತರ, 6 ಅಡಿ ಅಗಲದ ಸುಂದರ ಶಿಲೆಯಲ್ಲಿ ಶಾಸನಗಳಂತೆ ಕೆತ್ತಿಸಲಾಗಿದ್ದು, ನಿಷಿಧಿಯು ಮುಂಬರುವ ದಿನಗಳಲ್ಲಿ ಪ್ರತಿಷ್ಠಾಪಿಸಲಾಗಿದೆ' ಎಂದರು.

'ಶ್ರೀಗಳಿಗೆ ಪ್ರಿಯವಾಗಿದ್ದ ಮಾವಿನ ಮರದ ನೆರಳಿನಲ್ಲಿ ನಿಷಿಧಿ ಇರಲಿ ಎಂಬ ಉದ್ದೇಶದಿಂದ ಸುತ್ತಲೂ ಮಾವಿನ ಗಿಡಗಳನ್ನು ನೆಡಲಾಗಿದೆ' ಎಂದರು.

ಆಯಿಷಾರ್ಜುನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ, ಉಡುಪಿ ಪೇಜಾವರ ಮಠದ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ, ಸಿದ್ಧಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿ, ಧರ್ಮಸ್ಥಳದ ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ, ಮಾಜಿ ಮುಖ್ಯಮಂತ್ರಿ ವೀರಪ್ಪ ಮೊಯಿಲಿ, ಸಚಿವರಾದ ಕೆ.ಎನ್. ರಾಜಣ್ಣ, ಸುಧಾಕರ್, ಸಂಸದ ಶ್ರೇಯಸ್ ಎಂ.ಪಟೇಲ್ ಪಾಲ್ಗೊಂಡಿದ್ದರು.





ಶ್ರವಣಬೆಳಗೊಳದ ಭಟ್ಟಾರಕರ ಸಮಾಧಿ ಗುಡ್ಡದಲ್ಲಿರುವ ನೂತನ ನಿಷಿಧಿ ಮಂಟಪ ಉದ್ಘಾಟನೆ ಸಂದರ್ಭದಲ್ಲಿ ಭಾಗವಹಿಸಿದ್ದ ಮಠಾಧೀಶರು (ಎಡಚಿತ್ರ) ನಿಷಿಧಿ ಮಂಟಪದ ಎದುರು ಪ್ರತಿಷ್ಠಾಪಿಸಿರುವ ಚಾರುಕೀರ್ತಿ ಶ್ರೀಗಳ ಬಾಲ್ಯ ಜೀವನ ಮತ್ತು ಸಾಧನೆಯ ಶಿಲಾಶಾಸನ

ಜುಲ್ಫಿಕರ್, ಬಚ್ಚನ್ ಸೇರಿ 6 ಕೈದಿಗಳ ಸ್ಥಳಾಂತರ

ಪ್ರಜಾವಾಣಿ ವಾರ್ತೆ

ಕಲಬುರಗಿ: ಬೆಂಗಳೂರಿನ ಮಲ್ಲೇಶ್ವರದ ವಿಜಯ ಕಚೇರಿ ಬಳಿಯ ಬಾಂಬ್ ಸ್ಫೋಟದ ರೂವಾರಿ ಜುಲ್ಫಿಕರ್, ಶಿವಮೊಗ್ಗದ ರೌಡಿಶೀಟರ್ ಜಮೀಲ್ ಅಲಿಯಾಸ್ ಬಚ್ಚನ್ ಚಾಂದ್ ಪೀರ್ ಸೇರಿ ಆರು ಕೈದಿಗಳನ್ನು ಇಲ್ಲಿನ ಕೇಂದ್ರ ಕಾರಾಗೃಹದಿಂದ ರಾಜ್ಯದ ವಿವಿಧ ಜೈಲುಗಳಿಗೆ ಸ್ಥಳಾಂತರಿಸಲಾಗಿದೆ.

ಕೇಂದ್ರ ಕಾರಾಗೃಹದ ಮುಖ್ಯ ಅಧೀಕ್ಷಕಿ ಅನಿತಾ ಅವರ ಕಾರನ್ನು ಸ್ಫೋಟಿಸುವುದಾಗಿ ಇತ್ತೀಚೆಗೆ ಈ ಕೈದಿಗಳು ಬೆದರಿಕೆ ಹಾಕಿದ್ದರು. ಈ ಬಗ್ಗೆ ಅನಿತಾ ಬಂದಿಖಾನೆ ಇಲಾಖೆಯ ಹಿರಿಯ ಅಧಿಕಾರಿಗಳಿಗೆ ವರದಿ ಸಲ್ಲಿಸಿದ್ದರು.

ಈ ವರದಿ ಆಧರಿಸಿ ಈ ಸಂಚಿನಲ್ಲಿ ಭಾಗಿಯಾದ ಬಚ್ಚನ್‌ನನ್ನು ಬೆಳಗಾವಿಯ ಕೇಂದ್ರ ಕಾರಾಗೃಹಕ್ಕೆ, ಅಬ್ದುಲ್ ಖಾದರ್ ಜಿಲಾನಿ ಹಾಗೂ ಜುಲ್ಫಿಕರ್ ಅಲಿಯನ್ನು ಧಾರವಾಡ ಕೇಂದ್ರ ಕಾರಾಗೃಹಕ್ಕೆ, ಶೇಖ್ ಸದ್ದಾಂ ಹುಸೇನ್ ಹಾಗೂ ಜಾಕೀರ್ ಹನೀಫ್ ಎಂಬುವವರನ್ನು ಶಿವಮೊಗ್ಗ ಕೇಂದ್ರ ಕಾರಾಗೃಹಕ್ಕೆ ಹಾಗೂ ವಿಶಾಲ ವಿಜಯಕುಮಾರ ರಾಠೋಡನನ್ನು ಬಳ್ಳಾರಿ ಕೇಂದ್ರ ಕಾರಾಗೃಹಕ್ಕೆ ಸ್ಥಳಾಂತರಿಸಲಾಗಿದೆ.

ಬಚ್ಚನ್‌ನನ್ನು ಸ್ಥಳಾಂತರಿಸಲು ಎನ್‌ಐಎ ನ್ಯಾಯಾಲಯದ ಅನುಮತಿ ಪಡೆಯಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಎಲ್ಲ ಆರೂ ಕೈದಿಗಳನ್ನು ಬಿಗಿ ಭದ್ರತೆಯಲ್ಲಿ ಕಲಬುರಗಿ ಕೇಂದ್ರ ಕಾರಾಗೃಹದಿಂದ ಗುರುವಾರ ವಿವಿಧ ಜೈಲುಗಳಿಗೆ ಸ್ಥಳಾಂತರಿಸಲಾಯಿತು.

ಸಂತಾನ ಶಕ್ತಿಹರಣ ಶಸ್ತ್ರಚಿಕಿತ್ಸೆ ವಿಫಲ: ವೈದ್ಯರಿಗೆ ದಂಡ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ನಗರದ ಜಿಲ್ಲಾ ಆಸ್ಪತ್ರೆಯಲ್ಲಿ ಸಂತಾನ ಶಕ್ತಿಹರಣ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದ ಮಹಿಳೆಗೆ ಮಗು ಜನಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಶಸ್ತ್ರಚಿಕಿತ್ಸೆ ನಡೆಸಿದ್ದ ಪ್ರಸೂತಿ ತಜ್ಞ ಕೆ.ಶಿವಕುಮಾರ್ ಅವರಿಗೆ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ ₹55,000 ದಂಡ ವಿಧಿಸಿ ಆದೇಶ ಹೊರಡಿಸಿದೆ.

2 ಮಕ್ಕಳಿದ್ದ ಮಹಿಳೆ 2014ರ ಏಪ್ರಿಲ್ 28ರಂದು ಜಿಲ್ಲಾ ಆಸ್ಪತ್ರೆಯಲ್ಲಿ ಸಂತಾನ ಶಕ್ತಿಹರಣ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು. ಅವರಿಗೆ 2020ರ ಜನವರಿ 26ರಂದು 3ನೇ ಮಗು ಜನಿಸಿತ್ತು. ಮಹಿಳೆಯ ಕುಟುಂಬದ ಸದಸ್ಯರು ವೈದ್ಯರ ನಿರ್ಲಕ್ಷ್ಯಕ್ಕೆ ಪರಿಹಾರ ಕೋರಿ ಜಿಲ್ಲಾ ಗ್ರಾಹಕರ ಪರಿಹಾರ ಆಯೋಗಕ್ಕೆ 2021ರ ಫೆಬ್ರುವರಿಯಲ್ಲಿ ಆಯೋಗಕ್ಕೆ ದೂರು ದಾಖಲಿಸಿದ್ದರು.

ವಿಚಾರಣೆ ನಡೆಸಿದ ಆಯೋಗ, ಶಸ್ತ್ರಚಿಕಿತ್ಸೆ ವಿಫಲವಾಗಿರುವುದಕ್ಕೆ ಸೇವಾ ನಿರ್ಲಕ್ಷ್ಯ ಕಾರಣ ಎಂದು ಅಭಿಪ್ರಾಯ ಪಟ್ಟಿತು. ನೊಂದ ಮಹಿಳೆಗೆ ಪರಿಹಾರ ರೂಪವಾಗಿ ₹30,000 ನೀಡಬೇಕು. ಮಹಿಳೆಗಾದ ಮಾನಸಿಕ, ದೈಹಿಕ ಹಿಂಸೆ ಹಾಗೂ ವೈದ್ಯಕೀಯ ಖರ್ಚುಗಳಿಗೆ ₹25,000 ಸೇರಿಸಿ ಒಟ್ಟು ₹55,000 ಪರಿಹಾರ ನೀಡಬೇಕು. 30 ದಿನ ದೊಳಗೆ ಪರಿಹಾರ ನೀಡಬೇಕು ಎಂದು ಹಿರಿಯ ಪ್ರಸೂತಿ ತಜ್ಞ ಕೆ.ಶಿವಕುಮಾರ್ ಅವರಿಗೆ ಸೂಚಿಸಿ ಆಯೋಗದ ಅಧ್ಯಕ್ಷೆ ಎಚ್.ಎನ್. ಮೀನಾ, ಸದಸ್ಯರಾದ ಎಚ್.ಜಿ. ಯಶೋದಾ ಅವರು ಗುರುವಾರ ಆದೇಶ ಹೊರಡಿಸಿದ್ದಾರೆ.

ಸ್ಮಶಾನ ಭೂಮಿ ವಿವಾದ: ಎರಡು ಸಮುದಾಯಗಳ ನಡುವೆ ಜಟಾಪಟಿ

ಪ್ರಜಾವಾಣಿ ವಾರ್ತೆ

ಆಲ್ದೂರು (ಚಿಕ್ಕಮಗಳೂರು): ಪಟ್ಟಣದ ಸಮೀಪದ ಬಿರಂಜಿ ಹೊಳೆಯ ಪಕ್ಕದ ಜಾಗದ ವಿವಾದವು ಒಕ್ಕಲಿಗ ಮತ್ತು ಪರಿಶಿಷ್ಟ ಜಾತಿಯ ಮುಖಂಡರ ನಡುವೆ ಜಟಾಪಟಿಗೆ ಕಾರಣವಾಯಿತು. ವಿವಾದಿತ ಜಾಗದಲ್ಲಿ ದಲಿತ ಮಹಿಳೆಯ ಶವ ಸಂಸ್ಕಾರಕ್ಕೆ ಮುಂದಾದಾಗ ಒಕ್ಕಲಿಗ ಸಮುದಾಯದ ಮಹಿಳೆಯೊಬ್ಬರು ಗುಂಡಿಗೆ ಇಳಿದು ಪ್ರತಿರೋಧ ವ್ಯಕ್ತಪಡಿಸಿದರು.

ಸರ್ವೆ ನಂಬರ್ 108ರಲ್ಲಿ 2 ಎಕರೆ 32 ಗುಂಟೆ ಜಮೀನು ಪರಿಶಿಷ್ಟ ಜಾತಿಯ ಸ್ಮಶಾನ ಎಂದು ಪಹಣಿಯಲ್ಲಿದೆ. ಇದೇ ಜಾಗವನ್ನು ಗ್ರಾಮ ಪಂಚಾಯಿತಿಯಲ್ಲಿ ಒಕ್ಕಲಿಗ ಸಮುದಾಯ ಭವನ ಎಂದು 2013ರಲ್ಲಿ ನಿರ್ಣಯ ದಾಖಲಿಸಲಾಗಿದೆ. ಇದು ಎರಡು ಸಮುದಾಯಗಳ ನಡುವೆ ಜಟಾಪಟಿಗೆ ಕಾರಣವಾಗಿದೆ.

'ನಮ್ಮ ಸಮುದಾಯ ಸ್ಮಶಾನ ಭೂಮಿಯನ್ನು ಕೆಲವು ಪ್ರಭಾವಿಗಳು ಗ್ರಾಮ ಪಂಚಾಯಿತಿಯಲ್ಲಿ ಒಕ್ಕಲಿಗ ಸಮುದಾಯ ಭವನ ಎಂದು ಬರೆಸಿದ ಮೂಲಕ ಕಬಳಿಕೆಗೆ ಯತ್ನಿಸಿದ್ದಾರೆ. ಸಮಸ್ಯೆ ಬಗೆಹರಿಸುವಂತೆ ಪಂಚಾಯಿತಿ ಸಭೆಗಳಲ್ಲಿ ಹಲವು ಬಾರಿ ವಿಷಯ ಪ್ರಸ್ತಾಪಿಸಲಾಗಿದ್ದು, ಯಾವುದೇ ಪ್ರಯೋಜನವಾಗಿಲ್ಲ' ಎಂಬುದು ದಲಿತ ಮುಖಂಡರ ಆರೋಪ.

ಶಿವಪ್ಪ ಅವರ ತಾಯಿ ರಾಮಮ್ಮ ಶುಕ್ರವಾರ ಮೃತಪಟ್ಟಿದ್ದು, ಶವಸಂಸ್ಕಾರ ಮಾಡಲು ಮುಂದಾದರು. ಈ ವೇಳೆ ಒಕ್ಕಲಿಗ ಸಮುದಾಯದ ಮುಖಂಡರು ಅಡ್ಡಿಪಡಿಸಿದರು.

ಸ್ಥಳಕ್ಕೆ ಬಂದ ತಹಶೀಲ್ದಾರ್ ಸುಮಂತ್, 'ಜಮೀನು ವಿವಾದ ನ್ಯಾಯಾಲಯದಲ್ಲಿ ಇದೆ. ಸರ್ವೆ ಮಾಡಿ ಸದರಿ ಜಾಗವನ್ನು ಗುರುತಿಸಿ ಸ್ಪಷ್ಟ ಮಾಹಿತಿ ದೊರಕಲಿದೆ. ಆ ತನಕ ಎರಡು ಸಮುದಾಯದವರು ಸುಮ್ಮನಿರಬೇಕು' ಎಂದು ತಿಳಿಸಿದರು.

ಈ ವೇಳೆ ವಾಗ್ವಾದ ಹೆಚ್ಚಾಯಿತು. ತೆಗೆದಿದ್ದ ಗುಂಡಿಯೊಳಗೆ ಶವ ಇಳಿಸಲು ದಲಿತರು ಮುಂದಾದರು. ಈ ವೇಳೆ ಒಕ್ಕಲಿಗ ಸಮುದಾಯದ ಪೂರ್ಣಿಮಾ ಸುದೀನ್ ಎಂಬುವರು ಗುಂಡಿಯೊಳಗೆ ಇಳಿದರು. ತಕ್ಷಣ ಪೊಲೀಸರು ಅವರನ್ನು ಮೇಲಕ್ಕೆ ಎಳೆದುಕೊಂಡರು. ಪರಿಶಿಷ್ಟ ಸಮುದಾಯದ ಮಹಿಳೆಯರು ಅವರನ್ನು ತಡೆದರು. ಬಳಿಕ ಶವ ಸಂಸ್ಕಾರ ನೆರವೇರಿತು.

ಅಂಬೇಡ್ಕರ್ ಹೋರಾಟ ವೇದಿಕೆ ಅಧ್ಯಕ್ಷ ನವರಾಜು ಮಾತನಾಡಿ, '50 ರಿಂದ 60 ವರ್ಷಗಳ ಹಿಂದೆ ಚಿಕ್ಕಮಾಗರವಳ್ಳಿ ಸರ್ವೆ ನಂಬರ್ 108ರಲ್ಲಿ ಪರಿಶಿಷ್ಟ ಜಾತಿಯವರ ಸ್ಮಶಾನಕ್ಕೆ ಜಾಗ ಮಂಜೂರಾಗಿತ್ತು. ಇದೇ ಜಾಗದಲ್ಲಿ ಚಿಕ್ಕಮಗಳೂರು ರಸ್ತೆಯ ಸಂಪರ್ಕ ಸೇತುವೆ ನಿರ್ಮಿಸಲಾಗಿದೆ. ಉಳಿದ ಜಾಗವನ್ನು ಗ್ರಾಮ ಪಂಚಾಯಿತಿಯಲ್ಲಿ ಕೆಲವು ಪ್ರಭಾವಿ ಸದಸ್ಯರುಗಳು ಒಕ್ಕಲಿಗ ಸಮುದಾಯಭವನ ಎಂದು ಬರೆಸಿದ್ದಾರೆ' ಎಂದು ದೂರಿದರು.

ವಲಯ ಒಕ್ಕಲಿಗ ಸಂಘದ ಅಧ್ಯಕ್ಷ ಅಶೋಕ್ ಮಾತನಾಡಿ, 'ಒಕ್ಕಲಿಗ ಸಮುದಾಯ ಭವನಕ್ಕೆಂದು 170 ಅಡಿ ಉದ್ದ ಮತ್ತು 300 ಅಡಿ ಅಗಲ ನಿವೇಶನ ಕಾಯ್ದಿರಿಸಲಾಗಿದೆ. ಈ ಜಾಗದಲ್ಲಿ ಯಾರೂ ಅಂತ್ಯ ಸಂಸ್ಕಾರ ಮಾಡುತ್ತಿರಲಿಲ್ಲ. ಪರಿಶಿಷ್ಟರಿಗೆ ಬೇರೆಡೆ ಪರ್ಯಾಯ ಜಾಗ ಸೂಚಿಸಿದ್ದ ಕಾರಣ ಒಕ್ಕಲಿಗ ಸಮುದಾಯದಿಂದ ₹5 ಲಕ್ಷ ವೆಚ್ಚದಲ್ಲಿ ಜಾಗ ಸಮತಟ್ಟು ಮಾಡಲಾಗಿದೆ. ಈಗ ಉದ್ದೇಶಪೂರ್ವಕವಾಗಿ ಕೆಲವು ಸಂಘಟನೆಗಳು ವಿವಾದ ಉಂಟು ಮಾಡಿವೆ' ಎಂದರು.

ಘರ್ಷಣೆ ಸಂಬಂಧ ಪರಿಶಿಷ್ಟ ಸಮುದಾಯದ ಪಂಚಾಯಿತಿ ಸದಸ್ಯೆ ಲಕ್ಷ್ಮಿ ಹಾಗೂ ಒಕ್ಕಲಿಗ ಸಮುದಾಯದ ಪೂರ್ಣಿಮಾ ಸುದೀನ್ ಪರಸ್ಪರ ಹಲ್ಲೆಯ ದೂರು ನೀಡಿದ್ದು, ಆಲ್ದೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ತಹಶೀಲ್ದಾರ್ ಸುಮಂತ್ ಅವರೊಂದಿಗೆ ಚರ್ಚೆಯಲ್ಲಿ ತೊಡಗಿರುವ ಒಕ್ಕಲಿಗ ಸಮುದಾಯದ ಮುಖಂಡರು ಚರ್ಚೆ ನಡೆಸಿದರು

ಅಗರವಾಲ್, ನಿಖಿಲ್ ಚರ್ಚೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಮುಂಬರುವ ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯಿತಿ ಚುನಾವಣೆಗಳಲ್ಲಿ ರಾಜ್ಯದಲ್ಲಿ ಜೆಡಿಎಸ್ ಮತ್ತು ಬಿಜೆಪಿ ಪರಸ್ಪರ ಸಮನ್ವಯದಿಂದ ಕೆಲಸ ಮಾಡುವುದರ ಕುರಿತು ಜೆಡಿಎಸ್ ಯುವ ಘಟಕದ ರಾಜ್ಯ ಘಟಕ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರು ರಾಜ್ಯ ಬಿಜೆಪಿ ಉಸ್ತುವಾರಿ ರಾಧಾಮೋಹನ್ ದಾಸ್ ಅಗರವಾಲ್ ಅವರನ್ನು ಶುಕ್ರವಾರ ಭೇಟಿಯಾಗಿ ಚರ್ಚೆ ನಡೆಸಿದರು.

ಸ್ಥಳೀಯ ಸಂಸ್ಥೆಗಳ ಚುನಾವಣೆ ಹಾಗೂ ಮುಂದಿನ ದಿನಗಳಲ್ಲಿ ರಾಜ್ಯ ರಾಜಕಾರಣದಲ್ಲಿ ಎನ್‌ಡಿಎ ಮೈತ್ರಿಕೂಟವನ್ನು ಮತ್ತಷ್ಟು ಬಲವರ್ಧನೆಗೊಳಿಸುವುದಕ್ಕಾಗಿ ಅಗತ್ಯ ಸಲಹೆ-ಸೂಚನೆ ಪಡೆದುಕೊಳ್ಳಲು ನಿಖಿಲ್ ಅವರು ಗೃಹ ಸಚಿವ ಅಮಿತ್ ಶಾ ಅವರನ್ನು ಸೋಮವಾರ ಭೇಟಿ ಮಾಡಲಿದ್ದಾರೆ.

'ನೆಕ್ಸಸ್' ಬ್ಯುಸಿನೆಸ್ ತರಬೇತಿಗೆ ಅರ್ಜಿ ಆಹ್ವಾನ

ಪ್ರಜಾವಾಣಿ ವಾರ್ತೆ

ಚೆನ್ನೈ: ಅಮೆರಿಕದ ರಾಯಭಾರ ಕಚೇರಿಯು ದೆಹಲಿಯ ಅಮೆರಿಕನ್ ಸೆಂಟರ್‌ನಲ್ಲಿ ಉದ್ಯಮಿಗಳ ಮಾರ್ಗದರ್ಶನಕ್ಕಾಗಿ ಪ್ರತಿಷ್ಠಿತ 'ನೆಕ್ಸಸ್' ಕಾರ್ಯಕ್ರಮವನ್ನು ಆಯೋಜಿಸಿದ್ದು, ಆಸಕ್ತರಿಂದ ಅರ್ಜಿ ಆಹ್ವಾನಿಸಿದೆ. ಈ ತರಬೇತಿಯು ಮುಂದಿನ ವರ್ಷ ಫೆಬ್ರುವರಿ 2ರಿಂದ ಆರಂಭವಾಗಿ ಒಂಬತ್ತು ವಾರ ನಡೆಯಲಿದೆ. 'ನೆಕ್ಸಸ್' ಸರಣಿಯ 20ನೇ ಕಾರ್ಯಕ್ರಮ ಇದಾಗಿದೆ.

ಕಾರ್ಯಕ್ರಮದಲ್ಲಿ ಭಾರತದ 15 ನವೋದ್ಯಮಗಳಿಗೆ ಭಾರತೀಯ ಮತ್ತು ಅಮೆರಿಕದ ತಜ್ಞರಿಂದ ತರಬೇತಿ ಪಡೆಯುವ ಅವಕಾಶ ದೊರೆಯಲಿದೆ. ನವೋದ್ಯಮಗಳ ಮೇಲೆ ಕೃತಕ ಬುದ್ಧಿಮತ್ತೆಯ ಪ್ರಭಾವ ಮತ್ತು ಉದ್ಯಮಿಗಳ ಮಾನಸಿಕ ಆರೋಗ್ಯದ ಮಹತ್ವದ ಕುರಿತು ಇಲ್ಲಿ ಚರ್ಚಿಸಲಾಗುತ್ತದೆ. ಈಗಿನ ಮಾರುಕಟ್ಟೆಯ ಅಗತ್ಯಕ್ಕೆ ತಕ್ಕಂತೆ ತಂತ್ರಜ್ಞಾನವನ್ನು ಮೇಲ್ದರ್ಜೆಗೆ ಏರಿಸಲು, ಮಾರುಕಟ್ಟೆಯ ನಾಡಿಮಿಡಿತ ಅರಿಯಲು ತಜ್ಞರು ಮಾರ್ಗದರ್ಶನ ನೀಡಲಿದ್ದಾರೆ ಎಂದು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಲಾಗಿದೆ.

ತರಬೇತಿಯಲ್ಲಿ ಭಾಗವಹಿಸಲು ಆಸಕ್ತಿ ಹೊಂದಿರುವ ಉದ್ಯಮಿಗಳು ಜನವರಿ 5, 2025ರ ಒಳಗಾಗಿ www.startupnexus.in ನಲ್ಲಿ ಅರ್ಜಿ ಸಲ್ಲಿಸಬಹುದು. ಆಯ್ಕೆಯಾದವರಿಗೆ ಜನವರಿ 17, 2025ರ ಒಳಗಾಗಿ ಮಾಹಿತಿ ನೀಡಲಾಗುತ್ತದೆ.

ವಿಶ್ವಮೋಹನ ಭಟ್‌ಗೆ ಕದ್ರಿ ಗೋಪಾಲನಾಥ್ ಪ್ರಶಸ್ತಿ



ಮಂಗಳೂರು: ಇಲ್ಲಿಯ 'ಡಾ. ಕದ್ರಿ ಗೋಪಾಲನಾಥ್ ಅಕಾಡೆಮಿ ಫಾರ್ ಆರ್ಟ್ಸ್' ವಾರ್ಷಿಕವಾಗಿ ನೀಡುವ 'ಡಾ. ಕದ್ರಿ ಗೋಪಾಲನಾಥ್ ಜೀವಮಾನ ಸಾಧನೆ ಪ್ರಶಸ್ತಿ'ಗೆ ಮೋಹನವೀಣಾ ವಾದಕ ರಾಜಸ್ಥಾನ ಜೈಪುರದ ವಿಶ್ವಮೋಹನ ಭಟ್ ಆಯ್ಕೆಯಾಗಿದ್ದಾರೆ.

ಪ್ರಶಸ್ತಿಯು ₹50 ಸಾವಿರ ನಗದು, ಬೆಳ್ಳಿ ಪದಕ ಒಳಗೊಂಡಿದೆ.

ಸ್ಯಾಕ್ಸೊಫೋನ್ ವಾದಕ ದಿ. ಕದ್ರಿ ಗೋಪಾಲನಾಥ್ ಸ್ಮರಣೆಯಲ್ಲಿ ಡಿ.7ರಂದು ಸಂಜೆ 6 ಗಂಟೆಗೆ ಇಲ್ಲಿನ ಡಾ. ಬಿ.ಆರ್.ಅಂಬೇಡ್ಕರ್ ಭವನದಲ್ಲಿ ನಡೆಯುವ 'ಕದ್ರಿ ಸಂಗೀತ ಸೌರಭ' ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದು ಅಕಾಡೆಮಿಯ ಕಾರ್ಯದರ್ಶಿ ಮಣಿಕಾಂತ್ ಕದ್ರಿ ಅವರು ತಿಳಿಸಿದ್ದಾರೆ.

ಬೆಂಕಿ ಹಚ್ಚಿಕೊಂಡು ಯುವಕ ಆತ್ಮಹತ್ಯೆ

ತಡಸ (ಹಾವೇರಿ ಜಿಲ್ಲೆ): 'ಪ್ರೀತಿಸಲು ಯುವತಿ ಒಪ್ಪಲಿಲ್ಲ ಎಂಬ ಕಾರಣಕ್ಕೆ ನೊಂದಿದ್ದರು' ಎನ್ನಲಾದ ಪ್ರವೀಣ ಬೆಟದೂರು (25) ಎಂಬುವರು ಶುಕ್ರವಾರ ತಡಸ ಗ್ರಾಮದ ತಾಯವ್ವ ದೇವಿ ದೇವಸ್ಥಾನದ ಬಳಿ ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಕೆಲವು ಸಂದರ್ಭಗಳಲ್ಲಿ, ವಾದ ಮಾಡಿ ನಾನು ಸರಿ ಎಂದು ತೋರಿಸಿಕೊಳ್ಳುವ ಬದಲು, ಸುಮ್ಮನಿದ್ದು ಮನಃಶಾಂತಿ ಕಾಪಾಡಿಕೊಳ್ಳುವುದು ಒಳ್ಳೆಯದು.

–ಗೌತಮ ಬುದ್ಧ

ಮಹಾರಾಷ್ಟ್ರ: ಭರವಸೆಗಳು ಫಲ ಕೊಟ್ಟಿವೆ ಈಡೇರಿಸುವತ್ತ ಗಮನ ಕೇಂದ್ರೀಕರಿಸಬೇಕಿದೆ

ಮಹಾರಾಷ್ಟ್ರ ಮುಖ್ಯಮಂತ್ರಿಯಾಗಿ ದೇವೇಂದ್ರ ಫಡಣವೀಸ್ ಮತ್ತು ಉಪಮುಖ್ಯಮಂತ್ರಿಗಳಾಗಿ 'ಮಹಾಯುತಿ'ಯ ಪಾಲುದಾರರಾದ ಶಿವಸೇನಾದ ಏಕನಾಥ ಶಿಂದೆ ಮತ್ತು ಎನ್‌ಸಿಪಿಯ ಅಜಿತ್ ಪವಾರ್ ಅವರು ಪ್ರಮಾಣವಚನ ಸ್ವೀಕರಿಸಿದ್ದಾರೆ. ಫಲಿತಾಂಶದ ಬಳಿಕ ಹಲವು ದಿನ ಇದ್ದ ಊಹಾಪೋಹ ಮತ್ತು ಅನಿಶ್ಚಿತ ಸ್ಥಿತಿಗೆ ಇದರೊಂದಿಗೆ ತೆರೆಬಿದ್ದಿದೆ. ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಸಚಿವರು, ಎನ್‌ಡಿಎ ಅಧಿಕಾರದಲ್ಲಿರುವ ರಾಜ್ಯಗಳ ಮುಖ್ಯಮಂತ್ರಿಗಳು, ಮುಂಬೈನ ಗಣ್ಯಾತಿಗಣ್ಯರು ಮತ್ತು ಸಿನಿಮಾ ತಾರೆಯರ ಉಪಸ್ಥಿತಿಯೊಂದಿಗೆ ಕಾರ್ಯಕ್ರಮವು ಅದ್ದೂರಿಯಾಗಿ ನಡೆದಿದೆ. ಮಹಾರಾಷ್ಟ್ರದಲ್ಲಿ ಬಿಜೆಪಿ ಆಧಿಪತ್ಯ ಸಾಧಿಸಿದ್ದು ಇಲ್ಲಿ ಗಮನಾರ್ಹ ಅಂಶ. ಮಹಾರಾಷ್ಟ್ರದಲ್ಲಿ ಬಲ ಹೆಚ್ಚಿಸಿಕೊಳ್ಳುವ ಪ್ರಯತ್ನವನ್ನು ಬಿಜೆಪಿ ಹಲವು ವರ್ಷಗಳಿಂದ ಮಾಡಿತ್ತು. 2019ರ ಬಳಿಕ ಕೆಲ ಕಾಲ ಬಿಜೆಪಿ ಅಧಿಕಾರದಲ್ಲಿ ಇರಲಿಲ್ಲ. ಆದರೆ, ಶಿವಸೇನಾದಲ್ಲಿದ್ದ ಭಿನ್ನಮತವನ್ನು ಬಳಸಿಕೊಂಡು 2022ರಲ್ಲಿ ಮರಳಿ ಅಧಿಕಾರಕ್ಕೆ ಬಂತು. ಎನ್‌ಸಿಪಿಯ ಅಜಿತ್ ಪವಾರ್ ಬಣವನ್ನೂ ಮೈತ್ರಿಕೂಟಕ್ಕೆ ಸೇರಿಸಿಕೊಂಡು ತನ್ನ ನೆಲೆಯನ್ನು ಗಟ್ಟಿಗೊಳಿಸಿಕೊಂಡಿತ್ತು. ಕಳೆದ ತಿಂಗಳು ನಡೆದ ಚುನಾವಣೆಯಲ್ಲಿ ಭಾರಿ ಬಹುಮತದೊಂದಿಗೆ ಮೈತ್ರಿಕೂಟವು ಗೆದ್ದಿದೆ. ಬಿಜೆಪಿ ಸರಳ ಬಹುಮತದ ಸನಿಹದಲ್ಲಿದೆ. ಈಗ, ಮೈತ್ರಿಕೂಟದ ಒಂದು ಪಕ್ಷ ಕೈಬಿಟ್ಟರೂ ಸರ್ಕಾರಕ್ಕೆ ಯಾವುದೇ ತೊಂದರೆ ಎದುರಾಗದು.



'ಮಹಾಯುತಿ'ಗೆ ದೊರೆತಿರುವ ಭಾರಿ ಬಹುಮತವು ಸರ್ಕಾರದ ಮೇಲೆ ದೊಡ್ಡ ಜವಾಬ್ದಾರಿ ಹೊರಿಸಿದೆ. ಈ ಸವಾಲನ್ನು ಫಡಣವೀಸ್ ಅವರು ಸಮರ್ಥವಾಗಿ ನಿಭಾಯಿಸಬೇಕಾಗಿದೆ

ಫಲಿತಾಂಶದ ಬಳಿಕ ಶಿಂದೆ ಅವರು ಸ್ವಲ್ಪ ಪ್ರತಿರೋಧ ತೋರಿದ್ದರು. ಆದರೆ, ಹೆಚ್ಚು ಚೌಕಾಶಿ ಮಾಡುವ ಸ್ಥಿತಿಯಲ್ಲಿ ತಾವು ಇಲ್ಲ ಎಂಬುದು ಅರಿವಾದ ಬಳಿಕ ಅವರು ಸುಮ್ಮನಾದರು. ಬಿಜೆಪಿಗಿಂತ ಕಡಿಮೆ ಶಾಸಕರನ್ನು ಹೊಂದಿದ್ದರೂ ಬಿಹಾರದಲ್ಲಿ ನಿತೀಶ್ ಕುಮಾರ್ ಅವರಿಗೆ ಬಿಜೆಪಿಯು ನಾಯಕತ್ವವನ್ನು ನೀಡಿದೆ. ಅದೇ ಮಾದರಿಯನ್ನು ಮಹಾರಾಷ್ಟ್ರದಲ್ಲಿಯೂ ಅನುಸರಿಸಬೇಕು ಎಂದು ಶಿಂದೆ ಮತ್ತು ಅವರ ಬೆಂಬಲಿಗರು ಬಯಸುವುದು ನ್ಯಾಯೋಚಿತವಲ್ಲ. ಬಿಜೆಪಿ ಪ್ರತಿಯೊಂದು ರಾಜ್ಯದಲ್ಲಿಯೂ ಭಿನ್ನವಾದ ಕಾರ್ಯತಂತ್ರವನ್ನು ಅನುಸರಿಸುತ್ತಿದೆ. ರಾಜ್ಯದ ಪರಿಸ್ಥಿತಿ ಮತ್ತು ರಾಷ್ಟ್ರ ರಾಜಕಾರಣದ ಕಾರ್ಯತಂತ್ರಕ್ಕೆ ಅನುಗುಣವಾಗಿ ಪಕ್ಷವು ತನ್ನ ಯೋಜನೆ ರೂಪಿಸುತ್ತಿದೆ. ಕಾಲಕಾಲಕ್ಕೆ ಈ ಕಾರ್ಯತಂತ್ರದಲ್ಲಿ ಬದಲಾವಣೆಯೂ ಆಗಿದೆ. ಬಿಜೆಪಿಯ ಶಾಸಕರ ಸಂಖ್ಯೆಯ ಅರ್ಧದಷ್ಟು ಶಾಸಕರನ್ನೂ ಹೊಂದಿಲ್ಲದ ಶಿಂದೆ ಅವರು ಈಗ ದೊರೆತಿರುವುದಕ್ಕಿಂತ ಹೆಚ್ಚಿನದೇನನ್ನೂ ಕೇಳುವ ಸ್ಥಿತಿಯಲ್ಲಿ ಇರಲಿಲ್ಲ. ಅಜಿತ್ ಪವಾರ್ ಅವರಲ್ಲಿ ಅವಾಸ್ತವಿಕವಾದ ಆಸೆಗಳೇನೂ ಇರಲಿಲ್ಲ. ಸರ್ಕಾರದಲ್ಲಿ ತಮಗೆ ಸಿಕ್ಕ ಸ್ಥಾನದಲ್ಲಿ ಅವರು ತೃಪ್ತರಾಗಿದ್ದಾರೆ. ಜೊತೆಗೆ, ಶಾಸಕರ ಸಂಖ್ಯೆಯ ಆಧಾರದಲ್ಲಿ ನೋಡಿದರೂ ನಿಜವಾದ ಎನ್‌ಸಿಪಿ ತಮ್ಮದು ಎಂದು ಅವರು ಹೇಳಿಕೊಳ್ಳುವುದಕ್ಕೆ ಯಾವ ಸಮಸ್ಯೆಯೂ ಇಲ್ಲ. ಬಿಜೆಪಿಯ ಪ್ರಾಬಲ್ಯವನ್ನೂ ಈ ಇಬ್ಬರೂ ಒಪ್ಪಿಕೊಳ್ಳಲೇಬೇಕಾದ ಸ್ಥಿತಿ ಇದೆ. ಈಗ, ಖಾತೆ ಹಂಚಿಕೆಯ ವಿಷಯ ಮಾತ್ರ ಅಂತಿಮಗೊಳ್ಳಬೇಕಿದೆ.

ಚುನಾವಣಾ ರಾಜಕಾರಣ ಈಗ ಮುಗಿದಿದೆ. ಸ್ಥಿರ ಸರ್ಕಾರ ಇರುವುದು ಖಾತರಿಯಾಗಿದೆ. ಹಾಗಾಗಿ, ಫಡಣವೀಸ್ ಅವರು ಆಡಳಿತ ಮತ್ತು ರಾಜ್ಯದ ಮುಂದೆ ಇರುವ ಸವಾಲುಗಳ ಕುರಿತು ಗಮನ ಕೇಂದ್ರೀಕರಿಸಬೇಕಿದೆ. ಚುನಾವಣೆಗೆ ಮುಂಚೆ ಭರವಸೆ ನೀಡಿದಂತೆ 'ಲಾಡ್ಕಿ ಬಹಿಣ್ ಯೋಜನೆ'ಯ ವಿಸ್ತರಣೆಗೆ ಸಚಿವ ಸಂಪುಟವು ಒಪ್ಪಿಗೆ ಕೊಟ್ಟಿದೆ. ಇತರ ಜನಪ್ರಿಯ ಭರವಸೆಗಳನ್ನೂ ಸರ್ಕಾರವು ಜಾರಿಗೆ ತರಬೇಕಿದೆ. ಇದು ಸವಾಲಿನ ಕೆಲಸವೇ ಆಗಿದೆ. ಜೊತೆಗೆ ಅವರು ನಿರ್ವಹಿಸಬೇಕಿರುವ ಬೇರೆ ಗಂಭೀರ ವಿಚಾರಗಳೂ ಇವೆ. ಮಹಾರಾಷ್ಟ್ರವು ದೇಶದ ಅತ್ಯಂತ ಶ್ರೀಮಂತ ರಾಜ್ಯ. ಅಭಿವೃದ್ಧಿಯ ವಿವಿಧ ಮಾನದಂಡಗಳಿಗೆ ಸಂಬಂಧಿಸಿ ಈ ರಾಜ್ಯವು ಮಾದರಿಯೂ ಆಗಿತ್ತು. ಆದರೆ, ಇತ್ತೀಚೆಗೆ ರಾಜ್ಯದ ಪ್ರಗತಿ ಕುಂಠಿತವಾಗಿದೆ. ರೈತರ ಸಮಸ್ಯೆಗಳು ನಿರಂತರವಾಗಿ ಮುಂದುವರಿದಿವೆ, ನಿರುದ್ಯೋಗ ಪ್ರಮಾಣ ಹೆಚ್ಚಳವಾಗಿದೆ ಮತ್ತು ಆರ್ಥಿಕ ಕೊರತೆಯ ಮಟ್ಟವು ಹೆಚ್ಚಾಗಿದೆ. ಮರಾಠಾ ಮೀಸಲಾತಿ ಬೇಡಿಕೆ, ರಾಜ್ಯದಲ್ಲಿ ಅಸಮಾನ ಅಭಿವೃದ್ಧಿಯಂತಹ ಸಮಸ್ಯೆಗಳೂ ಇವೆ. ಜನರು ಅತಿ ಹೆಚ್ಚಿನ ನಿರೀಕ್ಷೆ ಇರಿಸಿಕೊಂಡಿದ್ದಾರೆ ಎಂಬ ಕಾರಣಕ್ಕಾಗಿಯೇ ಭಾರಿ ಬಹುಮತ ದೊರೆತಿದೆ. ಹಾಗಾಗಿ, ಸರ್ಕಾರದ ಮೇಲೆ ಅದು ಹೊರಿಸುವ ಹೊಣೆಗಾರಿಕೆಯೂ ದೊಡ್ಡದೇ ಆಗಿದೆ.

ದಿನದ ಟ್ವೀಟ್

ತ್ವರಿತವಾಗಿ ಪೂರ್ಣಗೊಳ್ಳಲಿ

ಇದು ಒಳ್ಳೆಯ ಸುದ್ದಿ. ಕೇಂದ್ರ ಸರ್ಕಾರ ಕೂಡ ಸಂಬಂಧಪಟ್ಟ ಅನುಮತಿಗಳನ್ನು ಶೀಘ್ರ ಕೊಡುತ್ತದೆ ಎಂಬ ಭರವಸೆ ಹೊಂದೋಣ. ಪ್ರಮುಖ ಪ್ರದೇಶಗಳಿಗೆ ತೆರಳಲು ಇದು ಮಹತ್ವದ ಮಾರ್ಗ.

(ಸರ್ಜಾಪುರದಿಂದ ಹೆಬ್ಬಾಳದವರೆಗಿನ ಬೆಂಗಳೂರು ಮೆಟ್ರೊ ಕಾಮಗಾರಿಗೆ ರಾಜ್ಯ ಸರ್ಕಾರ ಅನುಮೋದನೆ ನೀಡಿರುವುದಕ್ಕೆ ಪ್ರತಿಕ್ರಿಯೆ)

ಸುಧೀರ್

ಕಿಡಿನುಡಿ

ಬಾಣಂತಿಯರ ಸರಣಿ ಸಾವು ಸಂಭವಿಸಿರುವ ಬಳ್ಳಾರಿ ಆಸ್ಪತ್ರೆಗೆ ಭೇಟಿ ನೀಡಲು ಕಾಂಗ್ರೆಸ್ ನಾಯಕರಿಗೆ ಸಮಯವಿಲ್ಲ. ಆದರೆ, ಹಾಸನದಲ್ಲಿ ಸಮಾವೇಶ ಮಾಡಲು ಸಮಯವಿದೆ. ಅದಕ್ಕಾಗಿ ಕೋಟ್ಯಂತರ ರೂಪಾಯಿ ವೆಚ್ಚ ಮಾಡುತ್ತಾರೆ. ಇವರಿಗೆ ಜನರ ಬಗ್ಗೆ ಕಾಳಜಿಯೇ ಇಲ್ಲ.



ಆರ್.ಅಶೋಕ, ವಿರೋಧ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಮಂಗಳವಾರ, 7-12-1999

● **ವಿರೋಧಿ ಆಕ್ರೋಶ– ಗದ್ದಲ ನಡೆಯದ ಕಲಾಪ**

ನವದೆಹಲಿ, ಡಿ. 6 (ಪಿಟಿಐ, ಯುಎನ್‌ಐ)– ಬಾಬ್ರಿ ಮಸೀದಿ ಧ್ವಂಸವಾಗಿ ಏಳು ವರ್ಷ ತುಂಬಿದ ಇಂದು, ಮಸೀದಿ ಧ್ವಂಸ ಆರೋಪ ಪಟ್ಟಿಯಲ್ಲಿರುವ ಗೃಹ ಸಚಿವ ಎಲ್.ಕೆ. ಅಡ್ವಾಣಿ, ಮಾನವ ಸಂಪನ್ಮೂಲ ಸಚಿವ ಮುರಳಿ ಮನೋಹರ ಜೋಶಿ, ಪ್ರವಾಸೋದ್ಯಮ ಸಚಿವೆ ಉಮಾ ಭಾರತಿ ಅವರು ಸರ್ಕಾರದಲ್ಲಿ ಮುಂದುವರಿಯುವುದರ ಔಚಿತ್ಯ ಪ್ರಶ್ನಿಸಿ ವಿರೋಧಪಕ್ಷಗಳು ಲೋಕಸಭೆಯಲ್ಲಿ ನಡೆಸಿದ ಭಾರಿ ಗದ್ದಲ, ಚಕಮಕಿಯಿಂದಾಗಿ ಇಡೀ ದಿನದ ಕಲಾಪವನ್ನು ನಾಳೆಗೆ ಮುಂದೂಡಲಾಯಿತು.

ಈ ಸಂಬಂಧ ಸದನದ ಕಲಾಪ ಎರಡು ಸಲ ಮುಂದಕ್ಕೆ ಹೋಗಿ ಮತ್ತೆ ಸಮಾವೇಶಗೊಂಡರೂ ಗದ್ದಲ ನಿಲ್ಲದ ಕಾರಣ, ಮೊದಲ ಒಂದು ಗಂಟೆ ಬಿಟ್ಟರೆ ಉಳಿದ ಅವಧಿಯಲ್ಲಿ ಕಲಾಪ ನಡೆಯದಂತಾಯಿತು.

ರಾಜ್ಯಸಭೆಯಲ್ಲಿಯೂ ಅಯೋಧ್ಯೆ ವಿವಾದ ಪ್ರತಿಧ್ವನಿಸಿದ್ದು, ಉಭಯ ಬಣಗಳ ಸದಸ್ಯರ ನಡುವೆ ಮಾತಿನ ಚಕಮಕಿ ನಡೆಯಿತು.

● **ನಾಶದ ಅಂಚಿನಲ್ಲಿನ ಶರಣ ಸಾಹಿತ್ಯ ಪೋಷಣೆಗೆ ಕರೆ**

ಬೆಳಗಾವಿ. ಡಿ. 6– ಎಲೆಕ್ಟ್ರಾನಿಕ್ ಮಾಧ್ಯಮದ ಹಾವಳಿಯಿಂದ ಗೀತ ರೂಪದಲ್ಲಿನ ಶರಣ ಸಾಹಿತ್ಯವು ನಶಿಸುವ ಅಪಾಯವಿದ್ದು ಅದನ್ನು ಶರಣ ಸಾಹಿತ್ಯ ಪರಿಷತ್ತು, ಮಠಗಳು, ಸಂಗೀತ ಪ್ರಿಯರು ಮತ್ತು ಜನಪದ ವಿದ್ವಾಂಸರು ಉಳಿಸಬೇಕು ಎಂದು ಹಿರಿಯ ಲೇಖಕಿ ಶಾಂತಾದೇವಿ ಮಾಳವಾಡ ಇಂದು ಇಲ್ಲಿ ಮನವಿ ಮಾಡಿದರು.

ಜವಾಹರಲಾಲ್ ನೆಹರೂ ವೈದ್ಯಕೀಯ ಕಾಲೇಜಿನ ಡಾ. ಬಿ.ಎಸ್. ಜೀರಗೆ ಸಭಾಂಗಣದಲ್ಲಿ ನಡೆದ ಅಖಿಲ ಭಾರತ ಐದನೇ ಶರಣ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ನಶಿಸುತ್ತಿದ್ದ ಜನಪದ ಸಾಹಿತ್ಯವನ್ನು ಉಳಿಸಲು 'ಜಾನಪದ ಲೋಕ'ದಂಥ ಒಂದು ಸಂಸ್ಥೆಯ ಮೂಲಕ ಡಾ. ಎಚ್.ಎಲ್. ನಾಗೇಗೌಡರು ಮಾಡಿದ ಪ್ರಯತ್ನ ಶರಣ ಸಾಹಿತ್ಯದ ಉಳಿವಿಗೆ ಮಾದರಿಯಾಗಬೇಕು ಎಂದರು.

50 ವರ್ಷಗಳ ಹಿಂದೆ

ಶನಿವಾರ, 7-12-1974

● **ಸತ್ಯಾಗ್ರಹ ಮುಂದಕ್ಕೆ: ಎಲ್ಲ ಸಿಬಿಐ ದಾಖಲೆ ಮಂಡನೆಗೆ ಒತ್ತಾಯ**

ನವದೆಹಲಿ, ಡಿ. 6 – ಸಂಸತ್ತಿನ ಉಭಯ ಸದನಗಳ ಒಳಗಡೆ ಇಂದು ನಡೆಯಬೇಕಾಗಿದ್ದ ಮೊರಾರ್ಜಿ ದೇಸಾಯಿ ಮತ್ತಿತರ ವಿರೋಧಿ ನಾಯಕರ ಸತ್ಯಾಗ್ರಹದ ಬೆದರಿಕೆ ಸೋಮವಾರದವರೆಗೂ ಮುಂದೆ ಸರಿದಿದೆಯಾದರೂ, ಲೈಸೆನ್ಸ್ ಹಗರಣದ ಸಿಬಿಐ ವರದಿ ಕುರಿತು ಸರ್ಕಾರ ಮತ್ತು ವಿರೋಧ ಪಕ್ಷಗಳ ನಡುವಣ ಬಿಕ್ಕಟ್ಟು ಮಾತ್ರ ಶೀಘ್ರ ಇತ್ಯರ್ಥವಾಗುವ ಸಾಧ್ಯತೆ ಇಲ್ಲದೆ ಮುಂದುವರಿದಿದೆ.

ಕೇಂದ್ರ ತನಿಖಾ ಮಂಡಳಿಯ ವರದಿ ಹಾಗೂ ಅದಕ್ಕೆ ಸಂಬಂಧಿಸಿದ ಎಲ್ಲ ದಾಖಲೆಗಳನ್ನು ಸಂಸತ್ ಸಮಿತಿಗೆ ಒಪ್ಪಿಸಬೇಕೆಂಬ ಬೇಡಿಕೆಯನ್ನು ಇಂದು ವಿರೋಧ ಪಕ್ಷಗಳ ಪರವಾಗಿ ಮೊರಾರ್ಜಿ ದೇಸಾಯಿ ಮಂಡಿಸಿದರು.

● **ಸೇತುವೆ ಬಳಸುವ ವಾಹನಗಳಿಗೆ ಸುಂಕ**

ಬೆಂಗಳೂರು, ಡಿ. 6– ರಾಜ್ಯದಲ್ಲಿ ಹಳೆಯ ಮತ್ತು ಹೊಸ ಸೇತುವೆಗಳ ಮೇಲೆ ಹೋಗುವ ವಾಹನಗಳಿಗೆ ಟೋಲ್ (ಸುಂಕ) ವಿಧಿಸಲು ಅಧಿಕಾರ ಪಡೆಯುವುದಕ್ಕೆ ಸುಗ್ರೀವಾಜ್ಞೆ ಹೊರಡಿಸಲು ಸರ್ಕಾರ ಪರಿಶೀಲಿಸುತ್ತಿದೆ.

ನೂರು ಅಡಿ ಉದ್ದಕ್ಕಿಂತ ಹೆಚ್ಚು ವಿಸ್ತಾರವಾದ ನೀರು ಹೋಗುವ ವ್ಯವಸ್ಥೆ ಇರುವ ಸೇತುವೆಗಳಿಗೆ ಇದು ಅನ್ವಯವಾಗಲಿದೆ.

ರಾಜಧಾನಿಯ ಹದಗೆಟ್ಟ ಪರಿಸರದ ಆರೋಗ್ಯ ಕಾಪಾಡಲು ಪ್ರಬಲ ಇಚ್ಛಾಶಕ್ತಿ ಬೇಕಿದೆ

ಅಸ್ವಸ್ಥಳಾಗಿದ್ದಾಳೆ 'ಬೆಂಗಳೂರು ಅಮ್ಮ'



ವಿಶ್ಲೇಷಣೆ

ಅ.ನ. ಯಲ್ಲಪ್ಪ ರೆಡ್ಡಿ

ಕಾವೇರಿ ನದಿಯ ಉಪ ಜಲಾನಯನ ಪ್ರದೇಶವಾಗಿರುವ ಬೆಂಗಳೂರಿನ ಜ್ಞಾನಭಾರತಿ ಕ್ಯಾಂಪಸ್ಸಿನ ಜೀವವೈವಿಧ್ಯವು ಐತಿಹಾಸಿಕ ಮಹತ್ವ ಪಡೆದಿದೆ. ದಶಕಗಳ ಹಿಂದೆ, ಅಂದರೆ 1950ಕ್ಕೂ ಮೊದಲು ಈ ಭೂಭಾಗವು ಶ್ರೀಗಂಧದ ಕಾವಲು ಎಂದೇ ಹೆಸರಾಗಿತ್ತು. ಆನೆಗಳು ಓಡಾಡುವ ಪ್ರದೇಶವೂ ಆಗಿತ್ತು. ಅನ್ನಪೂರ್ಣೇಶ್ವರಿ ನಗರ ವ್ಯಾಪ್ತಿಯ ಪ್ರಸ್ತುತ ಭೂಪ್ರದೇಶವು ಬೆಂಗಳೂರಿನ ಅತಿ ಎತ್ತರದ ಭಾಗವಾಗಿತ್ತು. ಅಲ್ಲಿ ಪೊಲೀಸ್ ಇಲಾಖೆಯವರಿಗೆ ವಸತಿ ಸೌಕರ್ಯಕ್ಕಾಗಿ ಕ್ವಾರ್ಟರ್ಸ್ ನಿರ್ಮಿಸಲಾಗಿದೆ. ನೀರ ಹರಿವಿನ ಒಂದು ಜಾಗ ಅಲ್ಲಿದ್ದು, ಅದು ವೃಷಭಾವತಿ ಕಣಿವೆಯನ್ನು ಸೇರಿಕೊಳ್ಳುತ್ತದೆ. ಇಂತಹದೇ ಮೂರ್ನಾಲ್ಕು ನೀರತೊರೆಗಳು ಅಲ್ಲಿದ್ದವು. ಅಲ್ಲೆಲ್ಲ ಸ್ಫಟಿಕಶುದ್ಧ ನೀರು 1960ರ ಸುಮಾರಿನವರೆಗೂ ಲಭ್ಯವಾಗುತ್ತಿತ್ತು.

ಐರೋಪ್ಯ ಒಕ್ಕೂಟವು ತನ್ನ ವ್ಯಾಪ್ತಿಯ ರಾಷ್ಟ್ರಗಳಲ್ಲಿ ಪರಿಸರ ಸಂರಕ್ಷಣೆಗಾಗಿ ತೆಗೆದುಕೊಂಡಿರುವ ಕ್ರಮಗಳಿಗೆ ಅನುಗುಣವಾಗಿ, ಪೊಲೀಸ್ ಇಲಾಖೆಯ ಸಹಯೋಗದೊಂದಿಗೆ ಇಲ್ಲಿಯೂ ಈ ಭೂಭಾಗದ ಮೂಲಸ್ವರೂಪವನ್ನು ಪುನರ್‌ಸ್ಥಾಪಿಸುವ ದಿಸೆಯಲ್ಲಿ ಒಂದು ತೀರ್ಮಾನವನ್ನು ತೆಗೆದುಕೊಳ್ಳಲಾಗಿದೆ. ಈ ಭೂಭಾಗಕ್ಕೆ ಆಗಿರುವ ಹಾನಿಯ ಶೇ 30ರಷ್ಟನ್ನು 2030ರ ಒಳಗಾಗಿ ಹಾಗೂ ಶೇ 50ರಷ್ಟನ್ನು 2050ರ ವೇಳೆಗೆ ಸರಿಪಡಿಸಿ ಮೂಲಸ್ಥಿತಿಗೆ ತಂದು ನಿಲ್ಲಿಸಬೇಕೆಂದು ನಿರ್ಧರಿಸಲಾಗಿದೆ.

ಈ ಕುರಿತು ಬೆಂಗಳೂರು ಪೊಲೀಸ್ ಆಯುಕ್ತ ಬಿ.ದಯಾನಂದ ಮತ್ತು ಅವರ ಸಹವರ್ತಿಗಳು, ಪೊಲೀಸ್ ಕ್ವಾರ್ಟರ್ಸ್ ಪರಿಸರದಲ್ಲಿ ಇರುವ ಮಲಿನ ಪ್ರದೇಶಗಳನ್ನು ಗುರುತಿಸಿ, ಸರಿಪಡಿಸುವ ಕೆಲಸವನ್ನು ಪರಿಸರದಲ್ಲಿ ಆಸಕ್ತಿ ಇರುವ ನಮ್ಮ ತಂಡಕ್ಕೆ ವಹಿಸಿದ್ದಾರೆ. ಅದರಂತೆ, ಸುಮಾರು 100 ಎಕರೆ ವ್ಯಾಪ್ತಿಯ ಈ ಪ್ರದೇಶದಲ್ಲಿ ಜಲ ಶುದ್ಧೀಕರಣ ಸ್ಥಾವರ ಅಳವಡಿಸಿ, ಅಲ್ಲಿಂದ ವೃಷಭಾವತಿ ನದಿಗೆ ಶುದ್ಧ ನೀರು ಹರಿದುಹೋಗುವಂತೆ ಮಾಡುವ ಕಾರ್ಯಕ್ಕೆ ಚಾಲನೆ ಸಿಕ್ಕಿದೆ.


ವಿಪರ್ಯಾಸವೆಂದರೆ, ಇಂದು ಬೆಂಗಳೂರಿನ ಬಹುತೇಕ ಭೂಭಾಗ ದುರಸ್ತಿ ಮಾಡಲಾಗದಂತಹ ಸ್ಥಿತಿ ತಲುಪಿದೆ. 1978ರಲ್ಲಿ ಅಂದಿನ ಮುಖ್ಯಮಂತ್ರಿ ದೇವರಾಜ ಅರಸು ಅವರು ನಗರದ ಅನೇಕ ಭಾಗಗಳನ್ನು ಹಸಿರುಪಟ್ಟಿ ಪ್ರದೇಶ (ಗ್ರೀನ್ ಬೆಲ್ಟ್) ಎಂದು ಗುರುತಿಸಿ ಅಧಿಸೂಚನೆ ಹೊರಡಿಸಿದ್ದರು. ಅವರಲ್ಲಿದ್ದ ಅಂತಹ ಒಳನೋಟ, ದೂರದೃಷ್ಟಿಯನ್ನು ಮೆಚ್ಚಲೇಬೇಕು. ಆದರೆ ಇಂದೇನಾಗಿದೆ? ರಾಜಕೀಯ ನಾಯಕರು ಎಲ್ಲ ನೀತಿ ನಿಯಮಗಳನ್ನೂ ಗಾಳಿಗೆ ತೂರಿ, ಹಸಿರುಪಟ್ಟಿಯ ಅಂಚಿನ ಪ್ರದೇಶಗಳನ್ನು ಡಿನೋಟಿಫೈ ಮಾಡಿ ಕಬಳಿಸುವ ಕೆಲಸವನ್ನು ನಿರಂತರವಾಗಿ ಮಾಡುತ್ತಿದ್ದಾರೆ. ಇಂದಿನ ರಾಜಕಾರಣಿಗಳಿಗೆ ಬೆಂಗಳೂರಿನ ಬಗ್ಗೆ ಇರುವ ಪರಿಕಲ್ಪನೆಗಳು ಈ ಊರಿಗೆ ವರವಲ್ಲ, ಶಾಪವಾಗಿ ಪರಿಣಮಿಸಿವೆ. ಬೆಂಗಳೂರಿನ ಹಲವು ಭಾಗಗಳಲ್ಲಿರುವ ಶ್ರೀಗಂಧದ ಕಾವಲು ಮತ್ತು ಅಪರೂಪದ ವೃಕ್ಷಸಂಪತ್ತಿನ ಪರಿಸರ ವ್ಯವಸ್ಥೆ ವಿಪರೀತ ಹಾಳಾಗಿದೆ.

2002ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿಯಾಗಿದ್ದ ಪ್ರೊ. ಸಿದ್ಧಪ್ಪ ಅವರಿಗೆ ಕ್ಯಾಂಪಸ್ಸಿನ 1,200 ಎಕರೆ ಭೂಭಾಗವನ್ನು ಜೀವವೈವಿಧ್ಯ ತಾಣವಾಗಿಸಬೇಕೆಂಬ ಉದ್ದೇಶವಿತ್ತು. ಎಲ್ಲೆಲ್ಲೂ ಹಸಿರು ಸಸ್ಯಕಾಶಿ ನಳನಳಿಸುವಂತೆ ಇರಬೇಕು, ಅದರಿಂದ ನಗರದ ಪರಿಸರ ಮತ್ತು ಹವಾಮಾನ ತಂಪಾಗಬೇಕು, ಈ ಭೂಭಾಗವು ಆಕ್ಸಿಜನ್ ಬ್ಯಾಂಕ್ ಆಗಬೇಕು, ಜಲನಿಕ್ಷೇಪವಾಗಿ ಪರಿವರ್ತನೆಯಾಗಬೇಕು ಎಂಬ ಕಾಳಜಿ ಮತ್ತು ದೂರದೃಷ್ಟಿ ಅವರದಾಗಿತ್ತು. ದೇಶದ ಯಾವ ವಿಶ್ವವಿದ್ಯಾಲಯಕ್ಕೂ ಇಷ್ಟೊಂದು ವಿಸ್ತಾರವಾದ ಸ್ವಂತ ಭೂಮಿ ಇಲ್ಲ. ಇದು ಬೆಂಗಳೂರು ವಿಶ್ವವಿದ್ಯಾಲಯದ ಹಿರಿಮೆ ಮತ್ತು ಹೆಮ್ಮೆ ಎಂಬುದು ಗಮನಾರ್ಹ.

ಈ ಕುರಿತು ಹಲವು ಬಾರಿ ಮಾತುಕತೆಗಳನ್ನು ನಡೆಸಿದ ನಂತರ ವಿವಿಧ ವಿಭಾಗಗಳ ಮುಖ್ಯಸ್ಥರು ಒಂದೆಡೆ ಸೇರಿ ವಿಚಾರ ವಿನಿಮಯ ನಡೆಸಬೇಕೆಂಬ ಉದ್ದೇಶದಿಂದ ಜಿಯಾಲಜಿ, ಹೈಡ್ರಾಲಜಿ, ಓಷಿಯನಾಲಜಿ, ಜಿಯಾಗ್ರಫಿ, ಜಿಯೊ ಇನ್‌ಫಾರ್ಮೆಟಿಕ್ಸ್, ಕೆಮಿಕಲ್ ಇನ್‌ಫಾರ್ಮೆಟಿಕ್ಸ್ ಸೇರಿದಂತೆ ಹಲವು ವಿಭಾಗಗಳ ಮುಖ್ಯಸ್ಥರನ್ನು ಕರೆಯಲಾಯಿತು. ದುರದೃಷ್ಟವಶಾತ್ ಅವರು ಯಾರೂ ಭಾಗವಹಿಸಲಿಲ್ಲ. ಇಂತಹ ಅಂತರ್‌ಶಿಸ್ತೀಯ ಸಂಗತಿಗಳ ಬಗ್ಗೆ ಚರ್ಚೆಯಾಗಲೀ ಅರ್ಥಪೂರ್ಣ ಸಂಶೋಧನಾತ್ಮಕ ಕ್ರಮವಾಗಲೀ ಸಾಧ್ಯವಾಗಲಿಲ್ಲ.

ವಿಶ್ವವಿದ್ಯಾಲಯದ ಹಲವು ವಿಭಾಗಗಳಲ್ಲಿ ಆಯಕಟ್ಟಿನ ಜಾಗಗಳಲ್ಲಿ ಇದ್ದವರಿಗೆ ಇದೆಲ್ಲ ಬೇಕಿರಲಿಲ್ಲ. ಅವರು ತಮ್ಮ ಸುತ್ತಲಿನ ಕೋಟೆಯನ್ನು ಭದ್ರಪಡಿಸಿಕೊಳ್ಳುವುದರಲ್ಲೇ ತಲ್ಲೀನರಾಗಿದ್ದರು. ತಮ್ಮ ಸಂಬಳ, ಇನ್‌ಕ್ರಿಮೆಂಟ್, ಮುಂಬಡ್ತಿಯಂತಹ ವಿಷಯಗಳಿಗೆ ಶೇ 50ರಷ್ಟು ಸಮಯವನ್ನು ವ್ಯಯಿಸಿದರೆ, ಇನ್ನುಳಿದ ಸಮಯವನ್ನು ರಾಜಕಾರಣಿಗಳನ್ನು ಸಂಪ್ರೀತಗೊಳಿಸಿ ಕುಲಪತಿ ಹುದ್ದೆಗೇರುವುದು ಹೇಗೆ ಎಂಬ ಚಿಂತೆಯಲ್ಲೇ ಕಳೆಯುತ್ತಿದ್ದರು.

ಲೈಫ್ ಸೈನ್ಸ್ ಇನ್‌ಸ್ಟಿಟ್ಯೂಟ್ ಮೂಲಕ ಪರಸ್ಪರ ಸಂವಾದ ಏರ್ಪಡಿಸಿ, ಎಲ್ಲರನ್ನೂ ಒಗ್ಗೂಡಿಸಿ ಕಾರ್ಯಯೋಜನೆ ರೂಪಿಸುವ ಪ್ರಯತ್ನವನ್ನು 2006ರಲ್ಲಿ ನಾನು ಮಾಡಿದ್ದೆ. ಆದರೆ ಅದು ಫಲಪ್ರದವಾಗಲಿಲ್ಲ. ಯಾರೂ ಈ ಬಗ್ಗೆ ಗಮನ ಕೊಡಲಿಲ್ಲ. ಆ ಸಂದರ್ಭದಲ್ಲಿ ನನಗೆ ಜೊತೆಯಾದವರು ವಿಶ್ವವಿದ್ಯಾಲಯದ ಜಿಯಾಲಜಿ ವಿಭಾಗದ ಮುಖ್ಯಸ್ಥರಾದ ಪ್ರೊ. ರೇಣುಕಾ ಪ್ರಸಾದ್. ನಾವು ಬೆಂಗಳೂರು ವಿಶ್ವವಿದ್ಯಾಲಯದ ಭೂಭಾಗವನ್ನೆಲ್ಲ ಸುತ್ತಾಡಿ, ಅದನ್ನು ಜೈವಿಕ ಉದ್ಯಾನವನ್ನಾಗಿ ಪರಿವರ್ತಿಸುವುದು ಹೇಗೆ ಎಂಬ ಬಗ್ಗೆ ಚಿಂತನೆ ನಡೆಸಿದೆವು, ಕಾರ್ಯಯೋಜನೆ ರೂಪಿಸಿದೆವು. ಅಂದು ನಾವು ಗುರುತಿಸಿದ್ದ ಬಂಡೆ ಇಂದು ಜಿಯಲಾಜಿಕಲ್ ಪಾರ್ಕ್ ಎಂದು ಹೆಸರು ಪಡೆದಿದೆ. ಮೊದಲಿಗೆ ನಾವು ಅಲ್ಲಿ ಚರಕ ಮತ್ತು ಸುಶ್ರುತ ಅವರ ಹೆಸರಿನಲ್ಲಿ ವನಗಳನ್ನು ನಿರ್ಮಿಸಿದೆವು. ಅವರು ವೈದ್ಯಪದ್ಧತಿಯಲ್ಲಿ ಬಳಸುತ್ತಿದ್ದ ಸಸ್ಯ-ವೃಕ್ಷಗಳನ್ನು ನೆಟ್ಟು ಬೆಳೆಸಿದೆವು. ಅದೇ ರೀತಿಯಲ್ಲಿ ಹಲವಾರು ಬಗೆಯ ವನಗಳ ನಿರ್ಮಾಣವಾಯಿತು. ಸರಿಸುಮಾರು 7,000 ಎನ್‌ಎಸ್‌ಎಸ್ ವಿದ್ಯಾರ್ಥಿಗಳ ನೆರವಿನೊಂದಿಗೆ ಕೆಲಸಗಳಾದವು. ಮಳೆನೀರು ಸಂಗ್ರಹಕ್ಕೆ ಇಂಬುಕೊಡುವ ಕಲ್ಯಾಣಿಯನ್ನು ನಿರ್ಮಿಸಿದೆವು, ಅಲ್ಲಲ್ಲಿ ಸಣ್ಣ ಸಣ್ಣ ಕೆರೆಗಳ ನಿರ್ಮಾಣವೂ ಆಯಿತು.




ಎಂದೂ ಜಲಕ್ಷಾಮ ಬರಬಾರದು ಎಂಬುದು ನಮ್ಮ ಉದ್ದೇಶವಾಗಿತ್ತು. ಅದರಂತೆ, ಭಾರತೀಯ ಕ್ರೀಡಾ ಪ್ರಾಧಿಕಾರದವರು ಈಗ ಅಲ್ಲಿ ತಮಗೆ ಬೇಕಾದಷ್ಟು ನೀರನ್ನು ತಾವೇ ಪಡೆಯುವಂತಾಗಿದೆ, ಅಂತರ್ಜಲ ಮಟ್ಟ ಸುರಕ್ಷಿತವಾಗಿರುವುದರ ಕಾರಣ ಹಸಿರು ನಳನಳಿಸಿದೆ. ವಾತಾವರಣದಲ್ಲಿನ ಪ್ರಶಾಂತತೆ ಮತ್ತು ಸೌಂದರ್ಯ ಇಮ್ಮಡಿಸಿದೆ. ಇಲ್ಲಿ ಒಂದು ಮಾತು ಹೇಳಲೇಬೇಕು. ಇದಾವುದಕ್ಕೂ ನಾವು ಸರ್ಕಾರದ ಅನುದಾನವನ್ನಾಗಲೀ ವಿಶ್ವವಿದ್ಯಾಲಯದ ಹಣವನ್ನಾಗಲೀ ಬಳಸಲಿಲ್ಲ. ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆಯಡಿ (ಸಿಎಸ್‌ಆರ್) ಹಣ ಪಡೆದು ಎಲ್ಲವನ್ನೂ ನಿರ್ವಹಿಸಲಾಯಿತು, ನನ್ನ ಪಿಂಚಣಿಯ ಹಣದಲ್ಲೂ ಒಂದಷ್ಟನ್ನು ವ್ಯಯಿಸಿದೆ. ಎಲ್ಲರಿಗೂ ವಾಸ್ತವ ತಿಳಿಯಲಿ ಎಂಬುದಷ್ಟೇ ಇದನ್ನೆಲ್ಲ ಹೇಳುತ್ತಿರುವುದರ ಹಿಂದಿನ ಉದ್ದೇಶ.

ಈ ಭೂಭಾಗವನ್ನು ಇನ್ನಷ್ಟು ಅಭಿವೃದ್ಧಿಪಡಿಸುವುದಕ್ಕೆ ವಿಪುಲ ಅವಕಾಶಗಳಿವೆ. ಆದರೆ ಇಲ್ಲಿಗೆ ಕುಲಪತಿಯಾಗಿ ಬರುವವರಲ್ಲಿ ಹೆಚ್ಚಿನವರಿಗೆ ಈ ಕೆಲಸಕ್ಕೆ ಸಮಯವಿಲ್ಲ, ವ್ಯವಧಾನವೂ ಇಲ್ಲ. ರಾಜಕಾರಣಿಗಳನ್ನು ಸಂಪ್ರೀತಗೊಳಿಸುವುದಕ್ಕೇ ಅವರ ಬಹುತೇಕ ಸಮಯ ವ್ಯಯವಾಗುತ್ತಿದೆ. ಬಹುತೇಕರಿಗೆ ಇರುವ ಒಳ ಉದ್ದೇಶ ವಿಶ್ವವಿದ್ಯಾಲಯದ ಭೂಮಿಯನ್ನು ರಿಯಲ್ ಎಸ್ಟೇಟ್ ಮಾಫಿಯಾದವರ ಪಾದಗಳಿಗೆ ಅರ್ಪಿಸಿ ಲಾಭ ಮಾಡಿಕೊಳ್ಳುವುದು, ತನ್ಮೂಲಕ ವಿಶ್ವವಿದ್ಯಾಲಯದ ಹಸಿರು ಪರಿಸರವನ್ನು ಕಾಂಕ್ರೀಟ್ ಕಾಡನ್ನಾಗಿ ಪರಿವರ್ತಿಸುವುದು ಎಂಬುದನ್ನು ವಿಷಾದದಿಂದಲೇ ಹೇಳಬೇಕಾಗಿದೆ.

ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಕೆರೆಗಳೂ ಸೇರಿದಂತೆ ಸಾವಿರಾರು ಎಕರೆ ಭೂಪ್ರದೇಶ ಒತ್ತುವರಿಯಾಗಿದೆ. ಅದೆಲ್ಲವನ್ನೂ ತೆರವುಗೊಳಿಸಿ ಅಲ್ಲೆಲ್ಲ ಹಸಿರು ನಳನಳಿಸುವ ಥೀಮ್ ಪಾರ್ಕುಗಳನ್ನು ಸ್ಥಾಪನೆ ಮಾಡಬಹುದು. ಹೀಗೆ ಮಾಡುವುದರಿಂದ, ಆರೋಗ್ಯ ಹದಗೆಟ್ಟು ಜ್ವರಪೀಡಿತಳಾಗಿರುವ 'ಬೆಂಗಳೂರು ಅಮ್ಮ'ನನ್ನು ಕಾಪಾಡಬಹುದು. ಆದರೆ ಅದಕ್ಕೆ ಬೇಕಾದ ಇಚ್ಛಾಶಕ್ತಿ ಯಾರಲ್ಲೂ ಕಾಣಿಸುತ್ತಿಲ್ಲ.

ಬ್ರ್ಯಾಂಡ್ ಬೆಂಗಳೂರಿನ ಹೆಸರಿನಲ್ಲಿ ಹಸಿರು ಪರಿಸರವನ್ನು ನಾಶ ಮಾಡಿ, ಕಾಂಕ್ರೀಟ್ ಕಾಡು ನಿರ್ಮಿಸಿ, ಎಲ್ಲೆಂದರಲ್ಲಿ ಮೆಟ್ರೊ ಸೇರಿದಂತೆ ಅನೇಕ ವ್ಯವಸ್ಥೆಗಳನ್ನು ನಿರ್ಮಿಸುವುದರಿಂದ ಬೆಂಗಳೂರು ಖಂಡಿತ ಉದ್ಧಾರ ಆಗುವುದಿಲ್ಲ. ಪರಿಣಾಮಕಾರಿ ಕ್ರಮಗಳಿಂದಷ್ಟೇ ಅದರ ಗತವೈಭವ ಮರುಕಳಿಸುವಂತೆ ಮಾಡಲು ಸಾಧ್ಯ.

ಚುರುಮುರಿ



ಸಿನಿಮೀಯ ಸಿನಿಮಾ!

● ಮಣ್ಣೆ ರಾಜು

ಕನ್ನಡ ಸಿನಿಮಾಗಳನ್ನು ಥಿಯೇಟರಿನಲ್ಲೇ ನೋಡಬೇಕೆಂದು ಶಂಕ್ರಿ, ಸುಮಿ ಬಂದಿದ್ದರು. ಸಿನಿಮಾ ಶುರುವಾಯಿತು. ಕಮಲ ಕುಲದ ಗೆಲುವೇಂದ್ರ ಸಂಘಟನಾ ಯಾತ್ರೆ ಆರಂಭಿಸಿ ಬೆಂಬಲಿಗರ ಮನಸು ಗೆದ್ದು ಹೃದಯ ಸಾಮ್ರಾಜ್ಯ ವಿಸ್ತರಿಸಿಕೊಂಡು ಸಾಗುತ್ತಿದ್ದರು. ಉತ್ತರ ಪ್ರಾಂತ್ಯದಲ್ಲಿ ವಿಜಯಪುರದ ಅರಸು ತಮ್ಮ ಟೀಮಿನೊಂದಿಗೆ ಭೂಮಿ ಯಾತ್ರೆ ಹೊರಟಿದ್ದರು. ನಾಯಕರು ಮುಖಾಮುಖಿಯಾದರು.

'ನೀನೆಯೋ ವಿಜಯಪುರದ ಅರಸು? ಅವರಿವರನ್ನು ಬೈದ ಮಾತ್ರಕ್ಕೆ ನೀನು ಅಜೇಯನಲ್ಲ...' ಕೆಕ್ಕರಿಸಿದರು ಗೆಲುವೇಂದ್ರ.

'ಕೆಂಗಣ್ಣಿನಿಂದ ಕೆಕ್ಕರಿಸಿ ನೋಡಿ ನೀ ನನ್ನ ಗೆಲ್ಲಲಾರೆ, ತಾಕತ್ತಿದ್ದರೆ ರಣರಂಗಕ್ಕೆ ಬಾ...' ವಿಜಯಪುರದ ಅರಸು ಸವಾಲು ಹಾಕಿದರು.

'ನಿನ್ನ ಅಪ್ಪ ನಿನಗೆ ಅಪ್ಪನೇ ಹೊರತು ಇಲ್ಯಾರಿಗೂ ದೊಡ್ಡಪ್ಪನಲ್ಲ ಎಂದು ಹೇಳಿ ಅವಮಾನಿಸಿದ್ದು ನೀನೇ ಅಲ್ಲವೆ?'

ಇಬ್ಬರ ನಡುವೆ ರಣಘೋರ ಯುದ್ಧ ನಡೆಯಬಹುದು ಎಂದುಕೊಳ್ಳುವಷ್ಟರಲ್ಲಿ ಸಿನಿಮಾದ ಇಂಟರ್‌ವಲ್.

ಪಾಪ್‌ಕಾರ್ನ್ ತಂದ ಶಂಕ್ರಿ, 'ಇಲ್ಲಿ ಟಿಕೆಟ್‌ಗಿಂತ ಪಾಪ್‌ಕಾರ್ನ್ ಬೆಲೆಯೇ ಜಾಸ್ತಿ' ಎಂದ.

ಸಿನಿಮಾ ಶುರುವಾಯಿತು. ಹೈಕಮಾಂಡ್ ದರ್ಶನ ಮುಗಿಸಿ ರಾಜಧಾನಿಗೆ ಹಿಂತಿರುಗಿದ ಅಧ್ಯಕ್ಷರು, ಮುಖ್ಯಸ್ಥರನ್ನು ಮಂತ್ರಿಮಹೋದಯರು ಸ್ವಾಗತಿಸಿದರು. 'ನಮ್ಮ ಆಡಳಿತವನ್ನು ಹೈಕಮಾಂಡ್ ಮೆಚ್ಚಿದೆ' ಮುಖ್ಯಸ್ಥರು ಗುಡ್‌ನ್ಯೂಸ್ ಹೇಳಿದರು.

'ನೀವು ತ್ಯಾಗಕ್ಕೆ ಸಿದ್ಧರಾಗಬೇಕು' ಅಧ್ಯಕ್ಷರು ಬ್ಯಾಡ್‌ನ್ಯೂಸ್ ಹೇಳಿದರು.

'ತ್ಯಾಗ ನಿಮಗೂ ಅನ್ವಯಿಸುತ್ತದೆ ಅಲ್ವೇ?!' ಅಂದುಬಿಟ್ಟರು ಹಿರಿಯ ಮಂತ್ರಿ. ತಡವರಿಸಿದ ಅಧ್ಯಕ್ಷರು, ಮುಖ್ಯಸ್ಥರು, 'ತ್ಯಾಗವನ್ನು ಪೋಸ್ಟ್‌ಪೋನ್ ಮಾಡಿದ್ದೇವೆ...' ಎಂದು ಹೇಳಿ ನಿರ್ಗಮಿಸಿದರು. ಸಿನಿಮಾ ಮುಗಿಯಿತು.

'ಸಿನಿಮಾದ ಟ್ರ್ಯಾಕ್ ಚೇಂಜ್ ಆಯ್ತಲ್ರೀ? ಗೆಲುವೇಂದ್ರ, ವಿಜಯಪುರದ ಅರಸು ಕಥೆ ಏನಾಯ್ತು?' ಎಂದಳು ಸುಮಿ.

'ಅವರು ಎಸೆದಾಡಿದ ಬೆಂಕಿಚೆಂಡು ಹೈಕಮಾಂಡ್ ಅಂಗಳದಲ್ಲಿದೆ. ಪಿಕ್ಚರ್ ಅಭಿ ಬಾಕಿ ಹೈ. ಸಿನಿಮಾದ ಮುಂದಿನ ಭಾಗ ಮುಂದಿನ ಷೋನಲ್ಲಿ ಪ್ರದರ್ಶನವಾಗುತ್ತದೆ' ಎಂದ ಶಂಕ್ರಿ.

ಸಂಗತ

ಕೊರತೆಗಳು ಕಾಡಲಿ ಎಳೆಯರಿಗೆ!

ಮಕ್ಕಳಿಗೆ ಸೌಲಭ್ಯಗಳ ಜೊತೆಗಿಷ್ಟು ಕೊರತೆಗಳೂ ಕಾಡಿದಾಗಷ್ಟೇ ಬದುಕಿನ ಕುಲುಮೆಯಲ್ಲಿ ಅವರ ವ್ಯಕ್ತಿತ್ವ ಸರಿಯಾಗಿ ರೂಪುಗೊಳ್ಳಲು ಸಾಧ್ಯ

● ಸತೀಶ್ ಜಿ.ಕೆ. ತೀರ್ಥಹಳ್ಳಿ

ಮನೆಯಲ್ಲಿ ಮಗುವೊಂದು ಬೆಳೆಯುತ್ತಲೇ ಹೆತ್ತವರ ದಿಗಿಲೂ ಬೆಳೆಯುತ್ತಾ ಹೋಗುತ್ತದೆ. ಮಗುವಿನ ಕುರಿತ ಅವರ ನಿರೀಕ್ಷೆಗಳಂತೂ ಮುಗಿಲಿಗೂ ಮಿಗಿಲು. ಮಕ್ಕಳ ಬೆಳವಣಿಗೆ, ಭವಿಷ್ಯತ್ತಿನ ಕುರಿತಾಗಿ ತರಹೇವಾರಿ ಕನವರಿಕೆ, ಚಿಂತೆ, ಭೀತಿ. 'ಮಕ್ಕಳು ತಮ್ಮಷ್ಟಕ್ಕೇ ಬೆಳೆಯುತ್ತವೆ' ಎಂಬ ಹಿರಿಯರ ಕಿವಿಮಾತು ಮರೆತು, ತಮ್ಮಿಚ್ಛೆಯಂತೆ ಅವರನ್ನು ಬೆಳೆಸುವ, ರೂಪಿಸುವ ಸಾಹಸದಲ್ಲಿ ಪೋಷಕರು ತಮ್ಮಲ್ಲೇ ನೀಲಿನಕ್ಷೆಯೊಂದನ್ನು ತಯಾರಿಸಿಡುತ್ತಾರೆ. ಜಗತ್ತಿನ ಎಲ್ಲ ಸುಖ-ಸವಲತ್ತುಗಳೂ ತಮ್ಮ ಮಕ್ಕಳಿಗಿರಬೇಕು ಎಂಬ ಹಪಹಪಿ, ನಿರೀಕ್ಷೆ, ಒತ್ತಡದ ಭಾರವನ್ನು ಅವರ ಮೇಲೆ ಹೇರುತ್ತಾರೆ.

ಮನೋವಿಜ್ಞಾನದ ಪ್ರಕಾರ, ಅನುವಂಶೀಯತೆ, ವೈಯಕ್ತಿಕ ಭಿನ್ನತೆ, ಪರಿಸರ ಮತ್ತು ಸನ್ನಿವೇಶದ ಪ್ರಚೋದನೆಗಳಿಗೆ ಒಡ್ಡುವ ಪ್ರತಿಕ್ರಿಯೆಗಳೇ ನಮ್ಮ ವ್ಯಕ್ತಿತ್ವವನ್ನು ರೂಪಿಸುವ ಕುಲುಮೆಗಳು. ಅನುಭವದ ಮೂಸೆಯಲ್ಲಿ ಅರಳುವ, ಅನುಸರಿಸುವ ಅಭ್ಯಾಸಗಳೆಲ್ಲವೂ ಮಗುವಿನ ಬೆಳವಣಿಗೆಯಲ್ಲಿ ಪ್ರಧಾನ ಪಾತ್ರ ವಹಿಸುತ್ತವೆ. ತಾವು ನೀಡುವ ಪ್ರೀತಿ, ಕಾಳಜಿ, ಸೌಲಭ್ಯಗಳ ಹೊರತಾಗಿಯೂ ಮಕ್ಕಳ ಬೆಳವಣಿಗೆಯನ್ನು ಪ್ರಭಾವಿಸುವ ಹಲವಾರು ಸೂಕ್ಷ್ಮಸಂಗತಿಗಳ ಅರಿವು ಪೋಷಕರಿಗೆ ಇರಬೇಕಾದುದು ಅಗತ್ಯ. ವಾರ್ಷಿಕೋತ್ಸವ ಸಂದರ್ಭದಲ್ಲಿ ಹಿರಿಯ ಮೇಷ್ಟ್ರು ನೀಡಿದ ನಿದರ್ಶನವೊಂದು ಮಕ್ಕಳ ಪಾಲನೆ-ಪೋಷಣೆಯಲ್ಲಿ ವಹಿಸಬೇಕಾದ ಎಚ್ಚರಿಕೆಯ ಕುರಿತು ಕಣ್ತೆರೆಸುತ್ತದೆ ಮತ್ತು ದಿಕ್ಸೂಚಿಯಾಗಿ ದಾರಿ ತೋರುತ್ತದೆ.

ಮೇಷ್ಟ್ರು ಶಾಲಾ ಹುಡುಗರಿಬ್ಬರಿಗೆ ಎರಡು ಸಂಪಿಗೆ ಗಿಡಗಳನ್ನು ನೀಡಿ, ಶಾಲಾ ಆವರಣದಲ್ಲಿ ಜೋಪಾನವಾಗಿ ಬೆಳೆಸಲು ಸೂಚಿಸುತ್ತಾರೆ. ಒಬ್ಬ ಹುಡುಗ ತನ್ನ ಗಿಡಕ್ಕೆ ದಿನಾಲು ಯಥೇಚ್ಛವಾಗಿ ನೀರು, ಗೊಬ್ಬರವನ್ನು ತಂದುತಂದು ಸುರಿಯುತ್ತಿದ್ದ. ಹುಲುಸಾಗಿ ಹಚ್ಚಹಸಿರಾಗಿ ಕಣ್ಸೆಳೆಯುತ್ತಾ ಬೆಳೆಯುತ್ತಿದ್ದ ಸಸ್ಯದ ಬಗ್ಗೆ ಅವನಿಗೆ ಎಲ್ಲಿಲ್ಲದ ಹೆಮ್ಮೆ. ಮತ್ತೊಬ್ಬ ಹುಡುಗ ಮಾತ್ರ ಆತನ ಗಿಡಕ್ಕೆ ಹಿತಮಿತವಾಗಿ ನೀರು, ಗೊಬ್ಬರವನ್ನು ಪೂರೈಸುತ್ತಿದ್ದರಿಂದ ಅವನದ್ದು ನಿಧಾನಗತಿ ಬೆಳವಣಿಗೆಯ ಸಣಕಲು ಸಸ್ಯವಾಯಿತು. ದಿನಗಳು ಉರುಳಿದವು, ಅದೊಂದು ದಿನ ಗಾಳಿಮಳೆ ಹೆಚ್ಚಾಗಿ, ತುಂಬು ಆರೈಕೆಯಲ್ಲಿ ಬೆಳೆದಿದ್ದ ಹುಡುಗನ ಗಿಡವು ಬೇರುಸಹಿತ ಕಿತ್ತುಬಿತ್ತು! ಆದರೆ ಪಕ್ಕದಲ್ಲಿದ್ದ ಮತ್ತೊಬ್ಬನ ಸಣಕಲು ಸಸ್ಯ ಮಾತ್ರ ಸ್ವಲ್ಪ ಬಾಗಿತಾದರೂ ಮತ್ತೆ ದೃಢವಾಗಿ ನಿಂತುಕೊಂಡಿತು. ಬೇಸರಗೊಂಡ ಮೊದಲನೇ ಹುಡುಗನಿಗೆ ಮೇಷ್ಟ್ರು ಹೇಳಿದ್ದಿಷ್ಟು: 'ನೀನು ಗಿಡವೊಂದರ ಅಗತ್ಯಕ್ಕಿಂತಲೂ ಹೆಚ್ಚಾಗಿ ನೀರು, ಗೊಬ್ಬರವನ್ನು ಎರೆಯುತ್ತಿದ್ದೆ. ನೆಲದ ಮೇಲೆಯೇ ಎಲ್ಲವೂ ದಕ್ಕಿದ್ದರಿಂದ ಬೇರುಗಳು ಆಳಕ್ಕಿಳಿಯಲಿಲ್ಲ, ಅದರ ಬುಡ ಭದ್ರವಾಗಲಿಲ್ಲ! ಆದರೆ ಅವನು ಹಾಗಲ್ಲ. ಹಿತಮಿತವಾಗಿ ನೀರು, ಗೊಬ್ಬರ ಹಾಕಿದ, ಹೆಚ್ಚಿನ ಸಾರ, ಸತ್ವದ ಹುಡುಕಾಟದಲ್ಲಿ ಬೇರುಗಳು ಆಳಕ್ಕಿಳಿದಿದ್ದರಿಂದ ಆ ಗಿಡ ಗಾಳಿಮಳೆಯಲ್ಲಿಯೂ ಭದ್ರವಾಗಿ ಬೇರೂರಿ ನಿಂತುಕೊಂಡಿದೆ'.

ಮಕ್ಕಳೂ ಹಾಗೆಯೇ. ಪೋಷಕರ ಜವಾಬ್ದಾರಿಯುತ ನಡವಳಿಕೆ, ಹಿತಮಿತ ಸೌಲಭ್ಯ, ಸವಲತ್ತುಗಳ ಪೂರೈಕೆ, ಶಿಸ್ತಿನ ಆರೈಕೆ, ಅಗತ್ಯ ಪ್ರೋತ್ಸಾಹವೇ ಮಕ್ಕಳ ಯಶಸ್ಸಿನ ನೀರು, ಗೊಬ್ಬರ. ಗಿಡದಂತೆಯೇ ಸಹಜವಾಗಿ ಬೇರೂರಿ ಮುಗಿಲಿನೆಡೆಗೆ ಮುಖ ಮಾಡಿ ಸರಸರನೆ ಅರಳಬೇಕೆಂದರೆ ಮಕ್ಕಳಿಗೆ ಸೌಲಭ್ಯಗಳ ಜೊತೆಗಿಷ್ಟು ಕೊರತೆಗಳೂ ಕಾಣಬೇಕು, ಕಾಡಬೇಕು. ಮಣ್ಣಿನ ಸಾಂಗತ್ಯ ಸಿಗದೇ ಬೆವರಿನ ಬೆಲೆ ತಿಳಿಯದೇ ಕುಟುಂಬದ ಜೊತೆ ಬೆರೆಯದೇ ತಮ್ಮಷ್ಟಕ್ಕೆ ಬೆಳೆದ ಮಕ್ಕಳು ಎಂದಿಗೂ ಪರಿಪೂರ್ಣರಾಗಲು ಪ್ರಯತ್ನಿಸಲಾರರು. ಮಾನವೀಯ ಮೌಲ್ಯಗಳು, ಸಂಸ್ಕಾರದ ತಳಹದಿಯ ಮೇಲೆ ವ್ಯಕ್ತಿತ್ವ ವಿಕಸನ, ಪ್ರತಿಭೋನ್ನತಿಯಲ್ಲಿ ಮಕ್ಕಳ ಭವಿಷ್ಯದ ಗೋಪುರ ಕಟ್ಟಲ್ಪಡಬೇಕು. ವಿದ್ಯಾಭ್ಯಾಸಕ್ಕಾಗಿ ಲಕ್ಷಲಕ್ಷ ವೆಚ್ಚ ಮಾಡಿದಷ್ಟಕ್ಕೇ ಮಕ್ಕಳು ಗೆದ್ದು ನಿಲ್ಲಲಾರರು. ಆದರೆ ಶಿಕ್ಷಣದ ವ್ಯಾಪಾರದ ಅಂಗಡಿಗಳಲ್ಲಿ ಅಕ್ಷರವನ್ನು ಕೊಂಡುತಂದರೆ, ಕಂಡರಿಯದ ಸುಖ, ಸಮೃದ್ಧಿ ಸಿದ್ಧಿಸಿಬಿಡುತ್ತದೆ ಎಂಬ ಕನವರಿಕೆಯಲ್ಲಿ ಹೆತ್ತವರಿದ್ದಾರೆ.

ಇಂತಹ ಕಾರಣಗಳಿಂದ, ನಿರ್ಭೀತ ವಾತಾವರಣದಲ್ಲಿ ಲವಲವಿಕೆಯಿಂದ ಬೆಳೆಯಬೇಕಾದ ಎಳೆಯ ಗೆಳೆಯರು ನಿತ್ಯವೂ ಅಪರಿಮಿತ ಒತ್ತಡದಲ್ಲಿ ನಲುಗುವಂತಾಗಿದೆ. ಈಗೆಲ್ಲಾ ತರಗತಿಯ ಪರೀಕ್ಷೆಗಳಲ್ಲಿ ಪಾಸಾದರೂ ಜೀವನೋತ್ಸಾಹ ಕಳೆದುಕೊಂಡು, ಬದುಕು ತಂದೊಡ್ಡುವ ಸವಾಲುಗಳಿಗೆ ಜವಾಬು ನೀಡುವಲ್ಲಿ ಸೋತವರದು ದೊಡ್ಡ ಸಂಖ್ಯೆ. ಮೌಲ್ಯಯುತ, ಕೌಶಲಯುತ ಕಲಿಕೆಯೊಂದೇ ಮಕ್ಕಳನ್ನು ಅವರ ನಾಳೆಗಳಲ್ಲಿ ಸದೃಢಗೊಳಿಸಬಲ್ಲದು, ಸವಾಲಿಗೆ ಎದೆಗೊಟ್ಟು ನಿಲ್ಲಿಸಬಲ್ಲದು ಎಂಬುದು ಪದೇಪದೇ ಸಾಬೀತಾಗುವ ಸತ್ಯ.



ನಿಜ, ನಮ್ಮೊಳಗಿನ ಉತ್ಸಾಹದ ಕಾವು, ಕಾಡುವ ಹಸಿವು, ಅನುಭವಿಸಿದ ನೋವೇ ನಮ್ಮ ನಾಳೆಗಳನ್ನು ನಿರೂಪಿಸುತ್ತವೆ. ಹಾಗಾಗಿ, ಬಹುವಿಧದ ಕೆಲಸಗಳನ್ನು ನಿರ್ವಹಿಸಬಲ್ಲ, ವಿಪುಲ ಸಾಧ್ಯತೆಗಳನ್ನು ಸೃಷ್ಟಿಸಬಲ್ಲ ಆತ್ಮಬಲವನ್ನು ನಂಬಿ ಮಕ್ಕಳನ್ನು ಮುನ್ನಡೆಸಬೇಕಿದೆ. ಆಂತರಿಕ ಒತ್ತಡದಿಂದ ಒಡೆದ ತತ್ತಿಯು ಜೀವೋದ್ಭವಕ್ಕೆ ಕಾರಣವಾದರೆ, ಬಾಹ್ಯ ಒತ್ತಡದಲ್ಲಿ ಒಡೆದ ತತ್ತಿಯು ಜೀವನಾಶಕ್ಕೆ ಕಾರಣವಾಗುತ್ತದೆಂಬ ಎಚ್ಚರ ಅಗತ್ಯ.

ಆಧುನೀಕರಣದ ಭರಾಟೆಯಲ್ಲಿ ಯಾಂತ್ರಿಕಗೊಂಡ ಬದುಕು ಅನಗತ್ಯ ಒತ್ತಡಗಳ ಕುಲುಮೆಯಲ್ಲಿ ಬೇಯುತ್ತಿದೆ. ಸರಳವಾದ ಬಾಳು, ನಿರಾಳ ಭಾವದ ಸಹಜ ಸೌಂದರ್ಯಕ್ಕೆ ತೋರಿಕೆಯ ವೇಷ ತೊಡಿಸುವ ಬದಲು, ಬದುಕಿನ ಭಾವಪರಿಧಿಯನ್ನು ಹಿಗ್ಗಿಸಿಕೊಂಡು, ಒಲವ ಸಿಹಿಯನ್ನುಂಡು ಸುಖಿಸುವ, ಸಂಭ್ರಮಿಸುವ, ಬೆಳೆಯುವ, ಬೆಳಗುವ ನೀತಿ ನಮ್ಮದಾಗಲಿ.

ವಾಚಕರ ವಾಣಿ

ಓದು, ವಿಮರ್ಶೆಯಲ್ಲಿ ಪೂರ್ವಗ್ರಹ ಸಲ್ಲ

ಗಂಭೀರ ಓದುಗರು, ಗಂಭೀರ ವಿಮರ್ಶೆ ಈ ಎರಡೂ ಸವಕಲಾಗುತ್ತಿವೆ ಎಂಬ ಮಾತು ಭಾಗಶಃ ಸತ್ಯ. ಆಧುನಿಕ ತಂತ್ರಜ್ಞಾನ ದಾಂಗುಡಿ ಇಡುತ್ತಿರುವ ಈ ಸಂದರ್ಭದಲ್ಲಿ ಓದುವಿಕೆ ಮತ್ತು ಅದರ ಮೌಲ್ಯಮಾಪನವು ಕೊಂಚ ಸವಾಲು ಹಾಗೂ ದಿಗಿಲು ಹುಟ್ಟುಹಾಕಿರುವುದು ಒಪ್ಪಿಕೊಳ್ಳಬೇಕಾದ ವಿಚಾರ. ಆದರೆ ಯಾವುದೇ ಒಂದು ಸಂಗತಿಯ ಹುಟ್ಟು ಮತ್ತು ಬೆಳವಣಿಗೆಯು ಬರೀ ಅದರ ಓದುವಿಕೆ ಅಥವಾ ವಿಮರ್ಶೆಯಿಂದ ಮಾತ್ರ ಬೆಳೆಯುವುದಿಲ್ಲ. ಅದಕ್ಕಿಂತಲೂ ಮುಖ್ಯವಾದುದು, ಸಮಾನಮನಸ್ಕರು ಒಂದೆಡೆ ಸೇರಿ ಆರೋಗ್ಯಪೂರ್ಣ ಚರ್ಚೆ, ವಿಚಾರ ವಿನಿಮಯ, ತರ್ಕ ತಕರಾರುಗಳಿಗೆ ಕಾರಣರಾಗುವುದು. ಆದರೆ ಇತ್ತೀಚೆಗೆ ಅನ್ಯಕಾರಣಗಳಿಗಾಗಿಯೇ ಒಬ್ಬರ ಬರಹಗಳನ್ನು ಓದುವುದು ಅಥವಾ ವಿಮರ್ಶಿಸುವಂತಹ ನಡೆ ಕಂಡುಬರುತ್ತಿದೆ. ಇದು ಅತ್ಯಂತ ಅಪಾಯಕಾರಿಯಾದ ಬೆಳವಣಿಗೆ. ನಿಷ್ಕಲ್ಮಷ ಪ್ರೀತಿ ಇಲ್ಲದ ವಿಮರ್ಶೆಯು ಬರೀ ಆಡಂಬರದಂತೆ ಕಾಣುತ್ತದೆ, ಕಟೌಟಿಗೆ ನೇತು ಹಾಕಿದ ಗೊಂಬೆಯಂತೆ!

ವೇಣು ಜಾಲಿಬೆಂಚಿ, ರಾಯಚೂರು

ವಂಚಕ ಪೊಲೀಸರ ಹಾವಳಿಗೆ ಕಡಿವಾಣ ಹಾಕಿ

ಯುವತಿಗೆ ಕಿರುಕುಳ ನೀಡಿದ ಹಾಗೂ ಅಸಭ್ಯ ವರ್ತನೆ ತೋರಿದ ಆರೋಪದಲ್ಲಿ ಕಾನ್‌ಸ್ಟೆಬಲ್ ಅಮಾನತು, ಭ್ರಷ್ಟಾಚಾರ, ಕರ್ತವ್ಯಲೋಪ, ನಿರ್ಲಕ್ಷ್ಯ ಹಾಗೂ ಬೇಜವಾಬ್ದಾರಿತನ ತೋರಿದ ಆರೋಪದ ಅಡಿ ಇನ್‌ಸ್ಪೆಕ್ಟರ್, ಪಿಎಸ್‌ಐ ಸೇರಿ ಆರು ಮಂದಿಯ ಅಮಾನತು ಎಂಬಂತಹ, ಪೊಲೀಸರೇ ಆರೋಪಿಗಳಾಗುತ್ತಿರುವ ಇತ್ತೀಚಿನ ಬೆಳವಣಿಗೆಗಳು ಗಾಬರಿ ಹುಟ್ಟಿಸುವಂತಿವೆ. ಒಂದು ದೇಶ ಅಥವಾ ರಾಜ್ಯದ ಕಾನೂನು ಬಾಧ್ಯತೆಗಳನ್ನು ನಿರ್ವಹಿಸುವಲ್ಲಿ ಮತ್ತು ಜನಸಾಮಾನ್ಯರಿಗೆ ರಕ್ಷಣೆ ನೀಡುವಲ್ಲಿ ಪೊಲೀಸರ ಪಾತ್ರ ಮಹತ್ವದ್ದಾಗಿರುತ್ತದೆ. ಆದರೆ ಅಪರಾಧಿಗಳನ್ನು ಹಿಡಿಯಬೇಕಾದ ಪೊಲೀಸರ ವಿರುದ್ಧವೇ ಜನಸಾಮಾನ್ಯರನ್ನು ವಂಚಿಸಿದಂತಹ ಆರೋಪಗಳು ಈಗ ಕೇಳಿಬರುತ್ತಿರುವುದು ದುರದೃಷ್ಟಕರ.

ಸರ್ಕಾರವು ನಾಗರಿಕರ ಹಿತರಕ್ಷಣೆಗಾಗಿ ಪೊಲೀಸರನ್ನು ನೇಮಕ ಮಾಡಿಕೊಂಡಿರುತ್ತದೆ. ಆದರೆ ಇವರು ಜನಸೇವೆ ಬಿಟ್ಟು ಹಣದ ಆಮಿಷಕ್ಕೆ ಒಳಗಾಗಿ, ನ್ಯಾಯ ಬೇಡಿ ಬಂದವರನ್ನೇ ಅನ್ಯಾಯಕ್ಕೆ ಬಳಸಿಕೊಳ್ಳುತ್ತ ಅಧಿಕಾರವನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ. ಎಷ್ಟೋ ಯುವಜನ ಪೊಲೀಸ್ ಇಲಾಖೆ ಸೇರಬೇಕೆಂದು ಆಸೆಗಣ್ಣುಗಳಿಂದ ಕಾಯುತ್ತಿದ್ದಾರೆ. ಅಂತಹವರ ಮೇಲೆ ಇಂತಹ ಕೆಟ್ಟ ಸುದ್ದಿಗಳು ಪರಿಣಾಮ ಬೀರುವ ಸಾಧ್ಯತೆ ಇರುತ್ತದೆ. ಇದು ಬೇಸರದ ಸಂಗತಿ. ಈಗಾಗಲೇ ಜನಸಾಮಾನ್ಯರಿಗೆ ಪೊಲೀಸರ ಮೇಲಿನ ವಿಶ್ವಾಸ ಕಡಿಮೆಯಾಗಿದೆ. ಇದರ ನಡುವೆ ರಕ್ಷಕರೇ ಭಕ್ಷಕರಾಗುವ ಸುದ್ದಿಗಳು ಜನರ ಕಿವಿಗೆ ಬೀಳುತ್ತಿದ್ದರೆ, ಸಾಮಾನ್ಯ ಜನ ನ್ಯಾಯಕ್ಕಾಗಿ, ರಕ್ಷಣೆಗಾಗಿ ಯಾರನ್ನು ಆಶ್ರಯಿಸಬೇಕು ಎನ್ನುವ ಪ್ರಶ್ನೆ ಮೂಡುತ್ತದೆ. ಸರ್ಕಾರಗಳು ಪೊಲೀಸ್ ವ್ಯವಸ್ಥೆಯ ಸುಧಾರಣೆಗೆ ಪ್ರಾಮಾಣಿಕ ಪ್ರಯತ್ನ ಮಾಡಬೇಕಿದೆ.

ಪ್ರಗತಿ ಎಸ್. ಕೆರಾಡಿ, ಕುಂದಾಪುರ

ಮಾನವೀಯ ನಡವಳಿಕೆ ನಮ್ಮದಾಗಲಿ

ರಾಜ್ಯದಲ್ಲಿ ಸಾಮಾಜಿಕ ಕಾರಣಗಳಿಗಾಗಿ ದಲಿತೇತರರಿಂದ ದಲಿತರ ಮೇಲೆ ದೌರ್ಜನ್ಯ ನಡೆಯುತ್ತಿದೆ. ಅಲ್ಲದೆ, ದಲಿತರನ್ನು ಅವಮಾನಿಸುವುದು, ಬಹಿಷ್ಕರಿಸುವುದು ಪದೇಪದೇ ನಡೆಯುತ್ತಿರುವುದು ಖಂಡನೀಯ. ಮೃಗೀಯವಾದ ಇಂಥ ಮನಃಸ್ಥಿತಿಯು ಸಮಾಜವು ದಿನದಿಂದ ದಿನಕ್ಕೆ ಮತ್ತಷ್ಟು ಅಸ್ವಸ್ಥವಾಗಲು ಕಾರಣವಾಗುತ್ತದಲ್ಲದೆ ಬೇರೇನೂ ಅಲ್ಲ. ಪ್ರಸ್ತುತ, ಚಿಕ್ಕಮಗಳೂರು ತಾಲ್ಲೂಕಿನ ನರಸೀಪುರ ಗ್ರಾಮದಲ್ಲೂ ಅಂಥದ್ದೇ ಪ್ರಕರಣ ನಡೆದಿರುವುದು ಅಜ್ಞಾನ ಮತ್ತು ಪರಮ ಮೌಢ್ಯದ ನಡೆ. ಇಂಥ ಹೀನ ನಡವಳಿಕೆಗಳಿಗೆ ಸರ್ಕಾರಿ ಅಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡುವುದು ತಾತ್ಕಾಲಿಕ ಉಪಶಮನವಷ್ಟೇ ಆಗುತ್ತದೆ. ಒಟ್ಟು ಸಮಾಜದ ಸಾಮೂಹಿಕ ಭಾಗವಹಿಸುವಿಕೆಯಿಂದ ಮಾತ್ರ ಈ ಅನಾಗರಿಕ ಸಮಸ್ಯೆಗೆ ಪರಿಹಾರ ಸಿಗಬಲ್ಲದು. ಅಸ್ಪೃಶ್ಯತೆ ನಾಶವಾಗಬೇಕು. ಮಾನವೀಯ ನಡವಳಿಕೆಗಳು ಮಾತ್ರ ಈ ದೇಶದ ಬದುಕಾಗಬೇಕು.

ಹೊರೆಯಾಲ ದೊರೆಸ್ವಾಮಿ, ಮೈಸೂರು

ದೋಸೆ ಹಿಟ್ಟಿಗೂ ಕೆಎಂಎಫ್‌ಗೂ ಏನು ಸಂಬಂಧ?

ಕರ್ನಾಟಕ ಹಾಲು ಮಹಾಮಂಡಳದ (ಕೆಎಂಎಫ್) ವತಿಯಿಂದ ದೋಸೆ ಹಿಟ್ಟಿನ ಸ್ವಂತ ಉತ್ಪಾದನಾ ಘಟಕ ನಿರ್ಮಿಸುವ ಪ್ರಸ್ತಾವ ಇರುವುದಾಗಿ ಕೆಎಂಎಫ್ ಅಧ್ಯಕ್ಷ ಭೀಮಾನಾಯ್ಕ ಹೇಳಿದ್ದಾರೆ (ಪ್ರ.ವಾ., ಡಿ. 5). ಈ ಸಂಸ್ಥೆ ಮೂಲತಃ ಹಾಲು ಉತ್ಪಾದಕರ ಒಕ್ಕೂಟ. ಮೊದಲು ಅದು ಹಾಲಿನ ವಹಿವಾಟನ್ನು ಸರಿಯಾಗಿ ನಡೆಸಬೇಕು. ಆ ನಂತರ ಮೊಸರು, ತುಪ್ಪದಂತಹ ಹಾಲು ಉತ್ಪನ್ನಗಳತ್ತ ಗಮನಹರಿಸಬೇಕು. ದೋಸೆ ಹಿಟ್ಟಿಗೂ ಹಾಲಿಗೂ ಏನು ಸಂಬಂಧ? ಪ್ರಸ್ತುತ ಕೆಎಂಎಫ್‌ನ ನಂದಿನಿ ಬ್ರ್ಯಾಂಡ್ ಅಡಿ ಸಿದ್ಧವಾಗಿ, ಮಾರಾಟವಾಗುತ್ತಿರುವ 160 ಉತ್ಪನ್ನಗಳ ಪೈಕಿ ಕೆಲವಾದರೂ ಅಪೇಕ್ಷಿತ ಪ್ರಮಾಣದಲ್ಲಿ ಮಾರಾಟ ಆಗುತ್ತಿಲ್ಲ.

ನಂದಿನಿ ತುಪ್ಪ ತಿರುಪತಿಗೆ ಹೋದರೆ ಸಂತೋಷ. ಆದರೆ ಹಾಲು ದೆಹಲಿಗೆ ಹೋಗಿ ಮಾರುಕಟ್ಟೆ ಸಮಸ್ಯೆ ಎದುರಿಸಬೇಕೆ? ಮುಖ್ಯವಾಗಿ ಕರ್ನಾಟಕದಲ್ಲಿ ಹಾಲಿನ ಪೂರೈಕೆ, ಗುಣಮಟ್ಟ ಹೇಗಿದೆ ಎಂಬುದನ್ನು ನಿರಂತರವಾಗಿ ನೋಡುತ್ತಿರಬೇಕು. ಉದಾಹರಣೆಗೆ, ನೀಲಿ ಪ್ಯಾಕೆಟ್‌ನಲ್ಲಿರುವ ಒಂದು ಲೀಟರ್ ಹಾಲಿನಿಂದ ಈಚೆಗೆ ಮೊಸರು, ಮಜ್ಜಿಗೆ ಮಾಡಲು ಸರಿಯಾಗುತ್ತಿಲ್ಲ. ಹಾಲಿನ ವಾಹನ ಒಮ್ಮೊಮ್ಮೆ ತಡವಾಗಿ ಬರುತ್ತದೆ. ಮಾರಾಟ ಮಳಿಗೆಗಳು ಹೆಚ್ಚಾಗಿವೆ, ಕೆಲವೆಡೆ ಇಟ್ಟಿರುವ ಸರಕು ಮಾರಾಟವಾಗುತ್ತಿಲ್ಲ. ಹಾಲಿನ ಒಂದು ಲೀಟರ್ ಪ್ಯಾಕ್‌ಗಳು ಸರಿಯಾಗಿ ಲಭ್ಯವಿಲ್ಲದೆ ಅರ್ಧ ಲೀಟರ್‌ನ ಎರಡು ಪ್ಯಾಕೆಟ್‌ಗಳನ್ನು ಖರೀದಿಸಿ ಹೆಚ್ಚು ಹಣ ಕೊಡಬೇಕಾಗುತ್ತದೆ. ಇದರಿಂದ ಪ್ಲಾಸ್ಟಿಕ್ ತ್ಯಾಜ್ಯವೂ ಹೆಚ್ಚಾಗುತ್ತದೆ.

ಒಟ್ಟಿನಲ್ಲಿ ಮಾಡಬೇಕಾದ ಕೆಲಸವನ್ನು ಕೆಎಂಎಫ್ ಮೊದಲು ಮಾಡಲಿ. ರಾಜ್ಯ ಸರ್ಕಾರ ದರ ಪರಿಷ್ಕರಣೆಯಂತಹ ವಿಷಯಗಳಲ್ಲಿ ರಾಜಕೀಯ ಪರಿಗಣನೆಯನ್ನು ಹೊರಗಿಡಲಿ. ಅಮುಲ್, ಕಡಲೆಕಾಯಿ ಮತ್ತಿತರ ವಿಷಯಗಳತ್ತಲೂ ಗಮನಹರಿಸಿತೆಂದು ಕೆಎಂಎಫ್ ತಾನೂ ಹಾಗೆ ಮಾಡಬೇಕಿಲ್ಲ. ಹೈನೋದ್ಯಮ ಕರ್ನಾಟಕದಲ್ಲಿ ಒಟ್ಟಾರೆ ಯಶಸ್ವಿಯಾಗಿದೆ. ಆ ಸ್ಥಿತಿಯನ್ನು ಉಳಿಸಿಕೊಂಡು ಮುನ್ನಡೆಯಬೇಕಾಗಿದೆ.

ಎಚ್.ಎಸ್.ಮಂಜುನಾಥ, ಗೌರಿಬಿದನೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಇ–ಖಾತಾ ಅವ್ಯವಸ್ಥೆಗೆ ಕೊನೆ ಎಂದು?

ಡಿಜಿಟಲ್ ಖಾತಾ ಕಡ್ಡಾಯದಿಂದ ಆಸ್ತಿ ನೋಂದಣಿಗೆ ತೊಡಕು

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಗ್ರಾಮೀಣ ಹಾಗೂ ನಗರ ಪ್ರದೇಶಗಳ ಆಸ್ತಿ ನೋಂದಣಿಗೆ ಸರ್ಕಾರ ಇ–ಸ್ವತ್ತು, ಇ–ಖಾತಾ ಕಡ್ಡಾಯಗೊಳಿಸಿದ ನಂತರ ಹಲವು ಸಮಸ್ಯೆಗಳು ಎದುರಾಗಿದ್ದು, ನೋಂದಣಿ ಪ್ರಕ್ರಿಯೆಗೆ ತೊಡಕಾಗಿದೆ. ನಿತ್ಯವೂ ಜನರು ಸ್ಥಳೀಯ ಸಂಸ್ಥೆ ಹಾಗೂ ನೋಂದಣಿ ಕಚೇರಿಗಳಿಗೆ ಅಲೆದಾಡುವಂತಾಗಿದೆ.

ಆಸ್ತಿಗಳ ಖಾತೆ ಹಾಗೂ ನಕ್ಷೆಗಳ ಮಂಜೂರಾತಿಗೆ ಸಂಬಂಧಿಸಿದ ತೊಡಕುಗಳ ನಿವಾರಣೆಗೆ ಕದಾಯ ಸಚಿವ ಕೃಷ್ಣ ಬೈರೇಗೌಡ, ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಹಾಗೂ ಪೌರಾಡಳಿತ ಸಚಿವ ರಹೀಂ ಖಾನ್ ನೇತೃತ್ವದಲ್ಲಿ ಹಲವು ಸಭೆಗಳನ್ನು ನಡೆಸಿದ್ದಾರೆ. ನಗರ, ಪಟ್ಟಣ ಮತ್ತು ಗ್ರಾಮಾಂತರ ಪ್ರದೇಶದಲ್ಲಿ ಇ–ಆಸ್ತಿ, ಇ–ವಿನ್ಯಾಸ ಹಾಗೂ ಇ–ಸ್ವತ್ತು, ಇ–ಖಾತಾ ವಿತರಣೆಯಲ್ಲಿನ ಸಮಸ್ಯೆಗಳ ಪರಿಹಾರಕ್ಕೆ ವಿವಿಧ ಇಲಾಖೆಗಳ ಅಧಿಕಾರಿಗಳನ್ನು ಒಳಗೊಂಡ ಜಂಟಿ ಕಾರ್ಯಪಡೆ ರಚಿಸಲಾಗಿದ್ದು, ಹಲವು ಜಿಲ್ಲೆಗಳಲ್ಲಿ ಖಾತಾ ವಿತರಿಸುವಲ್ಲಿ ಎದುರಾಗಿರುವ ಸಮಸ್ಯೆಗಳಿಗೆ ಪರಿಹಾರ ಕುರಿತು ಅಧ್ಯಯನ ನಡೆಸಲಾಗಿದೆ.



ನೈಜ ಆಸ್ತಿಗಳ ನೋಂದಣಿಗೆ ಸಮಸ್ಯೆಯಾಗಿಲ್ಲ. ಅಕ್ರಮವಾಗಿ ನಿರ್ಮಿಸಿದ ಬಡಾವಣೆಗಳಲ್ಲಿನ ಸ್ವತ್ತುಗಳಿಗೆ ತೊಡಕಾಗಿದೆ. ಇ-ಖಾತಾದಿಂದಾಗಿ ಕಾನೂನುಬಾಹಿರ ನೋಂದಣಿಗೆ ಕಡಿವಾಣ ಬಿದ್ದಿದೆ

ಕೆ.ಎ.ದಯಾನಂದ, ನೋಂದಣಿ ಮಹಾ ಪರಿವೀಕ್ಷಕ

ಕಂದಾಯ ನಿವೇಶನ, ಬಿ–ಖಾತಾವೇ ಸಮಸ್ಯೆಯ ಮೂಲ: ಬೆಂಗಳೂರು ಸೇರಿದಂತೆ ರಾಜ್ಯದಾದ್ಯಂತ ಬಿ-ಖಾತಾ ಮತ್ತು ಕಂದಾಯ ನಿವೇಶನಗಳಿಗೆ ಇ–ಖಾತಾ ಇರುವುದಿಲ್ಲ. ಗ್ರಾಮೀಣ ಪ್ರದೇಶಗಳಲ್ಲಿ ಶೇ 90ರಷ್ಟು ಆಸ್ತಿಗಳಿಗೆ ಇ-ಸ್ವತ್ತು ಇಲ್ಲ. ದಶಕಗಳ ಹಿಂದೆಯೇ ನಗರ ಪ್ರದೇಶಗಳಿಗೆ ಸೇರಿದ ಅಂತಹ ಗ್ರಾಮಗಳ ಜನರು ತಮ್ಮ ಆಸ್ತಿಯ ಇ–ಖಾತಾ ಇಲ್ಲದೇ ಪರಿತಪಿಸುತ್ತಿದ್ದಾರೆ. ಇನ್ನು, ಇತ್ತೀಚೆಗೆ ನಗರ ಪ್ರದೇಶಗಳ ವ್ಯಾಪ್ತಿಗೆ ಸೇರಿದ ಗ್ರಾಮಗಳದ್ದೂ ಅದೇ ಸಮಸ್ಯೆಯಾಗಿದೆ. ಅಂತಹ ಆಸ್ತಿಗಳಿಗೆ ಇ–ಖಾತಾ ಸಿಗದೆ ನೋಂದಣಿಗೆ ಸಮಸ್ಯೆಯಾಗಿದೆ.

‘ತಂತ್ರಾಂಶದಲ್ಲಿನ ದೋಷದಿಂದಾಗಿ ಇ-ಖಾತಾದಲ್ಲಿನ ಲೋಪದೋಷಗಳನ್ನು ಸರಿಪಡಿಸಲು ವಿಳಂಬವಾಗುತ್ತಿದೆ. ಆದ್ದರಿಂದ ಈ ಹಿಂದೆ ಅನುಸರಿಸುತ್ತಿದ್ದ ಪದ್ಧತಿಯಂತೆ ಲಭ್ಯವಿರುವ ಖಾತಾಗಳ, ದಾಖಲೆಗಳ ಆಧಾರದ ಮೇಲೆ ನೋಂದಣಿ ಪ್ರಕ್ರಿಯೆ ನಿರ್ವಹಿಸಬೇಕು’ ಎನ್ನುವುದು ಸಾರ್ವಜನಿಕರ ಒತ್ತಾಯ.

ಪರಿವರ್ತನೆಗೊಂಡ ಉದ್ದೇಶಕ್ಕೆ ಬಳಕೆಯಾಗದ ಕೃಷಿ ಭೂಮಿ: ಭೂ ಪರಿವರ್ತನೆಗೊಂಡ ರಾಜ್ಯದ ಸಾವಿರಾರು ಹೆಕ್ಟೇರ್ ಕೃಷಿ ಭೂಮಿ ಪರಿವರ್ತನೆಯಾದ ಉದ್ದೇಶಕ್ಕೆ ಬಳಕೆಯಾಗಿಲ್ಲ. ಅತ್ತ ಕೃಷಿ ಭೂಮಿಯಾಗಿಯೂ ದಾಖಲೆಗಳಲ್ಲಿ ಉಳಿದಿಲ್ಲ. ಕೆಲವರು ಭೂ ಪರಿವರ್ತನೆ ಮಾಡಿಕೊಂಡು ಲೇಔಟ್ ಅಭಿವೃದ್ಧಿಪಡಿಸದೇ , ಸಿ.ಎ. ನಿವೇಶನ, ಉದ್ಯಾನಗಳಿಗೆ ಜಾಗವನ್ನೂ ಬಿಡದೆ ನಿಯಮಬಾಹಿರವಾಗಿ ತುಂಡು ಭೂಮಿ (ನಿವೇಶನ) ಮಾರಾಟ ಮಾಡಿದ್ದಾರೆ. ಇಂತಹ ಆಸ್ತಿಗಳನ್ನು ನೋಂದಣಿ ಮಾಡಲು ತೊಡಕುಗಳು ಎದುರಾಗಿವೆ. ಇಂತಹ ಭೂಮಿಯ ನೋಂದಣಿ ಸಮಸ್ಯೆ ಬಗೆಹರಿಸಲು ಈಚೆಗೆ ಕಂದಾಯ ಇಲಾಖೆ ಹೊಸ ಸೂತ್ರ ಸಿದ್ಧಪಡಿಸಿದೆ. ಅಂತಹ ಜಮೀನುಗಳನ್ನು ‘ಕೃಷಿಯೇತರ ಅಭಿವೃದ್ಧಿಯಾಗದ ಜಮೀನು’ ಎಂದು ಪರಿಗಣಿಸಲು ಇಲಾಖೆ ಸೂಚಿಸಿದೆ.

ಭೂಮಿ, ಇ-ಸ್ವತ್ತು ಹಾಗೂ ಇ-ಆಸ್ತಿ ತಂತ್ರಾಂಶಗಳ ಸಂಯೋಜನೆಯು ಅಭಿವೃದ್ಧಿ ಹಂತದಲ್ಲಿದ್ದು, ಒಂದು ಸರ್ವೆ ನಂಬರ್ ಜಮೀನು ಭೂಪರಿವರ್ತನೆಯಾದ ನಂತರ ಇ-ಸ್ವತ್ತು ಹಾಗೂ ಇ-ಆಸ್ತಿ ಗುರುತಿನ ಸಂಖ್ಯೆ ಸೃಜನೆಯಾಗಿದ್ದರೆ ಅಂತಹ ಆಸ್ತಿ ಗುರುತಿನ ಸಂಖ್ಯೆಯನ್ನು ಭೂಮಿ ತಂತ್ರಾಂಶಕ್ಕೆ ರವಾನಿಸಲಾಗುತ್ತದೆ. ಅಂತಹ ಜಮೀನನ್ನು ಪಹಣಿ ಆಧಾರದ ಮೇಲೆ ನೋಂದಣಿ ಮಾಡಲು ಸಾಧ್ಯವಾಗುತ್ತಿಲ್ಲ.

ಪರಿತ್ಯಾಜನಾ ಪತ್ರಗಳ ನೋಂದಣಿ: ಯೋಜನಾ ಪ್ರಾಧಿಕಾರದಿಂದ ಅನುಮೋದನೆಗೊಂಡ ಬಡಾವಣೆಗಳ ರಸ್ತೆ, ಆಟದ ಮೈದಾನ, ಉದ್ಯಾನಗಳನ್ನು ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರ (ರಿಲಿಂಕ್ವಿಷ್‌ಮೆಂಟ್) ಮಾಡಬೇಕು. ಆದರೆ, ಅವುಗಳಿಗೆ ಖಾತೆ ನೀಡುವ ಬಗ್ಗೆ ಗೊಂದಲವಿದ್ದ ಕಾರಣ ಈ ಪ್ರಕ್ರಿಯೆ ಸ್ಥಗಿತವಾಗಿತ್ತು. ಇಂತಹ ಬಡಾವಣೆಗಳ ಮೂಲ ಮಾಲೀಕರು, ಅಭಿವೃದ್ಧಿದಾರರ ಹೆಸರಿಗೆ ರಸ್ತೆ ಉದ್ಯಾನಗಳಿಗೆ ಖಾತೆ ಸೃಜನೆ ಮಾಡಿ, ಅವರಿಂದ ನೋಂದಣಿ ಮುಖಾಂತರ ವರ್ಗಾಯಿಸಲು ಸಾಧ್ಯವಾಗುವ ರೀತಿ ಪೌರಾಡಳಿತ ನಿರ್ದೇಶನಾಲಯ ಆದೇಶ ಹೊರಡಿಸಿದೆ. ಇದೇ ರೀತಿಯಲ್ಲಿ ಬಿಬಿಎಂಪಿ ಮತ್ತು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲೂ ಪರಿಹಾರವನ್ನು ನೀಡಲು ಕಂದಾಯ ಇಲಾಖೆ ನಿರ್ಧರಿಸಿದೆ.



ರಾಜ್ಯ ಸರ್ಕಾರವು ಆಸ್ತಿ ನೋಂದಣಿಗೆ ಇ–ಖಾತಾ ಕಡ್ಡಾಯ ಮಾಡಿದೆ. ನಿವೇಶನ, ಮನೆ ಮಾರಾಟಕ್ಕೆ ಸಂಬಂಧಿಸಿದ ಅಕ್ರಮಗಳನ್ನು ಮತ್ತು ಜನ ಮೋಸಹೋಗುವುದನ್ನು ತಡೆಯಲು ಇದು ನಿಜಕ್ಕೂ ಉತ್ತಮ ಹಾಗೂ ದಿಟ್ಟ ಹೆಜ್ಜೆ. ಆದರೆ, ಸರ್ಕಾರದ ಆಶಯಕ್ಕೆ ತಕ್ಕಂತೆ ಇ ಖಾತಾ ವಿತರಿಸುವ ಕೆಲಸ ವೇಗವಾಗಿ, ಪಾರದರ್ಶಕವಾಗಿ ನಡೆಯುತ್ತಿಲ್ಲ. ಹಲವು ತೊಡಕುಗಳಿಂದಾಗಿ ಇ–ಖಾತಾ ನೀಡುವ ಪ್ರಕ್ರಿಯೆ ಅವ್ಯವಸ್ಥೆಯ ಆಗರವಾಗಿ ಮಾರ್ಪಟ್ಟಿದೆ. ರಾಜಧಾನಿ ಬೆಂಗಳೂರು ಸೇರಿದಂತೆ ರಾಜ್ಯದ ವಿವಿಧ ಭಾಗಗಳ ಚಿತ್ರಣ ಇಲ್ಲಿದೆ

ಇ–ಖಾತಾ ಕಡ್ಡಾಯ: ಕಾಯ್ದೆಗೆ ತಿದ್ದುಪಡಿ

ಗ್ರಾಮೀಣ ಪ್ರದೇಶಗಳ ಆಸ್ತಿ ನೋಂದಣಿಗೆ ಇ–ಸ್ವತ್ತು ಕಡ್ಡಾಯಗೊಳಿಸಿದ ಮಾದರಿಯಲ್ಲೇ ನಗರ ಪ್ರದೇಶಗಳ ಆಸ್ತಿ ನೋಂದಣಿಗೆ ಡಿಜಿಟಲ್ ಸ್ವರೂಪದ ಇ–ಖಾತಾ ಕಡ್ಡಾಯಗೊಳಿಸುವ ‘ನೋಂದಣಿ (ಕರ್ನಾಟಕ ತಿದ್ದುಪಡಿ) ಮಸೂದೆ’ ಇದೇ ವರ್ಷದ ಫೆಬ್ರುವರಿಯಲ್ಲಿ ವಿಧಾನಮಂಡಲದ ಅನುಮೋದನೆ ಪಡೆದಿತ್ತು. ಅದನ್ನು ಸೆಪ್ಟೆಂಬರ್–ಅಕ್ಟೋಬರ್‌ನಿಂದ ಜಾರಿಗೆ ತರಲಾಗಿದೆ.

‘ವಿದ್ಯುನ್ಮಾನ ಮಾಧ್ಯಮದ ಸಾಧನಗಳ ಮೂಲಕ ಇತರ ಇಲಾಖೆಯ ತಂತ್ರಾಂಶದೊಂದಿಗೆ ಸಂಯೋಜಿಸದ ಹೊರತು ಸ್ಥಿರ ಸ್ವತ್ತಿನ ವರ್ಗಾವಣೆ ಅಥವಾ ಪರಭಾರೆ ಮಾಡುವಂತಿಲ್ಲ’ ಎಂಬುದನ್ನು ನೋಂದಣಿ ಕಾಯ್ದೆ–1908ರ ಸೆಕ್ಷನ್ 71–ಎಗೆ ಸೇರಿಸಲಾಗಿದೆ.

‘ಗ್ರಾಮೀಣ ಪ್ರದೇಶಗಳ ಸ್ಥಿರಾಸ್ತಿಗಳಿಗೆ ಸಂಬಂಧಿಸಿದ ನೋಂದಣಿ ಪ್ರಕ್ರಿಯೆಯಲ್ಲಿ ಇ–ಸ್ವತ್ತು ಹಾಜರುಪಡಿಸುವುದನ್ನು ಕಡ್ಡಾಯಗೊಳಿಸಲಾಗಿತ್ತು. ಆದರೆ, ನಗರ ಪ್ರದೇಶಗಳಲ್ಲಿ ಭೌತಿಕ ಕಡತದ (ಕಾಗದದ) ಖಾತೆ ಆಧಾರದಲ್ಲಿ ಈಗಲೂ ನೋಂದಣಿ ನಡೆಯುತ್ತಿತ್ತು. ಇದರಿಂದ ಅಕ್ರಮವಾಗಿ ಸ್ವತ್ತುಗಳ ನೋಂದಣಿ, ವಂಚನೆ ನಡೆಯುತ್ತಿತ್ತು. ಅದನ್ನು ತಪ್ಪಿಸಲು ಇ-ಖಾತಾ ಹಾಜರುಪಡಿಸುವುದನ್ನು ಕಡ್ಡಾಯಗೊಳಿಸಲಾಗಿದೆ. ಹಾಗಾಗಿ, ನಗರ ಪ್ರದೇಶಗಳ ಆಸ್ತಿಗಳ ನೋಂದಣಿ ಇ-ಖಾತಾ ಇದ್ದರೆ ಮಾತ್ರ ಸಾಧ್ಯ. ಬಿಬಿಎಂಪಿ, ಬಿಡಿಎ, ಕೆಐಎಡಿಬಿ ವ್ಯಾಪ್ತಿಯ ಸ್ವತ್ತುಗಳು ಮತ್ತು ಇತರ ಎಲ್ಲ ನಗರ ಪ್ರದೇಶಗಳ ಸ್ವತ್ತುಗಳಿಗೂ ಇದು ಅನ್ವಯವಾಗುತ್ತದೆ.

ರಾಜ್ಯದೆಲ್ಲೆಡೆ ಸಮಸ್ಯೆ

ಪ್ರಜಾವಾಣಿ ವಾರ್ತೆ

ಮೈಸೂರು/ಹುಬ್ಬಳ್ಳಿ/ಕಲಬುರಗಿ/ದಾವಣಗೆರೆ/ಮಂಗಳೂರು: ಇ–ಖಾತಾ ಸಮಸ್ಯೆ ರಾಜಧಾನಿ ಬೆಂಗಳೂರಿನಲ್ಲಷ್ಟೇ ಅಲ್ಲ, ಮೈಸೂರು, ಹುಬ್ಬಳ್ಳಿ–ಧಾರಾವಾಡ, ಮಂಗಳೂರು ಸೇರಿದಂತೆ ರಾಜ್ಯದ ಎಲ್ಲ ಮಹಾನಗರಪಾಲಿಕೆಗಳು ಹಾಗೂ ಇತರ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಇದೆ. ಗ್ರಾಮೀಣ ಭಾಗದಲ್ಲಿ ಜನರು ಇ–ಸ್ವತ್ತು ಮಾಡಿಸಲು ಪರದಾಡುತ್ತಿದ್ದಾರೆ. ಇದರಿಂದಾಗಿ ಆಸ್ತಿಗಳ ಖರೀದಿ, ಮಾರಾಟ ನೋಂದಣಿ ಆಗುತ್ತಿಲ್ಲ. ಆಸ್ತಿಗಳ ಮಾಲೀಕರು ಕಚೇರಿಗಳಿಗೆ ಅಲೆದಾಡುತ್ತಿದ್ದಾರೆ.

ಆಸ್ತಿಗಳ ಮಾಲೀಕರ ಬಳಿ ಅಗತ್ಯವಾಗಿ ಬೇಕಾಗಿರುವ ದಾಖಲೆಗಳು ಇಲ್ಲದಿರುವುದು ಒಂದು ಸಮಸ್ಯೆಯಾದರೆ, ಸರ್ವರ್, ಇಂಟರ್‌ನೆಟ್ ಸಮಸ್ಯೆಯೂ ಬಾಧಿಸುತ್ತಿದೆ. ಇ–ಖಾತಾ ಮಾಡಿಸಿಕೊಡಲು ಮಧ್ಯವರ್ತಿಗಳು ಹುಟ್ಟಿಕೊಂಡಿದ್ದಾರೆ. ಅಧಿಕಾರಿಗಳು ಕೂಡ ನಿವೇಶನದ ಅಳತೆಗೆ ತಕ್ಕಂತೆ ₹15ಸಾವಿರದಿಂದ ₹ 30ಸಾವಿರದವರೆಗೆ ಲಂಚಕ್ಕೆ ಬೇಡಿಕೆ ಇಡುತ್ತಿದ್ದಾರೆ ಎಂಬ ಆರೋಪಗಳಿವೆ. ಇಲ್ಲವಾದರೆ ಸಾಕಷ್ಟು ಹಳೆಯ ದಾಖಲೆಗಳನ್ನು ಕೇಳಿ ಸತಾಯಿಸುವ, ಅರ್ಜಿ ತಿರಸ್ಕರಿಸುವ ಹುನ್ನಾರಗಳು ನಡೆಯುತ್ತಿರುವ ಬಗ್ಗೆಯೂ ದೂರುಗಳಿವೆ.

ರಾಜ್ಯ ಸರ್ಕಾರ ಸಮರ್ಪಕವಾಗಿ ಪೂರ್ವಸಿದ್ಧತೆ ಮಾಡದೆ ಆಸ್ತಿ ನೋಂದಣಿಗೆ ಇ–ಖಾತಾ ಕಡ್ಡಾಯಗೊಳಿಸಿರುವುದರಿಂದ ಈ ಎಲ್ಲ ಸಮಸ್ಯೆಗಳಾಗಿವೆ ಎಂಬುದು ಆಸ್ತಿ ಮಾಲೀಕರ ಆರೋಪ.

ದಾಖಲೆಗಳಿರುವುದು ಕಡ್ಡಾಯ: ಮಾಲೀಕರು ತಮ್ಮ ಜಮೀನು ಅಥವಾ ಆಸ್ತಿಗೆ ಸಂಬಂಧಿಸಿದಂತೆ ಪಕ್ಕಾ ಖಾತೆಯನ್ನು ಹೊಂದಿರಬೇಕು. ಕೃಷಿ ಭೂಮಿಗೆ ಪಹಣಿ ಇರುವಂತೆ ಕೃಷಿಯೇತರ (ಎನ್‌ಎ) ಭೂಮಿಗೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಇ–ಸ್ವತ್ತು, ನಗರ ಸ್ಥಳೀಯ ಸಂಸ್ಥೆ ವ್ಯಾಪ್ತಿಯಲ್ಲಿ ಇ–ಖಾತಾ ಮಾಡಿಸಿಕೊಳ್ಳಬೇಕಾಗುತ್ತದೆ. ಆಸ್ತಿ ನೋಂದಣಿ ಸಂದರ್ಭದಲ್ಲಿ ಇದು ಕಡ್ಡಾಯ. ಆದರೆ, ಈ ಸ್ವತ್ತು ನೀಡಲು, ಇ–ಖಾತಾ ಮಾಡಿಸಬೇಕು ಎಂದರೆ ಮಾಲೀಕರು ದಾಖಲೆಗಳನ್ನು ಸಲ್ಲಿಸುವುದು ಕಡ್ಡಾಯ ಎಂದು ಹೇಳುತ್ತಾರೆ ಅಧಿಕಾರಿಗಳು.

‘ಗ್ರಾಮೀಣ ಭಾಗದಲ್ಲಿ ಕೃಷಿ ಭೂಮಿ ಹೊರತಾದ ಜಮೀನಿಗೆ ಇ–ಸ್ವತ್ತು (9/11) ನೀಡಲಾಗುತ್ತದೆ. ಅದಕ್ಕೆ ಭೂ ಪರಿವರ್ತನೆಯಾಗಬೇಕು. ಆದರೆ, ಗ್ರಾಮೀಣ ಭಾಗಗಳಲ್ಲಿ ಬಹುತೇಕರು ಭೂ ಪರಿವರ್ತನೆಗೆ ಮುಂದಾಗುವುದಿಲ್ಲ. ಶುಲ್ಕ ಪಾವತಿ ಒಂದು ಕಾರಣವಾದರೆ, ಕಚೇರಿಗಳಿಗೆ ಅಲೆದಾಡಬೇಕು ಎಂಬುದು ಮತ್ತೊಂದು ಕಾರಣ. ಭೂ ಪರಿವರ್ತನೆ ಆಗದ ಆಸ್ತಿಯನ್ನು ನಾವು ಕ್ರಮಬದ್ಧವಲ್ಲದ ಆಸ್ತಿ (11ಬಿ ಖಾತೆ) ಎಂದು ಗುರುತಿಸುತ್ತೇವೆ. ಈ ದಾಖಲೆ ಇದ್ದರೆ ಆಸ್ತಿ ನೋಂದಣಿ ಮಾಡಿಕೊಳ್ಳಲು ಆಗುವುದಿಲ್ಲ. ಈಗಿನ ಹಲವು ಆಸ್ತಿಗಳು ಗ್ರಾಮ ಠಾಣಾ ವ್ಯಾಪ್ತಿಯಿಂದ ಹೊರಗಿವೆ. ದಾಖಲೆಗಳು ಇಲ್ಲದಿದ್ದರೆ ಇ–ಸ್ವತ್ತು ನೀಡಲು ಹೇಗೆ ಸಾಧ್ಯ’ ಎಂದು ಪ್ರಶ್ನಿಸುತ್ತಾರೆ ಚಾಮರಾಜನಗರ ಜಿಲ್ಲೆಯ ಹೆಸರು ಹೇಳಲಿಚ್ಛಿಸದ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯೊಬ್ಬರು.

ದಾಖಲೆಗಳನ್ನು ಹೊಂದಿಸಲು ಹರಸಾಹಸ: ಬಹುತೇಕ ನಗರ ಪ್ರದೇಶಗಳಲ್ಲಿ ಹಳೆಯ ಬಡಾವಣೆ, ಅಪಾರ್ಟ್‌ಮೆಂಟ್‌ಗಳಿಗೆ ಸಂಬಂಧಿಸಿದಂತೆ ಮಾಲೀಕರ ಬಳಿ ದಾಖಲೆಗಳು ಇಲ್ಲ. ದಶಕಗಳ ಹಿಂದೆ ಖರೀದಿಸಿದ ನಿವೇಶನಗಳ ದಾಖಲೆಗಳನ್ನು ಹೊಂದಿಸಿಕೊಳ್ಳಲು ಮಾಲೀಕರು ಕಚೇರಿಗಳಿಗೆ ಅಲೆದಾಡಬೇಕಾಗಿದೆ. ಕೆಲವು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಖಾಲಿ ನಿವೇಶನದ ನೋಂದಣಿ ದಾಖಲಾತಿ ಇದ್ದರೂ ಹಕ್ಕು ವರ್ಗಾವಣೆ ಮಾಡುತ್ತಿಲ್ಲ. ಕೃಷಿಯೇತರ ಉದ್ದೇಶಕ್ಕೆ ಪರಿವರ್ತಿಸಿದ ಭೂಮಿಯಲ್ಲಿ ನಗರ ಯೋಜನೆ ಇಲಾಖೆಯಿಂದ ಲೇಔಟ್ ನಕ್ಷೆ ತಯಾರಿಸಿ ಅನುಮೋದನೆ ಪಡೆದ ನಿವೇಶನಗಳ ಖಾತಾ ಮಾತ್ರ ಜನರಿಗೆ ದೊರೆಯುತ್ತಿವೆ. ಆದರೆ, ಕೃಷಿ ಜಮೀನಿನಲ್ಲಿ ನಿವೇಶನ ಖರೀದಿಸಿದವರ ಗೋಳು ಗೋಳಾಗಿಯೇ ಉಳಿದಿದೆ. ಗ್ರಾಮೀಣ ಪ್ರದೇಶಗಳಲ್ಲಿ ಗ್ರಾಮ ಠಾಣಾ ಜಾಗದಲ್ಲಿನ ಆಸ್ತಿಗಳಿಗೆ ಮಾತ್ರ ಇ–ಸ್ವತ್ತು ಮಾಡಿಕೊಡಲಾಗುತ್ತಿದೆ.

ತಾಂತ್ರಿಕ ಕಾರಣಗಳು: ತಾಂತ್ರಿಕ ಕಾರಣಗಳು ಕೂಡ ಇ-ಖಾತಾ, ಇ–ಸ್ವತ್ತು ಪಡೆಯುವುದನ್ನು, ಆಸ್ತಿ ನೋಂದಣಿಯನ್ನು ಕಠಿಣಗೊಳಿಸಿವೆ. ಕಚೇರಿಗಳಲ್ಲಿ ಸರ್ವರ್ ಸಮಸ್ಯೆ, ಇಂಟರ್‌ನೆಟ್ ಸಮಸ್ಯೆ, ತಂತ್ರಾಂಶದಲ್ಲಿನ ದೋಷಗಳು ಇಡೀ ಪ್ರಕ್ರಿಯೆಯನ್ನು ವಿಳಂಬವಾಗುವಂತೆ ಮಾಡುತ್ತಿವೆ.

ಉಪನೋಂದಣಾಧಿಕಾರಿಗಳ ಕಚೇರಿಯಲ್ಲಿ ಹೆಸರುಗಳು ಹಾಗೂ ಆಸ್ತಿಗಳು ಎರಡು ಬಾರಿ ನೋಂದಣಿಯಾಗಿದ್ದರೆ ಅವುಗಳು ಗ್ರಾಮ ಪಂಚಾಯಿತಿಗಳ ಪಂಚತಂತ್ರ ಸರ್ವರ್‌ನಲ್ಲಿ ತೋರಿಸುವುದಿಲ್ಲ. ಮತ್ತೆ ಉಪನೋಂದಣಾಧಿಕಾರಿ ಕಚೇರಿಗೆ ಅಲೆದಾಡಿ ಸರಿಪಡಿಸಿಕೊಳ್ಳಬೇಕಿದೆ. ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿದ್ದ ಆಸ್ತಿಗಳು ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಗೆ ಬಂದ ಬಳಿಕ ಭೂಮಾಪನಾ ಇಲಾಖೆ ಹಾಗೂ ನಗರಾಭಿವೃದ್ಧಿ ಕೋಶಗಳ ಪರಿಶೀಲನೆ ನಂತರ ಇ-ಖಾತಾ ಮಾಡಿಸಲು ಅವಕಾಶ ನೀಡಲಾಗುತ್ತದೆ. ಇದು ಇ–ಆಸ್ತಿ ದಾಖಲೆಗಳ ವಿತರಣೆಯನ್ನು ನಿಧಾನಗೊಳಿಸುತ್ತಿವೆ. ಇ–ಖಾತಾದಲ್ಲಿ ಹೆಸರು ಸೇರಿದಂತೆ ಇತರ ವಿವರಗಳ ತಿದ್ದುಪಡಿ ಇದ್ದರೆ ಮಾಡಲು ಸಾಧ್ಯವಾಗುತ್ತಿಲ್ಲ. ತಂತ್ರಾಂಶದಲ್ಲಿ ಎಲ್ಲ ಮಾಹಿತಿ ದಾಖಲಿಸಿದರೂ ತಿದ್ದುಪಡಿ ಆಗುತ್ತಿಲ್ಲ.

ಇ-ಖಾತಾಗೆ ಅರ್ಜಿ ಹಾಕಿ ತಿಂಗಳಾದರೂ ಮಾಡಿಕೊಡುವುದಿಲ್ಲ. ಏನೇನೋ ಸಬೂಬು ಹೇಳಿಕೊಂಡು ದಿನ ದೂಡುತ್ತಾರೆ. ಯಾವುದೇ ನಿವೇಶನವನ್ನು ನೋಂದಣಿ ಮಾಡಬೇಕಾದರೆ ಮತ್ತು ಬ್ಯಾಂಕ್‌ನಲ್ಲಿ ಸಾಲ ಪಡೆಯಲು ಇ-ಖಾತಾ ಅತ್ಯವಶ್ಯಕ. ಆದರೆ ಪಂಚಾಯಿತಿಗಳಲ್ಲಿ ಇ-ಖಾತಾ ಪಡೆಯಲು ಹಲವು ತಿಂಗಳು ಬೇಕು

ರಾಜೇಶ್, ಆಲೂರು, ಹಾಸನ ಜಿಲ್ಲೆ

ಮಾಲೀಕರು ಈಗ ಪಾಲಿಕೆಗೆ ಇ-ಖಾತಾ ಮಾಡಿಸಲು ಅರ್ಜಿ ಕೊಟ್ಟರೆ ಅವರು ಕೇಳಿದ ದಾಖಲೆಯನ್ನು ಪೂರೈಸಿ ಕೆಲಸ ಪೂರ್ಣಗೊಳ್ಳಲು ಕನಿಷ್ಠ ಒಂದು ತಿಂಗಳು ಕಾಲಾವಕಾಶ ಬೇಕಾಗುತ್ತದೆ. ಆಸ್ತಿ ಇದೆ. ಮಕ್ಕಳನ್ನು ಉನ್ನತ ಶಿಕ್ಷಣಕ್ಕೆ ವಿದೇಶಕ್ಕೆ ಕಳಿಸಲು ಇಲ್ಲವೇ ಮದುವೆ ಮತ್ತಿತರ ಕಾರಣಗಳಿಗೆ ಈಗ ತುರ್ತಾಗಿ ಆಸ್ತಿ ಮಾರಾಟ ಮಾಡಲು ಇ-ಖಾತಾದ ಸಮಸ್ಯೆ ಅಡ್ಡಿಯಾಗಿದೆ

ಶ್ರೀಕಾಂತ್ ಕಾಮತ್, ಶಿವಮೊಗ್ಗ ಜಿಲ್ಲೆ ಲ್ಯಾಂಡ್ ಡೆವಲಪರ್ಸ್ ಅಸೋಸಿಯೇಷನ್ ಕಾರ್ಯದರ್ಶಿ

ತುಂಡು ಭೂಮಿಯ ಮಾಲೀಕರೇ ಉತ್ತರ ಕನ್ನಡ ಜಿಲ್ಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಕೃಷಿ ಭೂಮಿಯನ್ನು ಕೃಷಿಯೇತರ ಭೂಮಿ ಪರಿವರ್ತನೆಗೆ ಕನಿಷ್ಠ 3 ಗುಂಟೆ ಜಾಗದ ಅಗತ್ಯವಿದೆ. ಕೃಷಿಯೇತರ ಭೂಮಿಯಾಗಿ ಪರಿವರ್ತನೆ ಆಗದಿದ್ದರೆ ಇ–ಸ್ವತ್ತು, ಇ–ಖಾತಾ ಮಾಡಿಸಲು ಆಗದು. ಇದರಿಂದ ಬಡ ಮತ್ತು ಮಧ್ಯಮ ವರ್ಗದ ಜನರು ಸಮಸ್ಯೆ ಎದುರಿಸುವಂತಾಗಿದೆ

ಸತೀಶ ಬೇಳೂರಕರ, ಕಾರವಾರ

18 ಸೆಂಟ್ ಜಾಗ ಖರೀದಿಸಿದ್ದೆ. ಅದರಲ್ಲಿ ವಿವಾದಕ್ಕೆ ಒಳಗಾಗಿದ್ದ 1.83 ಸೆಂಟ್ ಜಾಗವನ್ನು ನೋಂದಾಯಿಸಲು ಒಂದೂವರೆ ವರ್ಷದಿಂದ ಓಡಾಡುತ್ತಿದ್ದೇನೆ. ಇ-ಖಾತಾ, ಎ ಖಾತೆ ಎಂದೆಲ್ಲ ಹೇಳಿ ಸತಾಯಿಸುತ್ತಿದ್ದಾರೆ. ನನಗೆ ಅದು ಯಾವುದೂ ಗೊತ್ತಿಲ್ಲ. ಸರ್ಕಾರದ ವ್ಯವಸ್ಥೆಯೊಂದು ಜನರಿಗೆ ಈ ರೀತಿ ತೊಂದರೆ ಕೊಟ್ಟರೆ ಹೇಗೆ?

ರಾಬರ್ಟ್ ಡಿಸೋಜಾ, ದಕ್ಷಿಣ ಕನ್ನಡ ಜಿಲ್ಲೆ

ಬಿಬಿಎಂಪಿ ವ್ಯಾಪ್ತಿಯಲ್ಲಿ ಇ–ಖಾತಾ ಪ್ರಗತಿ



28 ಲಕ್ಷ
ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಆಸ್ತಿಗಳು (ನಿವೇಶನ–ಕಟ್ಟಡಗಳು)

23 ಲಕ್ಷ
ಬಿಬಿಎಂಪಿ ವೆಬ್‌ಸೈಟ್‌ನಲ್ಲಿ ಕರಡು–ಇ ಖಾತಾ ಅಪ್‌ಲೋಡ್ ಮಾಡಲಾಗಿರುವ ಆಸ್ತಿಗಳು

6 ಲಕ್ಷ
ಕರಡು ಇ–ಖಾತಾ ಡೌನ್‌ಲೋಡ್ ಮಾಡಿಕೊಂಡಿರುವ ಮಾಲೀಕರು

30 ಸಾವಿರ
ಆನ್‌ಲೈನ್‌ನಲ್ಲಿ ದಾಖಲೆ ಅಪ್‌ಲೋಡ್ ಆಗಿರುವ ಆಸ್ತಿಗಳು

21,369
ಈವರೆಗೆ ಅಂತಿಮ ಇ–ಖಾತಾ ಡೌನ್‌ಲೋಡ್ ಮಾಡಿಕೊಂಡಿರುವ ಆಸ್ತಿಗಳ ಸಂಖ್ಯೆ

ದಾಖಲೆ ಇಲ್ಲದಿದ್ದರೆ ಪರದಾಟ

• ಆರ್.ಮಂಜುನಾಥ್

ಬೆಂಗಳೂರು: ನಗರದಲ್ಲಿ ಬಿಬಿಎಂಪಿ ವ್ಯಾಪ್ತಿಯಲ್ಲಿ ಪಾಲಿಕೆ, ಬಿಡಿಎ ಅನುಮೋದಿತ ಬಡಾವಣೆಗಳಿವೆ. ಕರ್ನಾಟಕ ವಸತಿ ನಿಗಮ ಸೇರಿದಂತೆ ವಸತಿ ಸಂಸ್ಥೆಗಳಿಂದ ಹಂಚಿಕೆಯಾದ ನಿವೇಶನ, ಕಟ್ಟಡಗಳಿವೆ. ಈ ನಿವೇಶನ– ಕಟ್ಟಡಗಳಿಗೆ ಅಭಿವೃದ್ಧಿ ಶುಲ್ಕ, ಮಂಜೂರಾದ ನಕ್ಷೆಗಳ ದಾಖಲೆಗಳು ಲಭ್ಯವಿರುತ್ತವೆ. ಇವುಗಳನ್ನು ಇ–ಖಾತಾ ಪಡೆಯುವ ಸಂದರ್ಭದಲ್ಲಿ ನಮೂದಿಸಬೇಕಾಗುತ್ತದೆ. ಸರ್ಕಾರಿ ಸಂಸ್ಥೆಗಳ ದಾಖಲೆಗಳಾಗಿರುವುದರಿಂದ ಇ–ಖಾತಾ ಲಭ್ಯವಾಗುತ್ತಿದೆ.

ಆಸ್ತಿ ಮಾರಾಟ, ಸಾಲ ಪಡೆಯಲು ಹಾಗೂ ಇತರೆ ಆಸ್ತಿ ನೋಂದಣಿ ಪ್ರಕ್ರಿಯೆಗಳಿಗೆ ಇ–ಖಾತಾ ಅಗತ್ಯವಾಗಿರುವುದರಿಂದ ಇಂತಹ ಆಸ್ತಿ ಮಾಲೀಕರ ಇ–ಖಾತಾ ಪ್ರಕ್ರಿಯೆಯನ್ನು ಒಂದು ದಿನದಲ್ಲೇ ಪೂರ್ಣಗೊಳಿಸಲು ಬಿಬಿಎಂಪಿ ಪ್ರತ್ಯೇಕ ಕೇಂದ್ರಗಳನ್ನು ಎಲ್ಲ ವಾರ್ಡ್‌ಗಳಲ್ಲೂ ಆರಂಭಿಸಿದೆ. ಆಸ್ತಿ ಮಾಲೀಕರು ಎಲ್ಲ ರೀತಿಯ ದಾಖಲೆಗಳನ್ನು ಒದಗಿಸಿದರೆ ಕೂಡಲೇ ಇ–ಖಾತಾ ಲಭ್ಯವಾಗುತ್ತದೆ. ಒಂದು ದಾಖಲೆ ಇಲ್ಲದಿದ್ದರೂ ಪರದಾಟ ತಪ್ಪಿದ್ದಲ್ಲ.

ಪ್ರಮುಖ ಸಮಸ್ಯೆ ಏನು?

ಬೆಂಗಳೂರಿನಲ್ಲಿ ಕೃಷಿ ಭೂಮಿಯಿಂದ ಪರಿವರ್ತನೆಯಾದ (ಡಿಸಿ ಕನ್ವರ್ಷನ್), ಬಿಡಿಎ ಸ್ವಾಧೀನಪಡಿಸಿಕೊಂಡು ಕೈಬಿಟ್ಟ ನಂತರ ಪರಿವರ್ತನೆಯಾದ ಹಾಗೂ ಪರಿವರ್ತನೆಯಾಗದ ಭೂಮಿಗಳಿವೆ, ಕೃಷಿ ಭೂಮಿಯಲ್ಲೇ ರಚನೆಯಾದ ಬಡಾವಣೆಗಳಿವೆ (ರೆವೆನ್ಯೂ). ಪುರಸಭೆ, ನಗರಸಭೆಯಿಂದ ಬಿಬಿಎಂಪಿ ವ್ಯಾಪ್ತಿಗೆ ಬಂದ ಹಳ್ಳಿ ಪ್ರದೇಶಗಳಿವೆ. ಎ–ಖಾತಾ ಅಥವಾ ಬಿ–ಖಾತಾ ಪಡೆಯುವ ಸಂದರ್ಭದಲ್ಲಿ ಎಲ್ಲವೂ ಮ್ಯಾನ್ಯುಯಲ್ ಇದ್ದುದರಿಂದ ಒಂದೆರಡು ದಾಖಲೆಗಳು ಇಲ್ಲದಿದ್ದರೂ ಖಾತಾಗಳು ಲಭ್ಯವಾಗಿವೆ. ಬಿ–ಖಾತಾ ಹೊಂದಿರುವವವರಿಗೆ ಕಟ್ಟಡ ನಕ್ಷೆ ನೀಡಲಾಗುತ್ತಿಲ್ಲ. ಹೀಗಾಗಿ, ಇ–ಖಾತಾ ಪಡೆಯುವಾಗ ನಿವೇಶನದೊಂದಿಗೆ ಕಟ್ಟಡ ಎಂಬ ಆಯ್ಕೆ ಮಾಡಿಕೊಂಡಾಗ ಮಂಜೂರು ನಕ್ಷೆ ಅಪ್‌ಲೋಡ್ ಮಾಡಬೇಕಾಗುತ್ತದೆ. ಅದು ಇಲ್ಲದ್ದರಿಂದ, ಎಲ್ಲವೂ ಆನ್‌ಲೈನ್‌ನಲ್ಲಿ ಸಾಫ್ಟ್‌ವೇರ್ ನಿರ್ವಹಣೆಯಲ್ಲಿರುವುದರಿಂದ ಇ–ಖಾತಾ ಲಭ್ಯವಾಗುತ್ತಿಲ್ಲ.

ಅಪಾರ್ಟ್‌ಮೆಂಟ್‌ಗಳಲ್ಲಿ ಪ್ರತಿಯೊಂದು ಯುನಿಟ್‌ಗೆ (ಫ್ಲ್ಯಾಟ್) ಇ–ಖಾತಾ ಪಡೆಯುವ ಸಂದರ್ಭದಲ್ಲೂ ಅನುಮೋದಿತ ನಕ್ಷೆ ಅಪ್‌ಲೋಡ್ ಮಾಡಬೇಕಾಗಿದೆ. ಇದು ಬಹುತೇಕ ಫ್ಲ್ಯಾಟ್ ಮಾಲೀಕರಲ್ಲಿ ಲಭ್ಯವಿಲ್ಲ. ಇದಲ್ಲದೆ, ಕೆಲವು ಅಪಾರ್ಟ್‌ಮೆಂಟ್‌ಗಳಲ್ಲಿ ಮಂಜೂರು ನಕ್ಷೆಗಿಂತ ಹೆಚ್ಚಿನ ಅಂತಸ್ತುಗಳಿವೆ. ಅವುಗಳಿಗೆ ಮ್ಯಾನ್ಯುಯಲ್ ಖಾತಾ ಲಭ್ಯವಾಗಿದ್ದರೂ, ಇ–ಖಾತಾ ಪಡೆಯಲು ಎಲ್ಲ ದಾಖಲೆಗಳನ್ನೂ ಅಪ್‌ಲೋಡ್ ಮಾಡಬೇಕಾಗುತ್ತದೆ. ದಾಖಲೆಗಳು ಇಲ್ಲದ್ದರಿಂದ ಇ–ಖಾತಾ ಲಭ್ಯವಾಗುತ್ತಿಲ್ಲ.

ಇ–ಖಾತಾ ಹೇಗೆ ಲಭ್ಯ?

ಬಿಬಿಎಂಪಿ ವ್ಯಾಪ್ತಿಯಲ್ಲಿ ಎ–ಖಾತಾ ಹೊಂದಿರುವ ನಿವೇಶನ–ಕಟ್ಟಡಗಳು ಆಸ್ತಿ ತೆರಿಗೆ, ಅಭಿವೃದ್ಧಿ ಶುಲ್ಕ ಹಾಗೂ ಮಂಜೂರಾದ ನಕ್ಷೆಗಳು ಮಾಲೀಕರಲ್ಲಿದ್ದರೆ ಇ–ಖಾತಾ ಪಡೆಯುವ ಪ್ರಕ್ರಿಯೆಯಲ್ಲಿ ಅಪ್‌ಲೋಡ್ ಮಾಡಿದರೆ ಸುಲಭವಾಗಿ ಒಂದೇ ದಿನದಲ್ಲಿ ಇ–ಖಾತಾ ಆನ್‌ಲೈನ್‌ನಲ್ಲೇ ಲಭ್ಯವಾಗುತ್ತದೆ. ಯಾವುದೇ ಒಂದು ದಾಖಲೆ ಇಲ್ಲದಿದ್ದರೂ ಇ–ಖಾತಾ ಅನುಮೋದನೆಯಾಗುವುದಿಲ್ಲ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ನಾಡಪ್ರಭು ಕೆಂಪೇಗೌಡ ಬಡಾವಣೆಯ ನಿವೇಶನಗಳಿಗೆ ಈಗಾಗಲೇ ಇ-ಖಾತಾ ನೀಡಿದೆ. ಇನ್ನುಳಿದ ಬಡಾವಣೆಯ ನಿವೇಶನ ಅಥವಾ ಕಟ್ಟಡಗಳಿಗೆ ಇ–ಖಾತಾ ಪಡೆಯಲು ಸೇವಾಸಿಂಧುವಿನಲ್ಲಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಆದರೆ, ಎಲ್ಲವೂ ಆನ್‌ಲೈನ್‌ನಲ್ಲಿ ಸಾಧ್ಯವಾಗುವುದಿಲ್ಲ. ಇದಾದ ಮೇಲೆ ಖುದ್ದಾಗಿ ಬಿಡಿಎ ಅಧಿಕಾರಿಗಳನ್ನು ಭೇಟಿ ಮಾಡಿ, ದಾಖಲೆ ಸಲ್ಲಿಸಿದ ನಂತರವಷ್ಟೇ ಇ–ಖಾತಾ ಪಡೆಯಬಹುದು. ಬಿಡಿಎ ಅನುಮೋದಿತ ನಿವೇಶನ ಹಾಗೂ ಬಡಾವಣೆಗಳಿಗೂ ಇದೇ ಪ್ರಕ್ರಿಯೆಯಲ್ಲಿ ಇ–ಖಾತಾ ಪಡೆಯಬಹುದು.

ಬಿಬಿಎಂಪಿ ಇ–ಖಾತಾ: ಪ್ರಕ್ರಿಯೆ/ ದಾಖಲೆಗಳು

- **ಕರಡು ಇ–ಖಾತಾ:** ಬಿಬಿಎಂಪಿ ವೆಬ್‌ಸೈಟ್‌ನಲ್ಲಿ (https://bbmpeaasthi.karnataka.gov.in/) ಕರಡು ಇ–ಖಾತಾ ಡೌನ್‌ಲೋಡ್ ಮಾಡಿಕೊಳ್ಳಬೇಕು
- **ನೋಂದಣಿ:** ಮೊಬೈಲ್ ಮತ್ತು ಒಟಿಪಿಯೊಂದಿಗೆ ನೋಂದಣಿಯಾಗಬೇಕು
- **ದಾಖಲೆ ಸಲ್ಲಿಕೆ ಆರಂಭ:** ಕರಡು ಇ–ಖಾತಾದಲ್ಲಿ ನಮೂದಿಸಿರುವ ಇಪಿಐಡಿ ಮೂಲಕ ಅಂತಿಮ ಇ–ಖಾತಾ ಪಡೆಯಲು ದಾಖಲೆ ಸಲ್ಲಿಸುವ ಪ್ರಕ್ರಿಯೆ ಆರಂಭಿಸಬೇಕು
- **ಆಸ್ತಿ ತೆರಿಗೆ ರಸೀದಿ:** ತೆರಿಗೆ ಪಾವತಿಯ ಸಂಖ್ಯೆ ದಾಖಲಿಸಿದರೆ ಆಸ್ತಿ ಮಾಹಿತಿ ಲಭ್ಯವಾಗುತ್ತದೆ
- **ಕ್ರಯ ಪತ್ರ ಸಂಖ್ಯೆ:** ಸಂಖ್ಯೆ ನಮೂದಿಸಿದರೆ ಕಾವೇರಿ ತಂತ್ರಾಂಶದಿಂದ ಮಾಹಿತಿ ಲಿಂಕ್ ಆಗುತ್ತದೆ
- **ಋಣಭಾರ ಪತ್ರ:** ಆಸ್ತಿ ಮಾರಾಟ ಮಾಡುವಂತಿದ್ದರೆ ಈವರೆಗಿನ ಇಸಿ ಸಲ್ಲಿಸಬೇಕು
- **ಇ–ಕೆವೈಸಿ:** ಆಧಾರ್ ಸಂಖ್ಯೆಯನ್ನು ಲಿಂಕ್ ಮಾಡಬೇಕು. ಅದರಂತೆ ಭಾವಚಿತ್ರ, ಮೊಬೈಲ್ ಸಂಖ್ಯೆ ದಾಖಲಾಗುತ್ತದೆ
- **ಆಸ್ತಿ ಲೊಕೇಷನ್:** ಇ-ಖಾತಾ ಪ್ರಕ್ರಿಯೆಯ ವೆಬ್‌ಸೈಟ್‌ನಲ್ಲಿ ಆಸ್ತಿಯ ಸ್ಥಳವನ್ನು ಅಕ್ಷಾಂಶ, ರೇಖಾಂಶದ ಮಾಹಿತಿಯೊಂದಿಗೆ ಗುರುತಿಸಬೇಕು. ಆಸ್ತಿ–ಕಟ್ಟಡದ ಚಿತ್ರ ಅಪ್‌ಲೋಡ್ ಮಾಡಬೇಕು
- **ದಾಖಲೆಗಳು:** ಹಂಚಿಕೆಯಾದ ಸಂಸ್ಥೆಯ ದಾಖಲೆ ಪತ್ರ, ಆಸ್ತಿ ಅಭಿವೃದ್ಧಿ ಶುಲ್ಕ ಪಾವತಿ, ಸ್ಥಳೀಯ ಸಂಸ್ಥೆಗಳಿಗೆ ಬಂದಿದ್ದರೆ ಅಲ್ಲಿ ಪಾವತಿಯಾಗಿರುವ ಶುಲ್ಕದ ರಸೀದಿ, ಮಂಜೂರಾದ ಕಟ್ಟಡ ನಕ್ಷೆಯನ್ನು ಅಪ್‌ಲೋಡ್ ಮಾಡಬೇಕು
- **ಇ–ಸೈನ್:** ಎಲ್ಲ ದಾಖಲೆಗಳನ್ನು ಅಪ್‌ಲೋಡ್ ಮಾಡಿದ ಮೇಲೆ ಅದನ್ನು ಇ–ಸೈನ್ (ಆಧಾರ್ ಸಂಖ್ಯೆ, ಒಟಿಪಿ ನೀಡಿ) ಮೂಲಕ ಅರ್ಜಿಯನ್ನು ಸಲ್ಲಿಬೇಕು
- **ದೃಢೀಕರಣ ಪತ್ರ:** ಇ–ಸೈನ್ಡ್ ಅರ್ಜಿ ಸಲ್ಲಿಸಿದ ಮೇಲೆ ಸಲ್ಲಿಸಿದ ಅರ್ಜಿ ಮತ್ತು ದೃಢೀಕರಣ ಪತ್ರ ‘ಅರ್ಜಿ ಸ್ಥಿತಿ’ಯಡಿ ಲಭ್ಯವಾಗುತ್ತದೆ
- **ಅನುಮೋದನೆ:** ಎಲ್ಲ ದಾಖಲೆಗಳು ಸರಿಯಾಗಿದ್ದರೆ, ‘ಅರ್ಜಿ ಸ್ಥಿತಿ’ಯಡಿ ಅನುಮೋದನೆಯಾಗಿರುವ ಮಾಹಿತಿ ಪ್ರಕಟವಾಗುತ್ತದೆ
- **ಅಂತಿಮ ಇ–ಖಾತಾ:** ಅನುಮೋದನೆಯಾಗಿರುವ ಅಂತಿಮ ಇ–ಖಾತಾವನ್ನು ವೆಬ್‌ಸೈಟ್‌ನಲ್ಲಿ (https://bbmpeaasthi.karnataka.gov.in/office/frmKhathaDownload.aspx) ಸ್ವತ್ತಿನ ಸಂಖ್ಯೆ (ಇಪಿಐಡಿ) ನಮೂದಿಸಿ, ₹125 ಶುಲ್ಕ ಪಾವತಿಸುವ ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು

ಪದಬಂಧ 5884


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

2.ಆತಂಕ ಹುಟ್ಟಿಸಿದ ಅತಿಥಿ! (4)
4.ಹೊಲಗದ್ದೆಗಳ ಅಂಚಿನಲ್ಲಿ ರಚಿಸಿದ ಮಣ್ಣಿನ ದಂಡೆ (2)
6.ಅಸಹಾಯಕದಲ್ಲಿನ ನೆರವು (3)
7.ವನದಲ್ಲಿ ತಿಳಿದುಬಂದ ಸುದ್ದಿ (4)
9.ನರಕಾಧಿಪತಿಯೊಡನಿರುವ ಒಜ್ಜೆ (4)
11.ಬೇಟೆಯ ಮೃಗ (2)
13.ಅತ್ತಿತ್ತ ನೋಡಿದಾಗ ಮೊಟ್ಟೆ ಕಾಣಿಸಿತಲ್ಲಾ! (2)
14.ಒಳಗಿನ ಉದ್ದೇಶ (4)
16.ಒಪ್ಪವಾಗಿ ರಾಗದೊಡನಿರುವ ಪ್ರೀತಿ (4)
18.ವಸ್ತುಗಳ ಭಾರವನ್ನು ತೂಗುವ ಸಾಧನ (3)
19.ದುಡಿಮೆಯಿಂದ ಖರೀದಿಸಿರುವ ಚರ್ಮವಾದ್ಯ (2)
20.ಕಾಲ ಸೂಚಕ ಯಂತ್ರ (4)

ಮೇಲಿಂದ ಕೆಳಕ್ಕೆ

1.ಮೊಸರು ಕೊಳ್ಳುವಾಗಿನ ಹೆಚ್ಚಳ! (3)
2.ಆದಾಯ ಮತ್ತು ಖರ್ಚು (4)
3.ಕರದಲ್ಲಿರುವ ಹಣ (4)
5.ಸ್ವೀಕರಿಸಲು ಯೋಗ್ಯವಲ್ಲದ ದಾನ (3)
8.ಆನೆಯನ್ನು ನಡೆಸುವವನು (3)
10. ಒಜ್ಜೆ ಹೊತ್ತಿರುವ ನಮ್ಮ ದೇಶ! (3)
12.ಅರ್ಧಚಂದ್ರಾಕೃತಿ ರಚನೆ (3)
14. ಸುಗಂಧ ಲೇಪನ (4)
15.ಅನ್ಯಮಾರ್ಗವು ಗರದಲ್ಲಿದೆ! (4)
16.ತರಿಸಿಕೊಂಡ ವಸ್ತು (3)
17.ಗಡಿಯಲ್ಲಿ ಖರೀದಿಸಿದ ಮಣ್ಣಿನ ಪಾತ್ರೆ (3)



5883ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
5.ಸತತ 7.ವಿಷಮ
9.ಪಾಯಸ 11.ಸಹಗಮನ
12.ಮರಣ 14.ಕಲಹ
16.ತಕಲಿ

ಮೇಲಿಂದ ಕೆಳಕ್ಕೆ:
1.ಕೂಲಂಕಷ 2.ಅಗಸ
3.ಪರಾತ 4.ಅಪವ್ಯಯ
6.ತಲೆಗಡಿಕ 7.ವಿರಾಮ
8.ಮಸಣ 9.ಪಾನಕ
10.ಸನ್ನಾಹ
13.ರಕ್ಷಾಪತ್ರ 15.ಲಜ್ಜೆಗೇಡಿ
16.ತರ್ಜನಿ 17.ಲಿಲಾವು

ಸುಡೊಕು 6269

	2			5		8		
8		7	3		9		2	1
	4	3		1				7
	3	2				7		6
				7	2		9	
7	9				6			5
3	1		9		5		7	
	7			8		1	6	9
	6	9			1		3	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6268 ಸುಡೊಕು

4	2	1	3	8	9	5	6	7
8	7	9	1	5	6	4	2	3
3	6	5	4	2	7	9	8	1
6	8	7	5	9	4	3	1	2
2	1	4	7	6	3	8	5	9
5	9	3	8	1	2	6	7	4
9	3	2	6	7	8	1	4	5
1	4	8	2	3	5	7	9	6
7	5	6	9	4	1	2	3	8

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ಡಿಸೆಂಬರ್ 7, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶಿರ ಶುಕ್ಲ ಷಷ್ಠಿ ಗಂ. 11-07 ನಕ್ಷತ್ರ: ಧನಿಷ್ಠ ಗಂ. 16-51 ಯೋಗ: ವ್ಯಾಘಾತ ಗಂ. 08-42 ನಂತರ ಹರ್ಷಣ ಗಂ. 30-26, ವೃಶ್ಚಿಕ ಮಾಸದ 21 ನೇ ದಿನ, ಮಳೆನಕ್ಷತ್ರ: ಜ್ಯೇಷ್ಠ 2.
ರಾಹುಕಾಲ : ಬೆಳಿಗ್ಗೆ 09-00 – 10-30
ಸೂರ್ಯೋದಯ : 06-45 ಸೂರ್ಯಾಸ್ತ : 05-59
ಮುಸ್ಲಿಂ ದಿನಾಂಕ : 04 ಜುಮಾದುಸ್ಸಾನಿ
ಅದೃಷ್ಟ ಸಂಖ್ಯೆ : 3, 1

ಮೇಷ: ಹೊಸ ವ್ಯಾಪಾರವನ್ನು ಅಥವಾ ಏಜೆನ್ಸಿಯೊಂದನ್ನು ಪ್ರಾರಂಭಿಸುವ ಯೋಚನೆ ಇರುವವರಿಗೆ ಪೂರ್ವ ತಯಾರಿ ನಡೆಸಲು ಸೂಕ್ತ ವ್ಯಕ್ತಿಗಳ ಮಾರ್ಗದರ್ಶನ ಸಿಗುವುದು. ಹಾರ್ಡ್‌ವೇರ್ ವ್ಯಾಪಾರಸ್ಥರಿಗೆ ಹೆಚ್ಚಿನ ಲಾಭ.

ವೃಷಭ: ಸಮಯವನ್ನು ಇನ್ನೊಬ್ಬರಿಗಾಗಿ ಬಳಸಬೇಕಾದ ಪರಿಸ್ಥಿತಿ ಎದುರಾಗುವುದರಿಂದ ದೈನಂದಿನ ರೀತಿ ರಿವಾಜುಗಳನ್ನು ಉಳಿಸಿಕೊಳ್ಳುವುದಕ್ಕಾಗಿ ವೇಗವಾಗಿ ಕೆಲಸ ಮಾಡಬೇಕಾಗುತ್ತದೆ. ಮರಗೆಲಸದವರಿಗೆ ಸುದಿನ.

ಮಿಥುನ: ವಾಹನ ಮಾರಾಟದ ಯೋಚನೆಯಲ್ಲಿರುವವರು ಆ ಯೋಚನೆಯನ್ನು ಸದ್ಯದ ಮಟ್ಟಿಗೆ ಕೈ ಬಿಡುವುದೇ ಸರಿಯಾದ ಮಾರ್ಗ. ಸಾಲ ತೀರಿಸುವ ಬಗ್ಗೆ ಪ್ರಯತ್ನಿಸಿ.

ಕರ್ಕಾಟಕ: ದುಃಖಿತವಾದ ಮನಸ್ಸಿಗೆ ವಾಸಸ್ಥಾನ ಬದಲಾವಣೆಯಿಂದ ನೆಮ್ಮದಿಯ ವಾತಾವರಣ ಸೃಷ್ಟಿಯಾಗುವುದು. ಮಾನಸಿಕ ವೇದನೆಯಿಂದಾಗಿ ಆರೋಗ್ಯದಲ್ಲಿ ವ್ಯತ್ಯಾಸವಾಗಬಹುದು. ಮನಸ್ತಾಪ ಉಂಟಾಗಬಹುದು.

ಸಿಂಹ: ಕಂಪ್ಯೂಟರ್‌ನ ಬಿಡಿ ಭಾಗಗಳಂಥ ಎಲೆಕ್ಟ್ರಾನಿಕ್ ವಸ್ತುಗಳ ಮಾರಾಟಗಾರರಿಗೆ ಮತ್ತು ರಿಪೇರಿ ಮಾಡುವವರಿಗೆ ಅಧಿಕ ಆದಾಯ. ಸಾಂಕ್ರಾಮಿಕ ರೋಗ ಬಾಧಿಸಲಿದೆ.

ಕನ್ಯಾ: ಜಮೀನು ಖರೀದಿ ಅಥವಾ ನಿವೇಶನಗಳ ಖರೀದಿ ವ್ಯವಹಾರಗಳಿಂದ ಲಾಭ ಪಡೆದುಕೊಳ್ಳುವಲ್ಲಿ ಯಶಸ್ವಿಯಾಗುವಿರಿ. ಶ್ರೇಯಸ್ಸು ಹುಡುಕಿಕೊಂಡು ಬರುವುದರಿಂದ ಸಂತಸ ಸಿಗಲಿದೆ.

ತುಲಾ: ಕಾರ್ಯರಂಗದಲ್ಲಿ ಧೈರ್ಯ, ಪ್ರಯತ್ನಬಲ, ಆತ್ಮವಿಶ್ವಾಸದ ಪ್ರವೃತ್ತಿಯಿಂದಾಗಿ ಅಭಿವೃದ್ಧಿ ಹೊಂದಿದರೂ ಜನರ ಕೆಟ್ಟ ದೃಷ್ಟಿಗೆ ಸಿಕ್ಕಿಕೊಳ್ಳಬೇಕಾಗುತ್ತದೆ. ಹೈನು ಪದಾರ್ಥಗಳ ಮಾರಾಟದಿಂದ ಲಾಭ ಪಡೆಯಬಹುದು.

ವೃಶ್ಚಿಕ: ದೈಹಿಕವಾಗಿ ಬಲಾಢ್ಯರಾಗಿರುವ ನಿಮಗೆ ಮಾನಸಿಕವಾಗಿ ದೊಡ್ಡ ಹೊಡೆತ ಬೀಳುವ ಸಂಭವವಿದೆ. ಸಾಮಾಜಿಕವಾದ ಕೆಲಸಗಳಿಂದ ಕೌಟುಂಬಿಕವಾಗಿ ಸಮಯದ ಅಭಾವ ಉಂಟಾಗುವುದು.

ಧನು: ಮುಂದಿನ ಯೋಜನೆಗಳಿಗೆ ಬೇಕಾಗುವ ಹಣಕಾಸಿನ ಹೊಂದಾಣಿಕೆ ಆಗಲಿದೆ. ಕಲಾವಿದರಿಗೆ ಪ್ರಮುಖವಾಗಿ ನಾಟ್ಯಕಲೆಯವರಿಗೆ ಒಳ್ಳೆಯ ಅವಕಾಶಗಳು ದೊರೆಯುತ್ತವೆ. ಮೋಸ ಮತ್ತು ನಷ್ಟ ಅನುಭವಿಸುವಿರಿ.

ಮಕರ: ಕೆಲಸದಲ್ಲಿ ಎಲ್ಲರನ್ನೂ ಜೊತೆಗೂಡಿಸಿಕೊಂಡು ಗುಂಪಾಗಿ ಕೆಲಸ ನಿರ್ವಹಿಸುವುದರಿಂದ ಶೀಘ್ರವಾಗಿ ಮುಗಿಸುವಿರಿ. ಇಂದಿನ ಸಂತೋಷದ ಬಗ್ಗೆ ಗಮನ ಕೊಡುವುದಕ್ಕಿಂತ ನಾಳೆಯ ಭವಿಷ್ಯದ ಬಗ್ಗೆ ಗಮನಹರಿಸಿ.

ಕುಂಭ: ಮಡದಿಯೊಂದಿಗೆ ಸಂಸಾರಕ್ಕೆ ಸಂಬಂಧಪಟ್ಟ ವಿಷಯಗಳ ಬಗ್ಗೆ ಚರ್ಚೆ ನಡೆಸಿ. ನಿರ್ದಿಷ್ಟ ಗುರಿ ಮತ್ತು ಕಠಿಣ ಶ್ರಮ ಯಶಸ್ಸಿನತ್ತ ಕೊಂಡೊಯ್ಯಲಿದೆ. ಮಕ್ಕಳ ಯಶಸ್ಸನ್ನು ಕಂಡು ಸಂಭ್ರಮಿಸುವಿರಿ.

ಮೀನ: ಧಾರ್ಮಿಕ ಕ್ಷೇತ್ರದ ಆಡಳಿತ ವ್ಯಕ್ತಿಗೆ ಅಥವಾ ವ್ಯವಸ್ಥಾಪಕರಿಗೆ ನಿಂದನೆಯ ಭೀತಿ, ಸಂಕಷ್ಟಕ್ಕೆ ಸಿಲುಕುವ ಸನ್ನಿವೇಶ ಎದುರಾಗಬಹುದು. ಸ್ತ್ರೀ-ವರ್ಗದಿಂದ ಮಹತ್ವದ ಸಹಾಯ ಪ್ರಾಪ್ತವಾಗಲಿದೆ. ಬಂಧುಗಳಿಂದ ದ್ರವ್ಯಲಾಭ.

ಸಮಗ್ರ ಕೈಗಾರಿಕಾ ನೀತಿಗೆ ಅರ್ಥಶಾಸ್ತ್ರಜ್ಞರ ಸಲಹೆ

ನವದೆಹಲಿ (ಪಿಟಿಐ): ದೇಶದ ತಯಾರಿಕಾ ವಲಯಕ್ಕೆ ಉತ್ತೇಜನ ನೀಡಲು ಸಮಗ್ರ ಕೈಗಾರಿಕಾ ನೀತಿಯನ್ನು ರೂಪಿಸಬೇಕಿದೆ ಎಂದು ಕೇಂದ್ರ ಸರ್ಕಾರಕ್ಕೆ ಅರ್ಥಶಾಸ್ತ್ರಜ್ಞರು ಸಲಹೆ ನೀಡಿದ್ದಾರೆ.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರ ಅಧ್ಯಕ್ಷತೆಯಲ್ಲಿ ಶುಕ್ರವಾರದಿಂದ ಬಜೆಟ್ ಕುರಿತ ಪೂರ್ವ ಸಮಾಲೋಚನೆ ಆರಂಭವಾಗಿದ್ದು, ಅರ್ಥಶಾಸ್ತ್ರಜ್ಞರೊಂದಿಗೆ ಚರ್ಚೆ ನಡೆಸಿದರು.

2025–26ನೇ ಸಾಲಿನ ಬಜೆಟ್ ಗಾತ್ರಕ್ಕೆ ಅನುಗುಣವಾಗಿ ಸಾಲ ಮತ್ತು ವಿತ್ತೀಯ ಕೊರತೆಯನ್ನು ತಗ್ಗಿಸಬೇಕಿದೆ. ಇದಕ್ಕೆ ಪೂರಕವಾಗಿ ಕ್ರಮಕೈಗೊಳ್ಳಬೇಕಿದೆ ಎಂದು ಹೇಳಿದ್ದಾರೆ.

ಸಭೆಯ ಬಳಿಕ ಸುದ್ದಿಗಾರ-ರೊಂದಿಗೆ ಮಾತನಾಡಿದ ಸ್ವದೇಶಿ ಜಾಗರಣ ಮಂಚ್‌ನ (ಎಸ್‌ಜೆಎಂ) ಸಹ ಸಂಚಾಲಕ ಅಶ್ವಾನಿ ಮಹಾಜನ್, ‘ಬಂಡವಾಳ ಹೂಡಿಕೆ ಹೆಚ್ಚಳಕ್ಕೆ ಇರುವ ಮಾರ್ಗಗಳನ್ನು ಸದೃಢಗೊಳಿಸುವಿಕೆ, ಆಹಾರ ಹಣದುಬ್ಬರ ನಿಯಂತ್ರಣ ಸೇರಿ ಹಲವು ವಿಷಯಗಳ ಬಗ್ಗೆ ಸಲಹೆ ನೀಡಲಾಗಿದೆ’ ಎಂದರು.

‘ಜನರ ದಿನಬಳಕೆ ವೆಚ್ಚದ ಹೆಚ್ಚಳಕ್ಕೆ ಪೂರಕವಾಗಿ ಆದಾಯ ತೆರಿಗೆ ಯನ್ನು ಕಡಿತಗೊಳಿಸುವಂತೆ ಸರ್ಕಾರಕ್ಕೆ ಕೋರಲಾಗಿದೆ’ ಎಂದು ಅರ್ಥಶಾಸ್ತ್ರಜ್ಞ ಅನಿಲ್ ಶರ್ಮಾ ಹೇಳಿದರು.

2023–24ನೇ ಆರ್ಥಿಕ ವರ್ಷದಲ್ಲಿ ವರಮಾನ ಮತ್ತು ವೆಚ್ಚದ ನಡುವಣ ಅಂತರವಾದ ವಿತ್ತೀಯ ಕೊರತೆಯು ಶೇ 5.6ರಷ್ಟಿತ್ತು. 2024–25ರಲ್ಲಿ ಇದನ್ನು ಒಟ್ಟು ಆಂತರಿಕ ಉತ್ಪನ್ನದ (ಜಿಡಿಪಿ) ಶೇ 4.9ಕ್ಕೆ ತಗ್ಗಿಸಲು ಸರ್ಕಾರವು ಬಜೆಟ್‌ನಲ್ಲಿ ಗುರಿ ನಿಗದಿಪಡಿಸಿದೆ. 2025–26ರಲ್ಲಿ ಇದನ್ನು ಶೇ 4.5ಕ್ಕೆ ತಗ್ಗಿಸಲು ಗುರಿ ಹೊಂದಲಾಗಿದೆ.

ಫೆಬ್ರುವರಿ 1ರಂದು ಸಚಿವೆ ನಿರ್ಮಲಾ ಸೀತಾರಾಮನ್ ಬಜೆಟ್ ಮಂಡಿಸುವ ನಿರೀಕ್ಷೆಯಿದೆ.

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1490 (1490)
ಸೋಯಾ (ರಿಫೈನ್ಡ್)	₹1320 (1320)
ಸೂರ್ಯಕಾಂತಿ (ರಿಫೈನ್ಡ್)	₹1400 (1390)
ಪಾಮೋಲಿನ್	₹1420 (1420)

ಮುಂಬೈ ಧಾರಣೆ

ಶೇಂಗಾ

06-12-2024

ಜಾವಾ 70/80(ಹೊಸ)	10800-10900
ಜಾವಾ 80/90(ಹೊಸ)	10300-10400
ದಪ್ಪ ಮಧ್ಯಪ್ರದೇಶ(ಹೊಸ)	9000-9100
ದಪ್ಪ ಗುಜರಾತ್(ಹೊಸ)	9800-9900

ಶೇಂಗಾ ಎಣ್ಣೆ (10 ಕೆಜಿಗೆ)


ಕಚ್ಚಾ (ತೆರಿಗೆ ಬಿಟ್ಟು)	1500 (1500)
ಒಂದು ವಾರದ ಡೆಲಿವರಿ	1495 (1495)
ಪಾಮ್ ವಾರದ ಡೆಲಿವರಿ	1418 (1418)
ಸೂರ್ಯಕಾಂತಿ ಎಣ್ಣೆ ಕಚ್ಚಾ	1340 (1340)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
₹75,900 (76,050)
ಬೆಳ್ಳಿ ಕೆ.ಜಿ ₹90,850 (91,150)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಹಣಕಾಸು ವಂಚನೆ ತಡೆಗೆ ಎ.ಐ ಬಳಕೆ


ಶಕ್ತಿಕಾಂತ ದಾಸ್

ಮುಂಬೈ (ಪಿಟಿಐ): ಡಿಜಿಟಲ್ ಹಣಕಾಸು ವಂಚನೆ ಪತ್ತೆ ಮತ್ತು ಇದಕ್ಕೆ ಕಡಿವಾಣ ಹಾಕಲು ಭಾರತೀಯ ರಿಸರ್ವ್ ಬ್ಯಾಂಕ್, ಕೃತಕ ಬುದ್ಧಿಮತ್ತೆ (ಎ.ಐ) ತಂತ್ರಜ್ಞಾನ ಬಳಸಿಕೊಂಡು ‘ಮ್ಯೂಲ್ ಹಂಟರ್’ ಮಾಡೆಲ್ ಅನ್ನು ಅಭಿವೃದ್ಧಿಪಡಿಸಿದೆ.

ಬೆಂಗಳೂರಿನಲ್ಲಿರುವ ಆರ್‌ಬಿಐನ ಇನೋವೇಷನ್ ಹಬ್‌ನಲ್ಲಿ ಇದನ್ನು ಅಭಿವೃದ್ಧಿ ಪಡಿಸಿದೆ. ಆರ್ಥಿಕ ಅಪರಾಧಿಗಳು ದೊಡ್ಡ ಮೊತ್ತದ ಹಣ ಅಕ್ರಮ ವರ್ಗಾವಣೆಗೆ ನಕಲಿ ಖಾತೆ ಅಥವಾ ಬೇರೆಯವರ ಖಾತೆಗಳನ್ನು ಬಳಸಿಕೊಳ್ಳುವ ಸಾಧ್ಯತೆಯಿದೆ. ಕೆಲವು ಖಾತೆದಾರರು ಹಣದ ಆಮಿಷಕ್ಕೆ ಒಳಗಾಗಿ ಈ ಕೃತ್ಯಕ್ಕೆ ಸಹಕರಿಸುವ ಸಾಧ್ಯತೆ ಇರುತ್ತದೆ. ಇಂತಹ ಖಾತೆಗಳು ಮತ್ತು ವಹಿವಾಟನ್ನು ಪತ್ತೆ ಹಚ್ಚಲು ಈ ಮಾಡೆಲ್ ನೆರವಾಗಲಿದೆ.

‘ಹಣಕಾಸು ವಂಚನೆ ಪ್ರಕರಣಗಳನ್ನು ಶೂನ್ಯಕ್ಕಿಳಿಸಲು ಆರ್‌ಬಿಐ ಮುಂದಾಗಿದೆ. ಇದಕ್ಕೆ ಬ್ಯಾಂಕ್‌ಗಳು ಸಹಕರಿಸಬೇಕು ಎಂದು ಶಕ್ತಿಕಾಂತ ದಾಸ್ ಕೋರಿದ್ದಾರೆ. ಹಣಕಾಸು ವಲಯ ದಲ್ಲಿನ ಡಿಜಿಟಲ್ ವಂಚನೆ ತಡೆಗೆ ಹಲವು ಕ್ರಮಕೈಗೊಳ್ಳಲಾಗಿದೆ. ಈ ವಲಯದಲ್ಲಿ ಜವಾಬ್ದಾರಿ ಯುತವಾಗಿ ಎ.ಐ ಬಳಕೆಗೆ ಚೌಕಟ್ಟು ರೂಪಿಸಲು ಸಮಿತಿ ರಚಿಸಲಾಗುವುದು ಎಂದಿದ್ದಾರೆ.

11ನೇ ಬಾರಿ ರೆಪೊ ದರ ಯಥಾಸ್ಥಿತಿ

ಅಂಕೆ ತಪ್ಪಿದ ಹಣದುಬ್ಬರ: ಆರ್ಥಿಕತೆ ಮಂದಗತಿ • 10ಕ್ಕೆ ಶಕ್ತಿಕಾಂತ ದಾಸ್ ಅವಧಿ ಮುಕ್ತಾಯ



ಮುಂಬೈ (ಪಿಟಿಐ): ಭಾರತೀಯ ರಿಸರ್ವ್ ಬ್ಯಾಂಕ್‌ನ ಹಣಕಾಸು ನೀತಿ ಸಮಿತಿ ಸಭೆಯು (ಎಂಪಿಸಿ) ಸತತ 11ನೇ ಬಾರಿಗೆ ರೆಪೊ ದರದಲ್ಲಿ ಯಥಾಸ್ಥಿತಿ ಕಾಯ್ದುಕೊಂಡಿದೆ. ಚಿಲ್ಲರೆ ಹಣದುಬ್ಬರವು ಆರ್‌ಬಿಐನ ಅಂಕೆಗೆ ಸಿಗುತ್ತಿಲ್ಲ. ಹಾಗಾಗಿ, ಬಡ್ಡಿದರ ಪರಿಷ್ಕರಿಸಲು ಸಭೆಯು ಮುಂದಾಗಿಲ್ಲ.

ಶುಕ್ರವಾರ ಮುಕ್ತಾಯಗೊಂಡ ಸಭೆಯಲ್ಲಿ ಆರು ಸದಸ್ಯರ ಪೈಕಿ ನಾಲ್ವರು ಸದಸ್ಯರು ರೆಪೊ ದರವನ್ನು ಶೇ 6.5ರ ಮಿತಿಯಲ್ಲಿಯೇ ಕಾಯ್ದುಕೊಳ್ಳಲು ಒಪ್ಪಿಗೆ ಸೂಚಿಸಿದ್ದಾರೆ.

ಪ್ರಸಕ್ತ ಆರ್ಥಿಕ ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಒಟ್ಟು ಆಂತರಿಕ ಉತ್ಪನ್ನ (ಜಿಡಿಪಿ) ಶೇ 5.4ರಷ್ಟು ದಾಖಲಾಗಿದೆ. ಅಕ್ಟೋಬರ್ ನಲ್ಲಿ ಹಣದುಬ್ಬರವು ಶೇ 6.21ರಷ್ಟು ದಾಖಲಾಗಿದೆ.

2019ರ ಜೂನ್‌ನಿಂದಲೂ ಆರ್‌ಬಿಐ, ಹಣದುಬ್ಬರ ನಿಯಂತ್ರಿಸುವ ಮೂಲಕ ದೇಶದ ಆರ್ಥಿಕತೆಯ ಸ್ಥಿರತೆಗೆ ಒತ್ತು ನೀಡುವ ನಿಲುವು ತಳೆದಿತ್ತು (ವಿತ್ ಡ್ರಾವಲ್ ಆಫ್ ಅಕಾಮಡೇಷನ್). ಅಕ್ಟೋಬರ್‌ನಲ್ಲಿ ನಡೆದ ಸಭೆಯು ‘ತಟಸ್ಥ’ ನೀತಿಗೆ ಒಪ್ಪಿಗೆ ಸೂಚಿಸಿತ್ತು. ಇದರಿಂದ ರೆಪೊ ದರ ಇಳಿಕೆಯ ಹಾದಿ ಸುಗಮವಾಗುವ ನಿರೀಕ್ಷೆ ಹೆಚ್ಚಿತ್ತು. ಸದ್ಯ ಇದೇ ನಿಲುವನ್ನು ಮುಂದುವರಿಸಲು ಸಭೆಯು ಸಹಮತ ಸೂಚಿಸಿದೆ.

ಸಭೆಯ ಬಳಿಕ ಮಾತನಾಡಿದ ಗವರ್ನರ್ ಶಕ್ತಿಕಾಂತ ದಾಸ್, ‘ದೇಶದ ಆರ್ಥಿಕತೆ ಬೆಳವಣಿಗೆಯು ಮಂದಗತಿ-ಯಲ್ಲಿದೆ. ಇದಕ್ಕೆ ಉತ್ತೇಜನ ನೀಡುವ ನಿಟ್ಟಿನಲ್ಲಿ ರೆಪೊ ದರದಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳುವುದು ಅನಿವಾರ್ಯ ವಾಗಿದೆ’ ಎಂದು ಪ್ರತಿಪಾದಿಸಿದರು.

ಮುಂಬರುವ ತಿಂಗಳುಗಳಲ್ಲಿ ನಡೆಯುವ ಹಬ್ಬಗಳಲ್ಲಿ ಜನರ ವೆಚ್ಚದ ಪ್ರಮಾಣ ಏರಿಕೆಯಾಗಲಿದೆ. ಕೃಷಿ ಉತ್ಪಾದನೆ ಹೆಚ್ಚಳವಾಗಲಿದೆ. ಇದು ಆರ್ಥಿಕತೆ ಬೆಳವಣಿಗೆಯ ಹಾದಿಯನ್ನು ಸುಗಮಗೊಳಿಸಲಿದೆ ಎಂದು ಹೇಳಿದರು.

> ಹಣದುಬ್ಬರದ ಕುದುರೆಯು ಎಗ್ಗಿಲ್ಲದೆ ಓಡುತ್ತಿದೆ. ಇದನ್ನು ಗಟ್ಟಿಯಾದ ಹಗ್ಗದಿಂದ ಕಟ್ಟಿ ಹಾಕಬೇಕಿದೆ. ಇದರತ್ತ ಆರ್‌ಬಿಐ ಚಿತ್ತ ನೆಟ್ಟಿದೆ
> **ಶಕ್ತಿಕಾಂತ ದಾಸ್,** ಗವರ್ನರ್

ಮೂರನೇ ತ್ರೈಮಾಸಿಕದಲ್ಲೂ (ಅಕ್ಟೋಬರ್– ಡಿಸೆಂಬರ್) ಆಹಾರ ಹಣದುಬ್ಬರದ ಏರಿಕೆ ಮುಂದುವರಿಯಲಿದೆ. ನಾಲ್ಕನೇ ತ್ರೈಮಾಸಿಕದ ವೇಳೆಗೆ ತರಕಾರಿಗಳ ಬೆಲೆ ಇಳಿಕೆಯಾಗುವ ನಿರೀಕ್ಷೆಯಿದೆ. ಹಿಂಗಾರು ಅವಧಿಯಲ್ಲಿನ ಉತ್ಪಾದನೆ ಹೆಚ್ಚಳ ಹಾಗೂ ಸರ್ಕಾರದ ಕಾಪು ದಾಸ್ತಾನು ಪ್ರಮಾಣದಲ್ಲೂ ಏರಿಕೆಯಾಗಲಿದೆ. ಇದು ಹಣದುಬ್ಬರದ ಇಳಿಕೆಗೆ ನೆರವಾಗಲಿದೆ’ ಎಂದು ವಿವರಿಸಿದರು.

ಡಿಸೆಂಬರ್ 10ರಂದು ದಾಸ್ ಅವರ ಅಧಿಕಾರಾವಧಿ ಮುಕ್ತಾಯ ವಾಗಲಿದೆ. ಮುಂದಿನ ಎಂಪಿಸಿ ಸಭೆಯು 2025ರ ಫೆಬ್ರುವರಿ 5ರಿಂದ 7ರ ವರೆಗೆ ನಡೆಯಲಿದೆ. ಸಾರ್ವಜನಿಕರಿಗೆ ಮಾಹಿತಿ ತಲುಪಿಸುವ ನಿಟ್ಟಿನಲ್ಲಿ ಫಾಡ್‌ಕಾಸ್ಟ್ ಸೇವೆ ಆರಂಭಿಸಲು ಆರ್‌ಬಿಐ ನಿರ್ಧರಿಸಿದೆ.

ಸಿಆರ್‌ಆರ್ ಶೇ 4ಕ್ಕೆ ಇಳಿಕೆ

ದೇಶದ ಹಣಕಾಸು ಮಾರುಕಟ್ಟೆಯಲ್ಲಿ ನಗದು ಹರಿವಿನ ಪ್ರಮಾಣ ಹೆಚ್ಚಿಸುವ ದೃಷ್ಟಿಯಿಂದ ನಗದು ಮೀಸಲು ಅನುಪಾತವನ್ನು (ಸಿಆರ್‌ಆರ್) ಶೇ 0.50ರಷ್ಟು ಕಡಿತಗೊಳಿಸ-ಲಾಗಿದೆ. ಪ್ರಸ್ತುತ ಶೇ 4.5ರಿಂದ ಶೇ 4ಕ್ಕೆ ಇಳಿಕೆಯಾಗಿದೆ.

‘ಬ್ಯಾಂಕ್‌ಗಳಲ್ಲಿ ನಗದು ಸ್ಥಿತಿ ಹಿತಕರವಾಗಿದೆ. ಹಾಗಾಗಿ, ಈ ನಿರ್ಧಾರ ಕೈಗೊಳ್ಳಲಾಗಿದೆ. ಇದರಿಂದ ಹಣಕಾಸು ಮಾರುಕಟ್ಟೆ ಯಲ್ಲಿ ₹1.16 ಲಕ್ಷ ಕೋಟಿ ಹಣದ ಹರಿವು ಹೆಚ್ಚಿಸಲಿದೆ’ ಎಂದು ಶಕ್ತಿಕಾಂತ ದಾಸ್ ಹೇಳಿದ್ದಾರೆ. ಆರ್‌ಬಿಐ ನಿಯಮಾವಳಿ ಅನ್ವಯ ಯಾವುದೇ ಬ್ಯಾಂಕ್ ತನ್ನ ಗ್ರಾಹಕರು ಇಡುವ ಠೇವಣಿ ಮೊತ್ತದಲ್ಲಿ ನಿರ್ದಿಷ್ಟ ಭಾಗದ ಹಣವನ್ನು ಮೀಸಲು ನಿಧಿಯಾಗಿ ಇಡಬೇಕಿದೆ. ಠೇವಣಿದಾರರಿಗೆ ತುರ್ತಾಗಿ ಹಣ ಮರಳಿಸುವ ಸ್ಥಿತಿ ಎದುರಾದಾಗ ಬ್ಯಾಂಕ್‌ಗಳು ಈ ಹಣ ಬಳಸಿಕೊಳ್ಳಲು ಅವಕಾಶವಿದೆ.

ಎಫ್‌ಸಿಎನ್‌ಆರ್–ಬಿ ಬಡ್ಡಿದರ ಹೆಚ್ಚಳ

ವಿದೇಶಿ ಕರೆನ್ಸಿ ಅನಿವಾಸಿ ಭಾರತೀಯರ ಬ್ಯಾಂಕ್ ಠೇವಣಿ (ಎಫ್‌ಸಿಎನ್‌ಆರ್–ಬಿ) ಮೇಲಿನ ಬಡ್ಡಿದರ ಹೆಚ್ಚಳಕ್ಕೆ ಸಭೆಯು ಒಪ್ಪಿಗೆ ಸೂಚಿಸಿದೆ. ಇದರಿಂದ ವಿದೇಶಿ ಹೂಡಿಕೆಯ ಹರಿವು ಹೆಚ್ಚಳವಾಗಲಿದ್ದು, ರೂಪಾಯಿ ದರ ಸ್ಥಿರವಾಗಲಿದೆ.

ಒಂದು ವರ್ಷದಿಂದ ಮೂರು ವರ್ಷದ ಅವಧಿಯ ಹೊಸ ಠೇವಣಿಗಳ ಮೇಲಿನ ಬಡ್ಡಿದರ ವನ್ನು ಶೇ 2.50ರಿಂದ ಶೇ 4ಕ್ಕೆ ಹೆಚ್ಚಿಸಲಾಗಿದೆ. ಮೂರರಿಂದ ಐದು ವರ್ಷದ ಅವಧಿಯ ಠೇವಣಿಗಳ ಮೇಲಿನ ಬಡ್ಡಿದರವನ್ನು ಶೇ 3.50ರಿಂದ ಶೇ 5ಕ್ಕೆ ಏರಿಕೆ ಮಾಡಲಾಗಿದೆ.

ಕೃಷಿ ಸಾಲದ ಮಿತಿ ಏರಿಕೆ

ಕೃಷಿ ಉತ್ಪಾದನಾ ವೆಚ್ಚವು ಏರಿಕೆಯಾಗಿದ್ದು, ರೈತರಿಗೆ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ಅಡಮಾನರಹಿತ ಕೃಷಿ ಸಾಲದ ಮಿತಿಯನ್ನು ₹2 ಲಕ್ಷಕ್ಕೆ ಹೆಚ್ಚಿಸಲು ಸಭೆ ಸಮ್ಮತಿಸಿದೆ.

ಇದರಿಂದ ಅತಿಸಣ್ಣ ಹಾಗೂ ಸಣ್ಣ ರೈತರಿಗೆ ಹೆಚ್ಚಿನ ಅನುಕೂಲವಾಗಲಿದೆ. ಬ್ಯಾಂಕ್‌ಗಳು ನೀಡುವ ಈ ಸಾಲದ ಮಿತಿಯನ್ನು 2010ರಲ್ಲಿ ₹1 ಲಕ್ಷಕ್ಕೆ ನಿಗದಿಪಡಿಸಲಾಗಿತ್ತು. 2019ರಲ್ಲಿ ₹1.6 ಲಕ್ಷಕ್ಕೆ ಹೆಚ್ಚಿಸಲಾಗಿತ್ತು. ಈ ಸೌಲಭ್ಯವು ಯಾವ ದಿನದಿಂದ ಆರಂಭವಾಗಲಿದೆ ಎಂಬ ಬಗ್ಗೆ ಆರ್‌ಬಿಐ ಶೀಘ್ರವೇ ಸುತ್ತೋಲೆ ಹೊರಡಿಸುವ ಸಾಧ್ಯತೆಯಿದೆ.

ಎಸ್‌ಎಫ್‌ಬಿಗೆ ಅವಕಾಶ

ಏಕೀಕೃತ ಪಾವತಿ ವ್ಯವಸ್ಥೆ (ಯುಪಿಐ) ಮೂಲಕ ಗ್ರಾಹಕರಿಗೆ ಪೂರ್ವ ನಿಗದಿತ ಸಾಲ ಸೌಲಭ್ಯ ಕಲ್ಪಿಸಲು ಸಣ್ಣ ಹಣಕಾಸು ಬ್ಯಾಂಕ್‌ಗಳಿಗೆ (ಎಸ್‌ಎಫ್‌ಬಿ) ಆರ್‌ಬಿಐ ಅವಕಾಶ ಕಲ್ಪಿಸಿದೆ.

ಬ್ಯಾಂಕ್‌ಗಳ ಖಾತೆಗಳಿಗೆ ಯುಪಿಐ ಜೋಡಿಸಿರುವ ಗ್ರಾಹಕರಿಗೆ ಈ ಸೌಲಭ್ಯ ಸಿಗಲಿದೆ.

ಬ್ಯಾಂಕ್ ಸಾಲದ ಖಾತೆಗಳಲ್ಲಿ ಇರುವ ಹಣವನ್ನು ಯುಪಿಐ ವಹಿವಾಟಿಗೆ ಬಳಸಿಕೊಳ್ಳುವ ಬಗ್ಗೆ 2023ರಲ್ಲಿ ಆರ್‌ಬಿಐ ಅವಕಾಶ ಕಲ್ಪಿಸಿತ್ತು. ವಾಣಿಜ್ಯ ಬ್ಯಾಂಕ್‌ಗಳಿಗಷ್ಟೇ ಈ ನಿಯಮ ಸೀಮಿತವಾಗಿತ್ತು. ಪೇಮೆಂಟ್ ಬ್ಯಾಂಕ್‌ಗಳು, ಸಣ್ಣ ಹಣಕಾಸು ಬ್ಯಾಂಕ್‌ಗಳು ಮತ್ತು ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳನ್ನು ಇದರಿಂದ ಹೊರಗಿಡಲಾಗಿತ್ತು.

ಜಿಡಿಪಿ ಹಣದುಬ್ಬರ ಪರಿಷ್ಕರಣೆ



2024–25ನೇ ಆರ್ಥಿಕ ಸಾಲಿನ ಚಿಲ್ಲರೆ ಹಣದುಬ್ಬರ-ವನ್ನು ಪರಿಷ್ಕರಿಸಲಾಗಿದೆ. ಈ ಮೊದಲು ಶೇ 4.5ರಷ್ಟು ದಾಖಲಾಗಲಿದೆ ಎಂದು ಅಂದಾಜಿಸಲಾಗಿತ್ತು. ಸದ್ಯ ಇದನ್ನು ಶೇ 4.8ಕ್ಕೆ ಹೆಚ್ಚಿಸಲಾಗಿದೆ.

ಒಟ್ಟು ಆಂತರಿಕ ಉತ್ಪನ್ನದ (ಜಿಡಿಪಿ) ಮುನ್ನೋಟವನ್ನು ಪರಿಷ್ಕರಿಸಲಾಗಿದೆ. 2024–25ನೇ ಆರ್ಥಿಕ ವರ್ಷದಲ್ಲಿ ಜಿಡಿಪಿಯು ಶೇ 7.2ರಷ್ಟು ಪ್ರಗತಿ ಕಾಣಲಿದೆ ಎಂದು ಈ ಮೊದಲು ಅಂದಾಜಿಸಿತ್ತು. ಸದ್ಯ ಇದನ್ನು ಶೇ 6.6ಕ್ಕೆ ತಗ್ಗಿಸಲಾಗಿದೆ.

ಮಂಗಳೂರು: ನುಗ್ಗೆಕಾಯಿ ಧಾರಣೆ ಕೆ.ಜಿ.ಗೆ ₹400


ಮಂಗಳೂರು: ಇಲ್ಲಿನ ಮಾರುಕಟ್ಟೆಯಲ್ಲಿ ನುಗ್ಗೆಕಾಯಿ ದರ ಕೆ.ಜಿ.ಗೆ ₹400 ತಲುಪಿದೆ.



‘ನುಗ್ಗೆಕಾಯಿ ದರ ಏರಿಕೆಯಾದ ಮೇಲೆ ಮಾರಾಟಕ್ಕೆ ತರುವುದನ್ನೇ ನಿಲ್ಲಿಸಿದ್ದೇವೆ. ಕಳೆದ ವಾರ ₹450 ನೀಡಿ ತಂದಿದ್ದ ಒಂದು ಕೆ.ಜಿ. ನುಗ್ಗೆಕಾಯಿ ವ್ಯಾಪಾರವಾಗದೆ ನಷ್ಟವಾಯಿತು’ ಎನ್ನುತ್ತಾರೆ ಕದ್ರಿಯ ತರಕಾರಿ ವ್ಯಾಪಾರಿ ಮಂಜುಳಾ.

ಹಾಪ್‌ಕಾಮ್ಸ್‌ನಲ್ಲಿ ಶುಕ್ರವಾರ ನುಗ್ಗೆಕಾಯಿ ದರ ಕೆ.ಜಿ.ಗೆ ₹412 ಇತ್ತು.

ಷೇರುಪೇಟೆ ವಹಿವಾಟು 56



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,708
ಇಂದಿನ ಅಂತ್ಯ	24,677
▼	30
ದಿನದ ಕನಿಷ್ಠ	24,620

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹635
12 ಕ್ಕೆ	₹82
ಮೈಸೂರು	
100ಕ್ಕೆ	₹637

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹300-685
ದ್ವಿತಳಿ (ಬಿ.ವಿ)	₹470-835

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4	₹192
ಆರ್‌ಎಸ್‌ಎಸ್-5	₹186
ಗುಡ್ ಲಾಟ್	₹181

(ಪ್ರತಿ ಕೆ.ಜಿಗೆ)

ವಿನಿಮಯ ದರ

$	ಡಾಲರ್	84.66
£	ಪೌಂಡ್	108.07
€	ಯುರೊ	89.59
¥	ಯೆನ್ (100ಕ್ಕೆ)	56

ಚಿನ್ನದ ಗಟ್ಟಿಗೆ ಹಾಲ್‌ಮಾರ್ಕ್: ಚಿಂತನೆ



ನವದೆಹಲಿ (ಪಿಟಿಐ): ‘ಚಿನ್ನದ ಗಟ್ಟಿಯ ಮೇಲೆ ಹಾಲ್‌ಮಾರ್ಕ್ ಕಡ್ಡಾಯ ಗೊಳಿಸಲು ಸರ್ಕಾರ ಚಿಂತನೆ ನಡೆಸುತ್ತಿದೆ’ ಎಂದು ಕೇಂದ್ರ ಗ್ರಾಹಕ ವ್ಯವಹಾರಗಳ ಸಚಿವಾಲಯದ ಕಾರ್ಯದರ್ಶಿ ನಿಧಿ ಖರೆ ತಿಳಿಸಿದ್ದಾರೆ.

ಶುಕ್ರವಾರ ಭಾರತೀಯ ಕೈಗಾರಿಕಾ ಒಕ್ಕೂಟದಿಂದ (ಸಿಐಐ) ಹಮ್ಮಿಕೊಂಡಿದ್ದ ಹರಳು ಮತ್ತು ಆಭರಣ ಸಮಾವೇಶದಲ್ಲಿ ಮಾತನಾಡಿದ ಅವರು, ‘ಗ್ರಾಹಕರ ಹಿತಾಸಕ್ತಿ ಕಾಪಾಡಲು ಪ್ರಯೋಗಾಲಯದಲ್ಲಿ ತಯಾರಿಸುವ ವಜ್ರಗಳಿಗೆ ನಿಯಮಾವಳಿ ರಚಿಸಬೇಕಿದೆ. ಜೊತೆಗೆ, ಗ್ರಾಹಕರಿಗೆ ಗುಣಮಟ್ಟದ ಉತ್ಪನ್ನಗಳನ್ನು ಒದಗಿಸುವ ಅಗತ್ಯವಿದೆ’ ಎಂದು ಹೇಳಿದರು.

ಹರಳು ಮತ್ತು ಚಿನ್ನಾಭರಣಗಳ ವಲಯವು ದೇಶದ ಆರ್ಥಿಕತೆಗೆ ಪ್ರಮುಖ ಆಧಾರವಾಗಿದೆ. ರಫ್ತು ಮತ್ತು ಉದ್ಯೋಗ ಸೃಷ್ಟಿಗೆ ಮಹತ್ವದ ಕೊಡುಗೆ ನೀಡುತ್ತದೆ ಎಂದು ಖಾರೆ ಹೇಳಿದ್ದಾರೆ.

ಚಿನ್ನದ ಆಭರಣ ಮತ್ತು ಚಿನ್ನದ ಕಲಾಕೃತಿಗಳು ಮೇಲೆ 2021ರ ಜೂನ್‌ನಲ್ಲಿ ಹಾಲ್‌ಮಾರ್ಕ್ ಕಡ್ಡಾಯ ಗೊಳಿಸಲಾಯಿತು. 40 ಕೋಟಿಗೂ ಹೆಚ್ಚು ಚಿನ್ನದ ಆಭರಣಗಳು ವಿಶಿಷ್ಟ ಎಚ್‌ಯುಐಡಿ ಜೊತೆ ಹಾಲ್‌ಮಾರ್ಕ್ ಹೊಂದಿದೆ. ಇದು ಗ್ರಾಹಕರಲ್ಲಿ ನಂಬಿಕೆ ಮತ್ತು ಪಾರದರ್ಶಕತೆ ಹೆಚ್ಚಿಸಿದೆ ಎಂದರು.

ಚಿನ್ನದ ಗಟ್ಟಿಗೆ ಹಾಲ್‌ಮಾರ್ಕ್ ಕಡ್ಡಾಯ ಗೊಳಿಸುವ ಪ್ರಸ್ತಾವವು ಇಲಾಖೆಯ ಮುಂದಿದೆ. ಆಭರಣ ತಯಾರಕರು ಚಿನ್ನವನ್ನು ಆಮದು ಮಾಡಿಕೊಳ್ಳುತ್ತಾರೆ. ಆದರೆ, ಅವರಿಗೆ ಚಿನ್ನದ ಗುಣಮಟ್ಟ ಕುರಿತು ಭರವಸೆ ಇರುವುದಿಲ್ಲ. ಈ ವಹಿವಾಟಿನಲ್ಲಿ ನಿಖರತೆ ಮತ್ತು ಪಾರದರ್ಶಕತೆ ಕಾಯ್ದುಕೊಳ್ಳಲು ಮುಂದಾಗಿದ್ದೇವೆ ಎಂದರು.

ಮಾರುತಿ, ಮಹೀಂದ್ರ ವಾಹನ ಬೆಲೆ ಏರಿಕೆ

ನವದೆಹಲಿ (ಪಿಟಿಐ): ಮಾರುತಿ ಸುಜುಕಿ ಇಂಡಿಯಾ ಕಾರುಗಳ ಬೆಲೆಯನ್ನು ಶೇ 4ರಷ್ಟು ಏರಿಕೆ ಮಾಡಲು ನಿರ್ಧರಿಸಿದೆ.

ಹೊಸ ದರವು ಜನವರಿ 1ರಿಂದ ಜಾರಿಗೆ ಬರಲಿದೆ ಎಂದು ಕಂಪನಿ ತಿಳಿಸಿದೆ. ತಯಾರಿಕೆ ಮತ್ತು ಕಾರ್ಯಾಚರಣೆ ವೆಚ್ಚದಲ್ಲಿನ ಹೆಚ್ಚಳದಿಂದ ಬೆಲೆ ಏರಿಕೆ ಮಾಡಲಾಗುತ್ತಿದೆ. ಇದು ಗ್ರಾಹಕರ ಮೇಲೆ ಕನಿಷ್ಠ ಪರಿಣಾಮ ಬೀರಲಿದೆ ಎಂದು ಕಂಪನಿ ತಿಳಿಸಿದೆ.

ಮಹೀಂದ್ರ ಬೆಲೆ ಹೆಚ್ಚಳ: ಮಹೀಂದ್ರ ಆ್ಯಂಡ್ ಮಹೀಂದ್ರ ಕಂಪನಿಯು ಎಸ್‌ಯುವಿ ಮತ್ತು ವಾಣಿಜ್ಯ ವಾಹನಗಳ ಬೆಲೆಯನ್ನು ಜನವರಿಯಿಂದ ಜಾರಿಗೆ ಬರುವಂತೆ ಶೇ 3ರಷ್ಟು ಏರಿಕೆ ಮಾಡುವುದಾಗಿ ತಿಳಿಸಿದೆ.

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ	
ಕೋಕ	20000-27500
ಹಳತು	45000-49000
ಚಿತ್ರದುರ್ಗ	
ಅಪಿ	48600-49000
ಬೆಟ್ಟೆ	28800-29200
ಕೆಂಪುಗೋಟು	23600-24000
ರಾಶಿ	48100-48500
ಕಾರ್ಕಳ	
ಹಳತು	30000-49000
ಕುಮಟ	
ಚಾಲಿ	33169-37299
ಚಿಪ್ಪು	22089-26689
ಕೋಕ	8019-22699
ಫ್ಯಾಕ್ಟರಿ	6019-20429
ಹಳೆಚಾಲಿ	37099-39799
ಹೊಸಚಾಲಿ	24089-27500
ಶಿವಮೊಗ್ಗ	
ಬೆಟ್ಟೆ	35009-56899
ಗೊರಬಲು	17319-35219
ಹೊಸತು	45399-50399
ರಾಶಿ	30000-50399
ಸರಕು	40400-88296
ಸಿದ್ದಾಪುರ	
ಬಿಳಿಗೋಟು	24899-28599
ಚಾಲಿ	32609-38199
ಕೋಕ	21019-25989
ಕೆಂಪುಗೋಟು	21319-21319
ರಾಶಿ	42689-48199
ತಟ್ಟಿಬೆಟ್ಟೆ	25689-33689
ಶಿರಸಿ	
ಬೆಟ್ಟೆ	30009-43289
ಬಿಳಿಗೋಟು	23004-31313
ಚಾಲಿ	35280-39112
ಕೆಂಪುಗೋಟು	15499-23299
ರಾಶಿ	44689-47389
ಯಲ್ಲಾಪುರ	
ಅಪಿ	63623-63623
ಬಿಳಿಗೋಟು	17200-29212
ಚಾಲಿ	30599-38539
ಕೋಕ	5701-18112
ಕೆಂಪುಗೋಟು	15499-24755
ರಾಶಿ	41009-57859
ತಟ್ಟಿಬೆಟ್ಟೆ	26419-40010

ಭಾರತದ ಆಮದು ಉತ್ಪನ್ನಗಳಿಗೆ ಅಧಿಕ ಸುಂಕ: ಸುಹಾಸ್ ವಿರೋಧ


ಸುಹಾಸ್ ಸುಬ್ರಹ್ಮಣ್ಯಂ

ವಾಷಿಂಗ್ಟನ್ (ಪಿಟಿಐ): ‘ಭಾರತದಿಂದ ಆಮದಾಗುವ ಉತ್ಪನ್ನಗಳಿಗೆ ಹೆಚ್ಚಿನ ಸುಂಕ ವಿಧಿಸುವ ಪ್ರಸ್ತಾವವನ್ನು ನೂತನ ಸಂಸದ ಸುಹಾಸ್ ಸುಬ್ರಹ್ಮಣ್ಯಂ ವಿರೋಧಿಸಿದ್ದಾರೆ. ‘ಇದು, ಉಭಯ ದೇಶಗಳ ನಡುವೆ ವಾಣಿಜ್ಯ ಕಲಹಕ್ಕೆ ನಾಂದಿಯಾಗಬಹುದು’ ಎಂದು ಅಭಿಪ್ರಾಯಪಟ್ಟಿದ್ದಾರೆ.

ಹೊಸದಾಗಿ ಆಯ್ಕೆಯಾಗಿರುವ ಡೊನಾಲ್ಡ್ ಟ್ರಂಪ್ ನೇತೃತ್ವದ ಆಡಳಿತ, ಭಾರತದಿಂದ ಆಮದಾಗುವ ಉತ್ಪನ್ನ-ಗಳಿಗೆ ಹೆಚ್ಚಿನ ಸುಂಕ ವಿಧಿಸಲು ಚಿಂತನೆ ನಡೆಸಿದೆ ಎಂಬ ಕಾರಣಕ್ಕೆ ಅವರು ಈ ಮಾತನ್ನು ಹೇಳಿದ್ದಾರೆ.

ವರ್ಜೀನಿಯಾದ ನೂತನ ಸಂಸದ 38 ವರ್ಷ ವಯಸ್ಸಿನ ಸುಹಾಸ್ ಸುದ್ದಿಸಂಸ್ಥೆಯ ಜೊತೆಗೆ ಮಾತನಾಡಿದರು. ಇವರು, ಭಾರತ ಮೂಲದ ಆರು ಮಂದಿ ಅಮೆರಿಕನ್ ಸಂಸದರಲ್ಲಿ ಒಬ್ಬರಾಗಿ-ದ್ದಾರೆ.

‘ಅಧಿಕ ಸುಂಕ ವಿಧಿಸುವ ಪ್ರಸ್ತಾವ ವನ್ನು ನಾನು ವಿರೋಧಿಸುತ್ತೇನೆ. ಅದು ಸರಿಯಲ್ಲ. ಅದು ವಾಣಿಜ್ಯ ಕಲಹಕ್ಕೆ ನಾಂದಿ ಆಗಬಹುದು. ಉಭಯ ರಾಷ್ಟ್ರಗಳಿಗೂ ಇದರಿಂದ ಒಳಿತಾಗದು’ ಎಂದು ಹೇಳಿದರು.

ಚುನಾವಣಾ ಪೂರ್ವದಲ್ಲಿ ಡೊನಾಲ್ಡ್ ಟ್ರಂಪ್ ಅವರು ಚೀನಾ ಮತ್ತು ಭಾರತದ ಉತ್ಪನ್ನಗಳಿಗೆ ಹೆಚ್ಚಿನ ಸುಂಕ ವಿಧಿಸುವ ಕುರಿತು ಮಾತನಾಡಿದ್ದರು.

ಸಂಕ್ಷಿಪ್ತ ಸುದ್ದಿ

ಕದನ ವಿರಾಮ: ಇಸ್ರೇಲ್–ಹಮಾಸ್ ನಡುವೆ ಮಾತುಕತೆ ಆರಂಭ

ಇಸ್ತಾಂಬುಲ್ (ಎ.ಪಿ): ಗಾಜಾದಲ್ಲಿ ಕದನ ವಿರಾಮ ಘೋಷಿಸುವ ಕುರಿತಂತೆ ಹಮಾಸ್‌ನ ಬಂಡುಕೋರರು ಮತ್ತು ಇಸ್ರೇಲ್ ನಡುವೆ ವಾರದ ನಂತರ ಮತ್ತೆ ಮಾತುಕತೆ ಆರಂಭವಾಗಿದೆ.

14 ತಿಂಗಳ ಅವಧಿಯ ಯುದ್ಧಕ್ಕೆ ಕದನ ವಿರಾಮವನ್ನು ಘೋಷಿಸಲು ಈ ಮಾತುಕತೆಯು ಸಹಕಾರಿ ಆಗಲಿದೆ ಎಂದು ಹಮಾಸ್‌ನ ಅಧಿಕಾರಿಯೊಬ್ಬರು ಆಶಿಸಿದ್ದಾರೆ.

‘ಮಾತುಕತೆಯಲ್ಲಿ ಪ್ರಗತಿ ಕಂಡುಬರುತ್ತಿಲ್ಲ ಎಂದು ಈಜಿಪ್ಟ್ ಮತ್ತು ಅಮೆರಿಕದ ಮಧ್ಯಸ್ಥಿಕೆದಾರರು ನಿರಾಸೆಗೊಂಡಿದ್ದರಿಂದ ಸಂಧಾನ ಚರ್ಚೆಯನ್ನು ಕೆಲಕಾಲ ಸ್ಥಗಿತಗೊಳಿಸಲಾಗಿತ್ತು. ಈಗ ಮತ್ತೆ ಚರ್ಚೆ ಆರಂಭಿಸಲಾಗಿದೆ’ ಹಮಾಸ್ ರಾಜಕೀಯ ಸಮಿತಿಯ ಅಧಿಕಾರಿ ಬಸೀಂ ನಯೀಂ ತಿಳಿಸಿದ್ದಾರೆ.

ಪ್ರೊ. ಜಾರ್ಜ್‌ಗೆ ಜಿ.ಡಿ.ಬಿರ್ಲಾ ಪ್ರಶಸ್ತಿ



ನವದೆಹಲಿ: ಕೆ.ಕೆ.ಬಿರ್ಲಾ ಪ್ರತಿಷ್ಠಾನ ನೀಡುವ ಜಿ.ಡಿ.ಬಿರ್ಲಾ ವೈಜ್ಞಾನಿಕ ಸಂಶೋಧನೆ ಪ್ರಶಸ್ತಿಗೆ ಬೆಂಗಳೂರಿನ ಪ್ರಾಧ್ಯಾಪಕ ಸುಬಿ ಜೇಕಬ್ ಜಾರ್ಜ್ ಆಯ್ಕೆಯಾಗಿದ್ದಾರೆ.

1991ರಲ್ಲಿ ಸ್ಥಾಪನೆಯಾದ ಈ ಪ್ರಶಸ್ತಿಯನ್ನು 50 ವರ್ಷದೊಳಗಿನ ವಿಜ್ಞಾನಿಗಳಿಗೆ ನೀಡಲಾಗುತ್ತದೆ. ಪ್ರಶಸ್ತಿ ಮೊತ್ತ ₹5 ಲಕ್ಷ. ವಿವಿಧ ಕ್ಷೇತ್ರಗಳ ವಿಜ್ಞಾನಿಗಳನ್ನು ಒಳಗೊಂಡ ಆಯ್ಕೆ ಸಮಿತಿಯು ಪ್ರಶಸ್ತಿ ಪುರಸ್ಕೃತರನ್ನು ಆಯ್ಕೆ ಮಾಡಿದೆ.

ಜಾರ್ಜ್ ಅವರು ಬೆಂಗಳೂರಿನ ಜವಾಹರಲಾಲ್ ನೆಹರೂ ಉನ್ನತ ವೈಜ್ಞಾನಿಕ ಸಂಶೋಧನಾ ಕೇಂದ್ರದಲ್ಲಿ ಪ್ರಾಧ್ಯಾಪಕರಾಗಿದ್ದಾರೆ. ಅವರು ಮಹಾತ್ಮ ಗಾಂಧಿ ವಿಶ್ವವಿದ್ಯಾಲಯದಲ್ಲಿ ರಸಾಯನವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಸಿ.ಎನ್. ಆರ್ ರಾವ್ ರಾಷ್ಟ್ರೀಯ ಪ್ರಶಸ್ತಿ, ಶಾಂತಿ ಸ್ವರೂಪ್ ಭಟ್ನಾಗರ್ ಪ್ರಶಸ್ತಿ ಸೇರಿದಂತೆ ಹಲವು ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ.

ಢಾಕಾಗೆ ಪಯಣಿಸಿದ ಉಪ ಹೈಕಮಿಷನರ್ ಶಿಕ್ದರ್ ಮೊಹಮ್ಮದ್ ಅಶ್ರಫುರ್ ರೆಹಮಾನ್

ರಾಯಭಾರಿ ತುರ್ತು ಕರೆಸಿಕೊಂಡ ಬಾಂಗ್ಲಾದೇಶ

ಕೋಲ್ಕತ್ತ (ಪಿಟಿಐ): ಬಾಂಗ್ಲಾದಲ್ಲಿ ಹಿಂದೂಗಳ ಮೇಲಿನ ದಾಳಿಗೆ ಪ್ರತಿಯಾಗಿ ಪ್ರತಿಭಟನೆ ನಡೆದ ಕಾರಣ ಬಾಂಗ್ಲಾದೇಶವು ಇಲ್ಲಿನ ರಾಯಭಾರ ಕಚೇರಿಯ ಉಪ ಹೈಕಮಿಷನರ್‌ನ್ನು ಕರೆಸಿಕೊಂಡು ಚರ್ಚಿಸಿದೆ.

ಕೋಲ್ಕತ್ತದಲ್ಲಿ ವಾಸ್ತವ್ಯ ಇದ್ದ ಬಾಂಗ್ಲಾದ ರಾಜಕೀಯ ವ್ಯವಹಾರಗಳ ಸಚಿವರೂ ಆದ, ಉಪ ಹೈಕಮಿಷನರ್ ಶಿಕ್ದರ್ ಮೊಹಮ್ಮದ್ ಅಶ್ರಫುರ್ ರೆಹಮಾನ್ ಅವರು ಢಾಕಾಗೆ ಮರಳಿದ್ದಾರೆ.

‘ತುರ್ತು ಚರ್ಚೆಗಾಗಿ ಅಶ್ರಫುರ್ ರೆಹಮಾನ್ ಅವರನ್ನು ಕರೆಸಲಾಗಿದೆ. ಇವರು, ಮುಂದಿನ ವಾರ ಉಭಯ ದೇಶಗಳ ನಡುವೆ ನಡೆಯುವ ವಿದೇಶಾಂಗ ಕಾರ್ಯದರ್ಶಿ ಮಟ್ಟದ ತಂಡದಲ್ಲಿಯೂ ಇರುತ್ತಾರೆ. ಈ ತಿಂಗಳ 3ನೇ ವಾರ ಕೋಲ್ಕತ್ತಕ್ಕೆ ಮರಳುವರು’ ಎಂದು ರಾಯಭಾರ ಕಚೇರಿಯ ಮೂಲಗಳು ತಿಳಿಸಿವೆ.

ಬಾಂಗ್ಲಾದಲ್ಲಿ ಹಿಂದೂ ಅಲ್ಪಸಂಖ್ಯಾತರನ್ನು ಗುರಿಯಾಗಿಸಿ ನಡೆದ ದಾಳಿಗಳಿಗೆ ಪ್ರತಿಯಾಗಿ ಕೋಲ್ಕತ್ತದ ರಾಯಭಾರ ಕಚೇರಿ ಎದುರು ಕಳೆದ ವಾರ ತೀವ್ರ ಪ್ರತಿಭಟನೆ ನಡೆದಿತ್ತು.

ಮತ್ತೊಂದು ಬೆಳವಣಿಗೆಯಲ್ಲಿ, ಅಗರ್ತಲಾದಲ್ಲಿ ಇರುವ ಬಾಂಗ್ಲಾದೇಶದ ಉಪ ರಾಯಭಾರ ಕಚೇರಿಯು, ಭದ್ರತಾ ಕಾರಣ ನೀಡಿ ಮಂಗಳವಾರ ವೀಸಾ, ಕಾನ್ಸುಲರ್ ಸೇವೆಯನ್ನು ಸ್ಥಗಿತಗೊಳಿಸಿದೆ.

ಬಾಂಗ್ಲಾದಲ್ಲಿ ನಡೆದ ನಾಗರಿಕ ದಂಗೆಯ ಬಳಿಕ ಪದಚ್ಯುತ ಪ್ರಧಾನಿ ಶೇಖ್ ಹಸೀನಾ ಅವರು ಆಗಸ್ಟ್ 5ರಂದು ಭಾರತಕ್ಕೆ ಪಲಾಯನ ವಾಗಿದ್ದರು. ಆನಂತರ ಉಭಯ ದೇಶಗಳ ಬಾಂಧವ್ಯ ಮಸುಕಾಗಿತ್ತು. ಇತ್ತೀಚೆಗೆ ಇಸ್ಕಾನ್‌ನ ಪ್ರತಿನಿಧಿಯೊಬ್ಬರ ಬಂಧನದ ಬಳಿಕ ಪರಿಸ್ಥಿತಿ ಇನ್ನಷ್ಟು ಹಳಸಿದೆ.

‘ನಂಕಾನಾ ಸಾಹಿಬ್: ಇನ್ನೆಷ್ಟು ವರ್ಷ ನಮ್ಮಿಂದ ದೂರ ಇರಬೇಕು’

ಲಖನೌ (ಪಿಟಿಐ): ‘ಪಾಕಿಸ್ತಾನದಲ್ಲಿ ಏನಾಗಿತ್ತು ಎಂದು ಎಲ್ಲರಿಗೂ ತಿಳಿದಿದೆ. ನಂಕಾನಾ ಸಾಹಿಬ್ (ಗುರು ನಾನಕ್ ಅವರ ಹುಟ್ಟಿದೂರು) ನಮ್ಮಿಂದ ಇನ್ನೆಷ್ಟು ವರ್ಷ ದೂರ ಇರಬೇಕು? ನಾವು ನಮ್ಮ ಹಕ್ಕುಗಳನ್ನು ವಾಪಸ್ ಪಡೆದುಕೊಳ್ಳ-ಬೇಕು’ ಎಂದು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಹೇಳಿದರು.

ಇಲ್ಲಿನ ಯಹಿಯಗಂಜ್ ಗುರುದ್ವಾರ ದಲ್ಲಿ ನಡೆದ ಒಂಭತ್ತನೇ ಸಿಖ್ ಗುರು ಶ್ರೀ ತೇಜ್ ಬಹುದ್ದೂರ್ ಜೀ ಮಹಾರಾಜ್ ಅವರ ‘ಬಲಿದಾನ ದಿವಸ’ದ ಅಂಗವಾಗಿ ನಡೆದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಬಾಂಗ್ಲಾದೇಶದಲ್ಲಿ ಏನಾಗುತ್ತಿದೆ ಎಂದು ಎಲ್ಲರಿಗೂ ತಿಳಿದಿದೆ. ನಾವು ಈ ಹಿಂದೆ ಮಾಡಿದ ತಪ್ಪುಗಳನ್ನು ಸರಿಪಡಿಸಿಕೊಳ್ಳಲು ಇತಿಹಾಸವು ನಮಗೆ ಅವಕಾಶ ನೀಡುತ್ತಿದೆ. ಹಿಂದೂಗಳು ಹಾಗೂ ಸಿಖ್ಖರ ಮಧ್ಯೆ ಜಗಳ ತಂದು ಹಾಕಲು ಯತ್ನಿಸಲಾಗು-ತ್ತಿದೆ. ಈ ಬಗ್ಗೆ ಎಚ್ಚರಿಕೆ ವಹಿಸಬೇಕು’ ಎಂದರು.


ಶ್ರೀ ತೇಜ್ ಬಹುದ್ದೂರ್ ಜೀ ಮಹಾರಾಜ್ ಅವರ ‘ಬಲಿದಾನ ದಿವಸ’ದ ಅಂಗವಾಗಿ ಲಖನೌನಲ್ಲಿ ನಡೆದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಭಾಗವಹಿಸಿದರು –ಪಿಟಿಐ ಚಿತ್ರ

‘ನಮ್ಮ ತಪ್ಪುಗಳನ್ನು ಸರಿಪಡಿಸಿಕೊಳ್ಳುವ ಈ ಅಭಿಯಾನದಲ್ಲಿ ನಾವೆಲ್ಲರೂ ಒಂದಾಗಬೇಕು. ಇತಿಹಾಸವನ್ನು ಬಹಳ ವಿಕೃತ ರೀತಿಯಲ್ಲಿ ಮರುಕಳಿಸಲು ಕೆಲವರು ಯತ್ನಿಸುತ್ತಿದ್ದಾ-ರೆ. ಗುರು ಪರಂಪರೆಯನ್ನು ನೆನಪಿನಲ್ಲಿ-ಟ್ಟುಕೊಂಡು ಈ ಅಭಿಯಾನಕ್ಕೆ ನಾವು ಸಿದ್ಧರಾಗಬೇಕು’ ಎಂದರು.

‘ಈ ದೇಶ, ಧರ್ಮಕ್ಕಾಗಿ ಸಿಖ್ ಸಮುದಾಯದವರು ಹುತಾತ್ಮರಾಗಿದ್ದಾರೆ. ಇದನ್ನು ನಾವು ಅನುಸರಿಸಬೇಕು. ನಮ್ಮ ಮುಂದಿನ ಪೀಳಿಗೆಯವರ ಭವ್ಯ ಭವಿಷ್ಯಕ್ಕಾಗಿ ಇದನ್ನೇ ನಾವು ನಮ್ಮ ಇತಿಹಾಸವನ್ನಾಗಿ ಮಾಡಿಕೊಳ್ಳಬೇಕು’ ಎಂದರು.

ಡಿ.9ರಂದು ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಸ್ರಿ ಬಾಂಗ್ಲಾದೇಶಕ್ಕೆ ಭೇಟಿ



ನವದೆಹಲಿ (ಪಿಟಿಐ): ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲೆ ದಾಳಿ ನಡೆಯುತ್ತಿರುವ ಹೊತ್ತಿನಲ್ಲೇ ಭಾರತದ ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಸ್ರಿ ಅವರು ಡಿ.9ರಂದು ಢಾಕಾಗೆ ಭೇಟಿ ನೀಡಲಿದ್ದಾರೆ.

ಮಿಸ್ರಿ ಅವರು ವಿದೇಶಾಂಗ ಕಚೇರಿಯ ಸಮಾಲೋಚನಾ ಸಭೆಯಲ್ಲಿ ಪಾಲ್ಗೊಳ್ಳಲು ಬಾಂಗ್ಲಾದೇಶಕ್ಕೆ ಪ್ರಯಾಣಿಸುತ್ತಿದ್ದಾರೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ತಿಳಿಸಿದ್ದಾರೆ.

‘ಈ ಭೇಟಿಯು ಬಾಂಗ್ಲಾದೇಶದ ಜೊತೆಗಿನ ನಮ್ಮ ರಚನಾತ್ಮಕ ಸಂವಾದದ ಭಾಗವಾಗಿದೆ’ ಎಂದು ಮಾಧ್ಯಮಗಳಿಗೆ ಅವರು ತಿಳಿಸಿದರು.

ಹಿಂದೂ ಮುಖಂಡ ಚಿನ್ಮಯಿ ಕೃಷ್ಣದಾಸ್ ಬಂಧನದ ಕುರಿತು ಪ್ರತಿಕ್ರಿಯಿಸಿದ ಅವರು, ಭಾರತವು ಈ ಪ್ರಕರಣದಲ್ಲಿ ನ್ಯಾಯಯುತ ಮತ್ತು ಪಾರದರ್ಶಕ ಕಾನೂನು ಪ್ರಕ್ರಿಯೆ ನಿರೀಕ್ಷಿಸಿದೆ ಎಂದು ತಿಳಿಸಿದರು.

ಬಾಂಗ್ಲಾದೇಶದಲ್ಲಿ ಮೊಹಮ್ಮದ್ ಯೂನುಸ್ ನೇತೃತ್ವದ ಮಧ್ಯಂತರ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಭಾರತ ಹಾಗೂ ಬಾಂಗ್ಲಾದೇಶದ ಸಂಬಂಧವು ಹದಗೆಡುತ್ತಿದೆ. ಹಿಂದೂಗಳ ಮೇಲೆ ನಡೆಯುತ್ತಿರುವ ದಾಳಿಗಳ ಕುರಿತು ಭಾರತವು ಕಳವಳ ವ್ಯಕ್ತಪಡಿಸುತ್ತಿದೆ.

ಬಾಣಂತಿಯರ ಸಾವು ಪ್ರಕರಣ: ಸಚಿವ ಸಂಪುಟ ಸಭೆಯಲ್ಲಿ ನಿರ್ಧಾರ

ಐವಿ: ಕಂಪನಿ ವಿರುದ್ಧ ಕ್ರಮಕ್ಕೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಣಂತಿಯರ ಸಾವಿನ ಪ್ರಕರಣಗಳಲ್ಲಿ ಕಳಪೆ ಗುಣಮಟ್ಟದ ಐವಿ ದ್ರಾವಣ ಪೂರೈಸಿದ ಕಂಪನಿ ವಿರುದ್ಧ ಕಠಿಣ ಕಾನೂನು ಕ್ರಮ ತೆಗೆದುಕೊಳ್ಳ-ಬೇಕು ಮತ್ತು ರಾಜ್ಯ ಔಷಧ ಪೂರೈಕೆ ನಿಗಮದ ಕಾಯಕಲ್ಪ ನಡೆಸಬೇಕು ಎಂಬ ಪ್ರಸ್ತಾವಕ್ಕೆ ಸಚಿವ ಸಂಪುಟ ಸಭೆಯಲ್ಲಿ ಬೆಂಬಲ ವ್ಯಕ್ತವಾಗಿದೆ.

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು, ಶುಕ್ರವಾರ ನಡೆದ ಸಂಪುಟ ಸಭೆಯಲ್ಲಿ ಬಾಣಂತಿಯರ ಸಾವಿನ ಪ್ರಕರಣವನ್ನು ಪ್ರಸ್ತಾಪಿಸಿದರು. ಪ್ರಕರಣಗಳ ವಿವರಗಳು ಮತ್ತು ಈವರೆಗಿನ ಕ್ರಮಗಳ ಬಗ್ಗೆ ಸಭೆಗೆ ಮಾಹಿತಿ ನೀಡಿದರು. 'ಸಂಬಂಧಿತ ಕಂಪನಿಯ ವಿರುದ್ಧ ಕಠಿಣ ಕಾನೂನು ಕ್ರಮ ತೆಗೆದುಕೊಳ್ಳಿ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದರು.

ಸಂಪುಟ ಸಭೆಯ ನಂತರ ಸುದ್ದಿಗಾರರ ಜತೆ ಮಾತನಾಡಿದ ದಿನೇಶ್ ಗುಂಡೂರಾವ್, 'ಔಷಧ ಸರಬರಾಜು ನಿಗಮಕ್ಕೆ ಕಾಯಕಲ್ಪದ ಅಗತ್ಯವಿದೆ. ಗುಣಮಟ್ಟದ ಔಷಧಗಳನ್ನು ಪೂರೈಸುವಂತಹ ದೊಡ್ಡ ಕಂಪನಿಗಳು ನಿಗಮ ಕರೆಯುವ ಟೆಂಡರ್‌ಗಳಲ್ಲಿ ಭಾಗಿಯಾಗುವಂತೆ ಮಾಡಬೇಕಿದೆ. ಈ ಸಂಬಂಧ ಟೆಂಡರ್ ನಿಯಮಗಳಲ್ಲಿ ಕೆಲ ಬದಲಾವಣೆಗಳನ್ನು ಸೂಚಿಸಿ ಪ್ರಸ್ತಾವನೆ ಸಲ್ಲಿಸಲಾಗಿದೆ' ಎಂದು ತಿಳಿಸಿದರು.

ತನಿಖೆಗೆ ಸೂಚನೆ: 'ಬಳ್ಳಾರಿ ಆಸ್ಪತ್ರೆಗಳಲ್ಲಿ ತೊಂದರೆ ಅನುಭವಿಸಿದ್ದ ಒಂಬತ್ತು ಬಾಣಂತಿಯರಿದ್ದರು. ಅವರಲ್ಲಿ ನಾಲ್ವರು ಮೃತಪಟ್ಟಿದ್ದರು. ಐದನೆಯವರು ತೀವ್ರ ನಿಗಾ ಘಟಕದಲ್ಲಿದ್ದು, ಗುರುವಾರವಷ್ಟೇ ಹೊರಗೆ ಬಂದಿದ್ದರು. ಅವರ ಆರೋಗ್ಯ ಸುಧಾರಿಸಿತ್ತು. ಸ್ವತಃ ತಾವೇ ಓಡಾಡುವಷ್ಟು ಶಕ್ತರಾಗಿದ್ದರು. ಆದರೆ ಇದ್ದಕ್ಕಿದ್ದಂತೆ ಅವರು ಮೃತಪಟ್ಟಿದ್ದಾರೆ. ಈ ಬಗ್ಗೆ ಕೂಲಂಕಷ ತನಿಖೆಗೆ ಸೂಚಿಸಲಾಗಿದೆ' ಎಂದು ದಿನೇಶ್ ಗುಂಡೂರಾವ್ ಹೇಳಿದರು. 'ಇದೇ ಏಪ್ರಿಲ್‌ನಿಂದ ರಾಜ್ಯದಲ್ಲಿ ಒಟ್ಟು 327 ಬಾಣಂತಿಯರು ಮೃತಪಟ್ಟಿದ್ದಾರೆ. ಸಾವು ಏಕೆ ಸಂಭವಿಸಿತು ಎಂಬುದನ್ನು ಪತ್ತೆ ಮಾಡಲು 327 ಪ್ರಕರಣಗಳಲ್ಲೂ ತನಿಖೆ ನಡೆಸುವಂತೆ ಸೂಚಿಸಿದ್ದೇವೆ. ವೈದ್ಯಕೀಯ ಕಾರಣಕ್ಕೆ ಸಾವು ಸಂಭವಿಸಿವೆಯೇ ಅಥವಾ ಬೇರೆ ಕಾರಣಗಳಿವೆಯೇ ಎಂಬುದನ್ನು ಪತ್ತೆ ಮಾಡಬೇಕಿದೆ' ಎಂದು ಹೇಳಿದರು.

'ದ್ರಾವಣಕ್ಕೆ ರಾಜ್ಯದ ತಿರಸ್ಕಾರ, ಕೇಂದ್ರದ ಪುರಸ್ಕಾರ'

'ಪಶ್ಚಿಮ್ ಬಂಗಾ ಫಾರ್ಮಾಸ್ಯುಟಿಕಲ್ಸ್ ಪೂರೈಸಿರುವ ಐವಿ ದ್ರಾವಣ ಕಳಪೆ ಗುಣಮಟ್ಟದ್ದು ಎಂಬುದು ರಾಜ್ಯದ ಪ್ರಯೋಗಾಲಯಗಳು ನಡೆಸಿದ ಪರೀಕ್ಷೆಗಳಲ್ಲಿ ಪತ್ತೆಯಾಗಿತ್ತು. ಆದರೆ ಕೇಂದ್ರ ಸರ್ಕಾರದ ಔಷಧ ನಿಯಂತ್ರಕರು ಅದೇ ಐವಿ ದ್ರಾವಣವನ್ನು ಪುರಸ್ಕರಿಸಿದ್ದಾರೆ' ಎಂದು ದಿನೇಶ್ ಗುಂಡೂರಾವ್ ಅಸಮಾಧಾನ ವ್ಯಕ್ತಪಡಿಸಿದರು.

'ಅಂತಹ ಕಂಪನಿಗಳು ಮತ್ತು ಅವುಗಳ ಉತ್ಪನ್ನಗಳು ಮಾರಾಟಕ್ಕೆ ಅರ್ಹ ಎಂದು ಕೇಂದ್ರದ ಸಂಸ್ಥೆಗಳು ವರದಿ ನೀಡುವ ಕಾರಣದಿಂದ, ಅವುಗಳನ್ನು ರಾಜ್ಯ ಸರ್ಕಾರವು ಕಪ್ಪು ಪಟ್ಟಿಗೆ ಸೇರಿಸಲು ಸಾಧ್ಯವಾಗಿಲ್ಲ. ಅವುಗಳ ಉತ್ಪನ್ನಗಳನ್ನು ತಿರಸ್ಕರಿಸಲೂ ಆಗುವುದಿಲ್ಲ' ಎಂದರು.

'ಈ ಬಗ್ಗೆ ಕೇಂದ್ರ ಔಷಧ ನಿಯಂತ್ರಕರಿಗೆ ಪತ್ರ ಬರೆದಿದ್ದೇವೆ. ಅವರ ಕ್ರಮದಿಂದ ತೊಂದರೆ ಆಗುತ್ತಿದೆ ಎಂಬುದನ್ನು ವಿವರಿಸಿದ್ದೇವೆ. ಜತೆಗೆ ಉತ್ತಮ ಗುಣಮಟ್ಟದ ಔಷಧಗಳ ಪೂರೈಕೆಗೆ ಅನುಕೂಲವಾಗುವಂತೆ ಟೆಂಡರ್ ನಿಯಮಗಳನ್ನು ಕಠಿಣಗೊಳಿಸಲು ಕ್ರಮ ತೆಗೆದುಕೊಂಡಿದ್ದೇವೆ' ಎಂದರು.


ಲೋಕಾಯುಕ್ತಕ್ಕೆ ಮನವಿ

'ಬಳ್ಳಾರಿ ಮತ್ತು ರಾಜ್ಯದ ವಿವಿಧ ಜಿಲ್ಲಾ ಆಸ್ಪತ್ರೆಗಳಲ್ಲಿ ಬಾಣಂತಿಯರು ಮತ್ತು ಶಿಶು ಮರಣದ ಪ್ರಕರಣಗಳ ಕುರಿತು ನ್ಯಾಯಾಂಗ ತನಿಖೆ ನಡೆಸಬೇಕು' ಎಂದು ಬಿಜೆಪಿ ರಾಜ್ಯ ಘಟಕದ ನಿಯೋಗವು ಲೋಕಾಯುಕ್ತರನ್ನು ಒತ್ತಾಯಿಸಿದೆ.

ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ವಿಧಾನ ಪರಿಷತ್ ಸದಸ್ಯ ಎನ್. ರವಿಕುಮಾರ್, ರಾಜ್ಯ ಮಹಿಳಾ ಮೋರ್ಚಾ ಅಧ್ಯಕ್ಷೆ ಮಂಜುಳಾ, ಶಾಸಕ ಸಿ.ಕೆ.ರಾಮಮೂರ್ತಿ, ವೈದ್ಯಕೀಯ ಪ್ರಕೋಷ್ಠದ ರಾಜ್ಯ ಸಂಚಾಲಕ ಡಾ.ನಾರಾಯಣ್ ಮತ್ತು ಇತರರು ಇದ್ದ ನಿಯೋಗವು ಶುಕ್ರವಾರ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ ಅವರನ್ನು ಭೇಟಿ ಮಾಡಿ, ಮನವಿ ಸಲ್ಲಿಸಿತು.

'ಈ ಅವಘಡಗಳ ಹಿಂದೆ ಆಸ್ಪತ್ರೆಯ ಆಡಳಿತ ಮಂಡಳಿ, ಸರ್ಕಾರದ ಅಧಿಕಾರಿಗಳು ಮತ್ತು ರಾಜಕಾರಣಿಗಳ ಕೈವಾಡ ಇದೆ. ಈ ಸಾವುಗಳಿಗೆ ಕಾರಣವಾದ ಔಷಧ ಮತ್ತು ಕಳಪೆ ಗುಣಮಟ್ಟದ ಔಷಧ ಖರೀದಿಯ ಹಿಂದೆ ಇರುವವರನ್ನು ರಕ್ಷಿಸುವ ಕೆಲಸ ಆಗುತ್ತಿದೆ. ಪ್ರಕರಣದ ಸತ್ಯವನ್ನು ಹೊರಗೆ ತರಲು ನ್ಯಾಯಾಂಗ ತನಿಖೆ ಅವಶ್ಯ ಇದೆ. ಇದರಲ್ಲಿ ಲೋಕಾಯುಕ್ತ ಸಂಸ್ಥೆಯು ಮಧ್ಯಪ್ರವೇಶಿಸಬೇಕು' ಎಂದು ನಿಯೋಗ ಮನವಿ ಸಲ್ಲಿಸಿದೆ.

ಸರ್ಕಾರಕ್ಕೆ ಕರುಣೆ ಇಲ್ಲವೇ?: ಅಶೋಕ



'ಆಸ್ಪತ್ರೆಗಳಲ್ಲಿ ಬಾಣಂತಿಯರು ಸಾಯುತ್ತಿದ್ದರೂ ಮುಖ್ಯಮಂತ್ರಿಯಾಗಲೀ, ಆರೋಗ್ಯ ಸಚಿವರಾಗಲೀ ಸಂತ್ರಸ್ತ ಕುಟುಂಬದವರನ್ನು ಭೇಟಿ ಮಾಡಿ ಸಾಂತ್ವನ ಹೇಳುವ ಕೆಲಸ ಮಾಡುತ್ತಿಲ್ಲ. ಇವರಿಗೆ, ಇವರ ಸರ್ಕಾರಕ್ಕೆ ಕರುಣೆ ಇಲ್ಲವೇ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಪ್ರಶ್ನಿಸಿದರು.

ನಗರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕೋವಿಡ್ ಸಂದರ್ಭದಲ್ಲಿ ಆಮ್ಲಜನಕದ ಕೊರತೆಯಿಂದ ಚಾಮರಾಜನಗರದಲ್ಲಿ ಜನರು ಸತ್ತಾಗ ಇದೇ ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಅವರು ಅಲ್ಲಿಗೆ ಭೇಟಿ ನೀಡಿದ್ದರು. ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಆಗ್ರಹಿಸಿದ್ದರು. ಕಣ್ಣೀರು ಸುರಿಸಿದ್ದರು. ಆದರೆ ಈಗ ಬಾಣಂತಿಯರ ಸಾವಿಗೆ ಸುರಿಸಲು ಇವರಲ್ಲಿ ಕಣ್ಣೀರು ಇಲ್ಲವೇ' ಎಂದು ಪ್ರಶ್ನಿಸಿದರು.




ಯಾವ ಕಾರಣಕ್ಕೆ ಹೀಗಾಗಿದೆ ಎಂಬುದನ್ನು ಪರಿಶೀಲಿಸಲು ಕ್ರಮ ತೆಗೆದುಕೊಳ್ಳಲಾಗಿದೆ. ಕಳಪೆ ಔಷಧ ಪೂರೈಸಿದ್ದ ಕಂಪನಿ ವಿರುದ್ಧ ಕಠಿಣ ಕ್ರಮಕ್ಕೆ ಸೂಚಿಸಿದ್ದೇನೆ

ಸಿದ್ದರಾಮಯ್ಯ, ಮುಖ್ಯಮಂತ್ರಿ



ಬಳ್ಳಾರಿ ಆಸ್ಪತ್ರೆಯಲ್ಲಿ ಬಾಣಂತಿಯರ ಸಾವಿನ ಪ್ರಕರಣದಲ್ಲಿ ನನ್ನಿಂದ ಲೋಪ ವಾಗಿದ್ದರೆ, ಖಂಡಿತ ರಾಜೀನಾಮೆ ನೀಡಲು ನಾನು ಸಿದ್ಧನಿದ್ದೇನೆ

ದಿನೇಶ್ ಗುಂಡೂರಾವ್, ಆರೋಗ್ಯ ಸಚಿವ



ಕಪ್ಪು ಪಟ್ಟಿಗೆ ಸೇರಿಸಲಾದ ಕಂಪನಿ ಇಂದ ಐವಿ ದ್ರಾವಣ ಖರೀದಿಸಲಾಗಿದೆ. ಅದರಿಂದ ಬಾಣಂತಿಯರು ಸತ್ತಿದ್ದಾರೆ. ರಾಜ್ಯ ಸರ್ಕಾರವೇ ಇದಕ್ಕೆ ಹೊಣೆ

ಬಿ.ವೈ.ವಿಜಯೇಂದ್ರ

ಅಧ್ಯಕ್ಷ, ಬಿಜೆಪಿ ರಾಜ್ಯ ಘಟಕ

ನರಸೀಪುರದ ತಿರುಮಲ ದೇಗುಲದಲ್ಲಿ ಪೂಜೆ ಶುರು

ಅಧಿಕಾರಿಗಳ ಸಮ್ಮುಖದಲ್ಲಿ ದೇಗುಲ ಪ್ರವೇಶಿಸಿದ ದಲಿತರು

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ದಲಿತ ಯುವಕರು ದೇಗುಲ ಪ್ರವೇಶ ಮಾಡಿದ್ದಕ್ಕೆ ಪೂಜೆ ನಿಲ್ಲಿಸಿದ್ದ ತಾಲ್ಲೂಕಿನ ನರಸೀಪುರ ಗ್ರಾಮದ ತಿರುಮಲ ದೇವಸ್ಥಾನದಲ್ಲಿ ಶುಕ್ರವಾರ ಪೂಜೆ ಆರಂಭವಾಗಿದೆ.

ಪುರೋಹಿತರನ್ನು ಕರೆಸಿ 'ಪುಣ್ಯ' ಮಾಡಿಸಿದ ಬಳಿಕ ಗ್ರಾಮದ ಅರ್ಚಕರು ಎಂದಿನಂತೆ ಪೂಜೆ ಆರಂಭಿಸಿದರು. ಕಂದಾಯ ಇಲಾಖೆ ಮತ್ತು ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳ ಸಮ್ಮುಖದಲ್ಲಿ ದಲಿತ ಯುವಕರು ದೇಗುಲ ಪ್ರವೇಶ ಮಾಡಿ ಪೂಜೆ ಸಲ್ಲಿಸಿದರು.



ಚಿಕ್ಕಮಗಳೂರು ತಾಲ್ಲೂಕಿನ ನರಸೀಪುರ ಗ್ರಾಮದ ತಿರುಮಲ ದೇಗುಲಕ್ಕೆ ಪೊಲೀಸರ ಸಮ್ಮುಖದಲ್ಲಿ ದಲಿತ ಯುವಕರು ಪ್ರವೇಶ ಮಾಡಿ ಪೂಜೆ ಸಲ್ಲಿಸಿದರು

ನರಸೀಪುರದಲ್ಲಿ 250ಕ್ಕೂ ಹೆಚ್ಚು ಕುರುಬ ಸಮುದಾಯದ ಕುಟುಂಬಗಳಿದ್ದು, ಪರಿಶಿಷ್ಟ ಜಾತಿಯ(ಆದಿ ಕರ್ನಾಟಕ) 13 ಕುಟುಂಬಗಳಿವೆ. ದೇಗುಲ ಪ್ರವೇಶ ಕೇಳಿ ಪರಿಶಿಷ್ಟ ಜಾತಿಯ ಯುವಕ ಹೇಮಂತಕುಮಾರ್ ಅವರು ತಹಶೀಲ್ದಾರ್‌ಗೆ ತಿಂಗಳ ಹಿಂದೆ ಮನವಿ ಸಲ್ಲಿಸಿದ್ದರು. ಮಂಗಳವಾರ ಸಂಜೆ ಗ್ರಾಮಕ್ಕೆ ಬಂದ ತಹಶೀಲ್ದಾರ್ ಸುಮಂತ್ ಅವರು ಇಬ್ಬರು ದಲಿತ ಯುವಕರನ್ನು ದೇಗುಲದ ಒಳಗೆ ಕರೆದೊಯ್ದಿದ್ದರು. ಅಂದು ದೇಗುಲದ ಕೀಲಿ ನೀಡಿದ್ದ ಗ್ರಾಮಸ್ಥರು ವಾಪಸ್ ಪಡೆದಿರಲಿಲ್ಲ.

ಅಧಿಕಾರಿಗಳು ಗುರುವಾರ ಶಾಂತಿಸಭೆ ನಡೆಸಿದ್ದರು. ಎರಡು ದಿನ ಪೂಜೆ ನಿಂತಿದ್ದರಿಂದ ಶುಕ್ರವಾರ ಪುರೋಹಿತರನ್ನು ಕರೆಸಿ 'ಪುಣ್ಯ' ಮಾಡಿಸಿದರು. 'ಪೂಜೆ ನಿಂತಿದ್ದರಿಂದ ನಾವೇ ಪುಣ್ಯ ಮಾಡಿಸಬೇಕು ಎಂದು ಗ್ರಾಮಸ್ಥರು ಹೇಳಿದ್ದರು. ಅದರಂತೆ ಪುರೋಹಿತರನ್ನು ಕರೆಸಿದ್ದೆವು. ಅಧಿಕಾರಿಗಳ ಸಮ್ಮುಖದಲ್ಲಿ ದೇಗುಲಕ್ಕೆ ಪ್ರವೇಶ ಮಾಡಿದೆವು. ಪುಣ್ಯ ಕಾರ್ಯದ ವೇಳೆ ಕುರುಬ ಸಮುದಾಯದ ಯಾರೂ ದೇಗುಲಕ್ಕೆ ಬರಲಿಲ್ಲ. ಸಂಜೆಯ ಪೂಜೆಗೆ ಎಲ್ಲರೂ ಬಂದರು' ಎಂದು ಹೇಮಂತಕುಮಾರ್ 'ಪ್ರಜಾವಾಣಿ'ಗೆ ತಿಳಿಸಿದರು.

ಮನೆಯಲ್ಲೇ ಕೈದಿ ನಾಗಮ್ಮ ಸಾವು

ಪ್ರಜಾವಾಣಿ ವಾರ್ತೆ

ಕಲಬುರಗಿ: ಪ್ರಕರಣವೊಂದರಲ್ಲಿ ಜೈಲು ಶಿಕ್ಷೆಗೆ ಗುರಿಯಾಗಿ ಸದ್ಯಕ್ಕೆ ಪೆರೋಲ್ ಮೇಲೆ ಬಿಡುಗಡೆಯಾಗಿದ್ದ ಜೇವರ್ಗಿ ಪಟ್ಟಣದ ನಾಗಮ್ಮ ಅಣ್ಣಾರಾವ್ (94) ಅವರು ಶುಕ್ರವಾರ ಮನೆಯಲ್ಲೇ ಕೊನೆಯುಸಿರೆಳೆದಿದ್ದಾರೆ.

ಕಳೆದ ನವೆಂಬರ್ 16ರಂದು ಸಾರ್ವಜನಿಕರ ಅಹವಾಲು ಆಲಿಸಲು ಜಿಲ್ಲೆಗೆ ಬಂದಿದ್ದ ಉಪಲೋಕಾಯುಕ್ತ ನ್ಯಾಯಮೂರ್ತಿ ಬಿ.ವೀರಪ್ಪ ಅವರು ಕೇಂದ್ರ ಕಾರಾಗೃಹಕ್ಕೆ ಭೇಟಿ ನೀಡಿದ್ದ ವೇಳೆ, ಕಳೆದ ಒಂದು ವರ್ಷದಿಂದ ಜೈಲಿನಲ್ಲಿದ್ದ ನಾಗಮ್ಮ ಅವರನ್ನು ಭೇಟಿ ಮಾಡಿದ್ದರು. ಸಂಪೂರ್ಣ ಹಾಸಿಗೆ ಹಿಡಿದಿದ್ದ ಅವರ ಸ್ಥಿತಿ ಕಂಡು ಮರುಗಿದ್ದರು. ಅಲ್ಲದೇ, ತಕ್ಷಣವೇ ಸುಪ್ರೀಂ ಕೋರ್ಟ್ ರಿಜಿಸ್ಟ್ರಾರ್ ಅವರಿಗೆ ಕರೆ ಮಾಡಿ ವೃದ್ಧೆಯ ಅನಾರೋಗ್ಯ ಸ್ಥಿತಿ ಗಮನಿಸಿ ಶಿಕ್ಷೆಯ ಪ್ರಮಾಣ ಕಡಿತಗೊಳಿಸಲು ಮೇಲ್ಮನವಿ ಸಲ್ಲಿಸುವಂತೆ ಸೂಚಿಸಿದ್ದರು.

ಕಲಬುರಗಿ ಎಸ್ಪಿ ಅವರಿಗೆ ವೃದ್ಧೆಯನ್ನು ಪೆರೋಲ್ ಮೇಲೆ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಿದ್ದರು. ನ 28ರಂದು ವೃದ್ಧೆಗೆ ಒಂದು ತಿಂಗಳ ಪೆರೋಲ್ ಮಂಜೂರಾಗಿದ್ದರಿಂದ ಅವರ ಇಬ್ಬರು ಹೆಣ್ಣುಮಕ್ಕಳು ಬಂದು ಮನೆಗೆ ಕರೆದುಕೊಂಡು ಹೋಗಿದ್ದರು.



ವೃದ್ಧೆ ನಾಗಮ್ಮ ಅವರಿಗೆ ಪೆರೋಲ್ ಸಿಕ್ಕ ಬಳಿಕ ಮಗಳು ಕಲಬುರಗಿ ಕಾರಾಗೃಹದಿಂದ ಜೇವರ್ಗಿಗೆ ಕಳೆದ ವಾರ ಕರೆದುಕೊಂಡು ಹೋಗಿದ್ದರು

ಒಂದು ವಾರದ ಬಳಿಕ ವೃದ್ಧೆ ವಯೋಸಹಜ ಅನಾರೋಗ್ಯದಿಂದಾಗಿ ಶುಕ್ರವಾರ ನಿಧನರಾಗಿದ್ದಾರೆ ಎಂದು ಕಾರಾಗೃಹದ ಮುಖ್ಯ ಅಧೀಕ್ಷಕಿ ಅನಿತಾ ಆರ್. 'ಪ್ರಜಾವಾಣಿ'ಗೆ ತಿಳಿಸಿದರು.

ವೃದ್ಧೆಯ ಸಾವಿನ ಬಗ್ಗೆ ಮರುಕ ವ್ಯಕ್ತಪಡಿಸಿದ ಉಪ ಲೋಕಾಯುಕ್ತ ನ್ಯಾ.ಬಿ.ವೀರಪ್ಪ ಅವರು, 'ಕೊನೆಯ ದಿನಗಳನ್ನು ಜೈಲಿನ ಬದಲು ಮನೆಯಲ್ಲಿ ಕಳೆಯಬೇಕು ಎಂದು ನಾಗಮ್ಮ ಬಯಸಿದ್ದರು. ಹೀಗಾಗಿ, ಪೆರೋಲ್ ಮೇಲೆ ಬಿಡುಗಡೆಗೆ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದ್ದೆ. ವೃದ್ಧೆಯ ಆಸೆ ಈಡೇರಿದೆ' ಎಂದು ಹೇಳಿದರು.

ಮಳಿಗೆ ಆನ್‌ಲೈನ್ ನೋಂದಣಿಗೆ ಚಾಲನೆ

ಮಂಡ್ಯ: ನಗರದಲ್ಲಿ ಡಿ.20ರಿಂದ 22ರ ವರೆಗೆ ನಡೆಯಲಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ 491 ಪುಸ್ತಕ ಮಳಿಗೆ ಮತ್ತು 284 ವಾಣಿಜ್ಯ ಮಳಿಗೆಗಳನ್ನು ತೆರೆಯಲು ನಿರ್ಧರಿಸಲಾಗಿದ್ದು, ಆನ್‌ಲೈನ್ ನೋಂದಣಿಗೆ ಸಚಿವ ಚಲುವರಾಯ ಸ್ವಾಮಿ ಶುಕ್ರವಾರ ಚಾಲನೆ ನೀಡಿದರು. ಡಿ.13ರ ರಾತ್ರಿ 12ಗಂಟೆವರೆಗೆ kannadasahithya parishattu.in / sammelana 2024 ಲಿಂಕ್ ಮೂಲಕ ಆನ್‌ಲೈನ್ ನೋಂದಣಿ ಮಾಡಿಕೊಳ್ಳಬಹುದು. ಮಾಹಿತಿಗೆ 94487 97702/ 94480 04466 ಸಂಪರ್ಕಿಸಬಹುದು.

ಶಿವಮೊಗ್ಗದಲ್ಲಿ ಲಿಂಗಾಯತ ಸಮಾವೇಶ ನಡೆಸಲು ತಯಾರಿ

ವರಿಷ್ಠರ ತಾಕೀತಿಗೆ ಯತ್ನಾಳ ಬಣ ಸಡ್ಡು

ಪ್ರಜಾವಾಣಿ ವಾರ್ತೆ

ನವದೆಹಲಿ: ಪಕ್ಷದ ನಾಯಕರ ವಿರುದ್ಧ ಬಹಿರಂಗ ಹೇಳಿಕೆ ನೀಡದಂತೆ ಬಿಜೆಪಿ ಶಿಸ್ತು ಸಮಿತಿಯ ತಾಕೀತಿಗೆ ಸಡ್ಡು ಹೊಡೆದಿರುವ ಶಾಸಕ ಬಸನಗೌಡ ಪಾಟೀಲ ಯತ್ನಾಳ ಮತ್ತು ಅವರ ಸಹಚರರು, ಯಡಿಯೂರಪ್ಪನವರ ರಾಜಕೀಯ ತವರಿನಲ್ಲೇ ಪರ್ಯಾಯ ಸಮಾವೇಶಕ್ಕೆ ತಯಾರಿ ನಡೆಸಿದ್ದಾರೆ.

ಶಿವಮೊಗ್ಗ ಜಿಲ್ಲೆಯಲ್ಲಿ ಲಿಂಗಾಯತ ಸಮಾವೇಶ ನಡೆಸಲು ಯತ್ನಾಳ ಹಾಗೂ ಮಾಜಿ ಸಂಸದ ಜಿ.ಎಂ. ಸಿದ್ದೇಶ್ವರ ಸಿದ್ಧತೆ ನಡೆಸಿದ್ದಾರೆ. ಈ ಮೂಲಕ ಬಿ.ಎಸ್.ಯಡಿಯೂರಪ್ಪ ಹಾಗೂ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ವಿರುದ್ಧ ಮತ್ತೊಂದು ಸುತ್ತಿನ ಸಂಘರ್ಷಕ್ಕೆ ಭಿನ್ನರ ಬಣ ಅಣಿಯಾಗಿದೆ. ಅಲ್ಲಿಗೆ, ಬಿಜೆಪಿ ಭಿನ್ನರ ಜಗಳ ಶಮನವಾಗಿಲ್ಲ; ಮತ್ತಷ್ಟು ಉಲ್ಬಣಗೊಳ್ಳುವ ಹಾದಿಯಲ್ಲಿದೆ ಎಂಬಂತೆ ತೋರುತ್ತಿದೆ.

ಯಡಿಯೂರಪ್ಪ ಹಾಗೂ ವಿಜಯೇಂದ್ರ ವಿರುದ್ಧ ಯತ್ನಾಳ ಬಹಿರಂಗ ಸಮರ ಸಾರಿ ನಿರಂತರವಾಗ್ದಾಳಿ ನಡೆಸುತ್ತಾ ಬಂದಿದ್ದಾರೆ. ಕಳೆದ ಎರಡು ತಿಂಗಳಿನಿಂದೀಚೆಗೆ ಈ ಬಣ ಬಲಿಷ್ಠವಾಗ ತೊಡಗಿತ್ತು. ಶಾಸಕರಾದ ರಮೇಶ ಜಾರಕಿಹೊಳಿ, ಬಿ.ಪಿ. ಹರೀಶ್, ಮಾಜಿ ಸಚಿವರಾದ ಅರವಿಂದ ಲಿಂಬಾವಳಿ, ಕುಮಾರ್ ಬಂಗಾರಪ್ಪ ಸೇರಿಕೊಂಡಿದ್ದರು. ಇದಕ್ಕೆ ಪ್ರತಿರೋಧದಂತೆ ಗುಂಪಾಗಿದ್ದ ವಿಜಯೇಂದ್ರ ಬಣ, ಯತ್ನಾಳ ಉಚ್ಚಾಟನೆ ಮಾಡುವಂತೆ ಆಗ್ರಹಿಸಿತ್ತು.

ಈ ಬೆನ್ನಲ್ಲೇ, ಯತ್ನಾಳ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಬೇಕು ಎಂದು ವಿಜಯೇಂದ್ರ ಅವರು ವರಿಷ್ಠರಿಗೆ ದೂರು ನೀಡಿದ್ದರು. ಬಂಡೆದ್ದ ಕಾರಣಕ್ಕೆ ಷೋಕಾಸ್ ನೋಟಿಸ್ ಪಡೆದಿದ್ದ ಯತ್ನಾಳ ಅವರು ಪಕ್ಷದ ಕೇಂದ್ರ ಶಿಸ್ತು ಸಮಿತಿಗೆ ವಿವರಣೆ ನೀಡುವ ಜತೆಗೆ, ಯಡಿಯೂರಪ್ಪ ಕುಟುಂಬದ ಹೊಂದಾಣಿಕೆ ರಾಜಕಾರಣದ ಬಗ್ಗೆ ಪಕ್ಷದ ವರಿಷ್ಠರಿಗೆ ದೂರು ನೀಡಿದ್ದರು. ಪಕ್ಷದ ನಾಯಕರ ವಿರುದ್ಧ ಬಹಿರಂಗ ಹೇಳಿಕೆ ನೀಡದಂತೆ ಯತ್ನಾಳ ಅವರಿಗೆ ಶಿಸ್ತು ಸಮಿತಿ ತಾಕೀತು ಮಾಡಿತ್ತು. 'ಯತ್ನಾಳ ಸೇರಿದಂತೆ ಎಲ್ಲರೂ ನಮ್ಮವರೇ. ನಮ್ಮ ನಡುವಿನ ಅಭಿಪ್ರಾಯಭೇದಗಳನ್ನು ಬಗೆಹರಿಸಿಕೊಳ್ಳುತ್ತೇವೆ' ಎಂದು ಯಡಿಯೂರಪ್ಪ ಪ್ರತಿಕ್ರಿಯಿಸಿದ್ದರು. ಯಡಿಯೂರಪ್ಪನವರ 'ಸಂಧಾನ-ಸೂತ್ರ'ದ ಒಳ ಏಟಿನ ಬಗ್ಗೆ ಎಚ್ಚರ ನೀಡಿದ್ದ ಯತ್ನಾಳ ಸಹಚರರು, ಯಾವುದೇ ಕಾರಣಕ್ಕೂ ಮಣಿಯುವುದು ಬೇಡ ಎಂದು ಸಲಹೆ ನೀಡಿದ್ದರು ಎಂದು ಗೊತ್ತಾಗಿದೆ.

ಈ ಬೆಳವಣಿಗೆಗಳ ಮಧ್ಯೆಯೇ' 'ರಾಜ್ಯ ಘಟಕದ ಅಧ್ಯಕ್ಷರಾಗಲು ವಿಜಯೇಂದ್ರ ಯೋಗ್ಯರಲ್ಲ' ಎಂದು ಶಾಸಕ ರಮೇಶ ಜಾರಕಿಹೊಳಿ ಗುರುವಾರ ವಾಗ್ದಾಳಿ ನಡೆಸಿದ್ದರು.

ರಾಷ್ಟ್ರ ರಾಜಧಾನಿಯಲ್ಲಿ ತಮ್ಮ ಬಣದ ನಾಯಕರ ಜತೆಗೆ ಸುದೀರ್ಘ ಸಮಾಲೋಚನೆ ನಡೆಸಿರುವ ಯತ್ನಾಳ ಅವರು ಮುಂದಿನ ಹೋರಾಟದ ರೂಪುರೇಷೆಗಳನ್ನು ಸಿದ್ಧಪಡಿಸಿದ್ದಾರೆ. ಎರಡನೇ ಹಂತದ ವಕ್ಫ್ ಹೋರಾಟವನ್ನು ನಡೆಸುವುದಾಗಿ ಪ್ರಕಟಿಸಿದ್ದಾರೆ. ಇದರ ಜತೆಗೆ, ಯಡಿಯೂರಪ್ಪ ಭದ್ರಕೋಟೆಯಲ್ಲೇ ಶಕ್ತಿ ಪ್ರದರ್ಶನ ನಡೆಸಲು ಯೋಜಿಸಿದ್ದಾರೆ. ಲಿಂಗಾಯತ ಸಮಾವೇಶ ನಡೆಸುವ ಮೂಲಕ ಸಡ್ಡು ಹೊಡೆಯಬೇಕು ಎಂದು ಭಿನ್ನರ ಬಣ ಸಮರ ತಂತ್ರ ಹೆಣೆದಿದೆ.

'ಶಿಕಾರಿಪುರ ಅಥವಾ ಸೊರಬದಲ್ಲಿ ಲಿಂಗಾಯತ ಸಮಾವೇಶ ನಡೆಸಿ ಸಾದರ ಮತ್ತು ಪಂಚಮಸಾಲಿ ಸಮುದಾಯದ ಶಕ್ತಿ ಪ್ರದರ್ಶನಕ್ಕೆ ಚಿಂತನೆ ನಡೆಸಲಾಗಿದೆ. ಬೆಳಗಾವಿಯ ವಿಧಾನಮಂಡಲದ ಅಧಿವೇಶನ ಮುಗಿದ ನಂತರ ಈ ಸಮಾವೇಶ ನಡೆಸಲಾಗುತ್ತದೆ. ಶಿಕಾರಿಪುರದಲ್ಲಿ ಸಮಾವೇಶ ನಡೆಸುವುದು ನಮ್ಮ ಆದ್ಯತೆ. ಇಲ್ಲಿ 80 ಸಾವಿರ ಲಿಂಗಾಯತರು ಇದ್ದಾರೆ' ಎಂದು ಯತ್ನಾಳ ಬಣದ ನಾಯಕರೊಬ್ಬರು ತಿಳಿಸಿದರು.

'ದೆಹಲಿ ನಾಯಕರಿಂದ ಶಹಬ್ಬಾಸ್‌ಗಿರಿ'



ಹುಬ್ಬಳ್ಳಿ: 'ನಾನು ಅಂಜಿಲ್ಲ, ಅಳುಕಿಲ್ಲ, ಮುಖ ಸಪ್ಪಗೆ ಮಾಡಿಲ್ಲ. ದೆಹಲಿಯಿಂದ ಹಸನ್ಮುಖಿಯಾಗಿ ವಾಪಸ್ ಆಗಿದ್ದೇನೆ ಎಂಬುದನ್ನು ನೋಡಿ ಅರ್ಥ ಮಾಡಿಕೊಳ್ಳಿ. ನನಗೆ ಯಾರೂ ತರಾಟೆಗೆ ತೆಗೆದುಕೊಂಡಿಲ್ಲ. ದೆಹಲಿ ನಾಯಕರು ನನಗೆ ಶಹಬ್ಬಾಸ್ ಗಿರಿ ಕೊಟ್ಟಿದ್ದಾರೆ. ದಾಂದಲೆ ಮಾಡದಂತೆ ಮನೆಯ ಹಿರಿಯರಂತೆ ಹೇಳಿ ಕಳುಹಿಸಿದ್ದಾರೆ' ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

ಇಲ್ಲಿ ಶುಕ್ರವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ನನ್ನ ಮೇಲೆ ಪಕ್ಷದ ಹೈಕಮಾಂಡ್‌ಗೆ ಪ್ರೀತಿ ಇದೆ. ನನ್ನನ್ನು ಪಕ್ಷದಿಂದ ಹೊರಗೆ ಹಾಕ್ತೀನಿ ಎನ್ನುವುದು ಮೂರ್ಖತನ. ನನ್ನ ವಿರುದ್ಧ ಶಿಸ್ತು ಕ್ರಮದ ಪ್ರಶ್ನೆಯೇ ಇಲ್ಲ. ಒಳ್ಳೆಯ ಕೆಲಸ ಮಾಡೋಕೆ ಹೇಳಿದ್ದಾರೆ. ಮುಂದೆ ಒಳ್ಳೆಯ ಭವಿಷ್ಯವಿದೆ ಅಂತಾನೂ ಹೇಳಿದ್ದಾರೆ' ಎಂದರು.

'ಇನ್ಮೇಲೆ ನಾನು ಮೌನ ವಹಿಸುವೆ. ಎಲ್ಲವನ್ನೂ ರಮೇಶ ಜಾರಕಿಹೊಳಿ ಹೇಳುತ್ತಾರೆ. ನಂತರ ಒಬ್ಬೊಬ್ಬರಾಗಿ ಬಾಯಿಬಿಡುತ್ತೇವೆ. ವಿಜಯೇಂದ್ರ ಅವರನ್ನು ರಾಜ್ಯ ಘಟಕದ ಅಧ್ಯಕ್ಷರಾಗಿ ಒಪ್ಪಲ್ಲ ಎಂಬ ರಮೇಶ ಜಾರಕಿಹೊಳಿ ಹೇಳಿಕೆಗೆ ನಾನು ಬದ್ಧ' ಎಂದರು. ಬಸವಣ್ಣನ ಕುರಿತ ತಮ್ಮ ಹೇಳಿಕೆಗೆ ಸ್ವಾಮೀಜಿಗಳು ಆಕ್ಷೇಪ ವ್ಯಕ್ತಪಡಿಸಿರುವುದಕ್ಕೆ ಪ್ರತಿಕ್ರಿಯೆ ನೀಡಿದ ಅವರು, 'ನನ್ನ ಹೇಳಿಕೆ ಬಗ್ಗೆ ಮಾತನಾಡುತ್ತಿರುವ ಮಠಾಧೀಶರು ಮೊದಲು ಸರ್ವಜ್ಞನ ವಚನಗಳನ್ನು ಓದಲಿ. ನಾನು ಕ್ಷಮೆ ಕೋರುವುದರಿಂದ ಏನು ಆಗಲ್ಲ. ನನ್ನ ನಾಲಿಗೆ ಕತ್ತರಿಸ್ತೀವಿ ಎನ್ನುವ ಸ್ವಾಮೀಜಿಗಳು ಬಸವಣ್ಣನ ಅನುಯಾಯಿಗಳೇ ಅಲ್ಲ. ನನ್ನನ್ನು ಚುನಾವಣೆಯಲ್ಲಿ ಸೋಲಿಸುತ್ತೇವೆ ಎನ್ನುವ ಸ್ವಾಮೀಜಿಗಳು ಅಸಲಿಯಲ್ಲ. ಅವರು ಬಸವಣ್ಣನ ನಕಲಿ ಅಭಿಮಾನಿಗಳು' ಎಂದರು.

ಬಹುವಾರ್ಷಿಕ ದರ ವ್ಯವಸ್ಥೆ ಅನ್ವಯ 3 ವರ್ಷಗಳಿಗೆ ಕೆಇಆರ್‌ಸಿಗೆ ಸಲ್ಲಿಕೆ

ವಿದ್ಯುತ್ ದರ ಹೆಚ್ಚಳಕ್ಕೆ ಎಸ್ಕಾಂ ಪ್ರಸ್ತಾವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಎಲ್ಲ ವಿದ್ಯುತ್ ಸರಬರಾಜು ಕಂಪನಿಗಳು (ಎಸ್ಕಾಂ) ವಿದ್ಯುತ್ ದರ ಹೆಚ್ಚಳ ಮಾಡುವಂತೆ ಕೋರಿ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗಕ್ಕೆ (ಕೆಇಆರ್‌ಸಿ) ಪ್ರಸ್ತಾವ ಸಲ್ಲಿಸಿವೆ. ಈ ಪ್ರಸ್ತಾವಗಳಿಗೆ ಆಯೋಗದ ಒಪ್ಪಿಗೆ ದೊರೆತರೆ ಗ್ರಾಹಕರಿಗೆ ದರ ಏರಿಕೆಯ ಬಿಸಿ ತಟ್ಟಲಿದೆ.

ಪ್ರತಿ ವರ್ಷ ನವೆಂಬರ್‌ನಲ್ಲಿ ರಾಜ್ಯದ ಎಲ್ಲ ಎಸ್ಕಾಂಗಳು ದರ ಹೆಚ್ಚಳ ಪ್ರಸ್ತಾವವನ್ನು ಸಲ್ಲಿಸುತ್ತವೆ. ಇತ್ತೀಚೆಗೆ ಬಹುವಾರ್ಷಿಕ ದರ (ಎಂವೈಟಿ) ವ್ಯವಸ್ಥೆಗೆ ಅಧಿಸೂಚನೆ ಹೊರಡಿಸಲಾಗಿತ್ತು. ಅದರ ನಂತರದ ಮೊದಲ ಪರಿಷ್ಕರಣೆಯ ಪ್ರಕ್ರಿಯೆ ಇದಾಗಿದೆ.

ಮೊದಲ ವರ್ಷ ಪ್ರತಿ ಯೂನಿಟ್‌ಗೆ 65-70 ಪೈಸೆ ಹಾಗೂ ಎರಡನೇ ವರ್ಷ 70-75 ಪೈಸೆ ಮತ್ತು ಮೂರನೇ ವರ್ಷ 85-90 ಪೈಸೆ ಆಸುಪಾಸಿನಲ್ಲಿ ಹೆಚ್ಚಳಕ್ಕೆ ಅನುಮತಿ ನೀಡುವಂತೆ ವಿದ್ಯುತ್ ಸರಬರಾಜು ಕಂಪನಿಗಳು ಮನವಿ ಮಾಡಿವೆ.

ವಾರ್ಷಿಕ ದರ ಪರಿಷ್ಕರಣೆಗೆ ಸಂಬಂಧಿಸಿದಂತೆ ಪ್ರಸ್ತಾವ ಸಲ್ಲಿಸಲು ನವೆಂಬರ್ 30 ಕೊನೆಯ ದಿನವಾಗಿತ್ತು.

ಎಸ್ಕಾಂಗಳಿಂದ ಪ್ರಸ್ತಾವ ಸಲ್ಲಿಕೆಯಾಗಿದೆ. ಸಾರ್ವಜನಿಕ ಪ್ರಕಟಣೆ ನೀಡಿ, ಜನರ ಅಹವಾಲು ಆಲಿಸಿ, ತಜ್ಞರ ಅಭಿಪ್ರಾಯ ಸಂಗ್ರಹಿಸಿ ನಿರ್ಧಾರ ಕೈಗೊಳ್ಳಲಾಗುವುದು

ಪಿ. ರವಿಕುಮಾರ್, ಅಧ್ಯಕ್ಷ, ಕೆಇಆರ್‌ಸಿ



ನಿಗದಿತ ಗಡುವಿನಲ್ಲಿ ಐದೂ ಎಸ್ಕಾಂಗಳು ಪ್ರಸ್ತಾವ ಸಲ್ಲಿಸಿವೆ. ಮುಂದಿನ ಮೂರು ವರ್ಷಗಳಲ್ಲಿ ಆಗಲಿರುವ ವಿದ್ಯುತ್ ಬೇಡಿಕೆ ಮತ್ತು ಪೂರೈಕೆ ಹಾಗೂ ಕೊರತೆಯಾಗಬಹುದಾದ ವಿದ್ಯುತ್ ಖರೀದಿಯನ್ನು ಅಂದಾಜು ಮಾಡಿ ದರ ಪರಿಷ್ಕರಣೆಯ ಬೇಡಿಕೆಯನ್ನು ಲೆಕ್ಕಹಾಕಿ ನೀಡಿವೆ. 2025-26ನೇ ಸಾಲಿಗೆ ಎಲ್ಲ ವಿದ್ಯುತ್ ಸರಬರಾಜು ಕಂಪನಿಗಳು ಸಲ್ಲಿಸಿರುವ ಬೇಡಿಕೆ ಒಂದೇ ಮಾದರಿಯಾಗಿದ್ದು, ಉಳಿದೆರಡು ವರ್ಷಗಳಲ್ಲಿ ಮಾತ್ರ ಕೆಲವು ಪೈಸೆಗಳಷ್ಟು ವ್ಯತ್ಯಾಸ ಇದೆ ಎಂದು ಬೆಸ್ಕಾಂ ಅಧಿಕಾರಿಗಳು ತಿಳಿಸಿದ್ದಾರೆ.

ಉದ್ಯಮಿಗಳು, ತಜ್ಞರು, ಸಾಮಾನ್ಯ ಗ್ರಾಹಕರ ಅಹವಾಲುಗಳನ್ನು ಆಲಿಸಿ ವಾಸ್ತವಾಂಶಗಳನ್ನು ಪರಿಶೀಲಿಸಿ 2025ರ ಮಾರ್ಚ್ ವೇಳೆಗೆ ಆಯೋಗವು ಪರಿಷ್ಕರಣೆಗೆ ಸಂಬಂಧಿಸಿದಂತೆ ಆದೇಶ ಪ್ರಕಟಿಸಲಿದೆ.

ಬೆಸ್ಕಾಂ ಸಲ್ಲಿಸಿದ ಪರಿಷ್ಕರಣೆ ಪಟ್ಟಿ (ಉಳಿದ ಎಸ್ಕಾಂಗಳು ಇದರ ಆಸುಪಾಸಿನಲ್ಲೇ ಇವೆ)

ವರ್ಷ	ಪರಿಷ್ಕರಣೆ ಪೈಸೆ (ಪ್ರತಿ ಯೂನಿಟ್‌ಗೆ)
2025-26	67
2026-27	71
2027-28	91

ಆಕ್ಷೇಪ: ಬಹುವಾರ್ಷಿಕ ದರ ಪದ್ಧತಿಗೆ ಕೈಗಾರಿಕೋದ್ಯಮಿಗಳು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದವು. ಮೂರು ವರ್ಷಗಳ ವಿದ್ಯುತ್ ದರ ಪರಿಷ್ಕರಣೆಯನ್ನು ಮುಂಚಿತವಾಗಿಯೇ ಮಾಡುವುದರಿಂದ ಹೊರೆ ಹೆಚ್ಚಲಿದೆ. ದೇಶದ ಇತರೆ ರಾಜ್ಯಗಳು ಕಾದುನೋಡುವ ತಂತ್ರ ಅನುಸರಿಸುತ್ತಿವೆ. ಕರ್ನಾಟಕದಲ್ಲಿ ಮಾತ್ರ ತರಾತುರಿಯಲ್ಲಿ ಅಳವಡಿಸಿಕೊಳ್ಳುತ್ತಿರುವುದು ಕೈಗಾರಿಕೆಗಳ ಅಭಿವೃದ್ಧಿ ದೃಷ್ಟಿಯಿಂದ ಪೂರಕ ಕ್ರಮವಲ್ಲ ಎಂದು ಆಕ್ಷೇಪದಲ್ಲಿ ತಿಳಿಸಲಾಗಿತ್ತು. ಅದರ ನಡುವೆ ದರ ಪರಿಷ್ಕರಣೆಗೆ ಪ್ರಸ್ತಾವ ಸಲ್ಲಿಕೆಯಾಗಿದೆ.

'ಬಹುವಾರ್ಷಿಕ ದರ ಪದ್ಧತಿಯು ಈಗಿರುವ ಇಂಧನ ಮತ್ತು ವಿದ್ಯುತ್ ಖರೀದಿ ಹೊಂದಾಣಿಕೆ ಶುಲ್ಕದ (ಎಫ್‌ಪಿಪಿಸಿಎ) ಮುಂದುವರಿದ ಭಾಗವಾಗಿದೆ. ಎಫ್‌ಪಿಪಿಸಿಎನಲ್ಲಿ ಆಯಾ ಎಸ್ಕಾಂಗಳಿಗೆ ಪ್ರತಿ ತಿಂಗಳು ಪರಿಷ್ಕರಣೆಗೆ ಅವಕಾಶ ಕಲ್ಪಿಸಲಾಗಿದೆ. ಆದರೆ, ಎಂವೈಟಿ ಅಡಿ ಒಮ್ಮೆ ಪರಿಷ್ಕರಣೆಗೆ ಅನುಮೋದನೆ ನೀಡಿದರೆ, ಮುಂದಿನ ಮೂರು ವರ್ಷಗಳ ಕಾಲ ಮತ್ತೆ ಯಾವುದೇ ರೀತಿಯ ದರ ಪರಿಷ್ಕರಣೆ ಮಾಡುವುದಿಲ್ಲ. ಹೆಚ್ಚೆಂದರೆ ವಾರ್ಷಿಕ ಕಾರ್ಯಸಾಧನೆ ಪರಿಶೀಲನೆ (ಎಪಿಆರ್) ಯಲ್ಲಿ ಕಂಡುಬರುವ ವ್ಯತ್ಯಾಸಗಳನ್ನು ಸರಿದೂಗಿಸಲು ನಾಲ್ಕೈದು ಪೈಸೆ ಹೆಚ್ಚು-ಕಡಿಮೆ ಮಾಡಲಾಗುತ್ತದೆ ಅಷ್ಟೇ' ಎಂದು ಬೆಸ್ಕಾಂ ಹಿರಿಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಹೊಸತಲ್ಲ: 'ವಿದ್ಯುತ್ ದರ ಪರಿಷ್ಕರಣೆಯ ಪ್ರಸ್ತಾವ ಪ್ರತಿವರ್ಷ ನವೆಂಬರ್‌ನಲ್ಲಿ ನಡೆಸುವ ಪ್ರಕ್ರಿಯೆ. ಈ ಬಾರಿ ಮೂರು ವರ್ಷಕ್ಕೆ ಸಂಬಂಧಿಸಿದಂತೆ ಪ್ರಸ್ತಾವ ಮಂಡಿಸಲಾಗಿದೆ ಎಂಬುದನ್ನು ಹೊರತುಪಡಿಸಿದರೆ ಪ್ರಸ್ತಾವ ಸಲ್ಲಿಸುವುದು ಹೊಸ ಪ್ರಕ್ರಿಯೆಯಂತೂ ಅಲ್ಲ' ಎಂದು ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಮಹಾಂತೇಶ ಬೀಳಗಿ ತಿಳಿಸಿದ್ದಾರೆ.

ಅಧಿಕಾರ ವಿಕೇಂದ್ರೀಕರಣ ಹರಣ

ಒಂದನೇ ಪುಟದಿಂದ..

ಕೆಲವು ಕಡೆ ಚುನಾವಣೆ ನಡೆದರೂ ಅಧ್ಯಕ್ಷ–ಉಪಾಧ್ಯಕ್ಷರ ಆಯ್ಕೆಗೆ ನಾನಾ ತೊಡರುಗಾಲುಗಳು ಎದುರಾಗಿ, ಅಧಿಕಾರ ಅನುಭವಿಸುವ ಸ್ಥಿತಿಯೇ ಇಲ್ಲವಾಗಿದೆ.

ದಶಕಗಳ ಹಿಂದೆಯೇ ಕಾಯ್ದೆ ರೂಪಿಸಿ, ನಗರ ಹಾಗೂ ಗ್ರಾಮೀಣ ಸ್ಥಳೀಯ ಸಂಸ್ಥೆಗಳಿಗೆ ಅಧಿಕಾರ ಹಂಚಿಕೆ ಆಗಿದ್ದರೂ, ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಯಾವ ಸರ್ಕಾರವೂ ಅವಧಿ ಮುಗಿಯವ ಮುನ್ನವೇ ಚುನಾವಣೆ ನಡೆಸಿ, ಪ್ರಜಾಸತ್ತಾತ್ಮಕವಾಗಿ ಜನ ಪ್ರತಿನಿಧಿಗಳಿಗೆ ಅಧಿಕಾರ ಹಸ್ತಾಂತರ ಮಾಡುವತ್ತ ಮನಸ್ಸು ಮಾಡಿಲ್ಲ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಸೇರಿದಂತೆ ರಾಜ್ಯದ ಹಲವು ನಗರಪಾಲಿಕೆ, ನಗರಸಭೆ, ಪುರಸಭೆ, ಪಟ್ಟಣ ಪಂಚಾಯತಿಗಳು ಹಾಗೂ ಜಿಲ್ಲಾ, ತಾಲ್ಲೂಕು ಪಂಚಾಯತಿಗಳಿಗೆ ಮೂರ್‍ನಾಲ್ಕು ವರ್ಷಗಳಿಂದ ಚುನಾವಣೆ ನಡೆದಿಲ್ಲ.

ಜಿಲ್ಲಾ ಪಂಚಾಯತಿಗೆ ಮೂರೂವರೆ ವರ್ಷ: ರಾಜ್ಯದ ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯಿತಿಗಳಿಗೆ 2016ರ ಏಪ್ರಿಲ್‌ನಲ್ಲಿ ಚುನಾವಣೆ ನಡೆದಿತ್ತು. ಅಂದು ಆಯ್ಕೆಯಾಗಿದ್ದ ಸದಸ್ಯರ ಅವಧಿ 2021ರ ಏಪ್ರಿಲ್ 27ರಂದು ಮುಕ್ತಾಯವಾಗಿತ್ತು. ಅದಾಗಿ ಮೂರೂವರೆ ವರ್ಷಗಳೇ ಕಳೆದಿವೆ.

ಜಿಲ್ಲೆ ಹಾಗೂ ತಾಲ್ಲೂಕು ಪಂಚಾಯಿತಿ ಚುನಾಯಿತ ಸದಸ್ಯರ ಅವಧಿ ಪೂರ್ಣಗೊಳ್ಳುವ ಮೊದಲೇ ಚುನಾವಣೆ ನಡೆಸಲು ಚುನಾವಣಾ ಆಯೋಗ 2021ರ ಫೆಬ್ರುವರಿಯಲ್ಲೇ ಅಧಿಸೂಚನೆ ಹೊರಡಿಸಿತ್ತು. ಆದರೆ, ಅಂದು ಅಧಿಕಾರದಲ್ಲಿದ್ದ ಬಿಜೆಪಿ ಸರ್ಕಾರ, ಜಿಲ್ಲಾ–ತಾಲ್ಲೂಕು ಪಂಚಾಯಿತಿ ಕ್ಷೇತ್ರಗಳ ಗಡಿ ನಿರ್ಣಯ ಮತ್ತು ಮೀಸಲಾತಿ ನಿಗದಿಪಡಿಸುವ ಅಧಿಕಾರವನ್ನು ರಾಜ್ಯ ಚುನಾವಣಾ ಆಯೋಗದಿಂದ ಹಿಂಪಡೆದಿತ್ತು. ಅದಕ್ಕಾಗಿ, ಕರ್ನಾಟಕ ಪಂಚಾಯತ್ ರಾಜ್ ಮತ್ತು ಗ್ರಾಮ ಸ್ವರಾಜ್ ಕಾಯ್ದೆಗೆ ತಿದ್ದುಪಡಿ ತಂದು 'ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗ'ಕ್ಕೆ ನೀಡಿತ್ತು.

ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿಗಳ ಕ್ಷೇತ್ರ ಪುನರ್ ವಿಂಗಡಣೆ ಮತ್ತು ಮೀಸಲಾತಿ ವಿಳಂಬದ ವಿರುದ್ಧ ರಾಜ್ಯ ಚುನಾವಣಾ ಆಯೋಗ ಹೈಕೋರ್ಟ್ ಮೊರೆ ಹೋಗಿತ್ತು. ಕ್ಷೇತ್ರಗಳ ಪುನರ್ ವಿಂಗಡಣೆ ಮತ್ತು ಮೀಸಲಾತಿ ನಿಗದಿ ಪ್ರಕ್ರಿಯೆಯ-ನ್ನು ಒಂದು ತಿಂಗಳಲ್ಲಿ ಪೂರ್ಣಗೊಳಿಸುವುದಾಗಿ 2023ರ ಡಿಸೆಂಬರ್‌ನಲ್ಲೇ ರಾಜ್ಯ ಸರ್ಕಾರ ಹೈಕೋರ್ಟ್‌ಗೆ ಅಫಿಡವಿಟ್ ಸಲ್ಲಿಸಿತ್ತು. ನಂತರ ಕ್ಷೇತ್ರಗಳ ಪುನರ್‌ವಿಂಗಡಣೆ ಹಾಗೂ ಸದಸ್ಯರ ಸಂಖ್ಯೆ ನಿಗದಿಪಡಿಸಲು ಸರ್ಕಾರ ರಚಿಸಿದ್ದ ಆಯೋಗದ ಶಿಫಾರಸುಗಳನ್ನು ಅಂಗೀಕರಿಸಿದ್ದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಅಧಿಸೂಚನೆ ಹೊರಡಿಸಿತ್ತು. ಆದರೆ, ಮೀಸಲಾತಿ ನಿಗದಿ ಅಂತಿಮಗೊಳಿಸಿರಲಿಲ್ಲ. ಇಂದಿಗೂ ಮೀಸಲಾತಿ ಗೊಂದಲಗಳು ಮುಂದುವರಿದಿದ್ದು, ಚುನಾವಣೆ ವಿಳಂಬವಾಗಿದೆ.

2020ಕ್ಕೇ ಮುಗಿದಿದ್ದ ಬಿಬಿಎಂಪಿ ಅವಧಿ

1862 ಮುನಿಸಿಪಲ್ ಬೋರ್ಡ್‌ನಿಂದ ಆರಂಭವಾಗಿ ಸುಮಾರು 162 ವರ್ಷಗಳ ಇತಿಹಾಸ ಹೊಂದಿರುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಕೌನ್ಸಿಲ್ ಅವಧಿ 2020ರ ಸೆಪ್ಟೆಂಬರ್‌ನಲ್ಲಿ ಮುಕ್ತಾಯವಾಗಿದೆ.

ನಾಲ್ಕು ವರ್ಷವಾಗುತ್ತಿದ್ದರೂ ಇನ್ನೂ ಚುನಾವಣೆ ನಡೆಸುವ ಕುರಿತು ಸರ್ಕಾರ ಅಧಿಕೃತ ಪ್ರಕಟಣೆ ಹೊರಡಿಸಿಲ್ಲ. ಅವಧಿ ಮುಗಿದ ಸಮಯದಲ್ಲಿ ಚುನಾವಣೆ ನಡೆಸಬೇಕಿದ್ದ ಬಿಜೆಪಿ ಸರ್ಕಾರ ವಾರ್ಡ್‌ಗಳನ್ನು ಹೆಚ್ಚಿಸುವ ಬಗ್ಗೆ ಪ್ರಕ್ರಿಯೆ ಆರಂಭಿಸಿತು. ಅದಕ್ಕಾಗಿ ಒಂದು ವರ್ಷಕ್ಕೂ ಹೆಚ್ಚು ಸಮಯ ತೆಗೆದುಕೊಂಡಿತು. 198ರಿಂದ 243 ವಾರ್ಡ್‌ಗಳನ್ನಾಗಿ ಪುನರ್ ವಿಂಗಡಿಸಲಾಯಿತು. ಮೀಸಲಾತಿ ಪ್ರಕಟಿಸಲಾಗಿತ್ತು.

ವಾರ್ಡ್ ವಿಂಗಡಣೆ ಬೇಕಾಬಿಟ್ಟಿಯಾಗಿದ್ದು, ಜನಸಂಖ್ಯೆಗೆ ಅನುಗುಣವಾಗಿ ನಡೆದಿಲ್ಲ ಎಂದು ಹಲವರು ನ್ಯಾಯಾಲಯದ ಮೊರೆ ಹೋದರು. ಚುನಾವಣೆ ವಿಳಂಬವಾಯಿತು.

2023ರಲ್ಲಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಹಿಂದಿನ ವಾರ್ಡ್ ಪುನರ್ ವಿಂಗಡನೆಯನ್ನೇ ರದ್ದುಪಡಿಸಿ, 225 ವಾರ್ಡ್‌ಗಳನ್ನು ರಚಿಸಿತು. ಆದರೆ, ಚುನಾವಣೆ ಮಾತ್ರ ಮರೀಚಿಕೆಯಾಗಿಯೇ ಉಳಿದಿದೆ. 800 ಚದರ ಕಿ.ಮೀ ವ್ಯಾಪ್ತಿಯ ನಗರದಲ್ಲಿ ಕಾರ್ಪೊರೇಟರ್‌ಗಳಿಲ್ಲದೇ, ಸಚಿವರು ಹಾಗೂ ಶಾಸಕರ ಕೇಂದ್ರೀಕೃತ ಅಧಿಕಾರ ಮುಂದುವರಿದಿರುವುದು ವಿಕೇಂದ್ರೀಕೃತ ಅಧಿಕಾರ ನೀಡುವ ಸಂವಿಧಾನದ ಆಶಯಕ್ಕೆ ವ್ಯತಿರಿಕ್ತವಾಗಿದೆ

ಸರ್ಕಾರ ಮನಸ್ಸು ಮಾಡಬೇಕು: ಸಂಗ್ರೇಶಿ

ಅವಧಿ ಮುಕ್ತಾಯಗೊಂಡ ಸ್ಥಳೀಯ ಸಂಸ್ಥೆಗಳಿಗೆ ಸರ್ಕಾರ ಕ್ಷೇತ್ರ ವಿಂಗಡಣೆ ಹಾಗೂ ಮೀಸಲಾತಿ ಅಧಿಸೂಚನೆ ಹೊರಡಿಸದೇ ಇದ್ದರೆ, ಹಿಂದಿನ ಚುನಾವಣೆಯಲ್ಲಿ ನಿಗದಿ ಮಾಡಲಾಗಿದ್ದ ಕ್ಷೇತ್ರ ವಿಂಗಡಣೆ ಹಾಗೂ ಮೀಸಲಾತಿ ಅನ್ವಯವೇ ಚುನಾವಣೆ ನಡೆಸಬಹುದು ಎಂದು ಸುಪ್ರೀಂ ಕೋರ್ಟ್ ಆದೇಶವಿದೆ. ಸರ್ಕಾರ ಇಚ್ಛಾಶಕ್ತಿ ತೋರಿದರೆ ಆಯೋಗ ಅವಧಿ ಮುಕ್ತಾಯವಾದ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸಲು ಅಧಿಸೂಚನೆ ಹೊರಡಿಸಲಿದೆ ಎನ್ನುತ್ತಾರೆ ರಾಜ್ಯ ಮುಖ್ಯ ಚುನಾವಣಾ ಆಯುಕ್ತ ಗದಿಗೆಪ್ಪ ಸಣ್ಣಬಸಪ್ಪ ಸಂಗ್ರೇಶಿ.

ಡಿ.13ರಂದು ಶೋಭಾಯಾತ್ರೆ, 14ರಂದು ಪಾದುಕೆ ದರ್ಶನ

ದತ್ತಮಾಲಾ ಅಭಿಯಾನ: ಮಾಲೆ ಧಾರಣೆ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ದತ್ತ ಜಯಂತಿ ಅಂಗವಾಗಿ ವಿಶ್ವ ಹಿಂದೂ ಪರಿಷತ್ ಮತ್ತು ಬಜರಂಗದಳದಿಂದ ಇದೇ 14ರ ತನಕ ನಡೆಯಲಿರುವ ದತ್ತಮಾಲಾ ಅಭಿಯಾನಕ್ಕೆ ಶುಕ್ರವಾರ ಚಾಲನೆ ದೊರೆತಿದೆ.

ನಗರದ ಕಾಮಧೇನು ಗಣಪತಿ ದೇವಾಲಯದಲ್ಲಿ ಭಕ್ತರಿಗೆ ಮಾಲೆಧಾರಣೆ ಕಾರ್ಯಕ್ರಮ ನಡೆಯಿತು. ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ, ಬಜರಂಗದಳದ ಮುಖಂಡ ರಘು ಸಕಲೇಶಪುರ, ಬಜರಂಗದಳ ಜಿಲ್ಲಾ ಸಂಘಟನಾ ಸಂಚಾಲಕ ಶ್ಯಾಂ ವಿ.ಗೌಡ, ವಿಭಾಗ ಸಂಯೋಜಕ ಶಶಾಂಕ್, ಆರ್.ಡಿ.ಮಹೇಂದ್ರ, ಯೋಗೀಶ್ ರಾಜ್ ಅರಸ್, ಅಮಿತ್ ಸೇರಿ ಹಲವಾರು ಮಾಲಾ ಧಾರಣೆ ಮಾಡಿಕೊಂಡರು.

ಡಿ.12ರಂದು ಅನಸೂಯ ಜಯಂತಿ, 13ರಂದು ನಗರದಲ್ಲಿ ಶೋಭಾಯಾತ್ರೆ ನಡೆಯಲಿದೆ. 14ರಂದು ಗುರು ದತ್ತಾತ್ರೇಯ ಬಾಬಾಬುಡನ್ ಸ್ವಾಮಿ ದರ್ಗಾಕ್ಕೆ ತೆರಳಿ ಭಕ್ತರು ದತ್ತ ಪಾದುಕೆ ದರ್ಶನ ಮಾಡಲಿದ್ದಾರೆ.



ದತ್ತಮಾಲಾ ಅಭಿಯಾನದ ಅಂಗವಾಗಿ ಸಿ.ಟಿ.ರವಿ ಅವರಿಗೆ ರಘು ಅವಧಾನಿ ಅವರು ಮಾಲೆ ತೊಡಿಸಿದರು

ಈ ವೇಳೆ ಮಾತನಾಡಿದ ಸಿ.ಟಿ.ರವಿ, 'ದತ್ತಜಯಂತಿ ಕಾರ್ಯಕ್ರಮಕ್ಕೆ 25 ವರ್ಷ ತುಂಬಿದೆ. ಇದು ಭಕ್ತಿ, ಶಕ್ತಿ ಮತ್ತು ಮುಕ್ತಿಯ ಹೋರಾಟವಾಗಿ ಜನಮನ ಮುಟ್ಟುವಲ್ಲಿ ಯಶಸ್ವಿಯಾಗಿದೆ. ಈಗ ವಕ್ಫ್ ಮಂಡಳಿ ಗಲಾಟೆ ರಾಜ್ಯದ ಎಲ್ಲೆಡೆ ನಡೆಯುತ್ತಿದೆ. ಇದಕ್ಕೆ ಮೊದಲ ಬಲಿಯಾಗಿದ್ದು ದತ್ತಾತ್ರೇಯಪೀಠ ಮತ್ತು ದತ್ತಾತ್ರೇಯ ದೇವರು. 1973–74ರಲ್ಲಿ ಗೆಜೆಟ್ ನೋಟಿಫಿಕೇಶನ್ ಮಾಡುವಾಗ ಮೂಲ ದಾಖಲೆ ಪರಿಶೀಲಿಸದೆ ದತ್ತಪೀಠವನ್ನು ವಕ್ಫ್ ಮಂಡಳಿಗೆ ಸೇರಿಸಿದ್ದರು' ಎಂದು ಹೇಳಿದರು.

'ಅದನ್ನು ಉಳಿಸಿಕೊಳ್ಳಲು ಜನಾಂದೋಲನ ಮತ್ತು ಹೋರಾಟ ಮಾಡಬೇಕಾಯಿತು. ನ್ಯಾಯಾಂಗದಲ್ಲಿ ಅರ್ಧ ನ್ಯಾಯ ಸಿಕ್ಕಿದೆ. ಪೂರ್ಣ ನ್ಯಾಯಕ್ಕಾಗಿ ಹೋರಾಟ ಮುಂದುವರಿಸಿದ್ದೇವೆ' ಎಂದರು.

ಮುಖಂಡ ರಘು ಸಕಲೇಶಪುರ ಮಾತನಾಡಿ, 'ದತ್ತಪೀಠದಲ್ಲಿ ಇರುವ ಗೋರಿಗಳನ್ನು ಸ್ಥಳಾಂತರ ಮಾಡಬೇಕು. ದತ್ತಪೀಠದಲ್ಲಿ ಮುಂದೆ ಗೆಲುವಿನ ಇತಿಹಾಸ ಸೃಷ್ಟಿಯಾಗಲಿದೆ' ಎಂದರು.

ಮುಳ್ಳಯ್ಯನಗಿರಿ: 4 ದಿನ ಪ್ರವಾಸ ನಿರ್ಬಂಧ

ದತ್ತ ಜಯಂತಿ ಅಂಗವಾಗಿ ಮುಳ್ಳಯ್ಯನಗಿರಿ, ಸೀತಾಳಯ್ಯನಗಿರಿ, ಬಾಬಾಬುಡನ್ ಗಿರಿ, ಗಾಳಿಕೆರೆ, ಮಾಣಿಕ್ಯಧಾರಾ ಪ್ರವಾಸಿ ತಾಣಗಳಿಗೆ ಬೇರೆ ಪ್ರವಾಸಿಗರ ಭೇಟಿಯನ್ನು ಡಿ.11ರ ಬೆಳಿಗ್ಗೆ 6 ಗಂಟೆಯಿಂದ ಡಿ. 15ರ ಬೆಳಿಗ್ಗೆ 10 ಗಂಟೆ ತನಕ ನಿರ್ಬಂಧಿಸ-ಲಾಗಿದೆ. ಸ್ಥಳೀಯರ ಸಂಚಾರ, ಈಗಾಗಲೇ ಕಾಯ್ದಿರಿಸಿರುವ ಹೋಮ್ ಸ್ಟೆ, ರೆಸಾರ್ಟ್ ಗಳಿಗೆ ತೆರಳಲು ಅವಕಾಶ ಇದೆ ಎಂದು ಜಿಲ್ಲಾಧಿಕಾರಿ ತಿಳಿಸಿದ್ದಾರೆ.

ಚಲೋದಲ್ಲಿ ಭಾಗವಹಿಸಿದ್ದ 101 ಸದಸ್ಯರ ತಂಡ • ಅಶ್ರುವಾಯು ಶೆಲ್ ಸಿಡಿಸಿದ ಪೊಲೀಸರು: 8 ಮಂದಿಗೆ ಗಾಯ

ರೈತರ 'ದೆಹಲಿ ಚಲೋ'ಗೆ ಪೊಲೀಸರ ತಡೆ

ಮುಖ್ಯಾಂಶಗಳು

- ಅಂಬಾಲಾದ 11 ಗ್ರಾಮಗಳಲ್ಲಿ ಶುಕ್ರವಾರದಿಂದ ಡಿ.9ರವರೆಗೆ ಅಂತರ್ಜಾಲ ಸ್ಥಗಿತ
- ಶಂಭು ಗಡಿಯಲ್ಲಿ ಜಲಫಿರಂಗಿಗಳ ನಿಯೋಜನೆ
- ಹೆದ್ದಾರಿಗಳಲ್ಲಿ ಹಾಕಿದ್ದ ಕಬ್ಬಿಣದ ಮೊಳೆಗಳನ್ನು ಕಿತ್ತ ರೈತರು

ಶಂಭು (ಪಿಟಿಐ): ಶಂಭು ಗಡಿಯಲ್ಲಿ 10 ತಿಂಗಳಿನಿಂದ ಪ್ರತಿಭಟನೆ ನಡೆಸುತ್ತಿರುವ ರೈತರಲ್ಲಿ 101 ರೈತರು ಶುಕ್ರವಾರ ಕಾಲ್ನಡಿಗೆಯಲ್ಲಿ 'ದೆಹಲಿ ಚಲೋ' ಹೊರಟಿದ್ದರು. ಕಾಲ್ನಡಿಗೆ ಆರಂಭಿಸಿದ ಕೆಲವೇ ಅಡಿ ದೂರದಲ್ಲಿ ಅಶ್ರುವಾಯು ಶೆಲ್ ಸಿಡಿಸುವುದರ ಮೂಲಕ ಹರಿಯಾಣ ಪೊಲೀಸರು ರೈತರನ್ನು ತಡೆದರು.

ಹರಿಯಾಣದ ಅಂಬಾಲಾ ಜಿಲ್ಲೆಯಲ್ಲಿ ಅಲ್ಲಿನ ಜಿಲ್ಲಾಡಳಿತ ನಿಷೇಧಾಜ್ಞೆಯನ್ನು ಜಾರಿ ಮಾಡಿದೆ. 'ನಿಷೇಧಾಜ್ಞೆ ಜಾರಿಯಲ್ಲಿರುವುದರಿಂದ ನೀವು ಮುಂದು ವರಿಯಬೇಡಿ' ಎಂದು ಹರಿಯಾಣ ಪೊಲೀಸರು ರೈತರಿಗೆ ಹೇಳಿದರು.

ರೈತರನ್ನು ತಡೆಯಲು ಬ್ಯಾರಿಕೇಡ್‌ಗಳನ್ನು, ಕಬ್ಬಿಣದ ಮೆಶ್‌ಗಳನ್ನು ಅಳವಡಿಸಲಾಗಿತ್ತು. ರೈತ ಸಂಘಟನೆಗಳ ಧ್ವಜಗಳನ್ನು ಹಿಡಿದು ಬಂದಿದ್ದ ರೈತರು ಈ ಬ್ಯಾರಿಕೇಡ್ ಹಾಗೂ ಮೆಶ್‌ಗಳನ್ನು ದಾಟಿ ಮುಂದೆ ನಡೆದರು.

ಸ್ವಲ್ಪ ದೂರ ಸಾಗಿದ ಬಳಿಕ ರಾಷ್ಟ್ರೀಯ ಹೆದ್ದಾರಿ–44ರಲ್ಲಿ ಪೊಲೀಸರು ರೈತರನ್ನು ತಡೆದರು. ಇಲ್ಲಿ ಭಾರಿ ಸಂಖ್ಯೆಯಲ್ಲಿ ಬ್ಯಾರಿಕೇಡ್ ಹಾಗೂ ಕಬ್ಬಿಣದ ಮೆಶ್‌ಗಳನ್ನು, ಮುಳ್ಳಿನ ಬೇಲಿಯನ್ನು ಅಳವಡಿಸಲಾಗಿತ್ತು. ಸಿಮೆಂಟಿನ ಬ್ಯಾರಿಕೇಡ್‌ಗಳ ಹಿಂದೆ ನಿಂತಿದ್ದ ಭದ್ರತಾ ಸಿಬ್ಬಂದಿ ಕೈಯಲ್ಲಿ ಗುರಾಣಿಗಳನ್ನು ಹಿಡಿದುಕೊಂಡಿದ್ದರು. 'ಇಲ್ಲಿಂದ ಮುಂದೆ ಹೋಗಲು ನಿಮಗೆ ಅನುಮತಿ ಇಲ್ಲ. ಇಲ್ಲಿಯೇ ನಿಲ್ಲಿ' ಎಂದು ಪೊಲೀಸರು ಎಚ್ಚರಿಕೆ ನೀಡಿದರು.

ರೈತರಿಗೆ ಗಾಯ: ಅಶ್ರುವಾಯು ಶೆಲ್ ಸಿಡಿಸಿದ ಕಾರಣ ಎಂಟು ರೈತರಿಗೆ ಗಾಯಗಳಾಗಿವೆ ಎಂದು ರೈತ ನಾಯಕರು ದೂರಿದ್ದಾರೆ. ಗಾಯಗೊಂಡವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಕಾಲ್ನಡಿಗೆ ಮುಂದುವರಿಸದಂತೆ ನಾಯಕರು ಕರೆ ನೀಡಿದ್ದಾರೆ. ಸಭೆಯ ಬಳಿಕ ಮುಂದಿನ ಕಾರ್ಯತಂತ್ರದ ಕುರಿತು ನಿರ್ಧರಿಸುವುದಾಗಿ ನಾಯಕರು ಹೇಳಿದ್ದಾರೆ.

ಕನಿಷ್ಠ ಬೆಂಬಲ ಬೆಲೆಗೆ (ಎಂಎಸ್‌ಪಿ) ಕಾನೂನು ಖಾತರಿ ನೀಡಬೇಕು ಎನ್ನುವುದೂ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಸಂಯುಕ್ತ ಕಿಸಾನ್ ಮೋರ್ಚಾ (ರಾಜಕೀಯೇತರ) ಹಾಗೂ ಕಿಸಾನ್ ಮಜ್ದೂರ್ ಮೋರ್ಚಾ ಸಂಘಟನೆಯ ನೂರಾರು ರೈತರು ಶಂಭು ಹಾಗೂ ಖನೌರಿ ಗಡಿಯಲ್ಲಿ ಪ್ರತಿಭಟನೆ ನಡೆಸುತ್ತಿದ್ದಾರೆ.

'ತಮ್ಮ ಬೇಡಿಕೆಗಳನ್ನು ಕೇಂದ್ರ ಸರ್ಕಾರ ಈಡೇರಿಸುತ್ತಿಲ್ಲ. ಆದ್ದರಿಂದ, ಮತ್ತೊಂದು ಸುತ್ತಿನ ಹೋರಾಟವನ್ನು ಆರಂಭಿಸುತ್ತೇವೆ. ಡಿ.6ರಿಂದ ಹಲವು ಗುಂಪುಗಳಲ್ಲಿ ಸಂಸತ್ತಿಗೆ ಕಾಲ್ನಡಿಗೆಯಲ್ಲಿ ತೆರಳಲಿದ್ದೇವೆ. ಡಿ.6ರಂದು ಮೊದಲ ಗುಂಪು ತೆರಳಲಿದೆ' ಎಂದು ಕೆಲವು ದಿನಗಳ ಹಿಂದೆ ಸಂಯುಕ್ತ ಕಿಸಾನ್ ಮೋರ್ಚಾ ಘೋಷಿಸಿತ್ತು.





1. ಪ್ರತಿಭಟನೆನಿರತ ರೈತರ ಮೇಲೆ ಅಶ್ರವಾಯು ಶೆಲ್ ಸಿಡಿಸಿದ ಭದ್ರತಾ ಸಿಬ್ಬಂದಿ 2. ಸಿಮೆಂಟ್ ಬ್ಯಾರಿಕೇಡ್‌ಗಳ ಹಿಂದೆ ಭದ್ರತಾ ಸಿಬ್ಬಂದಿ ನಿರ್ಮಿಸಿಕೊಂಡಿದ್ದ ಬ್ಯಾರಕ್‌ಗಳನ್ನು ದಾಟಲು ರೈತರು ಯತ್ನಿಸಿದರು – ಪಿಟಿಐ ಚಿತ್ರಗಳು

'ಎಂಎಸ್‌ಪಿ ಮೂಲಕವೇ ಖರೀದಿ'



ಶಿವರಾಜ್

'ರೈತರ ಎಲ್ಲ ಬೆಳೆಗಳನ್ನು ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಮೂಲಕವೇ ಖರೀದಿಸಲಾಗುವುದು. ಪ್ರಧಾನಿ ಮೋದಿ ಅವರ ಗ್ಯಾರಂಟಿಗಳನ್ನು ಪೂರೈಸಲಾಗುವುದು' ಎಂದು ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರು ರಾಜ್ಯಸಭೆಯಲ್ಲಿ ಶುಕ್ರವಾರ ಉತ್ತರಿಸಿದರು.

ಕಾಂಗ್ರೆಸ್ ಸಂಸದ ಜೈರಾಮ್ ರಮೇಶ್ ಅವರು ಎಂಎಸ್‌ಪಿ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವ, 'ರೈತರ ಸೇವೆಯನ್ನು ಭಗವಂತನ ಸೇವೆ ಎಂದುಕೊಂಡವನು ನಾನು. ರೈತರು ರಕ್ತ ಸುರಿಸಿದರೂ ನೀವು (ಕಾಂಗ್ರೆಸ್) ಎಂಎಸ್‌ಪಿ ಮೂಲಕ ರೈತರ ಉತ್ಪನ್ನಗಳನ್ನು ಎಂದಿಗೂ ಖರೀದಿಸಿಲ್ಲ. ಆದರೆ, ನಾವು ಖರೀದಿಸುತ್ತೇವೆ. ಜೊತೆಗೆ ಹೆಚ್ಚಿನ ಎಂಎಸ್‌ಪಿ ಅನ್ನೂ ನೀಡುತ್ತೇವೆ' ಎಂದರು.

'ಕಾಂಗ್ರೆಸ್‌ನವರು ರೈತರನ್ನು ಎಂದಿಗೂ ಗೌರವಿಸಿಯೇ ಇಲ್ಲ. ಅವರು ಅಧಿಕಾರದಲ್ಲಿದ್ದಾಗ ಸ್ವಾಮಿನಾಥನ್ ವರದಿಯ ಶಿಫಾರಸುಗಳನ್ನು ಒಪ್ಪಿಕೊಂಡಿರಲಿಲ್ಲ. ಭತ್ತ, ಗೋಧಿ, ಜೋಳ ಮತ್ತು ಸೋಯಾಬೀನ್ ಅನ್ನು ಉತ್ಪಾದನಾ ವೆಚ್ಚಕ್ಕೆ ಶೇ 50ರಷ್ಟು ಹೆಚ್ಚುವರಿ ಎಂಎಸ್‌ಪಿ ನೀಡಿ ಕಳೆದ ಮೂರು ವರ್ಷಗಳಿಂದ ಮೋದಿ ಸರ್ಕಾರ ಖರೀದಿಸುತ್ತಿದೆ' ಎಂದರು. ಆರ್‌ಜೆಡಿ ಸಂಸದ ಮನೋಜ್ ಕುಮಾರ್ ಝಾ ಅವರು ರೈತರ ಸಾಲ ಮನ್ನಾದ ಕುರಿತು ಎತ್ತಿದ ಪ್ರಶ್ನೆಗೆ ಉತ್ತರಿಸಿದ ಚೌಹಾಣ್, 'ನಾವು ರೈತರ ಆದಾಯವನ್ನು ಹೆಚ್ಚು ಮಾಡುವುದರಲ್ಲಿ ನಂಬಿಕೆ ಇಟ್ಟವರು. ರೈತರ ಆದಾಯವನ್ನು ಎಷ್ಟು ಹೆಚ್ಚು ಮಾಡುತ್ತೇವೆ ಎಂದರೆ, ಸಾಲ ಮನ್ನಾ ಮಾಡಿ ಎಂದು ರೈತರು ಎಂದಿಗೂ ಕೇಳುವುದೇ ಇಲ್ಲ' ಎಂದರು.

ಟ್ರ್ಯಾಕ್ಟರ್‌ಗಳನ್ನು ತರದಿದ್ದರೆ ನೀವು ದೆಹಲಿಗೆ ಹೋಗುವುದಕ್ಕೆ ನಮಗೆ ಅಭ್ಯಂತರವಿಲ್ಲ ಎಂದು ಬಿಜೆಪಿಯ ರಾಜ್ಯ ಹಾಗೂ ಕೇಂದ್ರ ನಾಯಕರು ಹೇಳುತ್ತಲೇ ಇದ್ದರು. ಈಗ ಕಾಲ್ನಡಿಯಲ್ಲಿ ಹೊರಟರೆ ನಮ್ಮನ್ನು ತಡೆಯಲು ಕಾರಣಗಳೇ ಇರಬಾರದಿತ್ತಲ್ಲವೇ?

ಸರವನ್ ಸಿಂಗ್ ಪಂಧೇರ್, ರೈತ ನಾಯಕ

ರೈತರ ಮೇಲೆ ಅಶ್ರುವಾಯು ಶೆಲ್ ಸಿಡಿಸಿರುವುದು ಖಂಡನೀಯ. ಸ್ವಾಮಿನಾಥನ್ ವರದಿಯಲ್ಲಿನ ಶಿಫಾರಸಿನಂತೆ ಕೃಷಿ ವೆಚ್ಚಕ್ಕಿಂತ ಒಂದೂವರೆ ಪಟ್ಟು ಹೆಚ್ಚಿನ ಮೊತ್ತದಷ್ಟು ಎಂಎಸ್‌ಪಿಯನ್ನು ನಿಗದಿ ಮಾಡಿ. ಜೊತೆಗೆ ರೈತರ ಇತರ ಎಲ್ಲ ಬೇಡಿಕೆಗಳನ್ನು ಆಲಿಸಿ. 700 ರೈತರು ಹುತಾತ್ಮರಾಗಿದ್ದನ್ನು ಈ ದೇಶ ಮರೆತಿಲ್ಲ

ರಾಹುಲ್ ಗಾಂಧಿ, ಲೋಕಸಭೆ ವಿರೋಧ ಪಕ್ಷದ ನಾಯಕ

ಸುದ್ದಿ 2 ನಿಮಿಷ

ಮತದಾರರ ಪಟ್ಟಿಯಿಂದ ಹಲವರ ಹೆಸರು ಅಳಿಸಲಾಗಿದೆ: ಆರೋಪ

ನವದೆಹಲಿ (ಪಿಟಿಐ): ದೆಹಲಿ ವಿಧಾನಸಭೆ ಚುನಾವಣೆ ಸಮೀಪಿಸುತ್ತಿರುವ ಮಧ್ಯೆಯೇ, ದೊಡ್ಡ ಸಂಖ್ಯೆಯ ಮತದಾರರ ಹೆಸರನ್ನು ಮತದಾರರ ಪಟ್ಟಿಯಿಂದ ತೆಗೆದುಹಾಕಲಾಗಿದೆ ಎಂದು ಆಮ್ ಆದ್ಮಿ ಪಕ್ಷದ ರಾಷ್ಟ್ರೀಯ ಸಂಚಾಲಕ ಅರವಿಂದ ಕೇಜ್ರಿವಾಲ್ ಶುಕ್ರವಾರ ಆರೋಪಿಸಿದ್ದಾರೆ.

ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, 'ಶಾಹದರಾ, ಜನಕಪುರಿ, ಲಕ್ಷ್ಮಿನಗರ ಮತ್ತು ಇತರ ಕ್ಷೇತ್ರಗಳ ಸಾವಿರಾರು ಮತದಾರರ ಹೆಸರನ್ನು ಅಳಿಸಿಹಾಕುವಂತೆ ಚುನಾವಣಾ ಆಯೋಗಕ್ಕೆ ಬಿಜೆಪಿ ಅರ್ಜಿ ಸಲ್ಲಿಸಿದೆ' ಎಂದು ಹೇಳಿದರು.

'ಶಾಹದರಾದಲ್ಲಿ 11,018 ಮತದಾರರ ಹೆಸರನ್ನು ಅಳಿಸಿಹಾಕಲು ಅರ್ಜಿ ಸಲ್ಲಿಸಿದೆ. ನಾವು ಈ ಪೈಕಿ 500 ಹೆಸರುಗಳನ್ನು ಪರಿಶೀಲಿಸಿದಾಗ ಶೇ 75ರಷ್ಟು ಜನರು ಇದೇ ಕ್ಷೇತ್ರದಲ್ಲಿ ಈಗಲೂ ನೆಲಸಿರುವುದು ಗೊತ್ತಾಗಿದೆ. ಆದರೆ ಅವರ ಹೆಸರುಗಳನ್ನು ಮತದಾರರ ಪಟ್ಟಿಯಿಂದ ತೆಗೆದುಹಾಕುವ ಸಾಧ್ಯತೆ ಇದೆ' ಎಂದು ಅವರು ಹೇಳಿದರು.

'ಕಳೆದ ಚುನಾವಣೆಯಲ್ಲಿ ಶಾಹದರಾ ಕ್ಷೇತ್ರದಲ್ಲಿ 5,000 ಮತಗಳ ಅಂತರದಲ್ಲಿ ಎಎಪಿ ಗೆಲುವು ಸಾಧಿಸಿತ್ತು. ಈ ಬಾರಿ 11,000 ಮತದಾರರ ಹೆಸರನ್ನು ಅಳಿಸಿಹಾಕಲಾಗಿದೆ. ಈ ಪೈಕಿ ಬಹುತೇಕ ಮತದಾರರು ಎಎಪಿ ಬೆಂಬಲಿಗರು' ಎಂದರು.

ಹಿಂಸಾಚಾರ ಪೀಡಿತ ಸಂಭಲ್‌ನಲ್ಲಿ ಭದ್ರತೆ: ಶಾಂತಿಯುತ ಪ್ರಾರ್ಥನೆ



ಸಂಭಲ್ (ಪಿಟಿಐ): ಬಾಬರಿ ಮಸೀದಿ ಉರುಳಿಸಿದ ವಾರ್ಷಿಕೋತ್ಸವ (ಡಿ. 6) ಹಾಗೂ ಶುಕ್ರವಾರದ ಜುಮಾ ಪ್ರಾರ್ಥನೆಯ ಅಂಗವಾಗಿ, ಮುನ್ನೆಚ್ಚರಿಕೆಯ ಕ್ರಮವಾಗಿ ಸಂಭಲ್‌ನಲ್ಲಿ ಭಾರಿ ಬಿಗಿಬಂದೋಬಸ್ತ್ ಆಯೋಜಿಸಲಾಗಿತ್ತು.

ಸ್ಥಳೀಯ ಮಸೀದಿಗಳಲ್ಲಿಯೇ ಪ್ರಾರ್ಥನೆ ಸಲ್ಲಿಸುವಂತೆ, ಶಾಂತಿ ಕಾಪಾಡುವಂತೆ ಧರ್ಮಗುರುಗಳು ಮನವಿ ಮಾಡಿದರು.

'ಜಾಮಾ ಮಸೀದಿಯಲ್ಲಿ ಶುಕ್ರವಾರದ ಪ್ರಾರ್ಥನೆ ಶಾಂತಿಯುತವಾಗಿ ನಡೆಯಿತು. 600 ಜನರು ಭಾಗಿಯಾಗಿದ್ದರು' ಎಂದು ಜಿಲ್ಲಾ ಮ್ಯಾಜಿಸ್ಟ್ರೇಟ್ ರಾಜೇಂದ್ರ ಪೆನ್ಸಿಯಾ ಪತ್ರಕರ್ತರಿಗೆ ತಿಳಿಸಿದರು.

ಸಂಭಲ್‌ನ ಕೋಟ್ ಗರ್ವಿ ಪ್ರದೇಶದಲ್ಲಿರುವ ಮೊಘಲರ ಕಾಲದ ಶಾಹಿ ಜಾಮಾ ಮಸೀದಿಯಲ್ಲಿ ನ್ಯಾಯಾಲಯದ ಆದೇಶದಂತೆ ಅಧಿಕಾರಿಗಳು ನ. 24ರಂದು ಸಮೀಕ್ಷೆ ನಡೆಸಲು ಮುಂದಾದಾಗ ನಡೆದ ಹಿಂಸಾಚಾರದಲ್ಲಿ ನಾಲ್ವರು ಮೃತಪಟ್ಟು, ಹಲವರು ಗಾಯಗೊಂಡಿದ್ದರು. ಡಿಐಜಿ ಜಿ.ಮುನಿರಾಜು ನೇತೃತ್ವದಲ್ಲಿ ಗುರುವಾರ ಸಂಜೆ ಪೊಲೀಸರು ಪಥ ಸಂಚಲನ ನಡೆಸಿದರು.

ತಡವಾಗಿ ಬಂದಿದ್ದಕ್ಕೆ ಎಚ್ಚರಿಸಿದ ಕಾರಣಕ್ಕೆ ಕೃತ್ಯ

ಪ್ರಾಂಶುಪಾಲರನ್ನು ಹತ್ಯೆ ಮಾಡಿರುವ ವಿದ್ಯಾರ್ಥಿ ಮನಸೋಇಚ್ಛೆ ಶಾಲೆಗೆ ಬರುತ್ತಿದ್ದ. ಶಾಲೆಯ ನಿಯಮಗಳನ್ನು ಪಾಲಿಸುತ್ತಿರಲಿಲ್ಲ ಎಂದು ಇದೇ ಶಾಲೆಯ ಶಿಕ್ಷಕರೊಬ್ಬರು ತಿಳಿಸಿದ್ದಾರೆ.

ಪ್ರಾಂಶುಪಾಲರಿಗೆ ಗುಂಡಿಕ್ಕಿದ ವಿದ್ಯಾರ್ಥಿ

ಛತರ್‌ಪುರ (ಪಿಟಿಐ): ಶಾಲೆಗೆ ತಡವಾಗಿ ಹಾಜರಾಗಿದ್ದಕ್ಕೆ ಎಚ್ಚರಿಸಿದ ಪ್ರಾಂಶುಪಾಲರನ್ನು 12ನೇ ತರಗತಿಯ ವಿದ್ಯಾರ್ಥಿಯೊಬ್ಬ ಗುಂಡಿಕ್ಕಿ ಹತ್ಯೆ ಮಾಡಿರುವ ಘಟನೆ ಮಧ್ಯಪ್ರದೇಶದ ಛತರ್‌ಪುರ ಜಿಲ್ಲೆಯಲ್ಲಿ ಶುಕ್ರವಾರ ನಡೆದಿದೆ.

ಕೃತ್ಯದ ಬಳಿಕ ವಿದ್ಯಾರ್ಥಿ ಮತ್ತು ಆತನ ಸಹಪಾಠಿ ಪ್ರಾಂಶುಪಾಲರ ಸ್ಕೂಟರ್‌ನಲ್ಲಿ ಸ್ಥಳದಿಂದ ಪರಾರಿಯಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ದಾಮೋರ ಸರ್ಕಾರಿ ಉನ್ನತೀಕರಿಸಿದ ಶಾಲೆಯ ಶೌಚಾಲಯದ ಬಾಗಿಲಿನ ಬಳಿ ಮಧ್ಯಾಹ್ನ 1:30ಕ್ಕೆ ಪ್ರಾಂಶುಪಾಲ ಎಸ್.ಕೆ ಸಕ್ಸೇನಾ(55) ಅವರ ತಲೆಗೆ ವಿದ್ಯಾರ್ಥಿಯು ಗುಂಡಿಕ್ಕಿದ್ದಾನೆ. ಸಕ್ಸೇನಾ ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ಎಸ್‌ಪಿ ಆಗಮ್ ಜೈನ್ ಅವರು ತಿಳಿಸಿದ್ದಾರೆ.

ಕೃತ್ಯಕ್ಕೆ ಬಳಕೆಯಾಗಿದ್ದ ಪಿಸ್ತೂಲನ್ನು ವಶಕ್ಕೆ ಪಡೆಯಲಾಗಿದೆ. ವಿದ್ಯಾರ್ಥಿಗಳ ಪತ್ತೆಗೆ ತನಿಖೆ ನಡೆಸಲಾಗುತ್ತಿದೆ ಎಂದು ಹೇಳಿದ್ದಾರೆ.

ಶುಕ್ರವಾರ ಸೇರಿದಂತೆ ಹಲವಾರು ದಿನಗಳಿಂದ ತರಗತಿಗೆ ತಡವಾಗಿ ಬರುತ್ತಿದ್ದ ಇಬ್ಬರು ವಿದ್ಯಾರ್ಥಿಗಳನ್ನು ಪ್ರಾಂಶುಪಾಲರು ತರಾಟೆಗೆ ತೆಗೆದುಕೊಂಡು, ಎಚ್ಚರಿಸಿದ್ದರು. ಇದರಿಂದ ಕುಪಿತಗೊಂಡಿದ್ದ ವಿದ್ಯಾರ್ಥಿ ಕೃತ್ಯ ಎಸಗಿದ್ದಾನೆ ಎಂದು ಹೇಳಿದ್ದಾರೆ.

ಸಿಜಿಪಿಎಸ್‌ಸಿ ಪರೀಕ್ಷೆಯಲ್ಲಿ 73ನೇ ರ್‍ಯಾಂಕ್ ಪಡೆದ ಶೈಲೇಂದ್ರ ಕುಮಾರ್

ಸೇವಕ ಈಗ ಸಹಾಯಕ ಆಯುಕ್ತ

ಮುಖ್ಯಾಂಶಗಳು

- ಕುಟುಂಬ ನಿರ್ವಹಣೆಗಾಗಿ ಸೇವಕರಾಗಿದ್ದರು
- ರಾಯಪುರ ಎನ್‌ಐಟಿ ಪದವೀಧರ
- ಐದನೇ ಪ್ರಯತ್ನದಲ್ಲಿ ಯಶಸ್ಸು

ರಾಯಪುರ (ಪಿಟಿಐ): ಛತ್ತೀಸಗಢ ಲೋಕಸೇವಾ ಆಯೋಗದ (ಸಿಜಿಪಿಎಸ್‌ಸಿ) ಕಚೇರಿ ಸೇವಕನಾಗಿ ಏಳು ತಿಂಗಳಿನಿಂದಲೂ ಕರ್ತವ್ಯ ನಿರ್ವಹಿಸುತ್ತಿದ್ದ ಶೈಲೇಂದ್ರ ಕುಮಾರ್ ಬಾಂಧೆ (29), ಇದೀಗ ಸಹಾಯಕ ಆಯುಕ್ತ.

ನಾಲ್ಕು ಬಾರಿ ಪ್ರಯತ್ನದಲ್ಲಿ ವಿಫಲ ಆದರೂ ಸರ್ಕಾರಿ ಅಧಿಕಾರಿಯಾಗಬೇಕು ಎಂಬ ಛಲ, ಗುರಿ ಸಾಧನೆಯತ್ತ ಹೊಂದಿದ್ದ ಬದ್ಧತೆ ಹಾಗೂ ಸತತ ಪರಿಶ್ರಮದಿಂದ ಐದನೇ ಯತ್ನದಲ್ಲಿ ಯಶಸ್ಸನ್ನು ತನ್ನದಾಗಿಸಿಕೊಂಡವರು ಅವರು.

ಸಿಜಿಪಿಎಸ್‌ಸಿ–2023 ಪರೀಕ್ಷೆಯ ಫಲಿತಾಂಶ ಕಳೆದ ವಾರ ಪ್ರಕಟಗೊಂಡಿದೆ. ಸಾಮಾನ್ಯ ವಿಭಾಗದಲ್ಲಿ 73ನೇ ರ್‍ಯಾಂಕ್ ಪಡೆದಿರುವ ಬಾಂಧೆ, ಮೀಸಲಾತಿ ಕೋಟಾದಡಿ ಎರಡನೇ ಸ್ಥಾನ ಪಡೆದಿದ್ದು, ಸಹಾಯಕ ಆಯುಕ್ತರ (ರಾಜ್ಯ ತೆರಿಗೆ) ಹುದ್ದೆಗೆ ನೇಮಕಗೊಳ್ಳುವ ಮೂಲಕ, ಯುವ ಸ್ಪರ್ಧಾಕಾಂಕ್ಷಿಗಳಿಗೆ ಸ್ಫೂರ್ತಿಯಾಗಿದ್ದಾರೆ.

'ಈ ಯಶಸ್ಸು, ಪ್ರತಿ ಹಂತದಲ್ಲೂ ನನ್ನ ಬೆನ್ನಿಗೆ ನಿಂತಿದ್ದ ಪೋಷಕರದ್ದು' ಎನ್ನುತ್ತಾರೆ ರಾಯಪುರ ಎನ್‌ಐಟಿಯ ಮೆಕ್ಯಾನಿಕಲ್ ಎಂಜಿನಿಯರಿಂಗ್ ಪದವೀಧರರಾಗಿರುವ ಶೈಲೇಂದ್ರ.

ಖಾಸಗಿ ಕ್ಷೇತ್ರದಲ್ಲಿ ಹಲವು ಅವಕಾಶಗಳಿದ್ದರೂ, ಸರ್ಕಾರಿ ಅಧಿಕಾರಿಯಾಗಬೇಕೆಂಬ ತಮ್ಮ ಕನಸನ್ನು ನನಸಾಗಿಸಿಕೊಂಡ ಬಾಂಧೆ, ಬಿಲಾಸ್ಪುರ ಜಿಲ್ಲೆಯ ಬಿಟ್ಕುಲಿ ಗ್ರಾಮದ ಪರಿಶಿಷ್ಟ ಜಾತಿಯ ಕೃಷಿ ಕುಟುಂಬವೊಂದರಲ್ಲಿ ಜನಿಸಿದವರು.

'ಘನತೆಯಿದೆ'



'ಈ ವರ್ಷದ ಫೆಬ್ರುವರಿಯಲ್ಲಿ ನಡೆದ ಸಿಜಿಪಿಎಸ್‌ಸಿ–2023ರ ಪ್ರಾಥಮಿಕ ಪರೀಕ್ಷೆಯಲ್ಲಿ ಉತ್ತೀರ್ಣನಾಗಿದ್ದೆ. ಸರ್ಕಾರಿ ಅಧಿಕಾರಿಯಾಗಬೇಕು ಎಂಬ ಗುರಿ ಸಾಧನೆಗಾಗಿ ಮುಖ್ಯ ಪರೀಕ್ಷೆಗೆ ತಯಾರಿ ನಡೆಸಿದ್ದೆ. ಈ ಹಂತದಲ್ಲಿ ಮೇ ತಿಂಗಳಲ್ಲಿ ಸಿಜಿಪಿಎಸ್‌ಸಿ ಕಚೇರಿಯ ಸೇವಕನಾಗಿ ನೇಮಕಗೊಂಡೆ. ಸೇವಕನ ಕೆಲಸಕ್ಕೆ ಸೇರಿದ ನಂತರವೂ ನನ್ನ ಸಿದ್ಧತೆಯನ್ನು ಮುಂದುವರಿಸಿದ್ದೆ' ಎಂದು ಶೈಲೇಂದ್ರ ತಿಳಿಸಿದರು.

'ಸೇವಕನಾಗಿ ಕೆಲಸ ಮಾಡುವಾಗ ಸಾಕಷ್ಟು ನಿಂದನೆ ಎದುರಿಸಿದೆ. ಕೆಲವರು ಗೇಲಿ ಮಾಡಿದರು. ನಾನು ಅದರತ್ತ ಗಮನವನ್ನೇ ನೀಡಲಿಲ್ಲ. ಪ್ರತಿ ಹಂತದಲ್ಲೂ ಕುಟುಂಬ ನನ್ನ ಬೆನ್ನಿಗಿತ್ತು' ಎಂದು 'ಡಿ' ದರ್ಜೆಯ ನೌಕರನಾಗಿ ಕೆಲಸ ಮಾಡುತ್ತಿದ್ದುದಕ್ಕೆ ಸಂಬಂಧಿಸಿದ ಪ್ರಶ್ನೆಗಳಿಗೆ ಬಾಂಧೆ ಪ್ರತಿಕ್ರಿಯಿಸಿದರು.

ಮಸೂದ್ ವಿರುದ್ಧ ಕ್ರಮಕ್ಕೆ ಆಗ್ರಹ

ನವದೆಹಲಿ (ಪಿಟಿಐ): ಭಯೋತ್ಪಾದಕ ಸಂಘಟನೆ ಜೈಷ್–ಇ–ಮೊಹಮ್ಮದ್ ಮುಖ್ಯಸ್ಥ ಮಸೂದ್ ಅಜರ್ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಪಾಕಿಸ್ತಾನಕ್ಕೆ ಭಾರತ ಒತ್ತಾಯಿಸಿದೆ. ಪಾಕಿಸ್ತಾನದ ಬಹವಾಲ್ಪುರದಲ್ಲಿ ಇತ್ತೀಚೆಗೆ ನಡೆದ ಸಭೆಯೊಂದರಲ್ಲಿ ಅಜರ್ ಭಾಷಣ ಮಾಡಿದ್ದಾನೆ ಎಂದು ವರದಿಗಳಾಗಿವೆ.

'ಈ ಕುರಿತು ಪ್ರತಿಕ್ರಿಯಿಸಿರುವ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ 'ಇದು ನಿಜವಾಗಿದ್ದಲ್ಲಿ ಭಯೋತ್ಪಾದನೆ ಕುರಿತು ಪಾಕಿಸ್ತಾನದ ದ್ವಿಮುಖ ಧೋರಣೆಯನ್ನು ಬಹಿರಂಗ ಪಡಿಸುತ್ತದೆ. ಭಾರತದ ಗಡಿ ಬಳಿ ನಡೆದಿರುವ ಭಯೋತ್ಪಾದನಾ ಚಟುವಟಿಕೆಗಳಲ್ಲಿ ಆತ ಭಾಗಿಯಾಗಿದ್ದಾನೆ' ಎಂದರು.

ಸಿಂಘ್ವಿ ಆಸನದಲ್ಲಿ ನೋಟಿನ ಕಂತೆ

ಒಂದನೇ ಪುಟದಿಂದ...

'ನೋಟುಗಳು ನಕಲಿಯೋ ಅಥವಾ ಅಸಲಿಯೋ ಎಂಬುದು ತಿಳಿದು ಬಂದಿಲ್ಲ. ಕಂತೆಯಲ್ಲಿ ₹500ರ ನೂರು ನೋಟುಗಳಿದ್ದವು. ಸದನದ ಶಿಷ್ಟಾಚಾರದಂತೆ ತನಿಖೆಗೆ ಆದೇಶಿಸಲಾಗಿದೆ' ಎಂದು ಧನಕರ್ ಅವರು ಶುಕ್ರವಾರ ಬೆಳಿಗ್ಗೆ ಮಾಹಿತಿ ನೀಡಿದರು.

'ನೋಟುಗಳು ತಮಗೆ ಸೇರಿದ್ದು ಎಂದು ಕೇಳಿಕೊಂಡು ಯಾರಾದರೂ ಬರುತ್ತಾರೆ ಎಂದು ನಿರೀಕ್ಷಿಸುತ್ತಿದ್ದೆ. ಆದರೆ ಇದುವರೆಗೆ ಯಾರೂ ನನ್ನ ಬಳಿ ಬಂದಿಲ್ಲ' ಎಂದರು.

ನೋಟಿನ ಕಂತೆ ದೊರೆತ ವಿಷಯವನ್ನು ಧನಕರ್ ಪ್ರಸ್ತಾಪಿಸುತ್ತಿದ್ದಂತೆಯೇ ಬಿಜೆಪಿ, ಕಾಂಗ್ರೆಸ್ ಸದಸ್ಯರು ಪರಸ್ಪರ ಆರೋಪ– ಪ್ರತ್ಯಾರೋಪದಲ್ಲಿ ತೊಡಗಿದರು. ತನಿಖೆ ಪೂರ್ಣಗೊಳ್ಳುವ ಮುನ್ನವೇ ಸಭಾಪತಿಯವರು ಸದಸ್ಯರ ಹೆಸರು ಬಹಿರಂಗಪಡಿಸಿದ್ದಕ್ಕೆ ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರು ಆಕ್ಷೇಪ ವ್ಯಕ್ತಪಡಿಸಿದರು.

ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು, 'ಹೆಸರು ಹೇಳಿದ್ದಕ್ಕೆ ಆಕ್ಷೇಪಣೆ ಏಕೆ? ಸಭಾಪತಿಯವರು ಆಸನ ಸಂಖ್ಯೆ ಮತ್ತು ಅದರಲ್ಲಿ ಕುಳಿತುಕೊಳ್ಳುವವರ ಹೆಸರನ್ನು ಹೇಳಿದ್ದಾರೆ. ಅದರಲ್ಲಿ ತಪ್ಪು ಏನಿದೆ' ಎಂದು ಅವರು ಕೇಳಿದರು.

ಮಧ್ಯಾಹ್ನ ವಿರಾಮದ ಬಳಿಕ ಕಲಾಪ ಪುನರಾರಂಭ ಆಗುತ್ತಿದ್ದಂತೆಯೇ ಬಿಜೆಪಿ ಸದಸ್ಯರು ಘೋಷಣೆಗಳನ್ನು ಕೂಗಿದರಲ್ಲದೆ, ಕಾಂಗ್ರೆಸ್ ಪಕ್ಷ ಇದಕ್ಕೆ ಉತ್ತರಿಸಬೇಕು ಎಂದು ಒತ್ತಾಯಿಸಿ ಗದ್ದಲ ಎಬ್ಬಿಸಿದರು.

ಸಭಾಪತಿ ಪೀಠದಲ್ಲಿದ್ದ ಹರಿವಂಶ್ ಅವರು ಸದಸ್ಯರನ್ನು ಸಮಾಧಾನಪಡಿಸಲು ಪ್ರಯತ್ನಿಸಿದರು. ಕಲಾಪಕ್ಕೆ ಅಡ್ಡಿಪಡಿಸಬಾರದು ಎಂದು ಮನವಿ ಮಾಡಿದರೂ ಗದ್ದಲ ಕಡಿಮೆಯಾಗಲಿಲ್ಲ. ಇದರಿಂದ ಕಲಾಪವನ್ನು ಸೋಮವಾರಕ್ಕೆ ಮುಂದೂಡಲಾಯಿತು.

ಕೆಲವು ವಿಷಯಗಳಲ್ಲಿ ನೀವು (ವಿಪಕ್ಷ) ತನಿಖೆಗೆ ಉತ್ಸಾಹವನ್ನು ತೋರಿಸುತ್ತೀರಿ. ಆದರೆ, ಕೆಲವು ವಿಷಯಗಳನ್ನು ಮುಚ್ಚಿಡಲು ಬಯಸುತ್ತೀರಿ

ಜೆ.ಪಿ.ನಡ್ಡಾ

ರಾಜ್ಯಸಭೆಯಲ್ಲಿ ಬಿಜೆಪಿ ನಾಯಕ

₹500ರ ಒಂದು ನೋಟು ಮಾತ್ರ ಇತ್ತು: ಸಿಂಘ್ವಿ

ತಮ್ಮ ಆಸನದಲ್ಲಿ ನೋಟಿನ ಕಂತೆ ದೊರೆತ ಘಟನೆಯು ಅಚ್ಚರಿ ಉಂಟುಮಾಡಿದೆ ಎಂದಿರುವ ಅಭಿಷೇಕ್ ಮನು ಸಿಂಘ್ವಿ, 'ಭದ್ರತಾ ಲೋಪ'ದ ಬಗ್ಗೆ ತನಿಖೆ ನಡೆಯಬೇಕು ಎಂದು ಒತ್ತಾಯಿಸಿದರು.

ಪ್ರತಿ ಆಸನದ ಸುತ್ತಲೂ ಮುಳ್ಳುತಂತಿ ಹಾಕಬೇಕು ಅಥವಾ ಸಂಸದರು ಮನೆಗೆ ಹೋಗುವ ಮೊದಲು ತಮ್ಮ ಆಸನಕ್ಕೆ ಬೀಗ ಹಾಕಲು ಅನುವು ಮಾಡಿಕೊಡುವಂತೆ ಗಾಜಿನ ಆವರಣ ನಿರ್ಮಿಸಬೇಕು ಎಂದು ವ್ಯಂಗ್ಯವಾಡಿದರು.

'ಇಂತಹ ಘಟನೆಯನ್ನು ಇದುವರೆಗೂ ಕೇಳಿರಲಿಲ್ಲ. ನಾನು ರಾಜ್ಯಸಭೆಗೆ ಹೋಗುವಾಗ ₹500ರ ಒಂದು ನೋಟು ಮಾತ್ರ ಕೊಂಡೊಯ್ಯುತ್ತೇನೆ. ಗುರುವಾರ ಮಧ್ಯಾಹ್ನ 12.57ಕ್ಕೆ ಸದನದ ಒಳಗೆ ಬಂದೆ. 1 ಗಂಟೆಗೆ ಕಲಾಪ ಕೊನೆಗೊಂಡಾಗ ಹೊರಬಂದೆ. ಮಧ್ಯಾಹ್ನ 1.30ರವರೆಗೆ ಕ್ಯಾಂಟೀನ್‌ನಲ್ಲಿ ಇದ್ದು, ಆ ಬಳಿಕ ಸಂಸತ್ ಆವರಣದಿಂದ ಹೊರಬಂದೆ' ಎಂದು ಹೇಳಿದ್ದಾರೆ.

'ನಾನು ಸದನದಲ್ಲಿ ಒಟ್ಟು ಮೂರು ನಿಮಿಷ ಹಾಗೂ ಸಂಸತ್ ಆವರಣದಲ್ಲಿ 30 ನಿಮಿಷ ಮಾತ್ರ ಇದ್ದೆ. ಇಂತಹ ವಿಷಯಗಳನ್ನು ರಾಜಕೀಯಗೊಳಿಸುವುದು ವಿಲಕ್ಷಣವಾಗಿ ಕಾಣಿಸುತ್ತದೆ. ಜನರು ಸಂಸತ್ ಒಳಗೆ ಬಂದು ತಮಗೆ ತೋಚಿದಲ್ಲಿ ಏನು ಬೇಕಾದರೂ ಇಡಬಹುದು ಅಂದರೆ ಏನರ್ಥ? ಈ ಬಗ್ಗೆ ತನಿಖೆ ನಡೆಯಬೇಕು' ಎಂದು ಅವರು ಒತ್ತಾಯಿಸಿದ್ದಾರೆ.

ಸರ್ಕಾರಿ ನೇಮಕಾತಿ: ಪೊಲೀಸ್ ಅಧಿಕಾರಿಗಳಿಗೆ 'ಸುಪ್ರೀಂ' ಸೂಚನೆ

ನವದೆಹಲಿ (ಪಿಟಿಐ): ಸರ್ಕಾರಿ ಉದ್ಯೋಗಕ್ಕೆ ಆಯ್ಕೆಯಾಗುವ ಅಭ್ಯರ್ಥಿಗಳು ಸಲ್ಲಿಸುವ ನಡವಳಿಕೆ, ಪೂರ್ವಾಪರ, ರಾಷ್ಟ್ರೀಯತೆಗೆ ಸಂಬಂಧಿಸಿದ ದಾಖಲೆಗಳ ಪರಿಶೀಲನೆಯನ್ನು ನೇಮಕಾತಿ ನಡೆದ ಆರು ತಿಂಗಳ ಒಳಗಾಗಿ ನಡೆಸುವಂತೆ ಎಲ್ಲ ರಾಜ್ಯಗಳ ಪೊಲೀಸ್ ಅಧಿಕಾರಿಗಳಿಗೆ ಸುಪ್ರೀಂ ಕೋರ್ಟ್ ಸೂಚನೆ ನೀಡಿದೆ.

ನ್ಯಾಯಮೂರ್ತಿ ಜೆ.ಕೆ.ಮಹೇಶ್ವರಿ ಮತ್ತು ಆರ್.ಮಹದೇವನ್ ಅವರನ್ನು ಒಳಗೊಂಡ ನ್ಯಾಯಪೀಠವು ಡಿ.5ರಂದು ಈ ಆದೇಶ ಹೊರಡಿಸಿದೆ. ಅಭ್ಯರ್ಥಿಗಳ ದಾಖಲಾತಿ ಪರಿಶೀಲನೆ ಬಳಿಕವಷ್ಟೇ ಸರ್ಕಾರಿ ಹುದ್ದೆಯನ್ನು ಖಚಿತಪಡಿಸಬೇಕು ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಸಹಾಯಕ ನೇತ್ರ ತಜ್ಞರೊಬ್ಬರನ್ನು ನಿವೃತ್ತಿ ಪಡೆಯುವ ಎರಡು ತಿಂಗಳ ಮೊದಲು ಕೆಲಸದಿಂದ ತೆಗೆದುಹಾಕಿದ್ದ ನಿರ್ಧಾರವನ್ನು ವಜಾಗೊಳಿಸಿ ಕೋರ್ಟ್ ಈ ಆದೇಶ ನೀಡಿದೆ.

ಕಾಲೇಜು ಆವರಣದಲ್ಲಿ ಮಸೀದಿ ವಿದ್ಯಾರ್ಥಿಗಳ ಪ್ರತಿಭಟನೆ

ವಾರಾಣಸಿ (ಪಿಟಿಐ): ವಾರಾಣಸಿಯ ಉದೈ ಪ್ರತಾಪ್ ಕಾಲೇಜಿನ ಆವರಣದಲ್ಲಿರುವ ಮಸೀದಿಯನ್ನು ತೆರವುಗೊಳಿಸುವಂತೆ 500 ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು.

ಶುಕ್ರವಾರ ಕೇಸರಿ ಧ್ವಜ ಹಿಡಿದು 'ಜೈ ಶ್ರೀ ರಾಮ್' ಘೋಷಣೆ ಕೂಗುತ್ತ ಕಾಲೇಜಿನ ಗೇಟ್ ಬಳಿ ವಿದ್ಯಾರ್ಥಿಗಳು ಬಂದರು. ವಿದ್ಯಾರ್ಥಿಗಳು ಕಾಲೇಜು ಆವರಣವನ್ನು ಪ್ರವೇಶಿಸುವುದನ್ನು ಪೊಲೀಸರು ತಡೆಯಿತು.

ಮಂಗಳವಾರದಂದು 'ನಮಾಜ್' ನಡೆಯುತ್ತಿದ್ದ ವೇಳೆ ಕೆಲ ವಿದ್ಯಾರ್ಥಿಗಳು ಮಸೀದಿ ಬಳಿ ಹನುಮಾನ್ ಚಾಲೀಸಾ ಪಠಿಸಿದ್ದರು. ಇದಾದ ಬಳಿಕ ಸ್ಥಳದಲ್ಲಿ ಉದ್ವಿಗ್ನತೆ ಶುರುವಾಗಿದೆ.

'ಕಾಲೇಜು ಭೂಮಿ ವಕ್ಫ್ ಆಸ್ತಿಯಲ್ಲ. ಹೀಗಾಗಿ ಈ ಮಸೀದಿಯನ್ನು ತೆರವುಗೊಳಿಸಬೇಕು. ಇಲ್ಲಿ ನಮಾಜ್ ಮಾಡಬಹುದಾದರೆ ಹನುಮಾನ್ ಚಾಲೀಸಾವನ್ನೂ ಪಠಿಸಬಹುದು' ಎಂದು ಮಾಜಿ ವಿದ್ಯಾರ್ಥಿಗಳ ಒಕ್ಕೂಟದ ವಿವೇಕಾನಂದ ಸಿಂಗ್ ಹೇಳಿದರು.

ಈ ನಡುವೆ ವಿದ್ಯಾರ್ಥಿಗಳು, ಮಸೀದಿಯ ಮಾಲೀಕತ್ವದ ಕುರಿತು 15 ದಿನಗಳ ಒಳಗಾಗಿ ಪ್ರತಿಕ್ರಿಯಿಸುವಂತೆ ಉತ್ತರ ಪ್ರದೇಶದ ವಕ್ಫ್ ಮಂಡಳಿಗೆ ಪತ್ರ ನೀಡಿದ್ದಾರೆ.

ಈಶಾನ್ಯ ಭಾಗವನ್ನು ನಿರ್ಲಕ್ಷಿಸಿದ್ದ ಹಿಂದಿನ ಸರ್ಕಾರಗಳು: ಪ್ರಧಾನಿ



'ಅಷ್ಟಲಕ್ಷ್ಮಿ ಮಹೋತ್ಸವ'ದಲ್ಲಿ ಪ್ರಧಾನಿ ಮೋದಿ, ಕೇಂದ್ರ ಈಶಾನ್ಯ ಪ್ರದೇಶದ ಅಭಿವೃದ್ಧಿ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಮತ್ತು ಕೇಂದ್ರದ ರಾಜ್ಯ ಸಚಿವ ಸುಕಾಂತ ಮಜುಂದಾರ್ ಪಾಲ್ಗೊಂಡರು

ನವದೆಹಲಿ (ಪಿಟಿಐ): ಈಶಾನ್ಯ ಪ್ರದೇಶದಲ್ಲಿ ಕಡಿಮೆ ಜನಸಂಖ್ಯೆ ಮತ್ತು ಮತಗಳು ಇದ್ದ ಕಾರಣ ಈ ಭಾಗದ ಪ್ರಗತಿಗೆ ಹಿಂದಿನ ಸರ್ಕಾರಗಳು ಹೆಚ್ಚಿನ ಒತ್ತು ನೀಡಿಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ಅಷ್ಟಲಕ್ಷ್ಮಿ ಮಹೋತ್ಸವ ಉದ್ಘಾಟಿಸಿ ಮಾತನಾಡಿದ ಅವರು, 'ಈ ಭಾಗಕ್ಕೆ ಸಚಿವಾಲಯವೊಂದನ್ನು ಮೀಸಲಿರಿಸಿದ ಹೆಗ್ಗಳಿಕೆ ವಾಜಪೇಯಿ ಅವರಿಗೆ ಸಲ್ಲುತ್ತದೆ. ಈ ಭಾಗದ ಅಭಿವೃದ್ಧಿಗೆ ಪ್ರತಿ ಸಚಿವಾಲಯಕ್ಕೆ ಬಜೆಟ್‌ನಲ್ಲಿ ಅವರು ಶೇ 20 ಮೀಸಲಿರಿಸಿದ್ದರು' ಎಂದರು.

'ಕಳೆದ ಹತ್ತು ವರ್ಷಗಳಲ್ಲಿ ಈಶಾನ್ಯ ಭಾಗದಲ್ಲಿ ಸಾಕಷ್ಟು ಅಭಿವೃದ್ಧಿ ಕಂಡಿದ್ದೇವೆ. ಇದು ಸುಲಭದ ಕೆಲಸವಾಗಿರಲಿಲ್ಲ. ಭಾರತದ ಪ್ರಗತಿಯೊಂದಿಗೆ ಈಶಾನ್ಯ ರಾಜ್ಯಗಳನ್ನೂ ಸೇರಿಸಲು ನಾವು ಸಾಧ್ಯವಾದಷ್ಟು ಕ್ರಮಗಳನ್ನು ಕೈಗೊಂಡಿದ್ದೇವೆ. ಮುಂಬರುವ ದಿನಗಳಲ್ಲಿ ಪೂರ್ವ ಭಾರತ ಮತ್ತು ಈಶಾನ್ಯ ಭಾಗಗಳು ಸಾಕಷ್ಟು ಅಭಿವೃದ್ಧಿ ಕಾಣಲಿವೆ ' ಎಂದು ಹೇಳಿದರು.

'ಕಳೆದ ಹತ್ತು ವರ್ಷಗಳಲ್ಲಿ ದೆಹಲಿ ಹಾಗೂ ಈಶಾನ್ಯ ಜನರ ನಡುವಿನ ಕಂದಕ ತಗ್ಗಿಸಲು ನಮ್ಮ ಸರ್ಕಾರ ಸಾಕಷ್ಟು ಪ್ರಯತ್ನ ಮಾಡಿದೆ. ಕೇಂದ್ರದ ಸಚಿವರು ಹತ್ತು ವರ್ಷಗಳಲ್ಲಿ 700 ಬಾರಿ ಈಶಾನ್ಯ ಭಾಗಕ್ಕೆ ಭೇಟಿ ನೀಡಿದ್ದಾರೆ' ಎಂದರು.

ಮೊದಲ ಬಾರಿಗೆ ಅಷ್ಟಲಕ್ಷ್ಮಿ ಮಹೋತ್ಸವವನ್ನು ಇಲ್ಲಿನ ಭಾರತ ಮಂಟಪದಲ್ಲಿ ಡಿ.6ರಿಂದ 8ರವರೆಗೆ ಆಚರಿಸಲಾಗುತ್ತಿದೆ. ಈ ಉತ್ಸವವು ಈಶಾನ್ಯ ಭಾಗದ ಎಂಟು ರಾಜ್ಯಗಳ ಸೌಂದರ್ಯ, ವೈವಿಧ್ಯ ಪ್ರದರ್ಶಿಸುವ ಗುರಿ ಹೊಂದಿದೆ. ಇವೆಲ್ಲವನ್ನೂ ಒಟ್ಟಾಗಿ 'ಅಷ್ಟಲಕ್ಷ್ಮಿ' ಎಂದು ಕರೆಯಲಾಗುತ್ತಿದೆ.

ಮಣಿಪುರ ಸಂಘರ್ಷ: ಮೋದಿಗೆ ಪತ್ರ

ಗುವಾಹಟಿ: ಮಣಿಪುರ ಸಂಘರ್ಷ ವಿಚಾರವಾಗಿ ದೆಹಲಿಯ ಜಂತರ್‌ಮಂತರ್‌ನಲ್ಲಿ ಪ್ರತಿಭಟನೆ ನಡೆಸಲು ಅವಕಾಶ ನಿರಾಕರಿಸಿದ ನಂತರ, ರಾಜ್ಯದ 'ಇಂಡಿಯಾ ಒಕ್ಕೂಟ'ದ ನಾಯಕರು ಬಿಕ್ಕಟ್ಟು ಪರಿಹಾರಕ್ಕಾಗಿ ಪ್ರಧಾನಿ ನರೇಂದ್ರ ಮೋದಿ ಅವರು ರಾಜ್ಯಕ್ಕೆ ಭೇಟಿ ನೀಡಬೇಕು ಎಂದು ಆಹ್ವಾನಿಸಿದರು.

ಕಾಂಗ್ರೆಸ್ ನೇತೃತ್ವದಲ್ಲಿ 10 ವಿಪಕ್ಷಗಳ ನಾಯಕರು ಈ ಸಂಬಂಧ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿದ್ದಾರೆ. ಅದರಲ್ಲಿ, 'ಡಿಸೆಂಬರ್ 31ರ ಒಳಗಾಗಿ ರಾಜ್ಯಕ್ಕೆ ಭೇಟಿ ನೀಡಿ. ಅದು ಸಾಧ್ಯವಾಗದಿದ್ದರೆ, ಬಿಕ್ಕಟ್ಟಿಗೆ ಪರಿಹಾರ ಕಂಡುಹಿಡಿಯಲು ದೆಹಲಿಯ ಪ್ರಧಾನಿಗಳ ಅಧಿಕೃತ ನಿವಾಸ ಅಥವಾ ಕಾರ್ಯಾಲಯದಲ್ಲಿ ರಾಜ್ಯದ ಸರ್ವ ಪಕ್ಷಗಳ ನಾಯಕರ ಸಭೆ ಕರೆಯಿರಿ' ಎನ್ನಲಾಗಿದೆ.

ಬಿಪಿಎಸ್‌ಸಿ ಆಕಾಂಕ್ಷಿಗಳಿಗೆ ಲಾಠಿ ಏಟು



ಪ್ರತಿಭಟನಕಾರರನ್ನು ಚದುರಿಸಲು ಪೊಲೀಸರು ಲಾಠಿ ಬೀಸಿದರು – ಪಿಟಿಐ ಚಿತ್ರ

ಪಟ್ನಾ (ಪಿಟಿಐ): ಪೂರ್ವಭಾವಿ ಪರೀಕ್ಷೆಯ ನಿಯಮಗಳಿಗೆ ತಂದಿರುವ ಬದಲಾವಣೆಯನ್ನು ಹಿಂಪಡೆಯುವಂತೆ ಒತ್ತಾಯಿಸಿ ಪಟ್ನಾದ ಬಿಹಾರ ಲೋಕಸೇವಾ ಆಯೋಗದ (ಬಿಪಿಎಸ್‌ಸಿ) ಕಚೇರಿಗೆ ಮುತ್ತಿಗೆ ಹಾಕಲು ಯತ್ನಿಸಿದ ಗುಂಪನ್ನು ಚದುರಿಸಲು ಪೊಲೀಸರು ಶುಕ್ರವಾರ ಲಾಠಿ ಪ್ರಹಾರ ನಡೆಸಿದರು.

'ಕಚೇರಿಗೆ ಮುತ್ತಿಗೆ ಹಾಕಲು ಬಿಪಿಎಸ್‌ಸಿ ಆಕಾಂಕ್ಷಿಗಳ ದೊಡ್ಡ ಗುಂಪು ನಗರದ ಬೈಲಿ ರಸ್ತೆಯಲ್ಲಿ ಸೇರಿದೆ' ಎಂದು ಎಸ್‌ಎಸ್‌ಪಿ ರಾಜೀವ್ ಮಿಶ್ರಾ ತಿಳಿಸಿದರು.

'ಬಿಪಿಎಸ್‌ಸಿ ಕಚೇರಿಯತ್ತ ಮುನ್ನುಗ್ಗುವುದನ್ನು ಪೊಲೀಸರು ತಡೆದಾಗ, ಪ್ರತಿಭಟನೆಯಲ್ಲಿ ನಿರತರಾದವರು ರಸ್ತೆಯಲ್ಲೇ ಕುಳಿತರು. ಇದರಿಂದ ವಾಹನಗಳ ಸಂಚಾರಕ್ಕೆ ಅಡ್ಡಿ ಉಂಟಾಯಿತು. ಸ್ಥಳದಿಂದ ತೆರಳುವಂತೆ ಪೊಲೀಸರು ಮನವಿ ಮಾಡಿದರೂ, ಅಲ್ಲಿಂದ ಕದಲಲಿಲ್ಲ. ಲಾಠಿ ಪ್ರಹಾರ ನಡೆಸಿ ಚದುರಿಸಲಾಯಿತು' ಎಂದರು.

ಲಾಠಿ ಪ್ರಹಾರದಲ್ಲಿ ಮೂವರು ಗಾಯಗೊಂಡಿದ್ದಾರೆ ಎಂದು ಪ್ರತ್ಯಕ್ಷದರ್ಶಿಗಳು ಆರೋಪಿಸಿದ್ದಾರೆ. ಆದರೆ, ಮಿಶ್ರಾ ಅವರು ಆರೋಪವನ್ನು ತಳ್ಳಿಹಾಕಿದ್ದಾರೆ.

ಪೂರ್ವಭಾವಿ ಪರೀಕ್ಷೆಯ ನಿಯಮಗಳಿಗೆ ಯಾವುದೇ ಬದಲಾವಣೆ ತಂದಿಲ್ಲ ಎಂದು ಬಿಪಿಎಸ್‌ಸಿ ಸ್ಪಷ್ಟಪಡಿಸಿದೆ. 70ನೇ ಬಿಪಿಎಸ್‌ಸಿ ಕಂಬೈನ್ಡ್ (ಪೂರ್ವಭಾವಿ) ಪರೀಕ್ಷೆ ಡಿಸೆಂಬರ್ 13ರಂದು ನಡೆಯಲಿದೆ. ರಾಜ್ಯದಾದ್ಯಂತ 925 ಪರೀಕ್ಷಾ ಕೇಂದ್ರಗಳಲ್ಲಿ ಸುಮಾರು ಐದು ಲಕ್ಷ ಅಭ್ಯರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ.

ಮಹಾರಾಷ್ಟ್ರ: ಶಿವಸೇನಾಗೆ ನಗರಾಭಿವೃದ್ಧಿ ಖಾತೆ ಸಾಧ್ಯತೆ

ಮುಂದಿನ ವಾರ ಸಂಪುಟ ವಿಸ್ತರಣೆ?

ಮುಂಬೈ (ಪಿಟಿಐ): ದೇವೇಂದ್ರ ಫಡಣವೀಸ್ ನೇತೃತ್ವದ ಮಹಾರಾಷ್ಟ್ರ ಸರ್ಕಾರದ ಸಂಪುಟ ವಿಸ್ತರಣೆ ಡಿಸೆಂಬರ್ 11 ಅಥವಾ 12ರಂದು ನಡೆಯಲಿದೆ ಎಂದು ಮೂಲಗಳು ಶುಕ್ರವಾರ ತಿಳಿಸಿವೆ.

ಏಕನಾಥ ಶಿಂದೆ ನಾಯಕತ್ವದ ಹಿಂದಿನ ಸರ್ಕಾರದಲ್ಲಿ ಇದ್ದಂತೆ ಅಜಿತ್ ಪವಾರ್ ನೇತೃತ್ವದ ಎನ್‌ಸಿಪಿಯು ಹಣಕಾಸು ಖಾತೆ ಮತ್ತು ಬಿಜೆಪಿಯು ಗೃಹ ಖಾತೆಯನ್ನು ತಮ್ಮಲ್ಲೇ ಉಳಿಸಿಕೊಳ್ಳುವ ಸಾಧ್ಯತೆಗಳಿವೆ.

ಶಿವಸೇನಾ, ನಗರಾಭಿವೃದ್ಧಿ ಖಾತೆಯನ್ನು ತನ್ನಲ್ಲೇ ಉಳಿಸಿಕೊಳ್ಳುವ ಜತೆಯಲ್ಲಿ ಕಂದಾಯ ಖಾತೆಯನ್ನೂ ಪಡೆಯಲಿದೆ ಎಂದು ಪಕ್ಷದ ಮೂಲಗಳು ಹೇಳಿವೆ. ಮಹಾರಾಷ್ಟ್ರ ಸಂಪುಟವು ಮುಖ್ಯಮಂತ್ರಿ ಸೇರಿದಂತೆ ಗರಿಷ್ಠ 43 ಸಚಿವರನ್ನು ಹೊಂದಬಹುದು.

'ಮಹಾಯುತಿ' ಮೈತ್ರಿಕೂಟದಲ್ಲಿ ಹೆಚ್ಚು ಸ್ಥಾನಗಳನ್ನು ಗೆದ್ದಿರುವ ಬಿಜೆಪಿಯು 21–22 ಖಾತೆಗಳನ್ನು ಪಡೆಯಬಹುದು. ಶಿವಸೇನಾಗೆ 11ರಿಂದ 12 ಹಾಗೂ ಎನ್‌ಸಿಪಿಗೆ 9ರಿಂದ 10 ಖಾತೆಗಳು ಸಿಗಬಹುದು ಎಂದು ಮೂಲಗಳು ತಿಳಿಸಿವೆ.

ಪ್ರಮಾಣ ವಚನ ಸ್ವೀಕರಿಸುವ ಸಚಿವರ ಒಟ್ಟು ಸಂಖ್ಯೆ ಎಷ್ಟು ಎಂಬುದು ಇನ್ನೆರಡು ದಿನಗಳಲ್ಲಿ ಅಂತಿಮಗೊಳ್ಳಲಿದೆ ಎಂದು ಬಿಜೆಪಿ ಮುಖಂಡರೊಬ್ಬರು ತಿಳಿಸಿದರು.

ಶನಿವಾರ ಆರಂಭವಾಗಲಿರುವ ವಿಧಾನಸಭೆಯ ಮೂರು ದಿನಗಳ ವಿಶೇಷ ಅಧಿವೇಶನದಲ್ಲಿ ಹಂಗಾಮಿ ಸ್ಪೀಕರ್ ಕಾಳಿದಾಸ್ ಕೊಲಂಬ್ಕರ್ ಅವರು ನೂತನ ಶಾಸಕರಿಗೆ ಪ್ರಮಾಣ ವಚನ ಬೋಧಿಸಲಿದ್ದಾರೆ. ಸ್ಪೀಕರ್ ಚುನಾವಣೆ ಡಿಸೆಂಬರ್ 9ರಂದು ನಡೆಯಲಿದ್ದು, ವಿಧಾನಸಭೆಯ ಚಳಿಗಾಲದ ಅಧಿವೇಶನ ಡಿಸೆಂಬರ್ 16ರಂದು ನಾಗ್ಪುರದಲ್ಲಿ ಆರಂಭವಾಗಲಿದೆ.

ಶಿಂದೆ ಇಲ್ಲದೆಯೂ 'ಪ್ರಮಾಣವಚನ'ಕ್ಕೆ ಬಿಜೆಪಿ ಸಿದ್ಧವಿತ್ತು: ರಾವುತ್

ಏಕನಾಥ ಶಿಂದೆ ಅವರು ಮಹಾರಾಷ್ಟ್ರ ಉಪ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಲೇಬೇಕಿತ್ತು. ಶಿಂದೆ ಅವರು ಮೊಂಡುತನ ಮುಂದುವರಿಸಿದ್ದರೆ ಅವರು ಇಲ್ಲದೆಯೇ ಪ್ರಮಾಣ ವಚನ ಕಾರ್ಯಕ್ರಮ ನಡೆಸಲು ಬಿಜೆಪಿಯ ಹೈಕಮಾಂಡ್ ರಾಜ್ಯ ನಾಯಕರಿಗೆ ಸೂಚಿಸಿತ್ತು ಎಂದು ಶಿವಸೇನಾ (ಉದ್ಧವ್ ಬಣ) ನಾಯಕ ಸಂಜಯ್ ರಾವುತ್ ಶುಕ್ರವಾರ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಬಹುಮತ ಪಡೆದಿದ್ದರೂ ರಾಜ್ಯ ಸರ್ಕಾರದಲ್ಲಿ ಸಂಪುಟ ರಚನೆ ಪೂರ್ಣಗೊಂಡಿಲ್ಲ. 'ಮಹಾಯುತಿ'ಯ ಒಳಗೆ ಏನೋ ಸರಿ ಇಲ್ಲ ಎಂಬುದನ್ನು ಇದು ಸೂಚಿಸುತ್ತದೆ. ಬಿಜೆಪಿಯು ಸರ್ಕಾರ ರಚನೆಗೆ 15 ದಿನ ತೆಗೆದುಕೊಂಡಿದೆ' ಎಂದರು.

ಗೃಹ ಖಾತೆ ಉಳಿಸಿಕೊಂಡ ಸೋರೇನ್

ರಾಂಚಿ (ಪಿಟಿಐ): ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೋರೇನ್ ಅವರು ಶುಕ್ರವಾರ ತಮ್ಮ ಸಂಪುಟದ ಸಚಿವರಿಗೆ ಖಾತೆಗಳ ಹಂಚಿಕೆ ಮಾಡಿದ್ದು, ಗೃಹ ಖಾತೆಯನ್ನು ತಮ್ಮಲ್ಲೇ ಉಳಿಸಿಕೊಂಡಿದ್ದಾರೆ.

ಕಾಂಗ್ರೆಸ್ ಶಾಸಕ ರಾಧಾಕೃಷ್ಣ ಕಿಶೋರ್ ಅವರಿಗೆ ಹಣಕಾಸು, ಜೆಎಂಎಂನ ದೀಪಕ್ ಬಿರುವಾ ಅವರಿಗೆ ಕಂದಾಯ ಹಾಗೂ ಚಾಮರಾ ಲಿಂಡಾ ಅವರಿಗೆ ಬುಡಕಟ್ಟು–ಪರಿಶಿಷ್ಟ ಜಾತಿ–ಹಿಂದುಳಿದ ವರ್ಗಗಳ ಅಭಿವೃದ್ಧಿ ಖಾತೆಗಳನ್ನು ಹಂಚಿಕೆ ಮಾಡಿದ್ದಾರೆ. 12 ಸಚಿವರ ಸಂಪುಟದಲ್ಲಿ ಕಾಂಗ್ರೆಸ್‌ನ ನಾಲ್ವರಿಗೆ ಖಾತೆಗಳು ಸಿಕ್ಕಂತಾಗಿದೆ. ಜೆಎಂಎಂ ಶಾಸಕರಲ್ಲಿ ಏಳು ಮಂದಿಗೆ ಖಾತೆಗಳು ದೊರೆತಿವೆ. ಆರ್‌ಜೆಡಿಯ ಒಬ್ಬರಿಗೆ ಮಂತ್ರಿ ಸ್ಥಾನ ಸಿಕ್ಕಿದೆ.

ರಾಹುಲ್, ಗಿಲ್ ಭರವಸೆಯ ಆಟ • ನಿತೀಶ್, ಅಶ್ವಿನ್ ಬೀಸಾಟ • ಭಾರತ ತಂಡದ ಸಾಧಾರಣ ಮೊತ್ತ

ಸ್ಟಾರ್ಕ್ ಬಿರುಗಾಳಿಗೆ ಕುಸಿದ ರೋಹಿತ್ ಬಳಗ

• ಮಧು ಜವಳಿ

ಅಡಿಲೇಡ್: ರೋಹಿತ್ ಶರ್ಮಾ ಟಾಸ್ ಜಯಿಸಿದರು. ಹಗಲು–ರಾತ್ರಿ ಪಂದ್ಯದಲ್ಲಿ ಬಹುತೇಕ ಎಲ್ಲ ತಂಡಗಳ ನಾಯಕರಂತೆ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡರು. ಬ್ಯಾಟಿಂಗ್ ಮಾಡಲು ಉತ್ತಮ ವಾತಾವರಣವೂ ಇತ್ತು.

ಆದರೆ ಇದಾಗಿ ಆರೂವರೆ ಗಂಟೆಗಳಲ್ಲಿ ಭಾರತದ ಪಾಲಿಗೆ ಕೆಲವು ಉತ್ತಮ ಕ್ಷಣಗಳಿದ್ದವು. ಉಳಿದಂತೆ ಆತಿಥೇಯ ತಂಡದ ವೇಗಿ ಮಿಚೆಲ್ ಸ್ಟಾರ್ಕ್ (48ಕ್ಕೆ6) ಪಿಂಕ್ ಬಾಲ್ ಕ್ರಿಕೆಟ್‌ನಲ್ಲಿ ತಮ್ಮ ಮಾಂತ್ರಿಕ ಬೌಲಿಂಗ್ ಮೆರೆದರು. ಇದರಿಂದಾಗಿ ಭಾರತ ತಂಡ 180 ರನ್‌ಗಳಿಗೆ ಎಲ್ಲ ವಿಕೆಟ್ ಕಳೆದುಕೊಂಡಿತು.

ಪರ್ತ್ ಟೆಸ್ಟ್ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ತಡಬಡಾಯಿಸಿದ್ದ ಆಸ್ಟ್ರೇಲಿಯಾ ಬ್ಯಾಟರ್‌ಗಳು ಇಲ್ಲಿ ಸುಧಾರಿತ ಆಟವಾಡಿದರು. ಬಾರ್ಡರ್–ಗಾವಸ್ಕರ್ ಟ್ರೋಫಿ ಟೆಸ್ಟ್ ಸರಣಿಯ ಎರಡನೇ ಪಂದ್ಯದ ಮೊದಲ ದಿನವಾದ ಶುಕ್ರವಾರ ಆಟ ಮುಗಿದಾಗ 1 ವಿಕೆಟ್ ನಷ್ಟಕ್ಕೆ 86 ರನ್ ಗಳಿಸಿದರು. ಭಾರತ ತಂಡದ ಮೊತ್ತ ಚುಕ್ತಾ ಮಾಡಲು ಆಸ್ಟ್ರೇಲಿಯಾಕ್ಕೆ ಇನ್ನೂ 94 ರನ್‌ಗಳು ಬೇಕು. ಉಸ್ಮಾನ್ ಖ್ವಾಜಾ (13 ರನ್) ಮತ್ತು ನೇಥನ್ ಮೆಕ್‌ಸ್ವೀನಿ (ಬ್ಯಾಟಿಂಗ್ 38) ತಾಳ್ಮೆಯುತ ಆರಂಭ ನೀಡಿದರು. ಖ್ವಾಜಾ ಅವರ ವಿಕೆಟ್ ಗಳಿಸುವಲ್ಲಿ ಬೂಮ್ರಾ ಯಶಸ್ವಿಯಾದರು.

ನೇಥನ್ ಜೊತೆಯಾದ ಮಾರ್ನಸ್ ಲಾಬುಷೇನ್ (ಬ್ಯಾಟಿಂಗ್ 20) ತಮ್ಮ ಲಯಕ್ಕೆ ಮರಳುವ ಲಕ್ಷಣಗಳನ್ನು ತೋರಿದರು. ಇಬ್ಬರೂ ಸೇರಿ ಮುರಿಯದ ಎರಡನೇ ವಿಕೆಟ್ ಜೊತೆಯಾಟದಲ್ಲಿ 62 ರನ್ ಸೇರಿಸಿದರು. ಪಿಂಕ್ ಬಾಲ್ ಟೆಸ್ಟ್‌ಗಳಲ್ಲಿ ಮಧ್ಯಾಹ್ನದ ಅವಧಿಯು ಬ್ಯಾಟಿಂಗ್ ಮತ್ತು ಹೊನಲು ಬೆಳಕಿನಲ್ಲಿ ಬೌಲಿಂಗ್ ಮಾಡಲು ಉತ್ತಮವೆಂದು ಹೇಳಲಾಗುತ್ತದೆ. ಭಾರತಕ್ಕೆ ಎರಡೂ ಅವಕಾಶಗಳೂ ಸಿಕ್ಕವು. ಸಮರ್ಥವಾಗಿ ಬಳಸಿಕೊಳ್ಳಲಿಲ್ಲ. ಪಿಂಕ್ ಬಾಲ್ ಟೆಸ್ಟ್‌ಗಳಲ್ಲಿ ಆಸ್ಟ್ರೇಲಿಯಾದ ಅನುಭವವೇ ಮೇಲುಗೈ ಸಾಧಿಸಿತು. ಭಾರತದ ದೌರ್ಬಲ್ಯಗಳೂ ಬಹಿರಂಗವಾದವು.

ಮಧ್ಯಾಹ್ನ ಆರಂಭವಾದ ಪಂದ್ಯವನ್ನು ವೀಕ್ಷಿಸಲು ಕ್ರೀಡಾಂಗಣದ ಗ್ಯಾಲರಿಗಳಲ್ಲಿ ಪ್ರೇಕ್ಷಕರು ತುಂಬಿದ್ದರು. ಸ್ಟಾರ್ಕ್ ಅವರು ದಿನದ ಮೊದಲ ಎಸೆತದಲ್ಲಿಯೇ ಯಶಸ್ವಿಯನ್ನು ಎಲ್‌ಬಿಡಬ್ಲ್ಯು ಬಲೆಗೆ ಕೆಡವಿದರು. ಇನ್ನೊಂದು ಬದಿಯಲ್ಲಿದ್ದ ಕೆ.ಎಲ್. ರಾಹುಲ್ ಅವರೊಂದಿಗೆ ಕೆಲಕ್ಷಣ ಮಾತನಾಡಿದ ಯಶಸ್ವಿ, ಡಿಆರ್‌ಎಸ್ ತೆಗೆದುಕೊಳ್ಳದೇ ಪೆವಿಲಿಯನ್‌ನತ್ತ ಹೆಜ್ಜೆಹಾಕಿದರು. ಪರ್ತ್ ಟೆಸ್ಟ್‌ನಲ್ಲಿ ಯಶಸ್ವಿ ಶತಕ ದಾಖಲಿಸಿದ್ದರು.

ರಾಹುಲ್ ಅವರು ಖಾತೆ ತೆರೆಯುವ ಮುನ್ನವೇ ಬೌಲರ್ ಸ್ಕಾಟ್ ಬೊಲ್ಯಾಂಡ್ ಎಸೆತದಲ್ಲಿ ಸ್ಲಿಪ್ ಫೀಲ್ಡರ್‌ಗೆ ಕ್ಯಾಚ್ ಆಗಿದ್ದರು. ಆದರೆ ಆನ್‌ಫೀಲ್ಡ್ ಅಂಪೈರ್ ಆ ಎಸೆತವನ್ನು ನೋಬಾಲ್ ಎಂದರು. ಮರುಪರಿಶೀಲನೆಯಲ್ಲಿಯೂ ಅಂಪೈರ್ ತೀರ್ಪು ಸರಿಯಾಗಿತ್ತು. ರಾಹುಲ್‌ಗೆ ‘ಜೀವದಾನ’ ಲಭಿಸಿತು. ನಂತರದ ಎಸೆತದಲ್ಲಿ ಖಾತೆ ತೆರೆದರು. ಅದು ಅವರು ಎದುರಿಸಿದ 21ನೇ ಎಸೆತವಾಗಿತ್ತು!

ನಂತರದ ಎಸೆತದಲ್ಲಿ ಸ್ಲಿಪ್‌ನಲ್ಲಿದ್ದ ಉಸ್ಮಾನ್ ಖ್ವಾಜಾ ಅವರು ಕ್ಯಾಚ್ ಕೈಚೆಲ್ಲುವ ಮೂಲಕ ರಾಹುಲ್‌ಗೆ ಮತ್ತೊಂದು ಜೀವದಾನ ಸಿಕ್ಕಿತು. ಈ ಅವಕಾಶಗಳನ್ನು ಬಳಸಿಕೊಳ್ಳುವತ್ತ ರಾಹುಲ್ (37; 64ಎ) ಚಿತ್ತಹರಿಸಿದರು. ಇನ್ನೊಂದು ಬದಿಯಲ್ಲಿದ್ದ ಶುಭಮನ್ ಗಿಲ್ (31; 51ಎ) ಅವರು ಆತ್ಮವಿಶ್ವಾಸದಿಂದ ಆಡಿದರು. ಇವರಿಬ್ಬರ ಜೊತೆಯಾಟದಿಂದಾಗಿ ಭಾರತದ ಮೊತ್ತವು 1 ವಿಕೆಟ್‌ಗೆ 69ರವರೆಗೂ ಬೆಳೆಯಿತು.

ಈ ಹಂತದಲ್ಲಿ ಮತ್ತೊಂದು ಸ್ಪೆಲ್ ಆರಂಭಿಸಿದ ಸ್ಟಾರ್ಕ್ ದೂಳೆಬ್ಬಿಸಿದರು. ಅವರು ಹಾಕಿದ ಬೌನ್ಸ್ ಎಸೆತವನ್ನು ಆಡಬೇಕೊ ಅಥವಾ ಬಿಡಬೇಕೊ ಎಂಬ ಗೊಂದಲದಲ್ಲಿ ಕಟ್ ಮಾಡಿದ ರಾಹುಲ್ ದಂಡ ತೆತ್ತರು. ನಂತರ ವಿರಾಟ್ ಕೊಹ್ಲಿ ಕೂಡ ಅದೇ ಮಾದರಿಯಲ್ಲಿ ಔಟಾದರು. ಸ್ಲಿಪ್ ಫೀಲ್ಡರ್‌ಗೆ ಕ್ಯಾಚಿತ್ತರು.

ಇನ್ನೊಂದೆಡೆ ಶಿಸ್ತಿನ ದಾಳಿ ನಡೆಸಿದ್ದ ಬೊಲ್ಯಾಂಡ್ ಅವರಿಗೆ ಕೊನೆಗೂ ಫಲ ಸಿಕ್ಕಿತು. ಅವರ ಎಸೆತವನ್ನು ಫ್ಲಿಕ್ ಮಾಡಲು ಯತ್ನಿಸಿದ ಗಿಲ್ ಎಲ್‌ಬಿ ಬಲೆಗೆ ಬಿದ್ದರು. ಊಟದ ವೇಳೆಗೆ ಭಾರತ ತಂಡವು 4 ವಿಕೆಟ್‌ಗಳಿಗೆ 82 ರನ್ ಗಳಿಸಿತ್ತು.

ವಿರಾಮದ ನಂತರ ರೋಹಿತ್ ಶರ್ಮಾ ಕೂಡ ಬೊಲ್ಯಾಂಡ್ ಬೌಲಿಂಗ್‌ನಲ್ಲಿ ಔಟಾದಾಗ ಭಾರತದ ಸ್ಥಿತಿ ಮತ್ತಷ್ಟು ಹದಗೆಟ್ಟಿತು. ರಿಷಭ್ ಪಂತ್ ಅವರ ಛಲದ ಆಟಕ್ಕೆ ಪ್ಯಾಟ್ ಕಮಿನ್ಸ್ ತಡೆಯೊಡ್ಡಿದರು. ಈ ಹಂತದಲ್ಲಿ ನಿತೀಶ್ ಕುಮಾರ್ ರೆಡ್ಡಿ (42; 54ಎ) ಮತ್ತು ಆರ್. ಅಶ್ವಿನ್ (22; 22ಎ) ಇನಿಂಗ್ಸ್‌ಗೆ ಒಂದಿಷ್ಟು ಜೀವ ತುಂಬಿದರು. ಇಬ್ಬರೂ ಸ್ಕೋರ್ ಹೆಚ್ಚಿಸುವ ಅವಕಾಶಗಳನ್ನು ಅಚ್ಚುಕಟ್ಟಾಗಿ ಬಳಸಿಕೊಂಡರು. 30 ರನ್ ಸೇರಿಸಿದ್ದ ಈ ಜೊತೆಯಾಟವನ್ನೂ ಸ್ಟಾರ್ಕ್ ಮುರಿದರು. ಇನ್‌ಸ್ವಿಂಗ್ ಎಸೆತಕ್ಕೆ ಅಶ್ವಿನ್ ಎಲ್‌ಬಿಡಬ್ಲ್ಯು ಆದರು. ಈ ನಡುವೆಯೂ ನಿತೀಶ್ ಬೀಸಾಟ ಮುಂದುವರಿಯಿತು. ಅರ್ಧಶತಕದತ್ತ ಸಾಗಿದ್ದ ಅವರ ಆಟಕ್ಕೆ ಸ್ಟಾರ್ಕ್ ಅಂತ್ಯ ಹಾಡಿದರು.



ಆಸ್ಟ್ರೇಲಿಯಾದ ವೇಗದ ಬೌಲರ್ ಮಿಚೆಲ್ ಸ್ಟಾರ್ಕ್ ಅವರು ಭಾರತದ ಬ್ಯಾಟರ್ ಹರ್ಷಿತ್ ರಾಣಾ ಅವರನ್ನು ಕ್ಲೀನ್‌ಬೌಲ್ಡ್ ಮಾಡಿದರು –ಎಎಫ್‌ಪಿ ಚಿತ್ರ



ಭಾರತದ ನಿತೀಶ್ ಕುಮಾರ್ ರೆಡ್ಡಿ ಅವರ ಬ್ಯಾಟಿಂಗ್ –ಎಪಿ/ಪಿಟಿಐ ಚಿತ್ರ

ಮುಖ್ಯಾಂಶಗಳು

- ಮೊದಲ ದಿನದಾಟದಲ್ಲಿ 11 ವಿಕೆಟ್ ಪತನ
- ವಾಷಿಂಗ್ಟನ್ ಸುಂದರ್, ಧ್ರುವ ಜುರೇಲ್, ದೇವದತ್ತ ಪಡಿಕ್ಕಲ್‌ಗೆ ವಿಶ್ರಾಂತಿ
- ಆರನೇ ಕ್ರಮಾಂಕದಲ್ಲಿ ರೋಹಿತ್ ಶರ್ಮಾ ಬ್ಯಾಟಿಂಗ್

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ಭಾರತ 180 (44.1 ಓವರ್‌ಗಳಲ್ಲಿ)

ಯಶಸ್ವಿ ಎಲ್‌ಬಿಡಬ್ಲ್ಯು ಬಿ ಸ್ಟಾರ್ಕ್ 0 (1ಎ)
ರಾಹುಲ್ ಸಿ ಮೆಕ್‌ಸ್ವೀನಿ ಬಿ ಸ್ಟಾರ್ಕ್ 37 (64ಎ, 4X6)
ಗಿಲ್ ಎಲ್‌ಬಿಡಬ್ಲ್ಯು ಬಿ ಬೊಲ್ಯಾಂಡ್ 31 (51ಎ, 4X5)
ವಿರಾಟ್ ಸಿ ಸ್ಮಿತ್ ಬಿ ಸ್ಟಾರ್ಕ್ 7 (8ಎ, 4X1)
ಪಂತ್ ಸಿ ಲಾಬುಷೇನ್ ಬಿ ಕಮಿನ್ಸ್ 21 (35ಎ, 4X2)
ರೋಹಿತ್ ಎಲ್‌ಬಿಡಬ್ಲ್ಯು ಬಿ ಬೊಲ್ಯಾಂಡ್ 3 (23ಎ)
ರೆಡ್ಡಿ ಸಿ ಹೆಡ್ ಬಿ ಸ್ಟಾರ್ಕ್ 42 (54ಎ, 4X3, 6X3)
ಅಶ್ವಿನ್ ಎಲ್‌ಬಿಡಬ್ಲ್ಯು ಬಿ ಸ್ಟಾರ್ಕ್ 22 (22ಎ, 4X3)
ರಾಣಾ ಬಿ ಸ್ಟಾರ್ಕ್ 0 (3ಎ)
ಬೂಮ್ರಾ ಸಿ ಖ್ವಾಜಾ ಬಿ ಕಮಿನ್ಸ್ 0 (8ಎ)
ಸಿರಾಜ್ ಔಟಾಗದೆ 4 (3ಎ, 4X1)

ಇತರೆ: 13 (ಲೆಗ್‌ಬೈ 5, ನೋಬಾಲ್ 7, ವೈಡ್ 1)

ವಿಕೆಟ್ ಪತನ: 1–0 (ಯಶಸ್ವಿ ಜೈಸ್ವಾಲ್; 0.1), 2–69 (ಕೆ.ಎಲ್. ರಾಹುಲ್;18.4), 3–77 (ವಿರಾಟ್ ಕೊಹ್ಲಿ;20.1), 4–81 (ಶುಭಮನ್ ಗಿಲ್;21.1), 5–87 (ರೋಹಿತ್ ಶರ್ಮಾ;25.5), 6–109 (ರಿಷಭ್ ಪಂತ್; 32.5), 7–141 (ಆರ್. ಅಶ್ವಿನ್;38.2), 8–141 (ಹರ್ಷಿತ್ ರಾಣಾ; 38.5), 9–176 (ಜಸ್‌ಪ್ರೀತ್ ಬೂಮ್ರಾ;43.3), 10–180 (ನಿತೀಶ್ ಕುಮಾರ್ ರೆಡ್ಡಿ; 44.1)

ಬೌಲಿಂಗ್: ಮಿಚೆಲ್ ಸ್ಟಾರ್ಕ್ 14.1–2–48–6, ಪ್ಯಾಟ್ ಕಮಿನ್ಸ್ 12–4–41–2, ಸ್ಕಾಟ್ ಬೊಲ್ಯಾಂಡ್ 13–0–54–2, ನೇಥನ್ ಲಯನ್ 1–0–6–0, ಮಿಚೆಲ್ ಮಾರ್ಷ್ 4–0–26–0

ಆಸ್ಟ್ರೇಲಿಯಾ 1 ವಿಕೆಟ್‌ಗೆ 86 (33 ಓವರ್‌ಗಳಲ್ಲಿ)

ಉಸ್ಮಾನ್ ಸಿ ರೋಹಿತ್ ಬಿ ಬೂಮ್ರಾ 13 (35ಎ, 4X2)
ಮೆಕ್‌ಸ್ವೀನಿ ಬ್ಯಾಟಿಂಗ್ 38 (97ಎ, 4X6)
ಲಾಬುಷೇನ್ ಬ್ಯಾಟಿಂಗ್ 20 (67ಎ, 4X3)

ಇತರೆ: 15 (ಬೈ 13, ಲೆಗ್‌ಬೈ 1, ನೋಬಾಲ್ 1)

ವಿಕೆಟ್ ಪತನ: 1–24 (ಉಸ್ಮಾನ್ ಖ್ವಾಜಾ; 10.6)

ಬೌಲಿಂಗ್: ಜಸ್‌ಪ್ರೀತ್ ಬೂಮ್ರಾ 11–4–13–1, ಮೊಹಮ್ಮದ್ ಸಿರಾಜ್ 10–3–29–0, ಹರ್ಷಿತ್ ರಾಣಾ 8–2–18–0, ನಿತೀಶಕುಮಾರ್ ರೆಡ್ಡಿ 3–1–12–0, ಆರ್. ಅಶ್ವಿನ್ 1–1–0–0

ವಿರಾಟ್ ಸರಾಸರಿ 48ಕ್ಕೆ ಕುಸಿತ: ಸಂಜಯ್

ಅಡಿಲೇಡ್ (ಪಿಟಿಐ): ‘ಆಫ್‌ಸ್ಟಂಪ್‌ನಿಂದ ಹೊರಗಿರುವ ಎಸೆತಗಳನ್ನು ಆಡುವಲ್ಲಿ ವೈಫಲ್ಯ ಅನುಭವಿಸುತ್ತಿರುವುದರಿಂದಲೇ ವಿರಾಟ್ ಕೊಹ್ಲಿ ಅವರ ಒಟ್ಟು ರನ್ ಸರಾಸರಿಯು 48ಕ್ಕೆ ಕುಸಿಯಲು ಕಾರಣವಾಗಿದೆ’ ಎಂದು ವೀಕ್ಷಕ ವಿವರಣೆಗಾರ ಸಂಜಯ್ ಮಾಂಜ್ರೇಕರ್ ಹೇಳಿದ್ದಾರೆ.

ಆಸ್ಟ್ರೇಲಿಯಾ ಎದುರಿನ ಎರಡನೇ ಟೆಸ್ಟ್‌ನಲ್ಲಿ ವಿರಾಟ್ ವೈಫಲ್ಯ ಅನುಭವಿಸಿದ ಬೆನ್ನಲ್ಲೇ ಮಾಂಜ್ರೇಕರ್ ಎಕ್ಸ್‌ನಲ್ಲಿ ಸಂದೇಶ ಹಾಕಿದ್ದಾರೆ. ವರ್ಷದ ಹಿಂದೆ ಕೊಹ್ಲಿ ಬ್ಯಾಟಿಂಗ್ ಸರಾಸರಿಯು ಟೆಸ್ಟ್ ಕ್ರಿಕೆಟ್‌ನಲ್ಲಿ 50ರಷ್ಟಿತ್ತು. ಆಸ್ಟ್ರೇಲಿಯಾ ಪ್ರವಾಸಕ್ಕೂ ಮುನ್ನ ವಿರಾಟ್ ಮೂರು ಪಂದ್ಯಗಳಿಂದ ಕೇವಲ 93 ರನ್ ಗಳಿಸಿದ್ದರು. ನ್ಯೂಜಿಲೆಂಡ್ ಎದುರಿನ ಸರಣಿಯಲ್ಲಿ ಅವರು 15.50ರ ಸರಾಸರಿಯಲ್ಲಿ ರನ್ ಗಳಿಸಿದ್ದರು.

ಐಎಸ್‌ಎಲ್: ಬಿಎಫ್‌ಸಿಗೆ ಕೇರಳ ಬ್ಲಾಸ್ಟರ್ಸ್ ಸವಾಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುನಿಲ್ ಚೆಟ್ರಿ ನಾಯಕತ್ವದ ಬೆಂಗಳೂರು ಫುಟ್‌ಬಾಲ್ ಕ್ಲಬ್ ತಂಡವು ಇಂಡಿಯನ್ ಸೂಪರ್ ಲೀಗ್ ಫುಟ್‌ಬಾಲ್ ಟೂರ್ನಿಯಲ್ಲಿ ಗೆಲುವಿನ ಹಾದಿಗೆ ಮರಳುವತ್ತ ಚಿತ್ತ ನೆಟ್ಟಿದೆ. ತವರಿನಂಗಳದಲ್ಲಿ ಶನಿವಾರ ಕೇರಳ ಬ್ಲಾಸ್ಟರ್ಸ್ ಎದುರು ಪಂದ್ಯ ಆಡಲಿರುವ ತಂಡವು ಅಗ್ರಸ್ಥಾನಕ್ಕೆ ಮರಳುವ ಕನಸು ಕಾಣುತ್ತಿದೆ.

ಕಂಠೀರವ ಕ್ರೀಡಾಂಗಣದಲ್ಲಿ ನಡೆಯಲಿರುವ ಪಂದ್ಯದಲ್ಲಿ ಉತ್ತಮ ಗೋಲು ವ್ಯತ್ಯಾಸದೊಂದಿಗೆ ಜಯ ಗಳಿಸುವ ವಿಶ್ವಾಸದಲ್ಲಿ ಚೆಟ್ರಿ ಬಳಗವಿದೆ.

ಟೂರ್ನಿಯಲ್ಲಿ ಇದುವರೆಗೆ 10 ಪಂದ್ಯಗಳನ್ನು ಆಡಿರುವ ಬಿಎಫ್‌ಸಿ 6ರಲ್ಲಿ ಜಯಿಸಿದೆ. 2ರಲ್ಲಿ ಸೋತಿದೆ. 2 ಡ್ರಾ ಆಗಿವೆ. ಒಟ್ಟು 20 ಅಂಕಗಳನ್ನು ಗಳಿಸಿದೆ. ಮೋಹನ್ ಬಾಗನ್ ತಂಡವು 9 ಪಂದ್ಯಗಳಿಂದ 20 ಅಂಕ ಗಳಿಸಿ ಮೊದಲ ಸ್ಥಾನದಲ್ಲಿದೆ. ಬೆಂಗಳೂರು ಎರಡನೇ ಸ್ಥಾನದಲ್ಲಿದೆ. ಬಾಗನ್ 9 ಗೋಲು ಮತ್ತು ಬೆಂಗಳೂರು 6 ಗೋಲು ಗಳಿಸಿದೆ.

‘ನಮ್ಮ ತಂಡದಲ್ಲಿ ಬಹಳಷ್ಟು ಯುವ ಆಟಗಾರರು ಇದ್ದಾರೆ. ಪ್ರತಿಭಾನ್ವಿತರಾಗಿರುವ ಅವರು ಅಪಾರ ಉತ್ಸಾಹದಿಂದ ಆಡುತ್ತಿದ್ದಾರೆ. ಇಂದಿನ ಕಾಲಘಟ್ಟಕ್ಕೆ ತಕ್ಕ ವೇಗ ಮತ್ತು ಕೌಶಲಗಳನ್ನು ಅವರು ತೋರುತ್ತಿದ್ದಾರೆ. ಅನುಭವಿ ಆಟಗಾರರೊಂದಿಗೆ ಉತ್ತಮ ತಾಳಮೇಳ ಹೊಂದಿರುವುದು ಈ ತಂಡದ ಶಕ್ತಿ ಹೆಚ್ಚಿಸಿದೆ’ ಎಂದು ಶುಕ್ರವಾರ ನಡೆದ ಸುದ್ದಿಗೋಷ್ಠಿಯಲ್ಲಿ ಚೆಟ್ರಿ ಹೇಳಿದರು.

ಬಿಎಫ್‌ಸಿ ತಂಡದ ಗೋಲ್‌ಕೀಪರ್ ಗುರುಪ್ರೀತ್ ಸಿಂಗ್ ಸಂಧು ಅವರು ಬಂಡೆಗಲ್ಲಿನಂತೆ ಕಾರ್ಯನಿರ್ವಹಿಸುತ್ತಿದ್ದಾರೆ. ಅವರಿಂದಾಗಿ ತಂಡವು ಹೆಚ್ಚು ಗೋಲು ಬಿಟ್ಟುಕೊಟ್ಟಿಲ್ಲ.

ಕೇರಳ ತಂಡವು 10ನೇ ಸ್ಥಾನದಲ್ಲಿದೆ. ಒಟ್ಟು ಹತ್ತು ಪಂದ್ಯಗಳಲ್ಲಿ 3ರಲ್ಲಿ ಮಾತ್ರ ಗೆದ್ದಿದೆ. 2ರಲ್ಲಿ ಡ್ರಾ ಆಗಿದೆ. 5ರಲ್ಲಿ ಸೋತಿದೆ. ಆದ್ದರಿಂದ 2ನೇ ಸ್ಥಾನದಲ್ಲಿರುವ ಚೆಟ್ರಿ ಬಳಗವು ಕೇರಳಕ್ಕೆ ಕಠಿಣ ಸವಾಲೊಡ್ಡುವುದು ಖಚಿತ. ಅದರಲ್ಲೂ ತವರಿನ ಅಭಿಮಾನಿಗಳ ಎದುರು ಚೆಟ್ರಿ ಬಳಗದ ಕಾಲ್ಚಳಕ ರಂಗೇರುವ ನಿರೀಕ್ಷೆ ಇದೆ.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಪೋರ್ಟ್ಸ್ 18



ಬಿಎಫ್‌ಸಿ ತಂಡದ ನಾಯಕ ಸುನಿಲ್ ಚೆಟ್ರಿ ಮತ್ತು ಸಹಾಯಕ ಕೋಚ್ ರೆನೆಡಿ ಸಿಂಗ್ –ಪ್ರಜಾವಾಣಿ ಚಿತ್ರ

ಈಜು: ಅದ್ವೈತ ಕೂಟ ದಾಖಲೆ

ಬೆಂಗಳೂರು: ಆತಿಥೇಯ ಬಸವನಗುಡಿ ಈಜು ಕೇಂದ್ರದ ಅದ್ವೈತ ವಿ.ಎಂ. ಅವರು ಕರ್ನಾಟಕ ಈಜು ಸಂಸ್ಥೆಯ ಆಶ್ರಯದಲ್ಲಿ ನಡೆಯುತ್ತಿರುವ ರಾಜ್ಯ ಶಾರ್ಟ್ ಕೋರ್ಸ್ ಈಜು ಚಾಂಪಿಯನ್‌ಷಿಪ್‌ನಲ್ಲಿ ಕೂಟ ದಾಖಲೆಯೊಂದಿಗೆ ಚಿನ್ನ ಗೆದ್ದರು.

ಕೂಟದ ಎರಡನೇ ದಿನವಾದ ಶುಕ್ರವಾರ ಬಾಲಕರ (ಗುಂಪು–2) 50 ಮೀಟರ್ ಬ್ಯಾಕ್‌ಸ್ಟ್ರೋಕ್ ಸ್ಪರ್ಧೆಯಲ್ಲಿ 28.51 ಸೆಕೆಂಡ್‌ನಲ್ಲಿ ಗುರಿ ತಲುಪಿ ದಾಖಲೆ ನಿರ್ಮಿಸಿದರು. ಅದೇ ವಿಭಾಗದ 100 ಮೀಟರ್ ಸ್ಪರ್ಧೆಯಲ್ಲೂ ಚಾಂಪಿಯನ್ ಆಗಿ ಹೊರಹೊಮ್ಮಿದರು.

ನೆಟ್ಟಕಲ್ಲಪ್ಪ ಈಜು ಕೇಂದ್ರದ ಬಾಲಕಿಯರು (ಗುಂಪು 2) 4x50 ಮೀಟರ್ ಫ್ರೀಸ್ಟೈಲ್ ರಿಲೆಯಲ್ಲಿ ಚಿನ್ನಕ್ಕೆ ಕೊರಳೊಡ್ಡಿದರು.

ಫಲಿತಾಂಶ: ಚಿನ್ನ ವಿಜೇತರು: ಪುರುಷರು: 100 ಮೀ. ಬಟರ್‌ಫ್ಲೈ– ಬಿಎಸಿಯ ಶಿವಾಂಕ್; 50 ಮೀ. ಬ್ಯಾಕ್‌ಸ್ಟ್ರೋಕ್– ಬಿಎಸಿಯ ಸಚಿನ್ ಸಿ.ಎಂ; ಮಹಿಳೆಯರು: 100 ಮೀ. ಬಟರ್‌ಫ್ಲೈ– ನೆಟ್ಟಕಲ್ಲಪ್ಪ ಈಜು ಕೇಂದ್ರದ ನೈಶಾ ಶೆಟ್ಟಿ.



ಕೂಟ ದಾಖಲೆ ನಿರ್ಮಿಸಿದ ಅದ್ವೈತ ವಿ.ಎಂ. ಪ್ರಜಾವಾಣಿ ಚಿತ್ರ

ಬಾಲಕರು: ಗುಂಪು–1: 100ಮೀ ಬಟರ್‌ಫ್ಲೈ: ಸ್ವರೂಪ್ ಧನುಚೆ (ಬಿಎಸಿ, 57.07ಸೆ). 50 ಮೀ ಬ್ಯಾಕ್‌ಸ್ಟ್ರೋಕ್: ಕುಶಾಲ್ ಕೆ. (ಬಿಎಸಿ, 27.21ಸೆ). 200 ಮೀ ಫ್ರೀಸ್ಟೈಲ್: ರೇಣುಕಾಚಾರ್ಯ ಹೊದ್ಮನಿ (ಬಿಎಸಿ, 58.56ಸೆ). ಬಾಲಕಿಯರು: ಗುಂಪು–1: 100 ಮೀ ಬಟರ್‌ಫ್ಲೈ: ರಿಷಿಕಾ ಯು.ಎಂ. (ಬಿಎಸಿ 1 ನಿ.07.07ಸೆ). 50ಮೀ ಬ್ಯಾಕ್ ಸ್ಟ್ರೋಕ್: ಸಿದ್ಧಿ ಜಿ. ಶಾ (ಡಾಲ್ಫಿನ್ ಅಕ್ವಾಟಿಕ್ಸ್, 31.62ಸೆ.), 200 ಮೀ ಫ್ರೀಸ್ಟೈಲ್: ರಿಷಿಕಾ ಎಂ.ವಿ (ಇಎಸ್‌ಎ, 2 ನಿ.17.28ಸೆ). 100 ಮೀ ಬ್ಯಾಕ್ ಸ್ಟ್ರೋಕ್: ಸಿದ್ಧಿ ಜಿ. ಶಾ (1 ನಿ.08.07ಸೆ).

ಡ್ರಾ ಸರಣಿ ಮುರಿಯುವ ಸವಾಲು

ಚೆಸ್: ನಿರ್ಣಾಯಕ ಮುನ್ನಡೆಗೆ ಗುಕೇಶ್– ಲಿರೆನ್ ಯತ್ನ

ಸಿಂಗಪುರ (ಪಿಟಿಐ): ಅರ್ಧ ಡಜನ್‌ಗೂ ಹೆಚ್ಚು (7) ಪಂದ್ಯಗಳು ಡ್ರಾ, ತಪ್ಪಿದ ಗೆಲುವಿನ ಅವಕಾಶಗಳು, ಯುವ ಚಾಲೆಂಜರ್ ಗುಕೇಶ್ ಅವರ ಉತ್ಸಾಹಿ ಆಟದೆದುರು ಹಾಲಿ ಚಾಂಪಿಯನ್ ಡಿಂಗ್ ಲಿರೆನ್ ಅವರ ಚಾಚೂತಪ್ಪದ ರಕ್ಷಣಾತ್ಮಕ ಆಟ... ಇದು ವಿಶ್ವ ಚೆಸ್ ಚಾಂಪಿಯನ್‌ಷಿಪ್ ಫೈನಲ್‌ನ ಮೊದಲ ಒಂಬತ್ತು ಪಂದ್ಯಗಳ ಸ್ಥೂಲ ಚಿತ್ರಣ.

ಚಾಂಪಿಯನ್‌ಷಿಪ್‌ಗೆ ಶುಕ್ರವಾರ ಮೂರನೇ ವಿರಾಮ ದಿನವಾಗಿದ್ದು ಶನಿವಾರ ಹತ್ತನೇ ಪಂದ್ಯ ನಡೆಯಲಿದೆ. ಇನ್ನು ಐದೇ ಪಂದ್ಯಗಳು ಉಳಿದಿರುವಂತೆ ಇಬ್ಬರೂ ಆಟಗಾರರು ಡ್ರಾಗಳ ಸರಪಣಿ ಕೊನೆಗೊಳಿಸಿ ನಿರ್ಣಾಯಕ ಗೆಲುವಿಗೆ ಅಡಿಯಿಡುವ ನಿರೀಕ್ಷೆಯಿದೆ.

ಗುಕೇಶ್ ಕೆಲವು ಪಂದ್ಯಗಳಲ್ಲಿ ಮೇಲುಗೈ ಹೊಂದಿದ್ದರು. ಆದರೆ ಆಟದ ಮಧ್ಯಮ ಹಂತದಲ್ಲಿ ಗೆಲುವಿನ ಸಾಧ್ಯತೆಯಿರುವಾಗ ಅವರ ನಡೆಗಳು ಕರಾರುವಾಕ್ ಆಗಲಿಲ್ಲ. ಇನ್ನು ಐದೇ ಪಂದ್ಯಗಳು ಉಳಿದಿರುವಂತೆ 18 ವರ್ಷ ವಯಸ್ಸಿನ ಆಟಗಾರ ಈಗ ತಮ್ಮೆಲ್ಲಾ ಸಾಮರ್ಥ್ಯ ಪಣಕ್ಕಿಡುವುದು ಅನಿವಾರ್ಯವಾಗಿದೆ.

ಶುಕ್ರವಾರದ ಆಟ ಡ್ರಾ ಆಗಿದ್ದು, ಅದು ಸತತ ಆರನೇ ಡ್ರಾ. ಆ ಪಂದ್ಯದ ನಂತರ ಇಬ್ಬರ ಬಳಿಯೂ ತಲಾ 4.5 ಅಂಕಗಳಿವೆ. ಮೊದಲು ಏಳೂವರೆ ಪಾಯಿಂಟ್ಸ್ ತಲುಪಿದವರು ವಿಶ್ವ ಚಾಂಪಿಯನ್ ಆಗಲಿದ್ದಾರೆ.

ಇದುವರೆಗೆ ಎರಡು ಪಂದ್ಯಗಳಲ್ಲಿ ಮಾತ್ರ ನಿರ್ಣಾಯಕ ಫಲಿತಾಂಶಗಳು ದಾಖಲಾಗಿವೆ. ಮೊದಲ ಪಂದ್ಯವನ್ನು, 32 ವರ್ಷ ವಯಸ್ಸಿನ ಲಿರೆನ್ ಗೆದ್ದರೆ, ಮೂರನೇ ಪಂದ್ಯವನ್ನು ಗುಕೇಶ್ ಜಯಗಳಿಸಿದ್ದರು. ನಂತರ ಯಾರೂ ಲೀಡ್ ಪಡೆದಿಲ್ಲ.

ಜಿಗುಟು ಆಟವಾಡುತ್ತಿರುವ ಲಿರೆನ್ ವಿರುದ್ಧ ಗೆಲ್ಲಬೇಕಾದರೆ ಗುಕೇಶ್ ನಿರ್ಣಾಯಕ ಸಂದರ್ಭದಲ್ಲಿ ನಡೆಗಳು ತಪ್ಪದಂತೆ ನೋಡಿಕೊಳ್ಳಬೇಕಾಗಿದೆ.



ಗುಕೇಶ್



ಲಿರೆನ್

ಈಗ ಫೇವರಿಟ್ ಅಲ್ಲ: ಕಾರ್ಲ್‌ಸನ್

ತಜ್ಞ ಆಟಗಾರರ ಮುಂದೆ ಒಂಬತ್ತನೇ ಪಂದ್ಯದ ವಿಶ್ಲೇಷಣೆ ನಡೆಸಿದ ನಂತರ, ಐದು ಬಾರಿಯ ಚಾಂಪಿಯನ್ ಹಾಗೂ ಹಾಲಿ ಅಗ್ರಮಾನ್ಯ ಆಟಗಾರ ಮ್ಯಾಗ್ನಸ್ ಕಾರ್ಲ್‌ಸನ್ ತಮ್ಮ ಅಭಿಪ್ರಾಯ ಹೇಳಲಿಲ್ಲ. ಆದರೆ ‘ಸಮಯವು ಗುಕೇಶ್ ಅವರ ಕೈಮೀರುತ್ತಿದೆ’ ಎಂದು ಸೂಚ್ಯವಾಗಿ ಹೇಳಿದರು.

‘ಇನ್ನು ಮುಂದೆ ಈ ಫೈನಲ್‌ನಲ್ಲಿ ಗುಕೇಶ್ ಫೇವರಿಟ್ ಆಗಿ ಉಳಿದಿಲ್ಲ ಎನ್ನುವ ಹಂತಕ್ಕೆ ನಾವು ಕೊನೆಗೂ ತಲುಪಿದ್ದೇವೆ ಎನಿಸುತ್ತಿದೆ. ಪಂದ್ಯದಲ್ಲಿ ಆಟಗಾರರು ಗೆಲ್ಲುವ ಸಾಧ್ಯತೆ 50–50’ ಎಂದೂ ಕಾರ್ಲ್‌ಸನ್ ಹೇಳಿದ್ದಾರೆ.

ರಾಷ್ಟ್ರೀಯ ರ‍್ಯಾಂಕಿಂಗ್ ಟಿ.ಟಿ ಇದೇ 15ರಿಂದ

ಬೆಂಗಳೂರು: ಕರ್ನಾಟಕ ಟೇಬಲ್ ಟೆನಿಸ್ ಸಂಸ್ಥೆ ವತಿಯಿಂದ ಡಿಸೆಂಬರ್ 15 ರಿಂದ 22ರವರೆಗೆ ಕಂಠೀರವ ಒಳಾಂಗಣ ಕ್ರೀಡಾಂಗಣದಲ್ಲಿ ಅಲ್ಟಿಮೇಟ್ ಟೇಬಲ್ ಟೆನಿಸ್ ರಾಷ್ಟ್ರೀಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್ ನಡೆಯಲಿದೆ.

‘1,500ಕ್ಕೂ ಹೆಚ್ಚು ಆಟಗಾರರು ಭಾಗವಹಿಸಲಿದ್ದಾರೆ. 11, 13, 15, 17 ಮತ್ತು 19 ವರ್ಷದೊಳಗಿನ ಬಾಲಕ ಮತ್ತು ಬಾಲಕಿಯರು, ಪುರುಷರು, ಮಹಿಳೆಯರ ವಿಭಾಗಗಳಲ್ಲಿ ಸ್ಪರ್ಧೆಗಳು ನಡೆಯಲಿವೆ’ ಎಂದು ಕೆಟಿಟಿಎ ಅಧ್ಯಕ್ಷ ರಕ್ಷ ರಾಮಯ್ಯ ತಿಳಿಸಿದರು.

‘ಒಲಿಂಪಿಕ್ಸ್, ಕಾಮನ್‌ವೆಲ್ತ್ ಹಾಗೂ ಏಷ್ಯನ್ ಚಾಂಪಿಯನ್‌ಷಿಪ್‌ಗಳಲ್ಲಿ ಭಾರತವನ್ನು ಪ್ರತಿನಿಧಿಸಿದ್ದ ಆಟಗಾರರು ಈ ಬಾರಿಯ ಟೂರ್ನಿಯಲ್ಲಿ ಕಣಕ್ಕಿಳಿಯಲಿದ್ದಾರೆ. ಕರ್ನಾಟಕದ 166 ಸ್ಪರ್ಧಿಗಳು ಆಡಲಿದ್ದಾರೆ’ ಎಂದು ಹೇಳಿದರು.

‘ಚಾಂಪಿಯನ್‌ಷಿಪ್ ಅನ್ನು ಯುಟಿಟಿ ಪ್ರಾಯೋಜಿಸುತ್ತಿದ್ದು, ಕೆನರಾ ಬ್ಯಾಂಕ್, ಐಡಿಬಿಐ ಬ್ಯಾಂಕ್ ಮತ್ತು ಚೆನ್ನೈ ಲಯನ್ಸ್ ಸಹ ಪ್ರಾಯೋಜಕತ್ವ ನೀಡುತ್ತಿವೆ. ಚಾಂಪಿಯನ್‌ಷಿಪ್‌ನ ಒಟ್ಟು ಬಹುಮಾನದ ಮೊತ್ತ ₹ 9,99,400 ಆಗಿದೆ’ ಎಂದು ಮಾಹಿತಿ ನೀಡಿದರು.

ಕೆಟಿಟಿಎ ಕಾರ್ಯದರ್ಶಿ ಕೆ.ಆರ್. ಮಂಜುನಾಥ್ ಹಾಜರಿದ್ದರು.

ಏಷ್ಯಾ 19 ವರ್ಷದೊಳಗಿನವರ ಕ್ರಿಕೆಟ್: ಪ್ರಶಸ್ತಿ ಸುತ್ತಿನಲ್ಲಿ ಬಾಂಗ್ಲಾ ಎದುರಾಳಿ

ಸೂರ್ಯವಂಶಿ ‘ವೈಭವ’; ಭಾರತ ಫೈನಲ್‌ಗೆ

ಶಾರ್ಜಾ (ಪಿಟಿಐ): ಉದಯೋನ್ಮುಖ ಬ್ಯಾಟರ್ ವೈಭವ್ ಸೂರ್ಯವಂಶಿ (67, 36ಎ) ಮತ್ತೊಮ್ಮೆ ಮಿಂಚಿದರು. ಬಿಹಾರದ ಈ ಬಾಲಕನ ಮಿಂಚಿನ ಅರ್ಧ ಶತಕದ ನೆರವಿನಿಂದ ಭಾರತ ತಂಡ 19 ವರ್ಷದೊಳಗಿನವರ ಏಷ್ಯಾ ಕಪ್ ಏಕದಿನ ಕ್ರಿಕೆಟ್ ಟೂರ್ನಿ ಪಂದ್ಯದಲ್ಲಿ ಶ್ರೀಲಂಕಾ ತಂಡದ ಮೇಲೆ ಶುಕ್ರವಾರ ಏಳು ವಿಕೆಟ್‌ಗಳಿಂದ ಗೆದ್ದು ಫೈನಲ್ ತಲುಪಿತು.

ಶುಕ್ರವಾರ ನಡೆದ ಸೆಮಿಫೈನಲ್ ಪಂದ್ಯದಲ್ಲಿ ಆರು ಬೌಂಡರಿಗಳ ಜೊತೆ ಐದು ಸಿಕ್ಸರ್‌ಗಳನ್ನೆತ್ತಿದ ವೈಭವ್ ಭಾರತದ ಗೆಲುವನ್ನು ತ್ವರಿತಗೊಳಿಸಿದರು.

ಮೊದಲು ಆಡಿದ ಶ್ರೀಲಂಕಾ 46.2 ಓವರುಗಳಲ್ಲಿ 173 ರನ್ ಗಳಿಸಲಷ್ಟೇ ಶಕ್ತವಾಯಿತು. ಆದರೆ ವೈಭವ್ ಮತ್ತು ಇತರ ಅಗ್ರ ಆಟಗಾರರ ಉಪಯುಕ್ತ ಆಟದಿಂದ ಭಾರತ 21.4 ಓವರುಗಳಲ್ಲಿ 3 ವಿಕೆಟ್‌ಗೆ 175 ರನ್ ಹೊಡೆದು ಸಂಭ್ರಮಿಸಿತು.

ಭಾರತ ತಂಡವು ಭಾನುವಾರ ನಡೆಯುವ ಫೈನಲ್‌ನಲ್ಲಿ ಬಾಂಗ್ಲಾದೇಶ ತಂಡವನ್ನು ಎದುರಿಸಲಿದೆ. ಇನ್ನೊಂದು ಸೆಮಿಫೈನಲ್‌ನಲ್ಲಿ ಬಾಂಗ್ಲಾದೇಶ ತಂಡ ಏಳು ವಿಕೆಟ್‌ಗಳಿಂದ ಪಾಕಿಸ್ತಾನ ತಂಡವನ್ನು ಸೋಲಿಸಿತು.

ದುಲ್ನಿತ್ ಸಿಗೇರಾ ಮಾಡಿದ ಇನಿಂಗ್ಸ್‌ನ ಎರಡನೇ ಓವರ್‌ನಲ್ಲಿ 31 ರನ್‌ಗಳು ಹರಿದುಬಂದವು. 13 ವರ್ಷ ವಯಸ್ಸಿನ ವೈಭವ್ ಆ ಓವರ್‌ನಲ್ಲಿ ಮೂರು ಸಿಕ್ಸರ್, ಎರಡು ಬೌಂಡರಿ ಚಚ್ಚಿದ್ದರು. ಮೊದಲ ವಿಕೆಟ್‌ಗೆ ವೈಭವ್– ಆಯುಷ್ ಮ್ಹಾತ್ರೆ ಕೇವಲ 8 ಓವರುಗಳಲ್ಲಿ 87 ರನ್ ಸೇರಿಸಲು ಸೇರಿಸಿದ್ದರು.

ಮೊದಲು ಆಡಿದ ಲಂಕಾ ಪರ ಲಕ್ವಿನ್ ಅಭಯಸಿಂಘೆ (69, 110ಎ) ಮತ್ತು ಶಾರುಜನ್ ಷಣ್ಮುಗನಾಥನ್ (42, 78ಎ) ಮಾತ್ರ ಭಾರತದ ಬೌಲರ್‌ಗಳಿಗೆ ಪ್ರತಿರೋಧ ತೋರಿದರು. ಏಳು ಮಂದಿ ಎರಡಂಕಿ ಮೊತ್ತವನ್ನೂ ಗಳಿಸಲಿಲ್ಲ. ಭಾರತದ ಕಡೆ ಚೇತನ್ ಶರ್ಮಾ (34ಕ್ಕೆ3) ಯಶಸ್ವಿ ಎನಿಸಿದರು.

ಸಂಕ್ಷಿಪ್ತ ಸ್ಕೋರು: ಶ್ರೀಲಂಕಾ: 46.2 ಓವರುಗಳಲ್ಲಿ 173 (ಶಾರುಜನ್ ಷಣ್ಮುಗನಾಥನ್ 42, ಲಕ್ವಿನ್ ಅಭಯಸಿಂಘೆ 69, ಚೇತನ್ ಶರ್ಮಾ 34ಕ್ಕೆ3, ಕಿರಣ್ ಚೋರ್ಮಲೆ 32ಕ್ಕೆ2, ಆಯುಷ್ ಮ್ಹಾತ್ರೆ 37ಕ್ಕೆ2); ಭಾರತ: 21.4 ಓವರುಗಳಲ್ಲಿ 3 ವಿಕೆಟ್‌ಗೆ 175 (ಆಯುಷ್ ಮ್ಹಾತ್ರೆ 34, ವೈಭವ್ ಸೂರ್ಯವಂಶಿ 67, ಮೊಹಮದ್ ಅಮಾನ್ ಔಟಾಗದೇ 25). ಪಂದ್ಯದ ಆಟಗಾರ: ವೈಭವ್ ಸೂರ್ಯವಂಶಿ.



ವೈಭವ್ ಸೂರ್ಯವಂಶಿ –ಎಕ್ಸ್ ಚಿತ್ರ

ಬೆಂಗಳೂರಿನಲ್ಲಿ ಸೀನಿಯರ್ ರಾಷ್ಟ್ರೀಯ ಕುಸ್ತಿ ಚಾಂಪಿಯನ್‌ಷಿಪ್

ಕರ್ನಾಟಕದ ರೋಹನ್‌ಗೆ ಬೆಳ್ಳಿ ಪದಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕುಸ್ತಿ ಅಖಾಡದಲ್ಲಿ ಪೈಲ್ವಾನರು ಉಸಿರು ಬಿಗಿಹಿಡಿದು ಪಟ್ಟು ಹಾಕುತ್ತಿದ್ದರೆ, ಸುತ್ತಲೂ ಸೇರಿದ್ದ ಪ್ರೇಕ್ಷಕರು ಚಪ್ಪಾಳೆ ತಟ್ಟುತ್ತಾ ಕೇಕೆ ಹಾಕುತ್ತಾ ಹುರಿದುಂಬಿಸುತ್ತಿದ್ದರು.

ಕರ್ನಾಟಕ ಕುಸ್ತಿ ಸಂಸ್ಥೆಯ ಆತಿಥ್ಯದಲ್ಲಿ ನಗರದ ಕೋರಮಂಗಲ ಒಳಾಂಗಣ ಕ್ರೀಡಾಂಗಣದಲ್ಲಿ ಶುಕ್ರವಾರ ಆರಂಭಗೊಂಡ ಸೀನಿಯರ್ ರಾಷ್ಟ್ರೀಯ ಕುಸ್ತಿ ಚಾಂಪಿಯನ್‌ಷಿಪ್ ಮೊದಲ ದಿನ ನಡೆದ ಫ್ರೀಸ್ಟೈಲ್ ವಿಭಾಗದ ಸ್ಪರ್ಧೆಗಳು ಮೈನವಿರೇಳಿಸುವ ಕ್ಷಣಗಳಿಗೆ ಸಾಕ್ಷಿಯಾಯಿತು.

ಫ್ರೀಸ್ಟೈಲ್‌ನ 10 ತೂಕ ವಿಭಾಗಗಳಲ್ಲಿ ಕರ್ನಾಟಕದ ಸಾಕಷ್ಟು ಸ್ಪರ್ಧಿಗಳು ಕಣಕ್ಕೆ ಇಳಿದಿದ್ದರು. ಆದರೆ, ದಕ್ಕಿದ್ದು ಒಂದು ಪದಕ ಮಾತ್ರ. ಉತ್ತರ ಕನ್ನಡ ಜಿಲ್ಲೆಯ ಹಳಿಯಾಳದ 23 ವರ್ಷ ವಯಸ್ಸಿನ ರೋಹನ್ ನಾರಾಯಣ್ ಘೇವಡಿ, 74 ಕೆಜಿ ವಿಭಾಗದಲ್ಲಿ ಬೆಳ್ಳಿ ಪದಕವನ್ನು ಕೊರಳಿಗೇರಿಸಿಕೊಂಡರು.

ಫೈನಲ್‌ನಲ್ಲಿ ಎಸ್‌ಎಸ್‌ಸಿಬಿಯ ಜೈದೀಪ್ 14–4ರಿಂದ ರೋಹನ್ ಅವರನ್ನು ಮಣಿಸಿ ಚಿನ್ನ ಗೆದ್ದುಕೊಂಡರು. ಮೊದಲ ನಿಮಿಷದಲ್ಲೇ 4–0 ಮುನ್ನಡೆ ಪಡೆದಿದ್ದ ಕರ್ನಾಟಕದ ಪೈಲ್ವಾನ್ ನಂತರ ಲಯ ಕಳೆದುಕೊಂಡರು. ಚುರುಕಿನ ಪಾದಚಲನೆಯ ಮೂಲಕ ಜೈದೀಪ್ ಅಂಕ ಹೆಚ್ಚಿಸಿಕೊಳ್ಳುತ್ತಾ ಸಾಗಿದರು. 6 ನಿಮಿಷದ ಸ್ಪರ್ಧೆಯಲ್ಲಿ ಇನ್ನೂ 1.46 ನಿಮಿಷ ಬಾಕಿ ಇರುವಂತೆ ಜೈದೀಪ್ ಜಯ ಸಾಧಿಸಿದರು.

ಸೆಮಿಫೈನಲ್‌ನಲ್ಲಿ ರೋಹನ್ 8–6ರಿಂದ ಮಹಾರಾಷ್ಟ್ರದ ಆದರ್ಶ್ ವಿರುದ್ಧ; ಕ್ವಾರ್ಟರ್ ಫೈನಲ್‌ನಲ್ಲಿ 10–0ಯಿಂದ ಜಮ್ಮು ಮತ್ತು ಕಾಶ್ಮೀರದ ಜರ್ನೈಲ್ ಸಿಂಗ್ ವಿರುದ್ಧ ಗೆದ್ದಿದ್ದರು.

ರೋಹನ್ ಕಳೆದ ವರ್ಷ ಪುಣೆಯಲ್ಲಿ ನಡೆದ ಇದೇ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಗೆದ್ದಿದ್ದರು. ಈ ಬಾರಿ ಪದಕದ ಬಣ್ಣವನ್ನು ಬದಲಾಯಿಸಿ ಖುಷಿಪಟ್ಟರು. ಸೀನಿಯರ್ ಫೆಡರೇಷನ್ ಕಪ್‌ನಲ್ಲಿ ಕಂಚು ಗೆದ್ದಿರುವ ಅವರು ಮೈಸೂರು ದಸರಾದಲ್ಲಿ ಕರ್ನಾಟಕ ಕಿಶೋರ ಮತ್ತು ಕರ್ನಾಟಕ ಕೇಸರಿ ಕಿರೀಟ ಮುಡಿಗೇರಿಸಿಕೊಂಡ ಸಾಧಕ.

‘ಪದಕದ ನಿರೀಕ್ಷೆಯಿಂದಲೇ ಕಣಕ್ಕೆ ಇಳಿದಿದ್ದೆ. ಚಿನ್ನದ ಗುರಿ ಇತ್ತಾದರೂ ಬೆಳ್ಳಿ ಗೆದ್ದಿರುವುದು ಖುಷಿ ಕೊಟ್ಟಿದೆ’ ಎಂದು ಪುಣೆಯಲ್ಲಿ ಸುನಿಲ್ ಪಥತಾರೆ ಅವರಿಂದ ತರಬೇತಿ ಪಡೆಯುತ್ತಿರುವ ರೋಹನ್ ಹೇಳಿದರು.



ಕರ್ನಾಟಕದ ರೋಹನ್ ನಾರಾಯಣ್ ಘೇವಡಿ (ಕೆಂಪು) ಅವರು 74 ಕೆಜಿ ವಿಭಾಗದ ಫೈನಲ್ ಸ್ಪರ್ಧೆಯಲ್ಲಿ ಎಸ್‌ಎಸ್‌ಸಿಬಿಯ ಜೈದೀಪ್ ಜೊತೆ ಸೆಣಸಿದರು ಪ್ರಜಾವಾಣಿ ಚಿತ್ರ: ಕಿಶೋರ್ ಕುಮಾರ್ ಬೋಳಾರ್

ಪಾರಮ್ಯ ಮೆರೆದ ಹರಿಯಾಣ, ಎಸ್‌ಎಸ್‌ಸಿಬಿ ಪೈಲ್ವಾನರು

ಮೊದಲ ದಿನದ ಸ್ಪರ್ಧೆಯಲ್ಲಿ ಹರಿಯಾಣ ಮತ್ತು ಎಸ್‌ಎಸ್‌ಸಿಬಿಯ ಕುಸ್ತಿಪಟುಗಳು ಪಾರಮ್ಯ ಮೆರೆದರು. ನಾಲ್ಕು ವಿಭಾಗಗಳಲ್ಲಿ ಹರಿಯಾಣ ಚಿನ್ನದ ಪದಕದೊಂದಿಗೆ 190 ಅಂಕ ಸಂಪಾದಿಸಿದೆ. ಎಸ್‌ಎಸ್‌ಸಿಬಿ ಮೂರು ಚಿನ್ನದೊಂದಿಗೆ (179 ಅಂಕ) ಎರಡನೇ ಸ್ಥಾನದಲ್ಲಿದೆ.

ಫಲಿತಾಂಶ: ಫ್ರೀಸ್ಟೈಲ್: 57 ಕೆಜಿ: ರಾಹುಲ್ (ದೆಹಲಿ)–1, ಶುಭಂ (ಎಸ್‌ಎಸ್‌ಸಿಬಿ)–2, ಸುಮಿತ್ (ಹರಿಯಾಣ)–3, ವಿಕಾಸ್ ವಿಷ್ಣೋಯಿ (ರಾಜಸ್ಥಾನ)–3. 61 ಕೆಜಿ: ಪಂಕಜ್ (ಎಸ್‌ಎಸ್‌ಸಿಬಿ)–1, ಲಲಿತ್ ಕೌಶಲ (ಮಧ್ಯಪ್ರದೇಶ)–2, ನಟ್ಟೇರ್ ಸಿಂಗ್ (ಜಮ್ಮು–ಕಾಶ್ಮೀರ)–3 ನೀರಜ್ (ದೆಹಲಿ)–3. 65 ಕೆಜಿ: ಸಿದ್ಧಾರ್ಥ್ (ಹರಿಯಾಣ)–1, ಮೋಹಿತ್ ಕುಮಾರ್ (ಎಸ್‌ಎಸ್‌ಸಿಬಿ)–2, ಸುಮಿತ್ ವಿಷ್ಣೋಯ್ (ರಾಜಸ್ಥಾನ)–3, ಆಯುಷ್ ಕುಮಾರ್(ಉತ್ತರಪ್ರದೇ)–3. 70 ಕೆಜಿ: ಅನುಜಕುಮಾರ್ (ಹರಿಯಾಣ)–1, ಶರವಣ (ಎಸ್‌ಎಸ್‌ಸಿಬಿ)–2, ತುಶಾಂತ್ (ಮಹಾರಾಷ್ಟ್ರ)–3, ಸರ್ವೇಶ್ ಯಾದವ್ (ಉತ್ತರಪ್ರದೇಶ)–3. 74 ಕೆಜಿ: ಜಯದೀಪ್ (ಎಸ್‌ಎಸ್‌ಸಿಬಿ)–1, ರೋಹನ್ ನಾರಾಯಣ್ ಘೇವಡಿ (ಕರ್ನಾಟಕ)–2, ಆದರ್ಶ (ಮಹಾರಾಷ್ಟ್ರ)–3, ದೀಪಕ್ (ಹರಿಯಾಣ)–3. 79 ಕೆಜಿ: ಅಮಿತ್(ಹರಿಯಾಣ)–1, ಅನುಜ್ ಕುಮಾರ್ (ಉತ್ತರಪ್ರದೇಶ)–2, ಮೋಹಿತ್ (ದೆಹಲಿ)–3, ಚಂದ್ರಮೋಹನ್ (ಎಸ್‌ಎಸ್‌ಸಿಬಿ)–3. 86 ಕೆಜಿ: ಮುಕುಲ್ ದಹಿಯಾ (ದೆಹಲಿ)–1, ಸಂದೀಪ್ ಸಿಂಗ್ (ಪಂಜಾಬ್)–2, ಸಚಿನ್ (ಹರಿಯಾಣ)–3, ಮಂಜೀತ್ (ಎಸ್‌ಎಸ್‌ಸಿಬಿ)–3. 92 ಕೆಜಿ: ಸಚಿನ್ (ಹರಿಯಾಣ)–1, ತನುಜ್ ಅಂಟಿಲ್ –2, ಅನಿಲ್(ದೆಹಲಿ)–3, ವಿಠಲ್ (ಮಹಾರಾಷ್ಟ್ರ)–3. 97 ಕೆಜಿ: ಸಾಹಿಲ್ (ಪಂಜಾಬ್)–1, ಪರದೀಪ್ (ಹರಿಯಾಣ)–2, ದೀಪಕ್ ಚಾಹಲ್ (ದೆಹಲಿ)–3, ಸಾಕೇತ್ (ಮಹಾರಾಷ್ಟ್ರ)–3. 125 ಕೆಜಿ: ದಿನೇಶ್ (ಎಸ್‌ಎಸ್‌ಸಿಬಿ)–1, ಹರ್ಷವರ್ಧನ್ (ಮಹಾರಾಷ್ಟ್ರ)–2, ರಜತ್ ರುಹಾಲ್ (ಹರಿಯಾಣ)–3, ಲಕ್ಷ್ಯ ಸೆಹ್ರಾವತ್ (ದೆಹಲಿ)–3.

ಸಂಕ್ಷಿಪ್ತ ಸುದ್ದಿ

ಕಬಡ್ಡಿ: ತಲೈವಾಸ್‌ಗೆ ಜಯ

ಪುಣೆ (ಪಿಟಿಐ): ಸಾಂಘಿಕ ಆಟವಾಡಿದ ತಮಿಳ್ ತಲೈವಾಸ್ ತಂಡ, ಪ್ರೊ ಕಬಡ್ಡಿ ಲೀಗ್ ಪಂದ್ಯದಲ್ಲಿ ಶುಕ್ರವಾರ ಗುಜರಾತ್ ಜೈಂಟ್ಸ್ ತಂಡವನ್ನು 40–27 ರಲ್ಲಿ 13 ಅಂಕಗಳಿಂದ ಸೋಲಿಸಿತು.

ಬಾಲೇವಾಡಿ ಕ್ರೀಡಾ ಕಾಂಪ್ಲೆಕ್ಸ್‌ನಲ್ಲಿ ನಡೆದ ಪಂದ್ಯದಲ್ಲಿ ತಲೈವಾಸ್ ವಿರಾಮದ ವೇಳೆ 19–8 ರಲ್ಲಿ ಮುಂದಿತ್ತು. ವಿಜೇತ ತಂಡದ ಪರ ಮೊಯಿನ್ ಶಫಗಿ 13 ಅಂಕಗಳನ್ನು ಗಳಿಸಿ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು. ಗುಜರಾತ್ ಜೈಂಟ್ಸ್ ತಂಡಕ್ಕೆ 16 ಪಂದ್ಯಗಳಲ್ಲಿ ಇದು ಹತ್ತನೇ ಸೋಲು.

ಲೀಗ್‌ನಲ್ಲಿ ಅಗ್ರಸ್ಥಾನದಲ್ಲಿರುವ ಹರಿಯಾಣ ಸ್ಟೀಲರ್ಸ್ ದಿನದ ಎರಡನೇ ಪಂದ್ಯದಲ್ಲಿ 42–36 ರಿಂದ ಪಟ್ನಾ ಪೈರೇಟ್ಸ್ ತಂಡವನ್ನು ಮಣಿಸಿ ನಾಕೌಟ್ ಅವಕಾಶ ಖಚಿತಪಡಿಸಿಕೊಂಡಿತು.

ಕ್ರಾಸ್‌ಕಂಟ್ರಿ: ಗುರುಪ್ರಸಾದ್, ತೇಜಸ್ವಿಗೆ ಚಿನ್ನದ ಪದಕ

ಮೈಸೂರು: ಬೆಂಗಳೂರಿನ ಕೆಎಸ್‌ಪಿಎಸ್‌ಪಿಬಿಯ (ಕರ್ನಾಟಕ ಸ್ಟೇಟ್ ಪೊಲೀಸ್ ಸ್ಪೋರ್ಟ್ಸ್ ಪ್ರಮೋಷನ್ ಬೋರ್ಡ್) ಗುರುಪ್ರಸಾದ್ ಹಾಗೂ ಎನ್.ಎಲ್.ತೇಜಸ್ವಿ ಅವರು ನಗರದಲ್ಲಿ ಶುಕ್ರವಾರ ನಡೆದ ಪೊಲೀಸ್ ಇಲಾಖೆಯ ರಾಜ್ಯ ಮಟ್ಟದ ಪುರುಷರ ಹಾಗೂ ಮಹಿಳಾ ಕ್ರಾಸ್‌ಕಂಟ್ರಿ ಸ್ಪರ್ಧೆಯಲ್ಲಿ ಚಿನ್ನದ ಪದಕ ಗೆದ್ದರು.

ನಗರದ ಓವಲ್ ಮೈದಾನದಲ್ಲಿ ಆರಂಭವಾದ 10 ಕಿ.ಮೀ ಓಟದ ಸ್ಪರ್ಧೆಯಲ್ಲಿ 30 ನಿಮಿಷ 20.49 ಸೆಕೆಂಡ್ ಗಳಲ್ಲಿ ಗುರುಪ್ರಸಾದ್ ಮೊದಲಿಗರಾಗಿ ಗುರಿ ಮುಟ್ಟಿದರೆ, ಟಿ.ಎಸ್.ಸಂದೀಪ್ (31 ನಿಮಿಷ 24.03 ಸೆಕೆಂಡ್) ಹಾಗೂ ಎನ್.ಡಿ.ಸುನಿಲ್ (32 ನಿಮಿಷ 30.49 ಸೆಕೆಂಡ್) ಕ್ರಮವಾಗಿ ಎರಡನೇ ಹಾಗೂ ಮೂರನೇ ಸ್ಥಾನ ಪಡೆದರು.

ಮಹಿಳಾ ವಿಭಾಗದಲ್ಲಿ ಎನ್.ಎಲ್.ತೇಜಸ್ವಿ 38 ನಿಮಿಷ 11 ಸೆಕೆಂಡ್‌ನಲ್ಲಿ ಗೆಲುವಿನ ಗೆರೆ ದಾಟಿದರೆ, ಸಿ.ಪೂರ್ಣಿಮಾ (40 ನಿಮಿಷ 36 ಸೆಕೆಂಡ್) ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಯ ಆರ್.ಜ್ಯೋತಿ (1 ಗಂಟೆ 8 ನಿಮಿಷ 9 ಸೆಕೆಂಡ್) ಕ್ರಮವಾಗಿ ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆದು ರಾಷ್ಟ್ರಮಟ್ಟದ ಸ್ಪರ್ಧೆಗೆ ಆಯ್ಕೆಯಾದರು.

ಸೆಮಿಗೆ ಅನ್ಮೋಲ್

ಗುವಾಹಟಿ (ಪಿಟಿಐ): ಯುವ ಆಟಗಾರ್ತಿ ಅನ್ಮೋಲ್ ಖಾರ್ಬ್ ಮತ್ತು ಸತೀಶ್ ಕರುಣಾಕರನ್ ಅವರು ಗುವಾಹಟಿ ಮಾಸ್ಟರ್ಸ್ ಸೂಪರ್ 100 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಕ್ರಮವಾಗಿ ಮಹಿಳೆಯರ ಮತ್ತು ಪುರುಷರ ಸಿಂಗಲ್ಸ್ ಸೆಮಿಫೈನಲ್ ತಲುಪಿದರು.

17 ವರ್ಷ ವಯಸ್ಸಿನ ಅನ್ಮೋಲ್ 21–13, 22–24, 22–20 ರಿಂದ ಥಾಯ್ಲೆಂಡ್‌ನ ಲಲಿನ್‌ರತ್ ಚೈವಾನ್ ಅವರನ್ನು ಸೋಲಿಸಿದರು. ಪುರುಷರ ಸಿಂಗಲ್ಸ್‌ನಲ್ಲಿ, ಮೂರನೇ ಶ್ರೇಯಾಂಕದ ಸತೀಶ್ 21–19, 21–13 ರಲ್ಲಿಆರನೇ ಶ್ರೇಯಾಂಕದ ವಾಂಗ್ ಝೆಂಗ್ ಷಿಂಗ್ (ಚೀನಾ) ಅವರನ್ನು ಹಿಮ್ಮೆಟ್ಟಿಸಿದರು.

ಎಸಿಸಿ ಅಧ್ಯಕ್ಷರಾಗಿ ಶಮ್ಮಿ

ದುಬೈ (ಪಿಟಿಐ): ಶ್ರೀಲಂಕಾದ ಶಮ್ಮಿ ಸಿಲ್ವ ಅವರು ಏಷ್ಯನ್ ಕ್ರಿಕೆಟ್ ಕೌನ್ಸಿಲ್ (ಎಸಿಸಿ) ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡರು. ಅವರು ಜಯ್ ಶಾ ಅವರು ತೆರವು ಮಾಡಿದ ಸ್ಥಾನವನ್ನು ತುಂಬಿದ್ದಾರೆ. ಜಯ್ ಶಾ ಅವರು ಈಚೆಗಷ್ಟೇ ಐಸಿಸಿ ಅಧ್ಯಕ್ಷರಾಗಿ ಆಯ್ಕೆಯಾಗಿದ್ದರು.

ಗರುಡ ಹಾಕಿ ಕ್ಲಬ್‌ಗೆ ಜಯ

ಬೆಂಗಳೂರು: ಗರುಡ ಹಾಕಿ ಕ್ಲಬ್ ತಂಡವು ಕೆಎಸ್‌ಎಚ್‌ಎ ಸಿ ಡಿವಿಷನ್ ಹಾಕಿ ಲೀಗ್ ಚಾಂಪಿಯನ್‌ಷಿಪ್ ಪಂದ್ಯದಲ್ಲಿ ಜಯಿಸಿತು.

ಶಾಂತಿನಗರದ ಹಾಕಿ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಗರುಡ ತಂಡವು 7–2ರಿಂದ ಬೆಸೆಂಟ್ ಹಾಕಿ ಕ್ಲಬ್ ವಿರುದ್ಧ ಜಯಿಸಿತು.

ಎರಡನೇ ಪಂದ್ಯದಲ್ಲಿ; ಬೆಂಗಳೂರು ಫ್ರೆಂಡ್ಸ್ ಹಾಕಿ ಕ್ಲಬ್ 7–0ಯಿಂದ ಜರ್ಮನೈಟ್ ಹಾಕಿ ಅಕಾಡೆಮಿ ವಿರುದ್ಧ ಗೆದ್ದಿತು.

ಚಿನ್ನಸ್ವಾಮಿ ರೆಡ್ಡಿ ನಿಧನ



ಬೆಂಗಳೂರು: ರಾಜ್ಯ ಕಬಡ್ಡಿ ತಂಡದ ಮಾಜಿ ನಾಯಕ, ಹಲವು ಬಾರಿ ಸೀನಿಯರ್ ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ ರಾಜ್ಯವನ್ನು ಪ್ರತಿನಿಧಿಸಿದ್ದ ಚಿನ್ನಸ್ವಾಮಿ ರೆಡ್ಡಿ (72) ಅವರು ಬುಧವಾರ ನಿಧನರಾದರು.

ಅವರ ಅಂತ್ಯಕ್ರಿಯೆ ಶುಕ್ರವಾರ ಹರಿಶ್ಚಂದ್ರ ಘಾಟ್‌ನಲ್ಲಿ ನೆರವೇರಿತು. ರಾಜ್ಯದ ಮಾಜಿ ಆಟಗಾರರು, ಕಬಡ್ಡಿ ಅಭಿಮಾನಿಗಳು ಅಂತಿಮ ದರ್ಶನ ಪಡೆದರು.

ಹಲವು ವರ್ಷ ಎಚ್‌ಎಂಟಿ ವಾಚ್ ಫ್ಯಾಕ್ಟರಿ ತಂಡದ ಆಟಗಾರರಾಗಿದ್ದ ಅವರು ಬಳಿಕ ಎಚ್‌ಎಂಟಿ ತಂಡದ, ನಂತರ ರಾಜ್ಯ ಕಬಡ್ಡಿ ತಂಡದ ಕೋಚ್ ಆಗಿಯೂ ಸೇವೆ ಸಲ್ಲಿಸಿದ್ದರು.

ಆರಂಭದಲ್ಲಿ ಯಂಗ್‌ಸ್ಟರ್ಸ್ ಕಬಡ್ಡಿ ತಂಡ, ಕೋದಂಡರಾಮಪುರ ಮತ್ತು ಮಲ್ಲೇಶ್ವರ ತಂಡಗಳಿಗೆ ಆಡಿದ್ದರು. ಅವರಿಗೆ ಪತ್ನಿ, ಪುತ್ರ, ಇಬ್ಬರು ಪುತ್ರಿಯರು ಇದ್ದಾರೆ.


Reliance
Growth is Life
ಪ್ರತಿ ಬಾರಿಯೂ.
ಪ್ರತಿ ತಿಂಗಳು ಉಳಿತಾಯ.
ಬನ್ನಿರಿ
SMART BAZAAR
ಪ್ರತಿಯೊಂದೂ
MRP
ಗಿಂತ ಕಡಿಮೆ ದರದಲ್ಲಿ
ಲೂಸ್ ಸಕ್ಕರೆ S 1 kg
ಸ್ಮಾರ್ಟ್ ಬೆಲೆ ₹41.50
ಮಾರುಕಟ್ಟೆ ಬೆಲೆ ₹50
ಸ್ಮಾರ್ಟ್ ಬೆಲೆ ₹69/₹82
ಲೂಸ್ ವಡಾ ಕೋಲಂ ಪ್ರೀಮಿಯಂ/ ಹೈದರಾಬಾದಿ ಬಿರಿಯಾನಿ ಬಾಸ್ಮತಿ ರೈಸ್ 1 kg
ಮಾರುಕಟ್ಟೆ ಬೆಲೆ ₹74 / ₹90
ಸ್ಮಾರ್ಟ್ ಬೆಲೆ ₹1249/₹1499
₹57.65/kg
₹48.03/kg
ಗುಡ್ ಲೈಫ್ ಡೈಲಿ / ಸೋನಾ ಮಸೂರಿ ರೈಸ್ 26 kg
ಎಮ್ ಆರ್‌ಪಿ ₹1950 / ₹2100
ಉಳಿಸಿರಿ ₹701 / ₹601
ಚಕ್ಕಿ ಆಟಾ 5 kg
ಸ್ಮಾರ್ಟ್ ಬೆಲೆ ₹209
ಎಮ್ ಆರ್‌ಪಿ ₹270
ಉಳಿಸಿರಿ ₹61
ಭಾರತ್ ಚನಾ ದಾಲ್ 1 kg / ರೈಸ್ 10 kg
BHARAT DAL
भारत चावल
BHARAT RICE
₹70
₹340 ₹34 /kg
ಎಮ್ ಆರ್‌ಪಿ ₹70
ಎಮ್ ಆರ್‌ಪಿ ₹340
nafed
ಸ್ಮಾರ್ಟ್ ಬೆಲೆ ₹137/₹139
ಎಮ್ ಆರ್‌ಪಿ ₹150 / ₹165
ಉಳಿಸಿರಿ ₹13 / ₹26
ಗುಡ್ ಲೈಫ್/ ಇಂಡಿಪೆಂಡೆನ್ಸ್ ರಿಫೈನ್ಡ್ ಸೂರ್ಯಕಾಂತಿ ಎಣ್ಣೆ 1 L
ಸ್ಮಾರ್ಟ್ ಬೆಲೆ ₹369/₹469
ಗುಡ್ ಲೈಫ್ ಬಾದಾಮ್/ ಕ್ಯಾಶ್ಯೂ (W320) 500 g
ಎಮ್ ಆರ್‌ಪಿ ₹620 / ₹725
ಉಳಿಸಿರಿ ₹251 / ₹256
ಗುಡ್ ಲೈಫ್ ಅರೇಬಿಯನ್ / ಫಾರ್ಡ್ ಡೇಟ್ಸ್ 500 g
ಸ್ಮಾರ್ಟ್ ಬೆಲೆ ₹95/₹169
ಎಮ್ ಆರ್‌ಪಿ ₹219 / ₹285
ಉಳಿಸಿರಿ ₹124 / ₹116
ನಂದಿನಿ ಶುದ್ಧ ತುಪ್ಪ 1 L
ಎಮ್ ಆರ್‌ಪಿ ₹630
ಉಳಿಸಿರಿ ₹45
ಸ್ಮಾರ್ಟ್ ಬೆಲೆ ₹585
ಪ್ಲಮ್‌ಕೇಕ್ಸ್ 100 g ರಿಂದ (ಆಯ್ದ ರೇಂಜ್)
50% ವರೆಗೆ ಕಡಿತ
ಎಮ್‌ಆರ್‌ಪಿ ₹60 ರಿಂದ
ಟಾಟಾ ಗೋಲ್ಡ್ ಲೀಫ್ ಚಹಾ 500 g
ಉಳಿಸಿರಿ ₹75
ಎಮ್‌ಆರ್‌ಪಿ ₹300 ರಿಂದ
ಸ್ಮಾರ್ಟ್ ಬೆಲೆ ₹225 ರಿಂದ
ಬಿಸ್ಕಿಟ್ಸ್ ದೊಡ್ಡ ಪ್ಯಾಕ್ 275 g ರಿಂದ (ಆಯ್ದ ಪ್ರಕಾರಗಳು)
ಎಮ್‌ಆರ್‌ಪಿ ₹120 ರಿಂದ / ಯೂನಿಟ್
BUY ANY 2 GET ANY 1 FREE
ವಿಂಗ್ರೀನ್ಸ್ ಫಾರ್ಮ್ಸ್ ಪ್ರೀಮಿಯಂ ವೆಜ್ ಮೇಯೊ 800 g
ಎಮ್‌ಆರ್‌ಪಿ ₹250 ರಿಂದ
BUY 1 GET 2 FREE
ಬೂಸ್ಟ್ / ಹಾರ್ಲಿಕ್ಸ್ ಕ್ಲಾಸಿಕ್ ಮಾಲ್ಟ್ ಹೆಲ್ತ್ ಡ್ರಿಂಕ್ 1 kg (ಆಯ್ದ ಪ್ರಕಾರಗಳು)
ಉಳಿಸಿರಿ ₹150
ಎಮ್‌ಆರ್‌ಪಿ ₹595 ರಿಂದ
ಸ್ಮಾರ್ಟ್ ಬೆಲೆ ₹445 ರಿಂದ
ಸೋಪ್ 125 g x 4 + 1 ರಿಂದ (ಮಲ್ಟಿ ಪ್ಯಾಕ್) (ಆಯ್ದ ಪ್ರಕಾರಗಳು)
ಫ್ಲ್ಯಾಟ್ 33% ಕಡಿತ
ಎಮ್‌ಆರ್‌ಪಿ ₹313 ರಿಂದ
ಸ್ಮಾರ್ಟ್ ಬೆಲೆ ₹210 ರಿಂದ
ಸರ್ಫ್ ಎಕ್ಸೆಲ್ ಮ್ಯಾಟಿಕ್ ಲಿಕ್ವಿಡ್ 4 L (ಟಾಪ್ / ಫ್ರಂಟ್ ಲೋಡ್) (ಆಯ್ದ ಪ್ರಕಾರಗಳು)
ಫ್ಲ್ಯಾಟ್ 33% ಕಡಿತ
ಎಮ್‌ಆರ್‌ಪಿ ₹775 ರಿಂದ
ಸ್ಮಾರ್ಟ್ ಬೆಲೆ ₹520 ರಿಂದ
BUY 1 GET 1
1500+ ಪ್ರಾಡಕ್ಟ್‌ಗಳ ಮೇಲೆ
ಲಿಜೋಲ್ ಫ್ಲೋರ್ ಕ್ಲೀನರ್ 2 L (ಸಿಟ್ರಸ್/ ಫ್ಲೋರಲ್)
ಉಳಿಸಿರಿ ₹63
500 ml ಲೈಜೋಲ್ ಉಚಿತ (ಮಲ್ಟಿಪ್ಯಾಕ್)
ಎಮ್‌ಆರ್‌ಪಿ ₹464 ರಿಂದ
ಸ್ಮಾರ್ಟ್ ಬೆಲೆ ₹401 ರಿಂದ
ಸ್ಯಾನಿಟರಿ ಪ್ಯಾಡ್ಸ್ (ಆಯ್ದ ಪ್ರಕಾರಗಳು)
ಫ್ಲ್ಯಾಟ್ 33% ಕಡಿತ
ಎಮ್‌ಆರ್‌ಪಿ ₹470 ರಿಂದ
ಸ್ಮಾರ್ಟ್ ಬೆಲೆ ₹315 ರಿಂದ
ಬಿಸ್ಕಿಟ್ / ಜ್ಯೂಸ್ / ನೂಡಲ್ಸ್ / ಕೆಚಪ್ / ಹನಿ / ಮಸಾಲೆಗಳು / ಬೇಸನ್ / ಮೈದಾ / ಸೂಜಿ ರವೆ / ಶ್ಯಾಂಪೂ / ಡಿಯೊ / ಮಾಯಿಶ್ಚರೈಸರ್ ಕ್ರೀಮ್ ಮತ್ತು ಲೋಷನ್ / ಬೇಬಿ ಪ್ಯಾಂಟ್ಸ್ / ಟಾಯ್ಲೆಟ್ ಕ್ಲೀನರ್ / ಉಟೆನ್ಸಿಲ್ ಕ್ಲೀನರ್ (ಆಯ್ದ ಪ್ರಕಾರಗಳು)
ಈಗ ತೆರೆದಿದೆ ಬಂಗಾರಪೇಟೆ: ಕೆ ಜಿ ಎಫ್ ಮುಖ್ಯ ರಸ್ತೆ, ಟೋಟಲ್ ಗ್ಯಾಸ್ ನ ಎದುರು.
ಬೆಂಗಳೂರು : ಶೆಲ್ ಪೆಟ್ರೋಲ್ ಪಂಪ್ ಪಕ್ಕದಲ್ಲಿ, ಇಸ್ಕಾನ್ ದೇವಸ್ಥಾನದ ಹತ್ತಿರ, ರಾಜಾಜಿನಗರ • ಬೆಂಗಳೂರು ಸೆಂಟ್ರಲ್ ಮಾಲ್ ಎದುರು, ರಾಗಿಗುಡ್ಡ, ಜಯನಗರ 9 ನೇ ಬ್ಲಾಕ್ • ರಾಯಲ್ ಮೀನಾಕ್ಷಿ ಮಾಲ್, ಬನ್ನೇರುಘಟ್ಟ ರಸ್ತೆ • ಜಿಟಿ ವರ್ಲ್ಡ್ ಮಾಲ್, ಮಾಗಡಿ ಮುಖ್ಯ ರಸ್ತೆ, ಪ್ರಸನ್ನ ಥಿಯೇಟರ್ ಪಕ್ಕ • ಸಂಗೀತ ಅಪಾರ್ಟ್‌ಮೆಂಟ್ ಹತ್ತಿರ, ಹಳೆಯ ಗೀತಾಂಜಲಿ ಥಿಯೇಟರ್, ಮಲ್ಲೇಶ್ವರಂ • ಬ್ರಿಗೇಡ್ ಮಿಲೇನಿಯಮ್ ಹತ್ತಿರ, RBI ಲೇಔಟ್, 7 ನೇ ಹಂತ, J.P. ನಗರ • ಸೋಲ್ ಸ್ಪೇಸ್ ಸ್ಪಿರಿಟ್, ಬೆಳ್ಳಂದೂರ್. • ವಿಜಯಾ ಬ್ಯಾಂಕ್ ಕಾಲೋನಿ, ಔಟರ್ ರಿಂಗ್ ರೋಡ್, ಬಾಣಸವಾಡಿ. • ಮಾರುತಿ ಆರ್ಕೇಡ್, ಭದ್ರಪ್ಪಾ ಲೇಔಟ್, ಔಟರ್ ರಿಂಗ್ ರೋಡ್ ಹೆಬ್ಬಾಳ . • ರಿಲಯನ್ಸ್ ಡಿಜಿಟಲ್ ಪಕ್ಕದಲ್ಲಿ, ಹೆಣ್ಣೂರು-ಬಾಗಲೂರು ಮುಖ್ಯರಸ್ತೆ, ಕೊತ್ತನೂರು • ಕೆಳ ಮಹಡಿ, ಫೀನಿಕ್ಸ್ ಮಾರ್ಕೆಟ್ ಸಿಟಿ, ಮಹದೇವಪುರ ಮುಖ್ಯ ರಸ್ತೆ • ಟ್ರೆಂಡ್ಸ್ ಪಕ್ಕ, ಕತ್ರಿಗುಪ್ಪೆ ರಸ್ತೆ, ಬನಶಂಕರಿ 3ನೇ ಹಂತ • ರಾಯಭಾರ ಕಚೇರಿ ಪ್ಯಾರಾಗಾನ್, ಐಟಿಪಿಎಲ್ ಮುಖ್ಯ ರಸ್ತೆ, ಎದುರು. ಕುಂದಲಹಳ್ಳಿ ಗೇಟ್ ಬಸ್ ನಿಲ್ದಾಣ • ಅಕ್ಷಯ ನಗರ : ಡಿಎಲ್ ಎಫ್ ನ್ಯೂ ಟೌನ್ ಹತ್ತಿರ, ಬೇಗೂರ್ - ಹುಳಿಮಾವು ರಸ್ತೆ • ಚಂದಾಪುರ : ಗುಲ್ಲಿ ರೆಡ್ಡಿ ಲೇಔಟ್, ಚಂದಾಪುರ ಅತ್ತಿಬೆಲೆ ಹೋಬಳಿ, ಆನೇಕಲ್ ಮುಖ್ಯ ರಸ್ತೆ • ಮೋನಾರ್ಚ್ ಸೆರೆನಿಟಿ : ಥಣಿಸಂದ್ರ ಮುಖ್ಯ ರಸ್ತೆ. ಥಣಿಸಂದ್ರ. • ಮಾಳಗಾಲ ರೋಡ್ : ಮಾಳಗಾಲ ಮುಖ್ಯ ರಸ್ತೆ, ನಾಗರಭಾವಿ 2ನೇ ಹಂತ, ಗಂಗಮ್ಮ ಗಾರ್ಡನ್ಸ್. • ವಿದ್ಯಾರಣ್ಯಪುರ : ಮಾರ್ಸ್ ಎನ್‌ಕ್ಲೇವ, ದೊಡ್ಡಮ್ಮಸಂದ್ರ ಮುಖ್ಯ ರಸ್ತೆ. ವಿದ್ಯಾರಣ್ಯಪುರ • ವಿಜ್ಞಾನನಗರ್ : ಶೆಲ್ ಪೆಟ್ರೋಲ್ ಬಂಕ್ ಹತ್ತಿರ, ವಿಭೂತಿಪುರಹಳ್ಳಿ, ವಿಜ್ಞಾನನಗರ್ • ವಿಜಯನಗರ ಟಿ ಟಿ ಎಮ್ ಸಿ : ಮಾರುತಿ ಮಂದಿರ ಹತ್ತಿರ • ಕೆ ಆರ್ ಪುರಂ : ಬೆತ್ತಲ್ ನಗರ, ಬಸವನಪುರ್ ಮುಖ್ಯ ರಸ್ತೆ, ಕೆ ಆರ್ ಪುರಂ • ಭಾರತೀಯ ಮಾಲ್ ಆಫ್ ಬೆಂಗಳೂರು : ಭಾರತೀಯ ಸಿಟಿ, ಆರ್ ಕೆ ಹೆಗ್ಡೆ ನಗರ, ಥಣಿಸಂದ್ರ ಮುಖ್ಯ ರಸ್ತೆ. • ಎಲೆಕ್ಟ್ರಾನಿಕ್ ಸಿಟಿ : ಶ್ರೀಧರ್ ರೆಡ್ಡಿ ಪ್ರಾಪರ್ಟಿ, ರುಚಿ ಸಾಗರ ಹೋಟೆಲ್ ಹತ್ತಿರ ಹಂತ 2 • ಹರಳೂರು ರೋಡ್ : ಪಿಎನ್‌ಆರ್ ಫೇಲಿಸಿಟಿ, ಡಿಎಸ್‌ಆರ್ ಅಲ್ಟಿಮ ಅಪಾರ್ಟ್ಮೆಂಟ್ ಹತ್ತಿರ. • ಎನ್‌ಆರ್‌ಐ ಲೇಔಟ್ : ಮುಖ್ಯ ರಸ್ತೆ, ಎಚ್‌ಡಿಎಫ್‌ಸಿ ಬ್ಯಾಂಕ್ ಹತ್ತಿರ, ಕಲ್ಕೆರೆ ಗ್ರಾಮ. • ಡಿವಿನಿಟಿ ಮಾಲ್ : ಮೈಸೂರು ರಸ್ತೆ, ನಾಯಂಡಹಳ್ಳಿ ಮೆಟ್ರೋ ನಿಲ್ದಾಣದ ಹತ್ತಿರ . • ಕನಕಪುರ: ಕೋಡಿಹಳ್ಳಿ ರೋಡ್, ಎಚ್‌ಡಿಎಫ್‌ಸಿ ಮತ್ತು ಎಕ್ಸಿಸ್ ಬ್ಯಾಂಕ್‌ನ ನಡುವೆ. • ತುಮಕೂರು: ಎಮ್‌ಜಿ ಸ್ಟೇಡಿಯಮ್‌ನ ಪಕ್ಕದಲ್ಲಿ, ಕುವೆಂಪು ನಗರ.
ನಿಮ್ಮ ಹತ್ತಿರದ ಸ್ಟೋರ್ ನ್ನು ಪತ್ತೆಹಚ್ಚಲು ಸ್ಕ್ಯಾನ್ ಮಾಡಿ
ನಿಮ್ಮ ಹತ್ತಿರದ ಸ್ಟೋರ್ ಭೇಟಿ ನೀಡಿ
JioMart
SMART BAZAAR